ಕಸ್ತೂರಿ

ಜುಲೈ, ೧೯೫೮



ಬೆಲೆ : ೪ ಆಣೆ
(೨೫ ನಯೇ ಪೈಸೆ)

ಜ್ಞಾನ ಮತ್ತು ಮನೋರಂಜನ

ಕರ್ನಾಟಕದಲ್ಲೆಲ್ಲ ಜನಪ್ರಿಯವಾಗಿ
ಭಾರಿ ಜನದಟ್ಟಣೆಯಲ್ಲಿ ಪ್ರದರ್ಶನವಾಗುತ್ತಿದೆ

ನಂದಿಯವರ

ಶ್ರೀಕೃಷ್ಣಗಾರುಡಿ

(ಕನ್ನಡ)

ನಿರ್ದೇಶನ : ಹುಣಸೂರು
ನಿರ್ಮಾಪಕರು: ಕೆ.ಎಂ.ನಾಗಣ್ಣ

ತಾರಾಗಣ : ಸೂರ್ಯಕಲಾ, ಲಲಿತಾರಾವ (ಬಿ. ಎ.)
ಸಿದ್ಧಯ್ಯಸ್ವಾಮಿ, ರಾಜಕುಮಾರ, ನರಸಿಂಹರಾಜು,
ರಾಮಚಂದ್ರಶಾಸ್ತ್ರಿ, ಗಣಪತಿಭಟ್ಟ ಮುಂತಾದವರು

ಇದು ಡಿ' ಎಂಟರಟೇನರ್ಸ (ಧಾರವಾಡ) ಇವರ ಕಾಣಿಕೆ

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ನೆ ದಿನಾಂಕ
ಪ್ರಕಟವಾಗುವದು.

ಮುಖ್ಯ ಸಂಪಾದಕರು :
ಮೊಹರೆ ಹನುಮಂತರಾಯರು

ಪ್ರಕಾಶಕರು :
ಲೋಕಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮುಖಪು :
ಜಿ. ವ್ಹಿ. ಶೆಟ್ಟರ, ಧಿ.

ಚಂದಾ ದರ :

ವಾರ್ಷಿಕ (ಅಂಚೆಸೇರಿ)		ರೂ. ೮.೦೦
ಅರ್ಧ ವರ್ಷ	—	ರೂ. ೪.೫೦
ಬಿಡಿಸಂಚಿಕೆ	—	ರೂ. ೦.೭೫

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಆಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ" ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ [illegible] ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಕಸ್ತೂರಿ

ವರ್ಷ ೨ ಜುಲೈ ೧೯೫೮ ಸಂಚಿಕೆ ೧೧

ಶ್ರೀ ವೆಲ್ಲಿಪುತ್ತೂರಾಳ್ವಾರರು

ಮತ್ತು

ಮಹಾಭಾರತ

ಶ್ರೀ ವೆಲ್ಲಿಪುತ್ತೂರಾಳ್ವಾರ್ ಸಂಸ್ಕೃತ ಮತ್ತು ತಮಿಳು ಪಂಡಿತರಾಗಿದ್ದರು. ಮಹಾಭಾರತವನ್ನು ತಮಿಳಿಗೆ ಭಾಷಾಂತರಿಸಿದವರು ಇವರೇ. ಅವರು ಮಹಾಭಾರತದ ಅನುವಾದ ಮಾಡಲು ಕಾರಣವಾದ ಪ್ರಸಂಗ ತುಂಬ ಸಾರಸ್ಯವಾಗಿದೆ.

ಒಮ್ಮೆ ಇವರಿಗೂ ಇವರ ತಮ್ಮನಿಗೂ ಪಿತ್ರಾರ್ಜಿತ ಆಸ್ತಿಯನ್ನು ಹಂಚಿಕೊಳ್ಳುವ ವಿಚಾರದಲ್ಲಿ ತಂಟೆ ಉದ್ಭವಿಸಿತು. ವೆಲ್ಲಿಪುತ್ತೂರಾಳ್ವಾರರು ಈ ಪ್ರಕರಣವನ್ನು ರಾಜನಲ್ಲಿಗೆ ಒಯ್ದು ತೀರ್ಮಾನಿಸಲು ಕೇಳಿಕೊಂಡರು. ಪಿತ್ರಾರ್ಜಿತ ಆಸ್ತಿಗೆ ಸಂಬಂಧಪಟ್ಟ ಅಣ್ಣತಮ್ಮಂದಿರಲ್ಲಿ ನಡೆದ ವ್ಯಾಜ್ಯವನ್ನು ಬಗೆಹರಿಸಲು ವೆಲ್ಲಿಪುತ್ತೂರಾಳ್ವಾರರಂಥ ವಿದ್ವಾಂಸರು ತನ್ನ ಹತ್ತರ ಬಂದದ್ದನ್ನು ಕಂಡು ರಾಜನಿಗೆ ತುಂಬ ಆಶ್ಚರ್ಯವಾಯಿತು. ಆತ ಯಾವ ತೀರ್ಪನ್ನೂ ಹೇಳದೆ "ಮಹಾಭಾರತವನ್ನು ತಮಿಳಿನಲ್ಲಿ ಭಾಷಾಂತರಿಸಿಕೊಂಡು ಬನ್ನಿ" ಎಂದು ವೆಲ್ಲಿಪುತ್ತೂರಾಳ್ವಾರರಿಗೆ ಹೇಳಿದ.

ಅರಸನಾಜ್ಞೆಯಂತೆ ವೆಲ್ಲಿಪುತ್ತುರಾಳ್ವಾರರು ಮಹಾಭಾರತವನ್ನು ಭಾಷಾಂತರಿಸಿದರು. ಈ ಭಾಷಾಂತರದಲ್ಲಿ ತಮಿಳುಭಾಷೆಯ ಸೌಂದರ್ಯವೆಲ್ಲವನ್ನೂ ಅವರು ಸೂರೆಗೈದರು. ಹೊತ್ತಗೆಯನ್ನು ಸಿದ್ಧಪಡಿಸಿಕೊಂಡು ಆಳ್ವಾರರು ಮಹಾರಾಜನ ಕಡೆಗೆ ಹೋಗಲು ಸಿದ್ಧರಾದರು. ಆದರೆ ಅಷ್ಟರಲ್ಲಿ ವೆಲ್ಲಿಪುತ್ತೂರಾಳ್ವಾರರಿಗೆ ಒಂದು ಯೋಚನೆ ಬಂತು. ಎಲ್ಲವನ್ನೂ ಬಿಟ್ಟು ಅರಸನು ಮಹಾಭಾರತವನ್ನೇ ಭಾಷಾಂತರಿಸಲು ತಮಗೆ ಏಕೆ ಹೇಳಿದನು ? ತಮ್ಮ ಅಣ್ಣ ತಮ್ಮಂದಿರ ನ್ಯಾಯವನ್ನು ಒಯ್ದಾಗ ಅದನ್ನು ತೀರ್ಮಾನಿಸಿಕೊಡುವ ಬದಲು ಈ ಕಾರ್ಯವನ್ನೇಕೆ ಒಪ್ಪಿಸಿದನು ?

ಬಹಳ ವಿಚಾರ ಮಾಡಿದ ಬಳಿಕ ಅವರಿಗೆ

ಜೆ. ಶಿವಷಣ್ಮುಖಂ ಪಿಳ್ಳೆಯವರ ಒಂದು ಲೇಖದಿಂದ

ಮಹಾಭಾರತದ ಮೂಲಕ ತನಗೊಂದು ಪಾಠ ಕಲಿಸಬೇಕೆಂಬುದೇ ಅರಸನ ಉದ್ದೇಶವಾಗಿರ ಬೇಕೆಂದು ಅನಿಸಿತು. ಅಣ್ಣ - ತಮ್ಮಂದಿರಾದ ಕೌರವ-ಪಾಂಡವರು ರಾಜ್ಯಕ್ಕಾಗಿ ತಮ್ಮತಮ್ಮಲ್ಲಿ ಬಡಿದಾಡಿ ಸರ್ವನಾಶ ಮಾಡಿಕೊಂಡಿದ್ದರಲ್ಲವೆ?

ವೆಲ್ಲಿಪುತ್ತೂರಾಳ್ವಾರರು ಕಲಿಯಬೇಕಾದ ಪಾಠವನ್ನು ಮಹಾಭಾರತದಿಂದ ಕಲಿತರು. ಅವರು ತಮ್ಮನ ಬಳಿಗೆ ಹೋಗಿ "ಆಸ್ತಿಯಲ್ಲಿ ನಿನಗೆ ಬೇಕಾದ್ದನ್ನು ತೆಗೆದುಕೊಂಡು ಉಳಿದ ದ್ದನ್ನು ನನಗೆ ಕೊಡು" ಎಂದರು. ತಮ್ಮನ ಮೇಲೆ ಈ ಮಾತಿನ ಪರಿಣಾಮವಾಗಿ ಅವನು ಅಣ್ಣನಿಗೆ ಅದೇ ಮಾತನ್ನು ಕೇಳಿದ. ಅಣ್ಣ-ತಮ್ಮಂದಿರು ಯಾವ ತಂಟೆ-ತಕರಾರಿಲ್ಲದೆ ಆಸ್ತಿಯನ್ನು ಹಂಚಿ ಕೊಂಡರು.

ನಿಶ್ಚಿತವಾದ ದಿನ ವೆಲ್ಲಿಪುತ್ತೂರಾಳ್ವಾರರು ಹೋಗಿ ಅರಸನಿಗೆ ಭಾಷಾಂತರವನ್ನು ಒಪ್ಪಿಸಿ ದರು. "ಇನ್ನು ನಾನು ನಿಮ್ಮ ಜಗಳದ ತೀರ್ಮಾನ ವನ್ನು ಕೊಡುವೆ" ಎಂದು ಅರಸ ಹೇಳಿದಾಗ ವೆಲ್ಲಿಪುತ್ತೂರಾಳ್ವಾರರು ಆ ವ್ಯಾಜ್ಯವನ್ನು ತಾವು ಶಾಂತ ರೀತಿಯಲ್ಲಿ ಬಗೆಹರಿಸಿಕೊಂಡಿರುವದಾಗಿ ತಿಳಿಸಿದರು. ಅದು ಹೇಗಾಯಿತು ಎಂದು ಅರಸ ಕೇಳಲು "ಆಸ್ತಿಯ ಬಗ್ಗೆ ಜಗಳಾಡಿದಲ್ಲಿ ಏನಾ ಗುವದು ಎಂದು ನಾನು ತಿಳಿದುಕೊಳ್ಳಬೇಕೆಂದೇ ತಾವು ನನಗೆ ಮಹಾಭಾರತವನ್ನು ಭಾಷಾಂತರಿ ಸಲು ಹೇಳಿದಿರಿ, ನನಗೆ ಅದರಿಂದ ಬೋಧೆಯಾಗಿ ನಾನು ತಮ್ಮನೊಂದಿಗೆ ಇದ್ದ ವ್ಯಾಜ್ಯವನ್ನು ಬಗೆ ಹರಿಸಿಕೊಂಡೆ" ಎಂದು ವೆಲ್ಲಿಪುತ್ತೂರಾಳ್ವಾರರು ಹೇಳಿದರು. ಅರಸನಿಗೆ ಅದನ್ನು ಕೇಳಿ ತುಂಬ ಸಂತೋಷವಾಗಿ ಅವನು ವೆಲ್ಲಿಪುತ್ತೂರಾಳ್ವಾರ ರಿಗೆ ಅನೇಕ ಗ್ರಾಮಗಳನ್ನು ಉಂಬಳಿ ಹಾಕಿ ಕೊಟ್ಟನು.

ಆಸ್ತಿ-ಪಾಲಿನ ವ್ಯಾಜ್ಯಗಳು ಬಂದಾಗ ನಮ್ಮ ವಕೀಲರು ತಮ್ಮ ಪಕ್ಷಕಾರರಿಗೆ ಮಹಾಭಾರತದ ನೀತಿ ತತ್ವವನ್ನು ತಿಳಿಹೇಳಿದರೆ ಅನೇಕ ಕುಟುಂ- ಬಗಳು ಹಿಸೆ ವ್ಯಾಜ್ಯದಿಂದ ಹಾಳಾಗುವದು ತಪ್ಪೀತು. ಅದನ್ನು ಸುಡಬಯಸುವವರಿಗೂ ಅಭ್ಯಾಸ ಮಾಡಿದಾಗ ಮಹಾಭಾರತವು ಒಂದು ಪಾಠವನ್ನು ಕಲಿಸಬಹುದಾಗಿದೆ.

ಸುತ್ತಿಗೆ

ಒಂದು ಹಿಬ್ರೂ ಕಥೆ

ಒಬ್ಬ ಅಕ್ಕಸಾಲಿಗನ ಅಂಗಡಿಯು ನೆರೆಯಲ್ಲಿ ಒಬ್ಬ ಕಮ್ಮಾರನ ಅಂಗಡಿ ಯಿತ್ತು. ಅಕ್ಕಸಾಲಿಗನ ಅಂಗಡಿಯಲ್ಲಿ ಕೆಲಸ ನಡೆದಾಗ ವಿಶೇಷ ಸಪ್ಪಳವಾಗುತ್ತಿರ ಲಿಲ್ಲ. ಆದರೆ ಕಮ್ಮಾರನ ಅಂಗಡಿಯಲ್ಲಿ ಆಗುತ್ತಿದ್ದ ಶಬ್ದ, ಸಪ್ಪಳವು ರಸ್ತೆಯಲ್ಲಿ ಹೋಗಿ ಬರುವವರ ಕಿವಿಯನ್ನು ಗಡಚಿಕ್ಕುತ್ತಿತ್ತು.

ಒಂದು ದಿನ ಆಕಸ್ಮಾತ್ತಾಗಿ ಬಂಗಾರದ ಕಣವೊಂದು ಹಾರಿ ಕಮ್ಮಾರನ ಅಂಗ ಡಿಯಲ್ಲಿ ಬಿತ್ತು. ಅದಕ್ಕೆ ಕಬ್ಬಿಣದ ಭೆಟ್ಟಿಯಾಯಿತು. ಬಂಗಾರದ ಕಣ ಹೇಳಿತು: "ಅಣ್ಣಾ, ನಾವಿಬ್ಬರೂ ಸಮದುಃಖಿಗಳು. ನಾವಿಬ್ಬರೂ ಬೆಂಕಿಯಲ್ಲಿ ಉರಿಯ ಬೇಕಾಗುತ್ತದೆ. ನಾನದನ್ನು ಮೌನದಿಂದ ಸಹಿಸುತ್ತೇನೆ. ನೀನು ಮಾತ್ರ..."


ಆಗ ಕಬ್ಬಿಣ ಉತ್ತರವಿತ್ತಿತು: "ನಿನ್ನ ಹೇಳಿಕೆ ನಿಜ. ಆದರೆ ನಿನ್ನನ್ನು ಬಡಿ ಯುವ ಕಬ್ಬಿಣದ ಸುತ್ತಿಗೆ ನಿನಗೇನೂ ಸಂಬಂಧವಿಲ್ಲದ್ದು. ನನ್ನನ್ನು ಬಡಿಯುವ ಸುತ್ತಿಗೆ ಮಾತ್ರ ನನ್ನ ಖಾಸ ಬಂಧುವೆಂಬುದನ್ನು ನೀನು ಮರೆತೆ."

— ಜೋಸೆಫ್ ಎಲಿಜಾ

ಜಗತ್ತಿನ ಅತ್ಯಂತ ಸುಖಿ ಜನಾಂಗ

ಸ್ವರ್ಣ ದ್ವೀಪ ಬರ್ಮಾ

ಪಾ ವೆಂ ಆಚಾರ್ಯ



ಚೀನ ಭಾರತಗಳೆಂಬ ಎರಡು ಉಪಖಂಡಗಳ ನಡುವೆ ಕೀಲಿಸಿರುವ ಬರ್ಮಾ ತನ್ನ ನೆರೆಯ ರಾಷ್ಟ್ರಗಳ ಮಾನದಿಂದ ಚಿಕ್ಕ ದೇಶ. ಅದರ ಜನಸಂಖ್ಯೆ–೧,೮೦,೦೦,೦೦೦—ಇಂದಿನ ಕರ್ನಾಟಕದ್ದಕ್ಕಿಂತ ಹೆಚ್ಚಾಗಿಲ್ಲ. ಆದರೆ ನೈಸರ್ಗಿಕ ಮತ್ತು ಐತಿಹಾಸಿಕ ಶಕ್ತಿಗಳು ಈ ರಾಷ್ಟ್ರದ ಜನವನ್ನು ಒಂದು ವಿಶಿಷ್ಟ ಅಚ್ಚಿನಲ್ಲಿ ರೂಪುಗೊಳಿಸಿವೆ. ಎರಡರಲ್ಲಿಯೂ ಅದು ಬಹಳ ಮಟ್ಟಿಗೆ ಭಾಗ್ಯಶಾಲಿ ಎನ್ನಬೇಕು. ಅದು ನೈಸರ್ಗಿಕ ಸಮೃದ್ಧಿಯಲ್ಲಿ, ಸೃಷ್ಟಿಸೌಂದರ್ಯದಲ್ಲಿ, ಪುರಾತನ ಭಾರತೀಯರು ಅದಕ್ಕಿಟ್ಟ "ಸ್ವರ್ಣದ್ವೀಪ" ಎಂಬ ಹೆಸರಿಗೆ ಅನುರೂಪವಾಗಿಯೇ ಇದೆ. ಹುಲುಸು ನೆಲ, ಧಾರಳವಾದ ನೀರು ವಿಶೇಷ ಶ್ರಮವಿಲ್ಲದೆ ವಿಪುಲ ಆಹಾರೋತ್ಪಾದನೆಗೆ ಅವಕಾಶ ಮಾಡಿಕೊಟ್ಟಿವೆ. ಅದು ಏಶಿಯದ ಅಕ್ಕಿಯ ಕಣಜ; ಬರ್ಮಾದಷ್ಟು ಅಕ್ಕಿಯನ್ನು ನಿರ್ಯಾತಮಾಡುವ ದೇಶ ಜಗತ್ತಿನಲ್ಲಿ ಬೇರೊಂದಿಲ್ಲ. ಅರಣ್ಯಸಂಪತ್ತಿನಿಂದ ಬರುವ ವ್ಯಾಪಾರಿ ಮಹತ್ವವಲ್ಲದೆ ಕಲ್ಲೆಣ್ಣೆಯ ಬಾವಿಗಳೂ ಅಲ್ಲಿ ಶೋಧಿಸಲ್ಪಟ್ಟಿರುವುದರಿಂದ ಬರ್ಮಾಕ್ಕೆ ಇಂದಿನ ಜಗತ್ತಿನಲ್ಲಿ ತಕ್ಕಮಟ್ಟಿನ ರಾಜಕೀಯ ಮಹತ್ವವೂ ಇದೆ.

ಜನಸಂಖ್ಯೆಯಿಂದ ತುಂಬಿ ಹರಿಯುವ ಎರಡು ಪ್ರಚಂಡ ರಾಷ್ಟ್ರಗಳು ನೆರೆಯಲ್ಲಿದ್ದರೂ ಬರ್ಮಾ ತನ್ನ ಐತಿಹಾಸಿಕ ಪ್ರವಾಹದಲ್ಲಿ ಅನ್ಯಾದೃಶವಾದ

ಸುದೈವವನ್ನು ಹೊಂದಿದೆ. ಅದರ ಜನ ಚೀನದವರಂತೆ ಮಂಗೋಲ ಕುಲದವರಾಗಿದ್ದು ತಿಬೇಟದಿಂದ ಇರಾವತಿ ನದಿಗುಂಟ ತೆರೆತೆರೆಯಾಗಿ ಬಂದು ಇಲ್ಲಿ ನೆಲೆನಿಂತವರಾದರೂ ಚೀನದಲ್ಲಿ ನಡೆದ ಪ್ರಚಂಡ ಘಟನೆಗಳ ಜಳ ವಿಶೇಷವಾಗಿ ಇವರಿಗೆ ತಟ್ಟಲಿಲ್ಲ. ಆಗಾಗ್ಗೆ ಚೀನೀಯರು ಬರ್ಮಾದ ಮೇಲೆ ದಾಳಿ ಮಾಡಿದ್ದರೂ ಅದರ ಅರಸರು ಅವರನ್ನು ಯಶಸ್ವಿಯಾಗಿ ಹಿಂದಟ್ಟಿದ್ದಾರೆ. ಭಾರತದ ದೆಸೆಯಿಂದ ಬಂದದ್ದೆಂದರೆ, ಅಲ್ಲಿನ ಬೌದ್ಧಧರ್ಮದ ದಿಗ್ವಿಜಯವೊಂದೇ. ಕ್ರಿ. ಪೂ. ಮೂರನೇ ಶತಮಾನದಲ್ಲಿ ಅಶೋಕನ ಧರ್ಮಸತ್ರ ಬರ್ಮಾಕ್ಕೂ ತಲುಪಿತು. ಅದು ಇಂದಿಗೂ ನೂರಕ್ಕೆಂಭತ್ತರಷ್ಟು ಬರ್ಮೀಯರ ಧರ್ಮವಾಗಿದೆ. ಬರ್ಮಾಕ್ಕೆ ದೊರೆತ ನಿಜವಾದ ಪರಾಧೀನತೆಯ ಸವಿಯೆಂದರೆ ೧೮೮೫ರಲ್ಲಿ ಬ್ರಿಟಿಶರು ಅದನ್ನು ಪಾದಾಕ್ರಾಂತ ಮಾಡಿಕೊಂಡಂದಿನಿಂದ ೧೯೪೮ರಲ್ಲಿ ಅದನ್ನು ತೆರವು ಮಾಡಿ ಹೋಗುವ ವರೆಗಿನ ಸುಮಾರು ಅರುವತ್ತು ವರ್ಷಗಳ ಅವಧಿ ಮಾತ್ರ.

ಅತ್ಯಂತ ಸುಖಿಗಳು

ಈ ಎಲ್ಲ ಸಂಗತಿಗಳು ಬರ್ಮೀಯರ ರಾಷ್ಟ್ರೀಯ ಚಾರಿತ್ರ್ಯದ ಮೇಲೆ ಗಾಢವಾದ ಪರಿಣಾಮ ಮಾಡಿವೆ. ಸ್ಕೌಟ್ ಚಳವಳಿಯ ಜನಕನಾದ ಬೇಡೆನ್ ಪಾವೆಲ್ "ಬರ್ಮೀಯರು ನಾನು ಕಂಡ ಜನಾಂಗಗಳಲ್ಲೆಲ್ಲ ಅತ್ಯಂತ ಸುಖಿಗಳು" ಎಂದಿದ್ದಾನೆ. ಈ ಮಾತು ಪ್ರತಿಯೊಬ್ಬ ವಿದೇಶಿ ಪ್ರವಾಸಿಕನ ನಿದರ್ಶನಕ್ಕೂ ಬಂದಿದೆ. ಬೆಚ್ಚನ್ನ ಹವೆ, ಭತ್ತದ ಹಸಿರು ಬಯಲುಗಳು, ನಿಬಿಡ ಅರಣ್ಯಗಳು, ವಿಶಾಲವಾದ ನದಿಗಳು, ಪೂರ್ವ ಪಶ್ಚಿಮಗಳಲ್ಲಿ ದಿಗಂತದತ್ತ ಕಣ್ಣು ಹಾಯಿಸಿದಲ್ಲೆಲ್ಲ ನೀಲವಾದ ಪರ್ವತಶ್ರೇಣಿಗಳು—ಈ ಮನೋಹರ ಪರಿಸರಕ್ಕೆ ಬರ್ಮೀ ಜನರ ನಿಶ್ಚಿಂತ ಹರ್ಷದ ಮುಗ್ಧ ನಗೆ ಜೀವಕಳೆಯನ್ನು ಕೊಡುತ್ತದೆ.

ನೆಲವೂ ಇತಿಹಾಸವೂ ಯಾರಿಗೆ ಒಲಿದಿವೆಯೋ ಅವರು ಉದಾರರೂ ನಿಶ್ಚಿಂತರೂ ಆಗಿರುವುದು ಸಹಜ. ಬರ್ಮೀಯರು ದುರ್ಗುಣವೆನಿಸುವಷ್ಟು ಉದಾರರು ಮತ್ತು ನಿಶ್ಚಿಂತರು. ತಮ್ಮ ನಾಡು ಸ್ವರ್ಣದ್ವೀಪವೆಂದು ನಂಬುವವರಲ್ಲಿ ಬರ್ಮೀಯರೇ ಎಲ್ಲರಿಗಿಂತ ಮೊದಲಿಗರು. ಜಾಗತಿಕ ವಲಸೆಯ ಅಂಕೆಸಂಖ್ಯೆಗಳನ್ನು ನೋಡಿದರೆ ಪರದೇಶಗಳಲ್ಲಿರುವ ಬರ್ಮೀಯರ ಸಂಖ್ಯೆ ಎಲ್ಲಕ್ಕೂ ಕಡಿಮೆಯೆಂದು ವ್ಯಕ್ತವಾದೀತು. ಬರ್ಮೀಯರಿಗೆ ತಮ್ಮ ನಾಡಿನಲ್ಲಿ ಉಳಿಯುವುದಕ್ಕಿಂತ ಪ್ರಿಯವಾದುದು ಬೇರೊಂದಿಲ್ಲ.

ಈ ಆತ್ಮತೃಪ್ತ ಜನಕ್ಕೆ ಔದಾರ್ಯವೆಂಬುದು ಒಂದು ಜೀವನವೇದಾಂತವೇ ಎಂಬಂತಿದೆ. ಏಶಿಯದ ಅನೇಕ ರಾಷ್ಟ್ರಗಳಲ್ಲಿ ಅಭಿಶಾಪಗಳಂತಿರುವ ಮತ್ಸರ, ಕಾರ್ಪಣ್ಯ, ದುರಾಶೆ ಇವು ಬರ್ಮೀಯರ ಪ್ರಕೃತಿಗೆ ಬಲು ದೂರ. ಅವರ ಸಾಮಾಜಿಕ ಕಟ್ಟುಪಾಡುಗಳಲ್ಲಾಗಲಿ ಧಾರ್ಮಿಕ ನಡೆವಳಿಗಳಲ್ಲಾಗಲಿ ಅಸಹನೆಗೆ ಸ್ಥಾನವಿಲ್ಲ. ಬೌದ್ಧ ಧರ್ಮದ ಪ್ರಭಾವ ಇದಕ್ಕೆ ಬಹುಮಟ್ಟಿಗೆ ಕಾರಣವಾಗಿರಬೇಕು.

ಆಶಾಪರಿತ್ಯಾಗವು ಬರ್ಮಿ ಮಗುವಿಗೆ ದೊರೆಯುವ ಪ್ರಥಮ ಪಾಠ. ಪ್ರತಿಯೊಬ್ಬ ಬರ್ಮಿ ಬೌದ್ಧ ಹುಡುಗನೂ "ಶಿನ್‌ಪ್ಯು" ಎಂಬ ಧಾರ್ಮಿಕ ಸಂಸ್ಕಾರವನ್ನು ಪಡೆಯಲೇಬೇಕು. ಭಾರತೀಯರ ಉಪನಯನಕ್ಕೆ ಸಮಾನವಾದ ಸಮಾರಂಭ ಇದು. ತಾಯಿ ತಂದೆಗಳು ಹುಡುಗನನ್ನು ಅತಿ ಸುಂದರವಾದ ಉಡಿಗೆ ತೊಡಿಗೆಗಳಿಂದ ಮೊದಲು ಅಲಂಕರಿಸುತ್ತಾರೆ. ನೆರೆದ ಬಂಧು ಬಾಂಧವ ಮಿತ್ರಾದಿಗಳೆಲ್ಲ ಉಡುಗೊರೆಗಳನ್ನು ಕೊಡುತ್ತಾರೆ. ವಾದ್ಯ ಮೇಳಗಳು ಮೊಳಗುತ್ತವೆ. ಆ ಮೇಲೆ ಹುಡುಗ ತನ್ನ ವೈಭವಯುಕ್ತ ವಸ್ತ್ರಾಭರಣಗಳನ್ನೆಲ್ಲ ಪರಿತ್ಯಜಿಸಿ ತಲೆ ಬೋಳಿಸಿಕೊಂಡು ಕಾಷಾಯ ವಸ್ತ್ರವನ್ನು ಧರಿಸಬೇಕು. ಅವನು ಕನಿಷ್ಠ ಒಂದು ವಾರದ ಮಟ್ಟಿಗಾದರೂ ಸರ್ವಸಂಗ ಪರಿತ್ಯಾಗ ಮಾಡಿ ಬೌದ್ಧ ಮಠದಲ್ಲಿ ವಾಸಿಸಿ ಯತಿಜೀವನ ಸಾಗಿಸಬೇಕು; ಭಿಕ್ಷಾಪಾತ್ರೆ ಹಿಡಿದು ಬೇಡಿ ಉಣ್ಣಬೇಕು.

ಐಹಿಕ ಸಂಪತ್ತು ತುಚ್ಛ, ಬೇಕಾದಾಗ ಅದರ ಪರಿತ್ಯಾಗಕ್ಕೆ ಸಿದ್ಧನಾಗಿರಬೇಕು ಎಂದು ಕಲಿತ

ಬರ್ಮೀಯ ಯಾವಾಗಲೂ ತನ್ನ ಸಂಪತ್ತನ್ನು ಇತರರೊಡನೆ ಹಂಚಿಕೊಳ್ಳುವಲ್ಲಿ ಸುಖವನ್ನು ಕಾಣುತ್ತಾನೆ. ಅವನ ಕುಟುಂಬಕಲ್ಪನೆ ವಿಸ್ತಾರವಾದುದು. ನೆರೆಯವರು, ದೂರ ಸಂಬಂಧಿಕರು, ಮಿತ್ರರು ಎಲ್ಲರೂ ಬಂಧು ಶಬ್ದದ ವ್ಯಾಪ್ತಿಯಲ್ಲಿ ಬರುತ್ತಾರೆ. ನಿತ್ಯ ಮನೆವಾರ್ತೆಯನ್ನು ಬಿಟ್ಟು ಮತ್ತೇನೇ ಜರಗಲಿ, ಆ ಸಮಾರಂಭದಲ್ಲಿ ನೆರೆಯವರೆಲ್ಲ ಭಾಗವಹಿಸಲೇ ಬೇಕು; ಉಂಡು ನಲಿಯಲೇಬೇಕು. ಮತ್ತು ಇಂಥ ಸಮಾರಂಭಗಳಾದರೂ ಅಸಂಖ್ಯವಾಗಿವೆ. ಹುಡುಗನ ನಾಮಕರಣ, ಚೌಲಕರ್ಮ, "ಉಪನಯನ", ಹುಡುಗಿಯರ ಕಿವಿಚುಚ್ಚುವಿಕೆ, ವಿವಾಹ, ಹುಟ್ಟು ಹಬ್ಬಗಳು, ಯುಗಾದಿ, ಮಳೆಗಾಲದ ಆರಂಭ, ಶರದುತ್ಸವ, ವಸಂತೋತ್ಸವ—ಎಷ್ಟು ಬೇಕಾದರೂ ಇವೆ.

ಬೌದ್ಧ ಭಿಕ್ಷುಗಳನ್ನು ಕರೆದು ಅವರಿಗೆ ಭೋಜನ ಏರ್ಪಡಿಸುವುದು ಒಂದು ಮಹಾ ಪುಣ್ಯಕರ್ಮವೆಂದು ಭಾವಿಸಲ್ಪಡುತ್ತದೆ. ತರತರದ ಭಕ್ಷ್ಯ ಭೋಜ್ಯಗಳಿಂದಲೂ ಪಾನೀಯಗಳಿಂದಲೂ ಭಿಕ್ಷುಗಳನ್ನು ತೃಪ್ತಿಪಡಿಸಿ ದಾನ ದಕ್ಷಿಣೆಗಳನ್ನು ಸಮರ್ಪಿಸಲಾಗುತ್ತದೆ. ಬರ್ಮೀಯರ ಪ್ರಕಾರ ದಾನ ಕೊಟ್ಟವನಿಗೆ ದಾನ ತೆಗೆದುಕೊಂಡವನು ಉಪಕಾರ ಮಾಡಿದಂತೆ! ಭಿಕ್ಷುಗಳು— ಅವರನ್ನು ಬರ್ಮೀಯರು ಫೋಂಗಿ ಎಂದು ಕರೆಯುತ್ತಾರೆ—ಸಂತುಷ್ಟರಾಗಿ ಯಜಮಾನನಿಗೆ ಅನಂತ ಪುಣ್ಯ ಫಲಾವಾಪ್ತಿಯಾಗಿ ಜನ್ಮಾಂತರಗಳಲ್ಲಿ ಸುಖದಾಯಕವಾಗುವುದೆಂದು ಆಶೀರ್ವದಿಸುತ್ತಾರೆ. ಯಜಮಾನನು ತನ್ನೀ ಪುಣ್ಯವನ್ನು ಕೂಡ ನೆರೆದ ಸಮಸ್ತ ಜನರೊಡನೆ ಹಂಚಿಕೊಳ್ಳುವುದಾಗಿ ಅಲ್ಲಿಯೇ ಘೋಷಿಸುತ್ತಾನೆ. ಬರ್ಮೀಯನಿಗೆ ಪುಣ್ಯವನ್ನು ಕೂಡ ಒಬ್ಬನೇ ಭೋಗಿಸುವುದರಲ್ಲಿ ಏನೂ ಸೊಗಸು ಕಾಣುವುದಿಲ್ಲವೇನೊ!


ಹತ್ತರಲ್ಲೊಬ್ಬ ಸಂನ್ಯಾಸಿ !

ಧರ್ಮವು ಬರ್ಮೀಯರ ಜೀವನದಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಪ್ರತಿ ರವಿವಾರ ಪಗೋಡಾ (ಬೌದ್ಧ ದೇವಾಲಯ)ಕ್ಕೆ ಸಪರಿವಾರರಾಗಿ ವಸ್ತ್ರಾಭರಣಭೂಷಿತರಾಗಿ ಹೋಗಿ ತಥಾಗತನ ದರ್ಶನ ಪಡೆದು ಬರುವುದು ಸಾಮಾನ್ಯ ಸಂಪ್ರದಾಯ. ಬರ್ಮೀ ಇತಿಹಾಸದ ಸುವರ್ಣ ಯುಗವಾದ ಪಗಾನ ವಂಶದ ಕಾಲದಲ್ಲಿ (೧೧ ನೇ ಶತಮಾನ) ರಾಜಧಾನಿಯಾದ ಪಗಾನವೊಂದರಲ್ಲಿಯೇ ೫,೦೦೦ ಸ್ತೂಪಗಳೂ ಪಗೋಡಗಳೂ ಇದ್ದವು. ಇಂದು ಆ ನಗರ ಹಾಳು ಬಿದ್ದಿದ್ದರೂ ಅವುಗಳಲ್ಲಿ ಒಂದು ನೂರರಷ್ಟು ಇನ್ನೂ ಉಳಿದುಕೊಂಡಿವೆ. ರಂಗೂನಿನ ಶ್ವೆ ಡಾಗನ್ ಪಗೋಡಾ ಒಂದು ಪ್ರಚಂಡ ವಾಸ್ತು. ಅದು ಒಂದು ಗುಡ್ಡದ ಮೇಲಿದ್ದು ಅದರ ಬಂಗಾರದ ರೇಕು ಹೊದಿಸಿದ ಗೋಪುರದ ತುದಿಯ ಶುದ್ಧ ಬಂಗಾರದ ತಗಡಿನ ಕಳಸ ನಗರದಲ್ಲಿ ಎದ್ದು ಕಾಣಿಸುತ್ತದೆ. ಈ ದೇವಾಲಯವು ೧೬ ನೇ ಶತಕದ ಯುರೋಪಿಯನ್ ಪ್ರವಾಸಿಗಳನ್ನು ಬೆರಗುಗೊಳಿಸಿತ್ತು. ಪ್ರತಿಯೊಂದು ಊರಿನಲ್ಲಿಯೂ ಪಗೋಡಗಳ ಗಗನಚುಂಬಿ ಶಿಖರಗಳು ಕಣ್ಣಿಗೆ ಬೀಳುತ್ತವೆ. ಶ್ರೀಮಂತರು ಪಗೋಡಗಳನ್ನು ಕಟ್ಟಿಸುವಲ್ಲಿ ಧಾರಾಳ ಧನವ್ಯಯ ಮಾಡುತ್ತಾರೆ.

ಬೌದ್ಧ ಭಿಕ್ಷುಗಳ ಪ್ರಭಾವ ಬರ್ಮಾದಲ್ಲಿ ಅಪಾರವಾಗಿದೆ. ಅವರ ಸಂಖ್ಯೆಯೂ ನಂಬಲಾರದಷ್ಟು ಅಧಿಕವಾಗಿದೆ. ಕೆಲವೆಡೆಗಳಲ್ಲಿ ಜನಸಂಖ್ಯೆಯಲ್ಲಿ ನೂರಕ್ಕೆ ಹತ್ತರಷ್ಟು ಭಿಕ್ಷುಗಳಿದ್ದಾರೆ. ಬರ್ಮಾದಲ್ಲಿ ಅಕ್ಷರಸ್ಥರ ಸಂಖ್ಯೆ ಏಶಿಯದ ಇತರ ರಾಷ್ಟ್ರಗಳಿಗಿಂತ ಹೆಚ್ಚಾಗಿದ್ದರೆ ಅದು ಬೌದ್ಧ ಮಠಗಳಲ್ಲಿರುವ ಭಿಕ್ಷುಗಳ ಉಪಕಾರ. ಶಿಕ್ಷಣವನ್ನು ಧಾರ್ಮಿಕ ಕಟ್ಟುಗಳಿಂದ ಬಿಡಿಸಿ ಲೌಕಿಕೀಕರಿಸಬೇಕೆಂದು ಸರಕಾರವು ಕೆಲ ವರ್ಷ ಹಿಂದೆ ಮಾಡಿದ ನಿರ್ಣಯದ ಫಲವಾಗಿ ಭಿಕ್ಷುಗಳು ಸಂತಪ್ತರಾದದ್ದರಿಂದ ಪ್ರಧಾನ ಮಂತ್ರಿ ಯು ನೂ ಅವರು ತಮ್ಮ ಯೋಜನೆಯನ್ನು ಅವಸರದಿಂದ ಹಿಂತೆಗೆದುಕೊಳ್ಳಬೇಕಾಯಿತು.

ಏಶಿಯವನ್ನೂ ಜಗತ್ತಿನ ಇತರ ಭಾಗಗಳನ್ನೂ ಅಲ್ಲೋಲಕಲ್ಲೋಲಗೊಳಿಸುವ ಅನೇಕ

ಸಮಸ್ಯೆಗಳು ಬರ್ಮೀಯರ ಪಾಲಿಗೆ ಇಲ್ಲವೇ ಇಲ್ಲ. ಧನಕ್ಕೆ ವಿಶೇಷ ಮಹತ್ವವಿಲ್ಲದ ಆ ದೇಶದಲ್ಲಿ ಧನಿಕ ದರಿದ್ರರೊಳಗೆ ಅತಿ ಕಡಿಮೆ ತಿಕ್ಕಾಟ ಕಂಡುಬರುತ್ತದೆ. ತೀವ್ರವಾದ ಮಹತ್ವಾಕಾಂಕ್ಷೆ ಇಲ್ಲದ ಮೂಲಕ ನಿರಾಶೆಯ ಭೀಕರ ಪರಿಣಾಮಗಳಾಗುವುದಿಲ್ಲ. ಕುನಸು ಇಟ್ಟುಕೊಳ್ಳುವ ಪ್ರವೃತ್ತಿ ಕಡಿಮೆಯಾದ್ದರಿಂದ ಅಪಕಾರಗಳನ್ನು ಬೇಗನೆ ಮರೆಯಲಾಗುತ್ತದೆ.



ಸ್ವತಂತ್ರ ಮಹಿಳೆಯರು

ಬರ್ಮೀ ಸ್ತ್ರೀಯರಿಗೆ ತಮ್ಮ ಹಕ್ಕುಗಳಿಗಾಗಿ ಹೋರಾಡುವ ಪ್ರಸಂಗವೇ ಬಂದಿಲ್ಲ. ಬರ್ಮೀ ಬೌದ್ಧರಲ್ಲಿ ವಿವಾಹವು ಧಾರ್ಮಿಕ ಬಂಧನವಲ್ಲ. ಕೇವಲ ಲೌಕಿಕ ವ್ಯವಹಾರ. ಅದೊಂದರಲ್ಲಿ ಬೌದ್ಧ ಭಿಕ್ಷುಗಳ ಪ್ರವೇಶವಿಲ್ಲ. ಆದ್ದರಿಂದ ವಿವಾಹವಿಚ್ಛೇದ ಸುಲಭ. ಹೆಂಡತಿ ಗಂಡನಿಂದ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬೇರೆಯಾಗಿದ್ದು ಅವನಿಂದ ವೆಚ್ಚಕ್ಕೆ ಕೇಳದಿದ್ದರೆ ಗಂಡ ಅವಳನ್ನು ಬಿಡಬಹುದು. ಗಂಡ ಮೂರು ವರ್ಷ ಬೇರೆ ಇದ್ದರೆ ಹೆಂಡತಿ ವಿಚ್ಛೇದ ಬೇಡಬಹುದು. ಅವಳಿಗೆ ಆಸ್ತಿಯ ಹಕ್ಕೂ ಸಮಾನವಾಗಿದೆ. ತಂದೆಯ ಆಸ್ತಿಯಲ್ಲಿ ಗಂಡು ಮಕ್ಕಳಿಗೆಷ್ಟೋ ಅಷ್ಟೇ ಹೆಣ್ಣುಮಕ್ಕಳಿಗೂ ಪಾಲು ದೊರೆಯಬೇಕೆಂಬುದು ಅಲ್ಲಿ ಶತಮಾನಗಳಿಂದ ನಡೆದುಬಂದ ಪದ್ಧತಿ. ಬಹುಪತ್ನೀತ್ವ ಇದೆ; ಆದರೆ ಮೊದಲ ಹೆಂಡತಿಯ ಅನುಮತಿಯಿಲ್ಲದೆ ಎರಡನೇ ಮದುವೆ ಕೂಡದು.

ಶಿಕ್ಷಣದಲ್ಲಿ, ವ್ಯವಹಾರದಲ್ಲಿ ಹೆಂಗಸರು ಗಂಡಸರಿಗೆ ಸರಿಮಿಗಿಲಾಗಿದ್ದಾರೆ. ರಂಗೂನಿನ ಅಂಗಡಿ

ಗಳಲ್ಲಿ ಹೆಂಗಸರು ಕುಳಿತು ವ್ಯಾಪಾರ ಮಾಡುವುದನ್ನು ನೋಡಿ ವಿದೇಶೀಯರು ಆಶ್ಚರ್ಯಪಡುತ್ತಾರೆ. ವ್ಯಾಪಾರಿ ಚಾತುರ್ಯದಲ್ಲಿಯೂ ಆಸ್ತಿಯನ್ನು ಅಭಿವೃದ್ಧಿಗೆ ತರುವುದರಲ್ಲಿಯೂ ಹೆಂಗಸರು ಗಂಡಸರನ್ನು ಮೀರಿಸುತ್ತಾರೆಂದು ಅಲ್ಲಿ ಪ್ರಸಿದ್ಧಿಯಿದೆ. ಈಚೆಗೆ ರಂಗೂನ್ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವೊಂದರಲ್ಲಿ ಪದವಿ ಪಡೆದವರಲ್ಲಿ ಗಂಡಸರಿಗೆ ಸಮ ಸಮ ಸಂಖ್ಯೆಯಲ್ಲಿ ಹೆಂಗಸರಿದ್ದರು. ಮಹಿಳಾ ವಕೀಲರು, ಡಾಕ್ಟರರು, ರಾಜಕಾರಣಿಗಳು ಇರುವುದು ಬರ್ಮೀಯರಿಗೆ ವಿಚಿತ್ರವಾಗಿ ಕಾಣಿಸುವುದಿಲ್ಲ.

ಶೂರ ಜನ

ಅಂದಾಕ್ಷಣ ಬರ್ಮೀಯರು ನಿಸ್ಸತ್ವ, ನಿರ್ವೀರ್ಯ ಜನವೆಂದು ತಿಳಿದರೆ ಅಂಥ ತಪ್ಪು ಬೇರೊಂದಿರಲಾರದು. ಜಗತ್ತಿನ ಅತ್ಯಧಿಕ ಕೊಲೆ ಪ್ರಮಾಣ ಎಲ್ಲಿದೆಯೆಂದು ಕೇಳಿದರೆ ಬಹುಶಃ ಬರ್ಮಾದಲ್ಲಿ ಎನ್ನಬೇಕಾಗುತ್ತದೆ. ಇತಿಹಾಸದುದ್ದಕ್ಕೂ ಬರ್ಮೀಯರು ಯುದ್ಧಪ್ರಿಯತೆಯನ್ನು ಪ್ರಕಟಿಸುತ್ತ ಬಂದಿದ್ದಾರೆ. ಅವರ ಬರಿಗಾಲ ಯೋಧರು ಅರಣ್ಯ, ಪರ್ವತಗಳನ್ನು ಲೆಕ್ಕಿಸದೆ ನೆರೆಹೊರೆಯ ಸಿಯಾಮ, ಭಾರತದ ಅಸಾಮ, ಅರಾಕಾನ ಮತ್ತು ಒಮ್ಮೊಮ್ಮೆ ಚೀನದ ಯುನಾನ್ ಪ್ರಾಂತಗಳ ಮೇಲೆ ಸಹಿತ ಯಶಸ್ವಿ ಅಭಿಯೋಗಗಳನ್ನು ಮಾಡಿ ಬರುತ್ತಿದ್ದ ಕಾಲವೊಂದಿತ್ತು. ಅಸಾಮದ ಮೇಲೆ ೧೮೨೪ ರಲ್ಲಿ ಮಾಡಿದ ಇಂಥ ಒಂದು ದಾಳಿಯೇ ಕೊನೆಗೆ ಬ್ರಿಟಿಶರನ್ನು ಕೆರಳಿಸಿ ಬರ್ಮಾದ ಮೇಲೆ ಆಕ್ರಮಣ ಕೈಕೊಳ್ಳುವಂತೆ ಮಾಡಿತು. ೧೮೮೫ ರಲ್ಲಿ ಅವರು ಬರ್ಮಾವನ್ನು ಪಾದಾಕ್ರಾಂತಗೊಳಿಸಿಕೊಂಡು ಅರಸ ಥೀಬಾನನ್ನು ಭಾರತಕ್ಕೆ ಗಡಿಪಾರು ಮಾಡಿದರು.

ಬರ್ಮೀಯರ ಈ ಉಗ್ರ ಪ್ರವೃತ್ತಿಯ ದೆಸೆಯಿಂದಲೇ ಅವರಿಗೆ ಶಾಂತಿವಾದಿಯಾದ ಬೌದ್ಧ ಧರ್ಮ ಮೆಚ್ಚಿಕೆಯಾಗಿರಬೇಕು. ಅದು ಅವರ ಹಿಂಸಾವೃತ್ತಿಯನ್ನು ಮಿತಿಯೊಳಗಿರಿಸಿದೆ. ಆದರೆ ಆ ಧರ್ಮದ ಕಾರಣದಿಂದ ಕೂಡ ಅವರು ಕ್ರೂರವಾದ ಯುದ್ಧಗಳನ್ನು ಹೂಡಿದ್ದುಂಟು. ೧೧ನೇ ಶತಮಾನದಲ್ಲಿ ಪಗಾನ ವಂಶದ ಮೂಲ ಪುರುಷನಾದ ರಾಜಾ ಅನುವ್ರತನು ಥಾಟನ್ ರಾಜ್ಯದ ಮೇಲೆ ಯುದ್ಧ ಹೂಡಿದ ಕಾರಣ ವಿಚಿತ್ರವಾಗಿದೆ. ಪಗಾನ ರಾಜ್ಯದಲ್ಲಿ ಬೌದ್ಧ ಮಠಗಳು ಅನಾಚಾರಮಗ್ನವಾಗಿದ್ದವು. ಥಾಟನದಿಂದ ಬಂದ ಇಬ್ಬರು ಬೌದ್ಧ ಭಿಕ್ಷುಗಳು ಶುದ್ಧವಾದ ಬೌದ್ಧ ಧರ್ಮ ಬೋಧಿಸುತ್ತಿದ್ದುದನ್ನು ಕೇಳಿದ ಅನುವ್ರತನು ತನ್ನ ರಾಜ್ಯದ ಭಿಕ್ಷುಗಳನ್ನು ಗಡಿಪಾರು ಮಾಡಿ ಥಾಟನ್ ಮೇಲೆ ಯುದ್ಧ ಹೂಡಿದನು. ಶುದ್ಧ ಬೌದ್ಧ ಧರ್ಮದ ಪಾಲಿ-ಸಂಸ್ಕೃತ ಮೂಲ ಗ್ರಂಥಗಳು ಥಾಟನದಲ್ಲಿದ್ದವೆಂಬುದೇ ಆ ರಾಜ್ಯದ ತಪ್ಪಾಗಿತ್ತು! ಬಹಳ ಪ್ರಾಣಹಾನಿಯ ನಂತರ ಯುದ್ಧ ಗೆದ್ದು ಆತ ಪವಿತ್ರ ಗ್ರಂಥಗಳನ್ನು ತನ್ನ ರಾಜಧಾನಿಗೆ ತಂದ.

ವಿಪತ್ ಪರಂಪರೆ

ಬರ್ಮಾದ ಈಚೆಗಿನ ಇತಿಹಾಸ ಮಾತ್ರ ಭೀಕರ ವಿಪತ್ತುಗಳ ಆಖ್ಯಾಯಿಕೆಯಾಗಿದೆ. ಬ್ರಿಟಿಶರು ಬರ್ಮಾವನ್ನು ಗೆದ್ದ ಬಳಿಕ ಅದನ್ನು ಭಾರತದ ಅಂಗವಾಗಿ ಮಾಡಿದರು. ಇದರ ವಿರುದ್ಧ ಬರ್ಮೀಯರು ಆಂದೋಲನ ಹೂಡಿದ್ದರಿಂದ ೧೯೩೭ ರಲ್ಲಿ ಅದು ಭಾರತದಿಂದ ಪ್ರತ್ಯೇಕಿಸಲ್ಪಟ್ಟಿತು. ಸ್ವಭಾವತಃ ಉದ್ಯಮಶೀಲರಲ್ಲದ ಮತ್ತು ಸರಳ ಸ್ವಭಾವದ ಉದಾರ ಬರ್ಮೀಯರ ಆರ್ಥಿಕ ಶೋಷಣೆ ಬ್ರಿಟಿಶರ ಕಾಲದಲ್ಲಿ ನಿರಂತರವಾಗಿ ಸಾಗಿತು. ಬರ್ಮಾದ ಕೃಷಿ ಭೂಮಿಯಲ್ಲಿ ನೂರಕ್ಕೆ ಎಪ್ಪತ್ತೈದು ಭಾಗ ಬ್ರಿಟಿಶ ವ್ಯಾಪಾರಿ ಸಂಸ್ಥೆಗಳ ಮತ್ತು ಭಾರತೀಯ ಸಾವುಕಾರರ ಒಡೆತನಕ್ಕೆ ಒಳಪಟ್ಟಿತು.

ಅನಂತರ ಎರಡನೇ ಮಹಾಯುದ್ಧ ಬಂತು. ಬರ್ಮೀಯರಲ್ಲಿ ತೀವ್ರವಾಗಿದ್ದ ಬ್ರಿಟಿಶ ವಿರೋಧಿ ಭಾವನೆಯು ಅವರನ್ನು ಜಪಾನದೊಡನೆ ಸಹಕರಿಸುವಂತೆ ಮಾಡಿತು. ಜಪಾನಿನ ಮಿಂಚಿನ ದಾಳಿಯನ್ನೆದುರಿಸಲಾರದ ಬ್ರಿಟಿಶರು ಪಲಾಯನ ಮಾಡಿದರು. ಜಪಾನೀಯರು ತಮ್ಮ ಮಾತಿ

ನಂತೆ ನಡೆದುಕೊಳ್ಳದೆ ತಾವು ಬ್ರಿಟಿಶರಿಗಿಂತಲೂ ಕೆಟ್ಟ ಸಾಮ್ರಾಜ್ಯವಾದಿಗಳೆಂದು ತೋರಿಸಿಕೊಟ್ಟಾಗ ಬರ್ಮೀಯರು ಬ್ರಿಟಿಶರೊಡನೆ ಸಹಕರಿಸಿ ಜಪಾನೀಯರ ವಿರುದ್ಧ ಕೂಟಯುದ್ಧ ನಡೆಸಿದರು. ೧೯೪೫ರಲ್ಲಿ ಮಿತ್ರರಾಷ್ಟ್ರಗಳು ಭಾರತದಿಂದ ಏರಿ ಬಂದು ಜಪಾನೀಯರನ್ನು ಹಿಂದಕ್ಕಟ್ಟಿ ಬರ್ಮಾವನ್ನು ತಿರುಗಿ ಗೆದ್ದುಕೊಂಡರು.

ಆರು ವರ್ಷಗಳ ಚಿಕ್ಕ ಅವಧಿಯಲ್ಲಿ ಸಂಭವಿಸಿದ ಈ ಎರಡು ಆಕ್ರಮಣ ಪ್ರತ್ಯಾಕ್ರಮಣಗಳ ರುದ್ರಲೀಲೆಯಲ್ಲಿ ಬರ್ಮಾದ ಸರ್ವನಾಶ ಸಂಪೂರ್ಣವಾಯಿತು. ಎರಡೂ ಪಕ್ಷಗಳು ಹಿಂದೆಗೆಯುವಾಗ್ಗ ದಗ್ಧಭೂತಲ ನೀತಿಯನ್ನು ನಿರ್ದಯದಿಂದ ಅನುಸರಿಸಿದ್ದರಿಂದ ಬರ್ಮದ ಬಯಲುಗಳು, ಊರುಗಳು, ಎಣ್ಣೆಯ ಗಣಿಗಳು-ಸಮಸ್ತ ಆರ್ಥಿಕ ಜೀವನದ ಧಾರೆಗಳು ನಿರ್ನಾಮವಾಗಿದ್ದವು. ಯಾವ ದೇಶಕ್ಕಾದರೂ ಈ ಗಾಯಗಳನ್ನು ಕಟ್ಟಿ ಪುನರುಜ್ಜೀವನವನ್ನು ಸಾಧಿಸುವುದೇ ಸಾಕಷ್ಟು ದೊಡ್ಡ ಸಮಸ್ಯೆಯಾಗಬಹುದಿತ್ತು. ಬರ್ಮಾಕ್ಕೆ ಇನ್ನೂ ಅನರ್ಥಗಳು ಕಾದಿದ್ದವು.

ಬರ್ಮಾದ ಖ್ಷಿತಿಯನ್ನೂ ಯುದ್ಧಕಾಲದಲ್ಲಿ ಅಲ್ಲಿನ ಜನತೆಯು ಸಂಪಾದಿಸಿಕೊಂಡಿದ್ದ ಪ್ರತಿಭಟನಾಶಕ್ತಿಯನ್ನೂ ಮನಗಂಡ ಬ್ರಿಟಿಶರು ಅದಕ್ಕೆ ಪೂರ್ಣ ಸ್ವಾತಂತ್ರ್ಯವಿತ್ತು ೧೯೪೮ರಲ್ಲಿ ಹೊರಬೀಳುವುದಾಗಿ ಸಾರಿದ್ದರು. ಅದಕ್ಕೆ ಪೂರ್ವಭಾವಿಯಾಗಿ ದೇಶದ ಎಲ್ಲ ಮುಖ್ಯ ಮುಖ್ಯ ನಾಯಕರನ್ನೊಳಗೊಂಡ ತಾತ್ಪೂರ್ತಿಕ ಸರಕಾರ ರಚಿಸಲ್ಪಟ್ಟಿತ್ತು.

೧೯೪೭ ಜುಲೈ ೧೯ನೇ ದಿನ ಮಂತ್ರಿಮಂಡಲ ಸಭೆ ಸೇರಿದ್ದಾಗ ಒಮ್ಮೆಲೆ ಹೇಳದೇಕೇಳದೆ ಬಾಗಿಲು ದೂಡಿ ನಾಲ್ವರು ತರುಣರು ಸ್ಟೇನ್‌ಗನ್ ಧಾರಿಗಳಾಗಿ ಒಳನುಗ್ಗಿದರು. ಕ್ಷಣಾರ್ಧದಲ್ಲಿ ಅವರ ಕೊಲೆಗಡಕ ಗುಂಡುಗಳು ದೇಶದ ಅದ್ವಿತೀಯ ನಾಯಕರಾದ ಜನರಲ್ ಆಂಗ್ ಸಾನರನ್ನೊಳಗೊಂಡು ಹೆಚ್ಚುಕಡಿಮೆ ಇಡೀ ಮಂತ್ರಿಮಂಡಲವನ್ನೇ ಭೂಶಾಯಿಯಾಗಿ ಮಾಡಿದವು.

ಈ ಅನಾಹುತದಿಂದ ಉಳಿದುಕೊಂಡ ಒಬ್ಬನೇ ನಾಯಕನೆಂದರೆ ಸದ್ಯದ ಪ್ರಧಾನಮಂತ್ರಿ ಯು ನು. ಬರ್ಮೀಯರಿಗೆ ಜ್ಯೋತಿಷ್ಯದಲ್ಲಿ ಅಪರಿಮಿತ ವಿಶ್ವಾಸ. (ಅವರು ಸ್ವಾತಂತ್ರ್ಯ ಪಡೆಯುವ ದಿನವನ್ನು ಕೂಡ ಜ್ಯೋತಿಷಿಗಳ ಸೂಚನೆಯಂತೆಯೇ ನಿರ್ಧರಿಸಿದ್ದರು). ಯು ನು ಅವರ ಜ್ಯೋತಿಷಿ ಆ ದುರ್ದಿನದಂದು ಅವರಿಗೆ ಮನೆಬಿಟ್ಟು ಕದಲದಿರಲು ಹೇಳಿದ್ದನಂತೆ. ಆದ್ದರಿಂದ ಮಂತ್ರಿಮಂಡಲದ ಸಭೆಗೆ ಅವರು ಹೋಗಿರಲಿಲ್ಲ.

ದೈವಯೋಗದಿಂದಲೇ ಉಳಿದುಕೊಂಡ ಯು ನು ದೇಶದ ನಾಯಕತ್ವವನ್ನು ವಹಿಸಿಕೊಂಡರು. ಧರ್ಮನಿಷ್ಠ ಬೌದ್ಧರೂ ಅಧಿಕಾರದಾಹದ ಲೇಶವೂ ಇಲ್ಲದವರೂ ಆದ ಅವರು ಜನತೆಯಲ್ಲಿ ಸ್ಫೂರ್ತಿಯನ್ನು ತುಂಬಿ ಮುಂದಿರುವ ಸಮಸ್ಯೆಗಳನ್ನೆದುರಿಸಲು ಅಣಿಗೊಳಿಸಿದರು. ಪುನಾರಚನೆಯ ಸಮಸ್ಯೆಗಳೇ ಸಾಲದ್ದಕ್ಕೆ ಅವರು ಯಾದವಿಯುದ್ಧವನ್ನೂ ಎದುರಿಸಬೇಕಾಯಿತು. ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದ ಕೆರೆನ್ನರೆಂಬ ಅಲ್ಪ ಸಂಖ್ಯಾಕರು ತಮಗೆ ಸ್ವತಂತ್ರ ರಾಜ್ಯ ಬೇಕೆಂದು ಯುದ್ಧ ಹೂಡಿದರು. ಅನಂತರ ಉತ್ತರದಲ್ಲಿ ಕಮ್ಯುನಿಸ್ಟರಿಂದ ಓಡಿಸಲ್ಪಟ್ಟ ಚಿಯಾಂಗ್ ಕೈಶೇಕ ಪಕ್ಷದ ದಂಡುಗಳು ಬರ್ಮಾದೊಳಗೆ ನುಗ್ಗಿ ಬರ್ಮೀ ಸರಕಾರವನ್ನು ಧಿಕ್ಕರಿಸಿದವು. ಕಮ್ಯುನಿಸ್ಟರೂ ಬಂಡೆದ್ದರು.

ಯಾವ ದೇಶವೂ ಸ್ವಾತಂತ್ರ್ಯ ದೊರೆತ ಹತ್ತು ವರ್ಷಗಳಲ್ಲಿ ಇಂಥ ವಿಪತ್ತುಗಳನ್ನು ಎದುರಿಸಿರಲಿಕ್ಕಿಲ್ಲ. ಬರ್ಮಾದ ನಾಯಕರು ಏಕನಿಷ್ಠೆಯಿಂದ ಹೋರಾಡಿ ಈ ದಿವ್ಯದಿಂದ ದೇಶವನ್ನು ಪಾರು ಮಾಡಿ ಒಂದು ಬಗೆಯ ಪವಾಡವನ್ನೇ ಮಾಡಿತೋರಿಸಿದ್ದಾರೆ. ಮೂರು ದಿಕ್ಕುಗಳಲ್ಲಿ ಬಂಡಾಯವನ್ನೆದುರಿಸಬೇಕಾದರೂ ಅವರು ವಿದೇಶಿ ಸೈನಿಕ ಸಹಾಯವನ್ನು ಪಡೆಯಲಿಲ್ಲ.

ಭಾರತ ಮತ್ತು ಬರ್ಮಾ

ಈ ಕಷ್ಟಕಾಲದಲ್ಲಿ ಭಾರತವು ಬರ್ಮಾದ ನೆರವಿಗೆ ಬಂದುದರಿಂದ ಈ ಎರಡು ರಾಷ್ಟ್ರಗಳ ಮೈತ್ರಿ ಅತ್ಯಂತ ದೃಢವಾಗಿದೆ. ಯಾದವೀ

ಯುದ್ಧದ್ಭಭೀಕರ ದಿನಗಳಲ್ಲಿ ಸರಕಾರದ ಅಸ್ತಿತ್ವ, ತಂತುಮಾತ್ರದಿಂದ ಜೋತಾಡುತ್ತಿದ್ದಾಗ, ಪ್ರಧಾನಮಂತ್ರಿ ನೆಹರು ಅವರು ಸ್ವತಃ ಭಾರತಕ್ಕೆ ಶಸ್ತ್ರಾಸ್ತ್ರ ಕೊರತೆಯಿದ್ದರೂ ಅವಶ್ಯ ಶಸ್ತ್ರಾಸ್ತ್ರಗಳನ್ನು ಕೊಟ್ಟು ಬರ್ಮಾವನ್ನುಳಿಸಿದ್ದನ್ನು ಯು ನು ಕೃತಜ್ಞತೆಯಿಂದ ಸ್ಮರಿಸುತ್ತಿರುತ್ತಾರೆ.

ಬರ್ಮೀ ಸರಕಾರದ ಸಮಾಜವಾದಿ ಮತ್ತು ದೇಶೀಕರಣ ಯೋಜನೆಗಳಿಂದ ಬರ್ಮಾದ ಏಳು ಲಕ್ಷ ವಲಸೆಗಾರ ಭಾರತೀಯರಿಗೆ ಬಲವಾದ ಪೆಟ್ಟುಬಿದ್ದಿದ್ದರೂ ಭಾರತವು ಬರ್ಮಾದ ನೆರವಿಗೆ ಧಾವಿಸಿದ್ದನ್ನು ಗಮನಿಸಬೇಕು. ಭಾರತೀಯ ಸಾಹುಕಾರರ ಒಡೆತನದಲ್ಲಿದ್ದ ಲಕ್ಷಾಂತರ ಎಕರೆ ಭೂಮಿಯನ್ನು ಬರ್ಮೀ ಸರ್ಕಾರ ರಾಷ್ಟ್ರೀಕರಿಸಿತು. ರಂಗೂನಿನ ಮುಖ್ಯ ಪೇಟೆ ಭಾರತೀಯರ ಒಡೆತನದಾಗಿತ್ತು. ಅದರ ಬೆಲೆ ಎರಡು ಕೋಟಿ ರೂಪಾಯಿಯಿತ್ತು. ಅದನ್ನು ಸರಕಾರ ವಶಪಡಿಸಿಕೊಂಡು ಕೇವಲ ೧೮ ಲಕ್ಷ ರೂಪಾಯಿಯ ಬಾಂಡುಗಳನ್ನು ಪರಿಹಾರ ಧನವಾಗಿ ಕೊಟ್ಟಿತು.

ಹೀಗಿದ್ದರೂ ಬರ್ಮಾಕ್ಕಿಂದು ಭಾರತದಷ್ಟು ಹಾರ್ದಿಕ ಮಿತ್ರ ಜಗತ್ತಿನಲ್ಲೇ ಇಲ್ಲವೆನ್ನಬಹುದು. ಭಾರತದಂತೆ ನಿಷ್ಠುರ ತಾಟಸ್ಥ್ಯ ನೀತಿಯನ್ನು ಅನುಸರಿಸುವ ಬರ್ಮಾ ಭಾರತವನ್ನು ಅಣ್ಣನೆಂದೇ ಬಗೆಯುತ್ತಿದೆ. ಬರ್ಮಾಕ್ಕೆ ತನ್ನ ಅಕ್ಕಿಯನ್ನು ಮಾರುವುದು ಕಷ್ಟವಾದಾಗ ಭಾರತ ಅದನ್ನು ತನಗೆ ಬರತಕ್ಕ ಸಾಲಕ್ಕೆ ಪ್ರತಿಯಾಗಿ ಕೊಂಡಿತು. ಅದು ಎರವಲು ಕೊಟ್ಟ ಎಂಜಿನಿಯರರು ಬರ್ಮಾದ ರಾಷ್ಟ್ರೀಯ ಪುನರುಜೀವನಕ್ಕೆ ನೆರವಾಗುತ್ತಿದ್ದಾರೆ.

ಭಾರತದಲ್ಲಿ ಸಮಾಜವಾದ ಇನ್ನೂ ರಾಜಕೀಯ ಪಕ್ಷಗಳ ನೀತಿಯಾಗಿದ್ದರೆ ಬರ್ಮಾದ ರಾಜ್ಯ ಘಟನೆಯೇ ಅದು ಸಮಾಜವಾದಿ ರಾಜ್ಯವೆಂದು ಉಲ್ಲೇಖಿಸುತ್ತದೆ. ಅದು ರಾಷ್ಟ್ರೀಕರಣ ಮತ್ತು ಸರಕಾರಿ ವ್ಯಾಪಾರದ ರಂಗದಲ್ಲಿ ಬಹಳ ಮುಂದುವರಿದಿದೆ. ಅದರ ಅಧಿಕಾರಾರೂಢ ಪಕ್ಷವಾದ ಫ್ಯಾಸಿಸ್ಟ್ ವಿರೋಧಿ ಜನತಾ ರಂಗ (*AFPL*)ವು ವಿವಿಧ ಮಟ್ಟದ ಸಮಾಜವಾದಿ ವಿಚಾರಧಾರೆಯ ಪಕ್ಷಗಳ ಒಂದು ಕೂಟವಾಗಿದೆ. ಸರಕಾರಿ ಧೋರಣಗಳ ಫಲವಾಗಿ ಬರ್ಮಾ ಕಮ್ಯುನಿಸ್ಟ್ ದೇಶವಾಗಿ ಪರಿವರ್ತನೆಗೊಳ್ಳಬಹುದೆಂಬ ಭಯವನ್ನು ಕೆಲ ವಿದೇಶೀಯರು ವ್ಯಕ್ತಗೊಳಿಸುತ್ತಿದ್ದಾರೆ. ಇದಕ್ಕೆ ಬರ್ಮಾ ನೆರೆಯ ಕಮ್ಯುನಿಸ್ಟ್ ಚೀನದೊಡನೆ ಸ್ನೇಹ ಸಂಬಂಧವಿಟ್ಟುಕೊಂಡಿರುವುದೂ ರಶಿಯದ ಆರ್ಥಿಕ ಸಹಾಯವನ್ನು ಸ್ವೀಕರಿಸಿ ಅಮೇರಿಕದ್ದನ್ನು ನಿರಾಕರಿಸಿರುವುದೂ ಕಾರಣವೆಂದು ತೋರುತ್ತದೆ. ಆದರೆ "ನಾನು ಅಧಿಕಾರದಲ್ಲಿದ್ದಷ್ಟು ದಿನ ಬರ್ಮಾ ಎಂದೂ ಕಮ್ಯುನಿಸ್ಟ್ ಆಗಲಾರದು" ಎಂದು ಯು ನು ಮೊನ್ನೆ ಸಾರಿದ್ದಾರೆ.

ಬರ್ಮೀಯರ ರಾಷ್ಟ್ರೀಯ ಶೀಲಕ್ಕೆ ಉದಾರ ಸಮಾಜವಾದವು ಚೆನ್ನಾಗಿ ಒಗ್ಗುವುದರಿಂದ ಅವರು ಅದನ್ನು ಅಂಗೀಕರಿಸಿದ್ದಾರೆ. ಕಮ್ಯುನಿಜಂನಂಥ ಬಲಾತ್ಕಾರದ ರಾಜಕೀಯ ಪಂಥ ಅವರ ಸ್ವಭಾವಕ್ಕೆ ವಿರುದ್ಧವಾಗಿರುವುದರಿಂದ ಬರ್ಮಾ ಕಮ್ಯುನಿಸ್ಟ್ ರಾಜ್ಯವಾಗುವ ಭಯ ಕಡಿಮೆ. ಬರ್ಮಾದ ಅನೇಕ ನಾಯಕರು ಹೇಳುವಂತೆ ನಾಡಿನ ಸಮಸ್ಯೆ ಅದಲ್ಲ. ನೈಸರ್ಗಿಕ ಸಮೃದ್ಧಿ ಮತ್ತು ಸ್ವಾಭಾವಿಕ ಸಹಿಷ್ಣುತೆಯ ಅತಿರೇಕದಿಂದ ಉದ್ಭವಿಸಿದ ಒಂದು ತರದ ಆಲಸ್ಯ ಮತ್ತು "ಬೇಫಿಕೀರು" ಔದಾರ್ಯ ಬರ್ಮೀಯರ ಉತ್ಕರ್ಷಕ್ಕೆ ಮುಖ್ಯ ಆತಂಕವಾಗಿದೆ. ಅವರು ಅವಶ್ಯಕತೆಗಿಂತ ಹೆಚ್ಚು ದುಡಿಯುವವರಲ್ಲ; ಅನೇಕ ಸಾಮಾಜಿಕ, ಧಾರ್ಮಿಕ ಸಮಾರಂಭಗಳು ಅವರ ಇದ್ದುಬಿದ್ದ ಧನಸಂಚಯವನ್ನೂ ಕರಗಿಸುವುದರಿಂದ ಬಂಡವಳದ ಸಂಗ್ರಹವಾಗುವುದಿಲ್ಲ. ಅವರ ಇತಿಹಾಸವು ಅವರಲ್ಲೊಂದು ಬಗೆಯ ಹೆಮ್ಮೆಯ ಪ್ರವೃತ್ತಿಯನ್ನುಂಟುಮಾಡಿ ಹೊರಗಿನವರಿಂದ ತಾವು ಕಲಿಯತಕ್ಕದ್ದೇನು ಎಂಬ ಉಪೇಕ್ಷಾಭಾವವನ್ನು ಬೇರೆ ಉಂಟುಮಾಡಿದೆ. ಹೀಗಾಗಿ ಸ್ಪರ್ಧೆಯೇ ತಳಹದಿಯಾದ ಇಂದಿನ ಔದ್ಯೋಗಿಕ ಜಗತ್ತಿನಲ್ಲಿ ಬರ್ಮಾ ಸತ್ವಯುತವಾಗಿ ಬೆಳೆದು ನಿಲ್ಲುವುದು ಕಷ್ಟವೆಂದು ಅವರು ಹಳಹಳಿಸುತ್ತಾರೆ.

" ಇದು ನಮ್ಮ ಮಗುವಿನದು, ನಿಮಗಿಲ್ಲ ಹೋಗಿರಿ! "
ಎಂದು ಅಚ್ಚೆಯಿಂದ ಹೇಳುವಾಗ ತಾಯಿ ಮಗುವಿನ ಮನಸ್ಸಿನಲ್ಲಿ
ಒಂದು ವಿಷಬೀಜವನ್ನು ನಡುತ್ತಾಳೆ

ಮಕ್ಕಳಿಗೆ ನಾವು ಕಲಿಸುವ ದುರ್ಗುಣ

ದಿವಂಗತ ಪಂಡಿತ ತಾರಾನಾಥ

ಅಮ್ಮಾ,

ಎಲ್ಲ ದುರ್ಗುಣಗಳಿಗಿಂತ ಕೆಟ್ಟ ಗುಣವು ಹೊಟ್ಟೆಕಿಚ್ಚು. ನಮ್ಮ ಭಾರತೀಯರಲ್ಲಂತೂ ಈಗ ಈ ದುರ್ಗುಣದ ಸಂತೆಯೇ ಇದೆ. ಇದರಿಂದಲೇ ದೇಶಕ್ಕೆ ದುರ್ಭಿಕ್ಷೆ, ಧರ್ಮದ ಅಲಕ್ಷ, ಅಜ್ಞಾನ ಇತ್ಯಾದಿಗಳು. ಇದರಿಂದಲೇ ಸಂಘವು ಹಾಳಾಗಿದೆ. ಜನರಲ್ಲಿ ಒಕ್ಕಟ್ಟಿಲ್ಲ. ಪರನಿಂದೆಯೂ ಇದರಿಂದಲೇ. ಒಬ್ಬ ಮನುಷ್ಯನು ಮುಂದಕ್ಕೆ ಬಂದರೆ ಅದನ್ನು ನೋಡಿ ಸಂತೋಷಪಡುವವರು ತೀರ ಕಡಿಮೆ. ಅವನ ಮೇಲೆ ದೋಷಗಳನ್ನು ಹೊರಿಸಿ ಅವನು ಬುದ್ಧಿಹೀನನು, ಮೋಸಗಾರನೆಂದು ಹೇಳಿ ತಿರುಗುತ್ತ ಅವನಿಗೆ ಅಪಮಾನವನ್ನು ಮಾಡಿಸಬೇಕೆಂಬುದೇ ಮೂರ್ಖರ ಸತತ ಪ್ರಯತ್ನ. ಇದರಿಂದ ದ್ವೇಷವು ಹೆಚ್ಚಾಗಿ ಜಗಳಗಳು ವಾಜ್ಯಗಳು ಎಷ್ಟೋ! ಇವುಗಳಿಂದ ದುಡ್ಡು ಹಾಳು, ಹೊತ್ತು ಹಾಳು, ಮನೆ ಹಾಳು, ಪ್ರೇಮವಂತೂ ಹಾಳೇಹಾಳು. ತಮಗೆ ಆ ದೊಡ್ಡತನ ಬರಲಿಲ್ಲವಲ್ಲಾ ಎಂದು ಹೊಟ್ಟೆಯೊಳಗೆ ಬೆಂಕಿ. ಅದರಿಂದಲೇ ಅಂತಹ ಪದವಿಯನ್ನು ನ್ಯಾಯವಾಗಿ ಪಡೆದಂಥವರ ಧಿಕ್ಕಾರವನ್ನು ಮಾಡುವದು. ಈ ಹೊಟ್ಟೆಕಿಚ್ಚಿನ ರೋಗವು ಹೇಗೆ ಹೇಗೆ ಹೆಚ್ಚಾಗುತ್ತದೋ ಹಾಗೆಯೇ ಇದ್ದ ಸಮಯವೆಲ್ಲಾ ಪರನಿಂದೆಯನ್ನು ಹೇಳುವದರಲ್ಲಿಯೂ ಕೇಳುವದರಲ್ಲಿಯೂ ಹಾಳಾಗಿ ಸಮಯದ ಸದುಪಯೋಗವಿಲ್ಲದೆ ಮೂರ್ಖತನವೇ ಪಾಲಿಗೆ ಬೀಳುತ್ತದೆ. ಅಲ್ಲದೆ ಬುದ್ಧಿ ಸುತರಾಂ ಬರುವದಿಲ್ಲ. ಸತ್ಸಂಗ ವ್ಯಾಸಂಗಗಳಿಗೆ ಹೊತ್ತಾದರೂ ಎಲ್ಲಿ ಸಿಗಬೇಕು? ಅಂದಮೇಲೆ ಈ ದುಷ್ಟರೋಗದಿಂದ ಮನುಷ್ಯನು ಸಮಯವಿಲ್ಲದೆ ತಾನು ಮುಂದಕ್ಕೆ ಬರುವದಿಲ್ಲ. ಸಹನವಿಲ್ಲದೆ ಬೇರೆಯವರನ್ನು ಬರಲಿಕ್ಕೆ ಬಿಡುವದಿಲ್ಲ. ಯಾವ ಜನಾಂಗದಲ್ಲಿ ಈ ರೋಗವು ನೋಡಿದಲ್ಲೆಲ್ಲಾ ಕಾಣಬರುತ್ತದೋ ಅದರ ಸುಸ್ಥಿತಿಯನ್ನಾದರೂ ಏನೆಂದು ವರ್ಣಿಸಬೇಕು!

ಆದರೆ ಬೀಜವಿಲ್ಲ, ಗಿಡವಾಗುವದೊ? ಈಗ ವಿಶಾಲವಾಗಿರುವ ಮತ್ಸರವೃಕ್ಷದ ಬೀಜವು ಬಂತೆಲ್ಲಿಂದ? ಅಮ್ಮಾ, ಈ ಬೀಜವನ್ನು ಹಾಕಿದವರು ಹಿರಿಯರೇ ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗುವದಿಲ್ಲವೇ? ಸಣ್ಣ ಮಕ್ಕಳನ್ನು ತೊಡೆಯ ಮೇಲೆ ಕುಳ್ಳಿರಿಸಿ ಮುದ್ದಿಡುತ್ತ ಕಲಿಸಿದ ಅನೇಕ ಗುಣಗಳಲ್ಲಿ ಒಂದು ಹೊಟ್ಟೆಕಿಚ್ಚು ಎಂಬುದು. ಯಾವದಾದರೊಂದು ಪದಾರ್ಥವನ್ನು ಮಗುವಿಗೆ ಕೊಟ್ಟಾಗ, ತಮಾಷೆಗಾಗಿ ಬೇರೆ ಮಕ್ಕಳನ್ನೇ ಆಗಲಿ ಹಿರಿಯನ್ನೇ ಆಗಲಿ ಸೂಚಿಸಿ "ಇದು ನಮ್ಮ ಮಗುವಿನ ಪದಾರ್ಥ, ನಿಮಗ್ಯಾರಿಗೂ ಇಲ್ಲ ಹೋಗಿರಿ" ಎಂದು ಆನಂದದಿಂದ ಹೇಳಿ ಮಗುವಿಗೆ ಅಭಿಮಾನದಿಂದ ಎದೆತಟ್ಟಲಿಕ್ಕೆ ಕಲಿಸುವದುಂಟು. ಅಷ್ಟೇ ಮಾತ್ರವಲ್ಲದೆ ಮೂರ್ಖರು

" ತಾಯಂದಿರಿಗೆ " ಎಂಬ ಪತ್ರಸಂಗ್ರಹದಿಂದ

ತಮ್ಮ ಆಟದ ಗೊಂಬೆಯಾದ ಮಗುವನ್ನು ಕುರಿತು, "ನಮ್ಮ ಪಾಪ ಒಳ್ಳೆಯವ, ಮುದ್ದು, ಸುಂದರ, ನೀವೆಲ್ಲರೂ ಮೂರ್ಖರು" ಅಥವಾ ಮಗುವಿನ ಕೈಯಲ್ಲಿರುವ ಯಾವದಾದರೊಂದು ಪದಾರ್ಥವನ್ನು ಕುರಿತು, "ಇದು ಬಹಳ ಒಳ್ಳೆಯದು, ಛೀ ನಿಮ್ಮದು ಏನೂ ಚೆನ್ನಾಗಿಲ್ಲ" ಎಂದು ಹೇಳಿ ಆ ಗೊಂಬೆಯ ಆಟವನ್ನು ನೋಡಿ ಬಹಳ ಸಂತೋಷ ಪಡುವದುಂಟು. ಮೇಲೆ ಇಂಥ ಆಟಗಳನ್ನು ಹೇಳಿದಂತೆ ಆಡುವ ಮಗುವನ್ನು ನೋಡಿ, "ನಮ್ಮ ಮಗು ಬಹಳ ಚುರುಕು. ಏನಾದರೊಂದು ತೋರಿಸಿದರೆ ಸಾಕು ಆ ಕ್ಷಣವೇ ಮಾಡಿ ತೋರಿಸುತ್ತದೆ. ಮುಂದೆ ಹೀಗೇ ಇದ್ದರೆ ಎಷ್ಟು ವಿಧೇಯನಾಗುತ್ತಾನೋ ಎಷ್ಟು ಚುರುಕುತನವುಳ್ಳವನಾಗುತ್ತಾನೋ" ಎಂದು ಉಲ್ಲಾಸದಿಂದ ಮೂರ್ಖರಾದ ಹಿರಿಯರು ಮೈಮರೆತು ಹೇಳುವದೂ ಉಂಟು.

ಎಂತಹ "ಶ್ರೀಗಣೇಶಾಯನಮಃ" ಇದು! ಸಂತೋಷದಿಂದ ನಗುವದಕ್ಕಾಗಿ ಹಿರಿಯರು ಬೊಗಳಿದ ಈ ಮಾತುಗಳಿಂದ ಮಕ್ಕಳಿಗಾಗುವ ಕೆಟ್ಟ ಉಪದೇಶವಾವದು, ಅವುಗಳ ಮನಸ್ಸಿನ ಮೇಲೆ ಆಗುವ ದುಷ್ಪರಿಣಾಮವು ಎಂತಹದು– ಎಂದು ತಿಲಮಾತ್ರವಾದರೂ ವಿಚಾರಿಸಿ ನೋಡುವ ಹಿರಿಯರಾದರೂ ಎಷ್ಟು ಮಂದಿ?

ಮಕ್ಕಳನ್ನು ಪಡೆಯುವದು ತಮ್ಮ ಸುಖಕ್ಕಾಗಿ, ಅವುಗಳಿಗೆ ನಾಮಕರಣ ಅನ್ನಪ್ರಾಶನದಿಂದ ಮೊದಲಾಗಿ ಮಾಡುವ ಎಲ್ಲಾ ಕರ್ಮಗಳು ತಮ್ಮ ಕಣ್ಣಿನ ಹಬ್ಬಕ್ಕಾಗಿ. "ನಮ್ಮ ಮಗನ ಲಗ್ನವನ್ನು ನಾವಿರುವಾಗಲೇ ಮಾಡಿ ನೋಡಿ ಆನಂದಪಡಬೇಕು. ನಮ್ಮ ಹುಡುಗಿಗೊಂದು ತಾಳಿ ಕಟ್ಟಿದ್ದು ಕಣ್ಣು ತುಂಬಾ ನೋಡಿ ಸತ್ತರೆ ಚಿಂತೆಯಿಲ್ಲ" ಎಂಬ ಈ ತರಹದ ಮಾತುಗಳು ಇಲ್ಲದ ಮನೆಗಳಾದರೂ ನಮ್ಮಲ್ಲಿ ಎಷ್ಟಿವೆ? ಈ ಉದ್ಗಾರಗಳನ್ನು ತೆಗೆಯುವವರ ಮನಸ್ಸನ್ನು ಪರೀಕ್ಷಿಸಿ ನೋಡಬೇಕು. ಸ್ವಸುಖ, ಸ್ವಾರ್ಥ - ಇಷ್ಟೇ ಕಂಡುಬರುವದು.

ಅದಂತಿರಲಿ, ಮಕ್ಕಳಿಗೆ ಕೆಲವು ಸಾರೆ ಹಿರಿಯರು ಬುದ್ಧಿಯನ್ನು ಹೇಳುವದಿದೆ. "ನಮ್ಮ ಕಣ್ಣೆದುರಿನಲ್ಲಿ ಸುಖವಾಗಿ ಇದ್ದುಬಿಡಿರಿ. ನಾವು ಕಣ್ಣು ಮುಚ್ಚಿದ ಮೇಲೆ ಬೇಕಾದ್ದಾಗಲಿ" ಎಂದು ಹೇಳುವ ತಾಯಿ ತಂದೆ ಹಿರಿಯಂದಿರು ಎಷ್ಟೋ ಧಾರಾಳವಾಗಿ ನಮ್ಮಲ್ಲಿದ್ದಾರೆ. ಎಂತಹ ಸಂತಾನಹಿತಚಿಂತಕರು! ಎಂತಹ ಧರ್ಮಾಭಿಮಾನಿಗಳು! ಎಂತಹ ಲೋಕ ಹಿತೈಷಿಗಳಿವರು! ಮೇಲೆ ಸಂತಾನಕ್ಕಾಗಿ ಸಂಸಾರ, ಧರ್ಮರಕ್ಷಣೆಗಾಗಿ ಸಂತಾನ ಎಂದು ಯಾವಾಗಲೂ ಹೇಳುತ್ತಿರುವದೇ. ಒಳಗಿನ ಗುಣ ತನಗೆ ಬೇಕಾದದ್ದು ಒಂದೇ. **ತಮ್ಮ ಕಣ್ಣಿನ ಹಬ್ಬ, ಸ್ವಾರ್ಥ, ಇಷ್ಟೇ.** ಎಲ್ಲ ಡಂಭ ಜಂಭಗಳ ಮೆರವಣಿಗೆಯೇ. ದೇವರ ಭಕ್ತಿಗಾಗಿ ದೇಶಧರ್ಮಗಳ ಆಧಾರಕ್ಕಾಗಿ ವಿವಾಹವನ್ನು ಮಾಡಿಕೊಳ್ಳುತ್ತೇವೆ ಎಂದು ಅಗ್ನಿ, ಗುರು, ಹಿರಿಯರನ್ನು ಮುಂದಿಟ್ಟು ಪ್ರತಿಜ್ಞೆ ಮಾಡುವವರ ಗತಿಯು ಇದೋ? ಧರ್ಮ, ಅರ್ಥ, ಕಾಮ, ಮೋಕ್ಷಗಳಿಗಾಗಿ ಎಂದು ಮಾಡಿದ ಸಂಕಲ್ಪದಲ್ಲಿ ಕಾಮದ ವಿಕಲ್ಪ ಒಂದಕ್ಕೇ ಶ್ರೇಷ್ಠ ಪದವಿಯೋ! ಅಯ್ಯೋ, ಮಾನವರಿಗೆ ಮೋಸ ಮಾಡುವದಂತಿರಲಿ, ಸಾಕ್ಷಿ ದೇವತೆಗಳಿಗೂ ಮೋಸ ಮಾಡುವ ಪಾಪಕೃತ್ಯಕ್ಕೆ ಈ ಜನಾಂಗವು ಇಳಿಯಿತೆ!

ಅಮ್ಮಾ, ನೀವೂ ಇತರ ಹಿರಿಯರೂ ಆಡುವ ಆಟಗಳಿಂದ ಎಷ್ಟು ಅಧರ್ಮ ವೃದ್ಧಿಯಾಗುತ್ತಿದೆಯೆಂದು ಸ್ವಲ್ಪ ವಿಚಾರಿಸಿ ನೋಡಿರಿ. ಎಂತಹ ಅವಿವೇಕವಿದು! 'ಪರೋಪಕಾರಾಯ ಇದಂ ಶರೀರಂ' ಎಂದು ಪದೇ ಪದೇ ಬಾಯಿಂದ ಹೇಳುವ ನೀವೇ ಮಕ್ಕಳಲ್ಲಿ ಸ್ವಾರ್ಥದ ಬೀಜವನ್ನು, ನೆಟ್ಟಂತಾಯಿತು. **ಭೋಗ್ಯ ವಸ್ತುವು ಬೇರೆಯವರಿಗಿಲ್ಲವೆಂದು ಕಲಿಸುವದೂ ತನ್ನದೆಲ್ಲವೂ ಒಳ್ಳೆಯದೇ ಬೇರೆಯವರದೆಲ್ಲವೂ ಕೆಟ್ಟದು ಎಂದು ಹೇಳಿಕೊಡುವದೂ ಆಟವಾದರೂ ವಿವೇಕದ ಲಕ್ಷಣವಲ್ಲ. ಧರ್ಮದ ವಾಸನೆಯೇ ಅದಕ್ಕಿಲ್ಲ. ಇವೇ ಸ್ವಾರ್ಥ, ದುರಭಿಮಾನ, ಮತ್ಸರದ ಬೀಜಗಳು.** ಈ ವಿಷಬೀಜಗಳು ತಾಯಿ ತಂದೆಗಳ ಕೈಯಿಂದಲೇ ಬೀಳಬೇಕೇ?

ಎಲ್ಲ ದೇಶಗಳ ಮಹಾಪುರುಷ, ಸ್ತ್ರೀಯರುಗಳ

ಚರಿತ್ರವನ್ನು ನೋಡಿದರೆ ಅವರಿಗೆ ತಂದೆ ತಾಯಿಗಳು ಕಲಿಸಿದ ಪಾಠಗಳು ಬೇರೆಯೇ ಎಂದು ಒಡೆದು ಕಾಣುವದು. ಅವರ ಹಿರಿಯರು **ಹಂಚಿ ತಿನ್ನುವದನ್ನು ಮೊದಲು ಕಲಿಸಿದರು.** ಅನ್ನ, ಜ್ಞಾನ, ಮಾನಗಳೆಲ್ಲವನ್ನೂ ಹಂಚಿ ತಿನ್ನಬೇಕು ಎಂಬ ಅಮೌಲ್ಯ ಮೇಲ್ಪಂಕ್ತಿಯನ್ನು ಹಾಕಿದರು. ಈ ಶುಭ ವಾತಾವರಣದಲ್ಲಿ ಸ್ವಾರ್ಥ, ಮತ್ಸರಗಳು ಮೊಳೆಯುವದು ಹೇಗೆ? ಈ ವಿಷಬೀಜಗಳಿಗೆ ಶುಭೋಪದೇಶವು ವಿಷಗಾಳಿಯೇ. ಅವುಗಳು ಆ ಗಾಳಿಯಲ್ಲಿ ಬದುಕುವದೇ ಇಲ್ಲ. ಹಂಚಿ ತಿನ್ನುವದು ಅಂದರೆ ದಾನಬುದ್ಧಿಯನ್ನು ಬೆಳೆಸುವದು. ಮತ್ತು ದಾನಬುದ್ಧಿ ಇದ್ದಲ್ಲಿ ಧನ, ಧಾನ್ಯ, ಜ್ಞಾನ, ಸನ್ಮಾನಗಳಿಗೆ ಕಡಿಮೆಯೇ ಇಲ್ಲ.

ಎಂಟೊಂಬತ್ತು ವರ್ಷದ ಒಬ್ಬ ಹುಡುಗನು ಓದುತ್ತಿರುವ ವರ್ಗದಲ್ಲಿ ೭೨ ಮಂದಿ ಹುಡುಗರಿದ್ದರು. ಒಂದು ದಿನ ಭೂಗೋಲ ಶಾಸ್ತ್ರವನ್ನು ಕುರಿತು ಆ ಹುಡುಗರಿಗೆ ಉಪಾಧ್ಯಾಯನೊಂದು ಪ್ರಶ್ನೆಯನ್ನು ಕೇಳಿದನು. ಆ ವರ್ಗದಲ್ಲಿದ್ದ ಹುಡುಗರ ಪೈಕಿ ಒಬ್ಬ ಹುಡುಗನು ಮಾತ್ರ ಆ ಪ್ರಶ್ನೆಗೆ ಸರಿಯಾದ ಉತ್ತರವನ್ನಿತ್ತನು. ಉಪಾಧ್ಯಾಯನು ಸಂತೋಷಪಟ್ಟು ಮೆಚ್ಚಿ ಆ ಹುಡುಗನನ್ನು ಕೊಂಡಾಡಿದನು. ಇತರ ಹುಡುಗರೆಲ್ಲಾ ಮೂರ್ಖರೆಂದು ಆಡಿತೋರಿಸಿದನು.

ಸಂಜೆಗೆ ಮನೆಗೆ ಬಂದೊಡನೆಯೇ ಆ ಹುಡುಗನು ಸಂತೋಷದಿಂದುಬ್ಬಿ ಶಾಲೆಯಲ್ಲಿ ನಡೆದ ತನ್ನ ಸುಖವಾರ್ತೆಯನ್ನು ತಾಯಿಗೆ ಹೇಳಿದನು. ಆದರೆ ಅವಳ ಸ್ತಬ್ಧವಾದ ಸ್ಥಿತಿಯನ್ನೂ ಉಪೇಕ್ಷೆಯ ಮುಖ ಮುದ್ರೆಯನ್ನೂ ಕಂಡು ಹುಡುಗನ ಮನಸ್ಸು ಕಳಕಳಗೊಂಡಿತು. ಸ್ವಲ್ಪ ಹೊತ್ತಿನ ಮೇಲೆ ಅಮ್ಮಾ, ಎಂದು ಕೂಗಲು "ಸಾಕು ನಿನ್ನ ಪೌರುಷ, ನಡೆ" ಎಂದು ಗಂಭೀರ ಕಂಠದಿಂದ ಹೇಳಿದಳು. ಅದಕ್ಕವನು "ಅಮ್ಮಾ, ಯಾಕೆ ಹಾಗೆನ್ನುತ್ತೀಯೇ?" ಎಂದು ಕೇಳಲು "ನೀನೊಬ್ಬನೇ ದೊಡ್ಡ ಜ್ಞಾನಿಯೋ? ನೀನು ಆ ವಿಷಯವನ್ನು ಮನೆಯಲ್ಲಿರುವ ಅರಿತವರ ಕಡೆಯಿಂದ ತಿಳಿದುಕೊಂಡಿರಬಹುದು. ಆ ಹುಡುಗರಿಗೆ ವಿದ್ಯಾರ್ಜನೆಗಾಗಿ ನಿನಗೆ ಮನೆಯಲ್ಲಿರುವ ಸೌಕರ್ಯಗಳಿರಲಿಕ್ಕಿಲ್ಲ. ಇಲ್ಲವಾದರೆ ನಿಮ್ಮ ಮಾಸ್ತರು ಕಲಿಸಿದ ಪಾಠವು ಸ್ಪಷ್ಟವೇ ಆಗಿದ್ದರೆ ಬೇರೆ ಅಷ್ಟು ಮಂದಿ ಹುಡುಗರಲ್ಲಿ ಒಬ್ಬನಿಗಾದರೂ ತಿಳಿದುಕೊಳ್ಳುವ ಬುದ್ಧಿಯೇ ಇರಲಿಲ್ಲವೋ? ಛೀ, ದಯಾಹೀನಾ, ದುರಭಿಮಾನಿ, ನಿನ್ನನ್ನು ಮಾಸ್ತರು ಮೆಚ್ಚಿದರೆಂದು ಉಬ್ಬಿದೆಯೇ ಹೊರತು ಅಷ್ಟು ಮಂದಿ ಅಣ್ಣತಮ್ಮಂದಿರಿಗೆ ಪಾಠವೂ ಬರಲಿಲ್ಲ ಅವಮಾನವೂ ಆಯಿತು, ಎಂದು ಸ್ವಲ್ಪವಾದರೂ ನಿನಗೆ ದುಃಖವಾಗಲಿಲ್ಲವೇ?" ಎಂದಳು.

ಹೀಗೆನ್ನುವಾಗ ಆ ದಿವ್ಯಮಾತೃದೇವಿಯ ಕಣ್ಣಿನಿಂದ ಕೆಲ ಕಂಬನಿಗಳು ಬಿದ್ದವು. ಹುಡುಗನು ಅದನ್ನು ಕಂಡು ಕಳವಳಗೊಂಡು "ಅಮ್ಮಾ, ನಾನು ಮಾಡಬೇಕಾದ್ದೇನು?" ಎಂದು ಕೇಳಿದನು. ಅದಕ್ಕವಳು ಹೀಗೆಂದಳು: "ಹೋಗು, ಮಾಸ್ತರಿಗೆ ಹೇಳು. ಸ್ವಾಮೀ, ನೀವು ಕೊಟ್ಟ ಪಾಠವು ಯಾರಿಗೂ ಮನೋಗತವಾಗಲಿಲ್ಲ. ನಾನು ಮನೆಗೆ ಹೋಗಿ ಬೇರೊಬ್ಬರ ಕಡೆಯಿಂದ ತಿಳಿದುಕೊಂಡೆನು. ದಯಮಾಡಿ ಇನ್ನೊಮ್ಮೆ ವಿವರಿಸಿರಿ ಎಂದು ಬೇಡಿಕೋ." ಆ ಹುಡುಗನು ಈ ಆಜ್ಞೆಯನ್ನು ಶಿರಸಾ ವಹಿಸಿಕೊಂಡು ನಡೆಸಿದನು. ಉಪಾಧ್ಯಾಯನು ಸಂತೋಷದಿಂದ ಪಾಠವನ್ನು ಇನ್ನೊಮ್ಮೆ ಎಲ್ಲರಿಗೂ ತಿಳಿಯುವಂತೆ ಹೇಳಿದನು. ಇದು ಕಟ್ಟುಕಥೆಯಲ್ಲ. ನನ್ನಿದುರು ನಡೆದ ಮಾತುಗಳು.

ಅಮ್ಮಾ, ನಿಮ್ಮಲ್ಲಿ ಇಂಥ ಘನ ಧಾರ್ಮಿಕ ಮಾತೃತ್ವವಿದ್ದರೆ ಭಾರತೀಯ ಧರ್ಮ ಪುಷ್ಪವು ಅರಳುವದರಲ್ಲೇನು ಸಂದೇಹ. ಉತ್ತಮವಾದದ್ದೆಲ್ಲವನ್ನೂ ಹಂಚಿ ತಿನ್ನಲಿಕ್ಕೆ ಕಲಿಸಿರಿ ತಾಯೀ. ಧರ್ಮವು ಬೆಳೆಯುವದು, ದೇಶದಲ್ಲಿ ಪ್ರೇಮವು ಮೊಳೆಯುವದು, ಸಕಲ ಜಗತ್ತಿನ ಕಲ್ಯಾಣವಾಗುವದು.


(ತಾರಾನಾಥ ಸ್ಮಾರಕ ಸಮಿತಿ, ರಾಯಚೂರು ಇವರ ಪ್ರಕಟನೆ)

ರಾಷ್ಟ್ರಪತಿಗಳ ಪಟ್ಟದ ಆನೆಯ
ಕರುಣ ಕಥೆ

ಉದಯಗಿರಿಗೆ ಮೃತ್ಯು ಬಂತು

ರಾಷ್ಟ್ರಪತಿ ಭವನದ ಆವಾರದಲ್ಲಿ ಕೋಲಾಹಲ ಮಸಗಿತ್ತು. ಕಂಡವರು ಕಂಡತ್ತ ಓಡುತ್ತಿದ್ದರು. ರಾಷ್ಟ್ರಪತಿಗಳ ಪಟ್ಟದಾನೆ "ಉದಯಗಿರಿ"ಗೆ ಮದ ಕರುಕಳಿಸಿ ಅದು ತನ್ನ ಮಾವುತ ಬಾವಾ ಜಾನನನ್ನು ಕೋಪಾಟೋಪದಿಂದ ಬೆನ್ನಟ್ಟಿ ಹೊರಟಿತ್ತು. ಎದುರಿಗೆ ಸಿಕ್ಕಿದ್ದನ್ನೆಲ್ಲ ಅದು ಧ್ವಂಸಮಾಡುತ್ತಿತ್ತು. ಅದರ ಆವೇಶಕ್ಕೆ ಮೂರು ಟನ್ನಿನ ಲಾರಿಯೊಂದು ಆಹುತಿಯಾಗಿತ್ತು.

ಹುಚ್ಚೆದ್ದ ಆನೆಯ ಮೇಲೆ ಮಾಹುತ ಹೇಗೋ ಏರಿ ಅದನ್ನು ವಶಕ್ಕೆ ತರಲು ಅದರ ಕಿವಿಯನ್ನು ಅಂಕುಶದಿಂದ ಇರಿದನು. ಆದರೆ ಅದು ಏನೂ ಪರಿಣಾಮಕಾರಿಯಾಗಲಿಲ್ಲ. ಅದು ತಪ್ಪಿಸಿಕೊಂಡು ಜನವಸತಿಯಿದ್ದಲ್ಲಿಗೆ ಧಾವಿಸಿದರೆ ದೇವರೇ ಗತಿ ಎಂಬಂತಿತ್ತು. ವೀರ ಮಾವುತನಿಗೆ ಅವಸಾನ ಕಾಲ ಬಂದಂತೆ ಕಾಣಿಸಿತು. ಆದರೆ ಪ್ರಸಂಗಾವಧಾನಿಗಳಾದ ಕೆಲವರು ಎತ್ತರದಿಂದ ಹಗ್ಗವನ್ನಿಳಿಸಿ ಅದರ ಕುಣಿಕೆಯ ಆಧಾರದಿಂದ ಅವನನ್ನು ಈ ಮೃತ್ಯುಸ್ವರೂಪಿ ಪ್ರಾಣಿಯಿಂದ ಉಳಿಸಿದರು. ಕಳೆದ ಡಿಸೆಂಬರದಲ್ಲಿ ಅದರ ಮೊದಲನೇ ಮಾಹುತನಿಗಾದ ಗತಿ ಎಲ್ಲರ ಸ್ಮರಣೆಯಲ್ಲಿತ್ತು.



ಇದಕ್ಕೆ ಉಪಾಯವೇ ಇರಲಿಲ್ಲ. ಮೂರು ಗಂಟೆಗಳ ಕಾಲ ಅದನ್ನು ಹತೋಟಿಗೆ ತರುವ ಪ್ರಯತ್ನ ಮಾಡಿ ವಿಫಲರಾದನಂತರ ಮದೋನ್ಮತ್ತ ಆನೆಯನ್ನು ಹಿಡಿತಕ್ಕೆ ತರುವ ಒಂದೇ ಒಂದು ಉಪಾಯವನ್ನು ಪ್ರಯೋಗಿಸಬೇಕಾಯಿತು. ಅವರು ಅದನ್ನು ಗುಂಡಿಕ್ಕಿ ಕೊಂದರು.

ಇದು ೧೯೫೮ ಮೇ ೧೦ ರಂದು ನಡೆದ ಘಟನೆ. ಉದಯಗಿರಿಗೆ ಕೆಲ ದಿನಗಳಿಂದ ಮದವೇರಿತ್ತು. ಡಾಕ್ಟರರ ಶುಶ್ರೂಷೆ ನಡೆದು ಕೊನೆಗೆ ಅದರ ಬುದ್ಧಿ ಸ್ತಿಮಿತಕ್ಕೆ ಬಂದಿದೆಯೆಂದೆಣಿಸಿ ಸ್ವಲ್ಪ ತಿರುಗಾಡಿಸಿಕೊಂಡು ಬರಬಹುದೆಂದು ಮಾವುತನಿಗೆ ಅವರು ಹೇಳಿದ್ದರು. ಆದರೆ ಅವರ ಲೆಕ್ಕ ತಪ್ಪಾಗಿತ್ತು. ಮಾವುತ ಅದನ್ನು ತಿರುಗಾಡಿಸಿಕೊಂಡು ಬರಲು ಹೋದೊಡನೆ ಅದು ಅವನ ಮೇಲೆ ತಿರುಗಿ ಬಿದ್ದಿತ್ತು.

ಸುಮಾರು ಎರಡೂವರೆ ವರ್ಷಗಳ ಹಿಂದೆ...

*

ಇದೇ ಉದಯಗಿರಿ—ಮಂದ ಗಂಭೀರ ಗತಿಯಿಂದ ಹೊರಟಿತ್ತು. ಅದು ಅಕಸ್ಮಾತ್ತಾಗಿ ನಿಂತು ನಡುಗಿದಂತಾಗಿ ದೊಪ್ಪನೆ ನೆಲದ ಮೇಲೆ ಬಿತ್ತು. ಇಡೀ ರಾಷ್ಟ್ರಪತಿ ಭವನದಲ್ಲಿ ಗಲಾಟೆಎದ್ದಿತು. ರಾಷ್ಟ್ರಪತಿಗಳು ಸುದ್ದಿ ಕೇಳಿ ಚಿಂತಾಕ್ರಾಂತರಾದರು. ಡಾಕ್ಟರರಿಗೆ ಫೋನ ಮಾಡಿದರು. ಅವರು ಬಂದು ಉಪಚಾರ ಮಾಡಿದರು. ಏನೋ ಆಕಸ್ಮಿಕವಾಗಿ ಬಿದ್ದಿರಬೇಕು, ಡಾಕ್ಟರರು ಬಂದರೆ ಎದ್ದು ನಿಂತೀತೆಂದು

"ನವನೀತ" ದಲ್ಲಿ ಬಂದ ವಿದ್ಯಾಪೂರ್ಣ ಶ್ರೀರಶ್ಮಿಯವರ ಲೇಖದ ಆಧಾರದಿಂದ

ನಂಬಿದವರಿಗೆ ನಿರಾಶೆಯಾಯಿತು. ಉದಯಗಿರಿ ಏಳಲಿಲ್ಲ. "ಇದು ಇನ್ನು ಬದುಕಲಾರದು" ಎಂದು ಜನ ಶಂಕಿಸಿದರು.

ಇದು ನಡೆದದ್ದು ೨೬, ಜನವರಿ ೧೯೫೬ರಂದು. ಉದಯಗಿರಿಯನ್ನು ಮದುಮಗನಂತೆ ಸಿಂಗರಿಸಿದ್ದರು. ಈ ಸಿಂಗಾರದ ಆನೆಯನ್ನು ಕಂಡು ಜನ ಮುಗ್ಧರಾಗಿಹೋಗಿದ್ದರು. ಉದಯಗಿರಿ ಭಾರತದ ರಾಜಧಾನಿಗೆ ಬಂದ ಬಳಿಕ ಇದೇ ಮೊದಲನೆಯ ಸಲ ಪ್ರಜಾರಾಜ್ಯೋತ್ಸವದ ಮೆರವಣಿಗೆಯಲ್ಲಿ ಭಾಗವಹಿಸಿತ್ತು. ರಾಷ್ಟ್ರಪತಿಗಳೂ ಅಂದು ತುಂಬಾ ಉಲ್ಲಾಸದಲ್ಲಿದ್ದರು. ಪ್ರಜಾರಾಜ್ಯ ದಿನದ ಉತ್ಸವದ ದೆಸೆಯಿಂದಲೂ ಅವರ ಇಷ್ಟದ ಪ್ರಕಾರ ಮೆರವಣಿಗೆಯಲ್ಲಿ ಉದಯಗಿರಿ ಭಾಗವಹಿಸುತ್ತಿದ್ದುದರಿಂದಲೂ ಅವರು ಬಹು ಪ್ರಸನ್ನರಾಗಿದ್ದರು. ಆದರೆ ಅವರ ಸಂತೋಷ ಬಹುಬೇಗ ವಿಷಾದದಲ್ಲಿ ಪರಿಣಮಿಸಿತು. ಆನೆ ಒಮ್ಮೆ ಬೇನೆ ಬಿದ್ದು ಭೂಮಿಗೊರಗಿತೆಂದರೆ ಮತ್ತೆ ಅದು ಮೇಲಕ್ಕೇಳುವುದು ಕ್ವಚಿತ್ತಾಗಿ ಎಂಬ ಸಾಮಾನ್ಯ ಹೇಳಿಕೆ ಅವರ ಮನಸ್ಸನ್ನು ಕದಡಿತು

ಡಾಕ್ಟರರು ಉದಯಗಿರಿಯನ್ನು ಪರೀಕ್ಷಿಸಿ ಅದಕ್ಕೆ ಪೆನಿಸಿಲಿನ್ ಇಂಜೆಕ್ಶನ್ ಕೊಟ್ಟರು. "ಏನಾಗಿದೆ ಉದಯಗಿರಿಗೆ? ಬದುಕೀತಲ್ಲವೇ?" ಎಂದು ಜನ ಉತ್ಕಂಠೆಯಿಂದ ಡಾಕ್ಟರರನ್ನು ಕೇಳಿದರು. "ಉದಯಗಿರಿಗೆ ಥಂಡಿಯಾಗಿ ನಿಮೋನಿಯ ಆಗಿದೆ" ಎಂದರು ಡಾಕ್ಟರರು. ಡಾಕ್ಟರರಂದದ್ದನ್ನು ಕೇಳಿ ಸಕಲರೂ ನಿರಾಶೆಯ ಉಸಿರೆಳೆದರು.

ಆದರೆ ಶ್ವಾಸವಿರುವ ವರೆಗೂ ಆಶೆಯಿರುತ್ತದಲ್ಲವೇ? ಉದಯಗಿರಿಗೆ ಚಿಕಿತ್ಸೆ ನಡೆಯಿತು. ಅದಕ್ಕೆ ಪ್ರತಿನಿತ್ಯ ಔಷಧಿಯ ಜೊತೆಗೆ ವಿಪುಲ ಪ್ರಮಾಣದಲ್ಲಿ ಮದ್ಯ ಕುಡಿಸಿ, ಡಜನ್ನುಗಟ್ಟಲೆ ಕೋಳಿತತ್ತಿ ಮತ್ತು ಸುಮಾರು ನಾಲ್ಕು ಮಣದಷ್ಟು ಹಸಿರು ತೊಪ್ಪಲನ್ನು ತಿನ್ನಿಸತೊಡಗಿದರು. ಅದಕ್ಕಾಗಿಯೇ ಎಂದು ತಯಾರಿಸಿದ ಆಯುರ್ವೇದೀಯ ತೈಲವೊಂದನ್ನು ಅದರ ಮೈಗೆ ತಿಕ್ಕತೊಡಗಿದರು. ಉದಯಗಿರಿ ಗುಣಮುಖವಾಗಲೆಂದು ಸಾಧ್ಯವಿದ್ದೆಲ್ಲ ಪ್ರಯತ್ನಗಳನ್ನು ಮಾಡಿದರು. ೨೮ ದಿನಗಳ ನಂತರ ಅದು ಗುಣಹೊಂದಿ ಎದ್ದು ನಿಂತಿತು.

ಆನೆಗಳಿಗೆ ಪ್ರಸಿದ್ಧವಾಗಿರುವ ಆಸಾಮ ರಾಜ್ಯ ಉದಯಗಿರಿಯ ಜನ್ಮಸ್ಥಾನ. ೧೯೫೪ರಲ್ಲಿ ರಾಷ್ಟ್ರಪತಿಗಳು ಆಸಾಮರಾಜ್ಯದ ಸಂಚಾರಕ್ಕೆಂದು ಹೋದಾಗ ಅಲ್ಲಿಯ ಸರಕಾರ ಅದನ್ನವರಿಗೆ ಕಾಣಿಕೆಯಾಗಿ ಅರ್ಪಿಸಬಯಸಿತು. ಆಗ ಉದಯಗಿರಿಗೆ ಇನ್ನೂ ೨೩ ವರ್ಷ. ಅದು ಪೂರ್ಣ ಯೌವನಕ್ಕೆ ಬರಲು ಇನ್ನೂ ಏಳು ವರ್ಷಗಳಿದ್ದವು. ಆದರೂ ಉದಯಗಿರಿಯ ಅಂಗ ಅಂಗಗಳಲ್ಲಿ ಯೌವನದ ಹುರುಪು-ಕಾಂತಿ ಮಿಂಚುತ್ತಿತ್ತು. ಅದನ್ನು ಕಂಡ ರಾಷ್ಟ್ರಪತಿಗಳು ಮುಗ್ಧರಾಗಿ ಉದಯಗಿರಿ ಪೂರ್ಣ ವೈಭವದಿಂದ ರಾಷ್ಟ್ರಪತಿ ಭವನದಲ್ಲಿ ಕಾಲಿಡಲಿ ಎಂದು ಹೇಳಿದರು. ಅವರ ಇಚ್ಛೆಯಂತೆ ಉದಯಗಿರಿ ರಾಷ್ಟ್ರಪತಿ ಭವನವನ್ನು ಪ್ರವೇಶಿಸುವ ದಿನ ನಿಶ್ಚಯಿಸಲ್ಪಟ್ಟಿತು.

ಈಗ ಸಹಸ್ರಾರು ವರ್ಷಗಳ ಹಿಂದೆ ಹಸ್ತಿನಾವತಿ (ದಿಲ್ಲಿ) ಯಲ್ಲಿ ಮಹಾರಾಜ ಯುಧಿಷ್ಠಿರನು ರಾಜಸೂಯ ಯಜ್ಞವೆಸಗಿದಾಗ ಪ್ರಾಗ್ಜ್ಯೋತಿಷ ಮತ್ತು ಕಾಮರೂಪ (ಆಸಾಮ) ದೇಶಗಳ ರಾಜರು ಆಸಾಮ ದೇಶದ ೧೦೧ ಸುಂದರ ಆನೆಗಳನ್ನು ಕಾಣಿಕೆಯಾಗಿತ್ತಿದ್ದರು. ಈ ಯುಗದಲ್ಲಿ ಅದೇ ಘಟನೆಯ ಪುನರಾವೃತ್ತಿಯಾಯಿತು. ಆಸಾಮದ ಆನೆಯೊಂದು ಕಾಣಿಕೆಯಾಗಿ ಹೊಸದಿಲ್ಲಿಗೆ ಬಂತು.

ನಿಶ್ಚಿತವಾದ ದಿನ ಆಸಾಮದ ಮುಖ್ಯಮಂತ್ರಿಗಳು ತಮ್ಮ ಮುಖ್ಯ ಅಧಿಕಾರಿಗಳೊಂದಿಗೆ ಉದಯಗಿರಿ ಸಹಿತ ದಿಲ್ಲಿಗೆ ಬಂದರು. ಮುಹೂರ್ತಕ್ಕೆ ಸರಿಯಾಗಿ ಉದಯಗಿರಿಗೆ ತಿಲಕವನ್ನಿಟ್ಟು ಶೃಂಗರಿಸಿ ರಾಷ್ಟ್ರಪತಿ ಭವನದ 'ದರ್ಬಾರ ಹಾಲಿ'ನ ಎದುರು ತಂದು ನಿಲ್ಲಿಸಲಾಯಿತು. ರಾಷ್ಟ್ರಪತಿಗಳು ತಮ್ಮ ಸಮಸ್ತ ವೈಭವಗಳೊಂದಿಗೆ ಉದ

ಯಗಿರಿಯ ಸ್ವಾಗತಾರ್ಥ ಹೊರಗೆ ಬಂದರು. ಅವರನ್ನು ಕಂಡೊಡನೆ ಉದಯಗಿರಿ ಸೊಂಡಿಲನ್ನೆತ್ತಿ ಅವರನ್ನು ಅಭಿವಂದಿಸಿತು. ರಾಷ್ಟ್ರಪತಿಗಳು ಸ್ವಹಸ್ತದಿಂದ ಅದಕ್ಕೆ ತೆಂಗಿನಕಾಯಿ, ಬೆಲ್ಲ ಮತ್ತು ಕಬ್ಬನ್ನು ತಿನ್ನಿಸಿ ಪ್ರೀತಿಯಿಂದ ಅದರ ಸೊಂಡಿಲನ್ನು ನೇವರಿಸಿದರು. ಉದಯಗಿರಿ ವೈಭವದೊಂದಿಗೆ ಹರ್ಷೋಲ್ಲಾಸದ ವಾತಾವರಣದಲ್ಲಿ ರಾಷ್ಟ್ರಪತಿ ಭವನವನ್ನು ಪ್ರವೇಶಿಸಿ ಅಲ್ಲಿ ವಾಸಿಸತೊಡಗಿತು.

ಉದಯಗಿರಿ ತಾರುಣ್ಯಾವಸ್ಥೆಯನ್ನು ತಲುಪಿರದಿದ್ದರೂ ಅದು ಯಾವುದೇ ತರುಣ ಆನೆಗೆ ಕಡಿಮೆಯಾಗಿರಲಿಲ್ಲ. ಅದರ ಎತ್ತರ ಒಂಬತ್ತೂವರೆ ಅಡಿ, ಉದ್ದ ಹದಿನಾಲ್ಕು ಅಡಿ ಮತ್ತು ಎದೆಯ ಅಳತೆ ೧೪೫ ಇಂಚುಗಳಷ್ಟಿತ್ತು. ಅದಕ್ಕೆ ೧೬ ಆಹಾರ ನುರಿಸುವ ಹಲ್ಲುಗಳಿದ್ದವು. ಮದವೇರಿದಾಗ ಅದರ ಕೆನ್ನೆಯಿಂದ ನಿರಂತರವಾಗಿ ಮದ ಸ್ರವಿಸುತ್ತಿತ್ತು. ಅದು ಚಂಚಲವಾಗಿ ಓಲಾಡುತ್ತಿತ್ತು.

ಉದಯಗಿರಿಗೆ ನಿತ್ಯ ನಸುಕಿನಲ್ಲಿ ಹತ್ತುಸೇರು ಹಿಟ್ಟಿನ ರೊಟ್ಟಿ ತಿನ್ನಿಸಿ ನಾಲ್ಕೈದು ಬಾಲ್ದಿ ನೀರು ಕುಡಿಸುತ್ತಿದ್ದರು. ಸುಮಾರು ಮೂರು ತಾಸುಗಳ ನಂತರ ಎರಡು ಸೇರು ಬೆಲ್ಲ ತಿನ್ನಿಸುತ್ತಿದ್ದರು. ಮುಂದೆ ಇಡೀ ದಿನದಲ್ಲಿ ಸುಮಾರು ೬ ಮಣ ಕಬ್ಬು ಮತ್ತು ಹುಲ್ಲನ್ನು ತಿನ್ನುತ್ತಿತ್ತು. ಬೇಸಿಗೆಯಲ್ಲಿ ಅದಕ್ಕೆ ನಿತ್ಯ ಎರಡುಸಲ ಸ್ನಾನ ಮಾಡಿಸುತ್ತಿದ್ದರು. ಮದವೇರಿದಾಗ ಸ್ನಾನ ಮಾಡುವ ಹೊಣೆಯನ್ನು ಅದಕ್ಕೇ ಹೊರಿಸುತ್ತಿದ್ದರು. ಅಂದರೆ ಅದರ ಎದುರು ನೀರಿನ ಬಾಲ್ದಿಗಳನ್ನು ಇಡುತ್ತಿದ್ದರು. ಸ್ನಾನವಾದನಂತರದಲ್ಲಿ ಬೇಸಿಗೆಯ ಕಾಲವಾಗಿದ್ದರೆ ಎಳ್ಳಿನ, ಚಳಿಯ ದಿನವಾಗಿದ್ದರೆ ಸಾಸಿವೆಯ ಎಣ್ಣೆಯನ್ನು ಅದರ ತಲೆಗೆ ತಿಕ್ಕುತ್ತಿದ್ದರು. ರಾತ್ರಿ ನಿದ್ರಿಸಲು ಅದಕ್ಕೆ ೫-೬ ಮಣ ಹುಲ್ಲಿನ ಹಾಸಿಗೆಯನ್ನು ಹಾಸುತ್ತಿದ್ದರು. ಬೆಳಗಾದೊಡನೆ ಈ ಹುಲ್ಲನ್ನು ತೆಗೆದು ಚೆಲ್ಲುತ್ತಿದ್ದರು. ದಿನ ಬಿಟ್ಟು ದಿನ ಅದನ್ನು ಅಡ್ಡಾಡಿಸಿಕೊಂಡು ಬರುತ್ತಿದ್ದರು. ಉದಯಗಿರಿಯ ವಾಯು ಸಂಚಾರವೆಂದರೆ ಹತ್ತು-ಹನ್ನೆರಡು ಮೈಲುಗಳ ತಿರುಗಾಟ.

ಉದಯಗಿರಿಯ ಕಿವಿಯಲ್ಲಿ ಕೆಲ ಬಿಳಿ ಕೂದಲುಗಳಿದ್ದುದರಿಂದ ಅದು ವಿಶಿಷ್ಟ ಜಾತಿಯ ಆನೆಯೆಂದು ಹೇಳಬಹುದು. ಉದಯಗಿರಿಯಲ್ಲಿ ಇದೂ ಅಲ್ಲದೆ ಇನ್ನೂ ಒಂದು ವೈಶಿಷ್ಟ್ಯವಿತ್ತು. ಉದಯಗಿರಿ ಸ್ವಾಭಿಮಾನಿ. ಈ ಸ್ವಾಭಿಮಾನಕ್ಕೊಳಗಾಗಿಯೇ ಅದು ಕಳೆದ ವರ್ಷ ಓರ್ವನನ್ನು ಕೊಂದು ಹಾಕಿತು.

ಆಗ ನಡೆದಿದ್ದಿಷ್ಟು. ಎಂದಿನಂತೆ ಅಂದೂ ವಾಯುಸಂಚಾರ ಮುಗಿಸಿ ಉದಯಗಿರಿ ತನ್ನ ಸ್ಥಾನಕ್ಕೆ ಬಂದು ನಿಂತಿತ್ತು. ಕಸ ಉಡುಗುವ ನೌಕರನು ತುಸು ಸರಿಯಲು ಅದಕ್ಕೆ ಹೇಳಿ ಅದು ಸರಿಯದಿರಲು ಅದನ್ನು ಬೈದು ಗದರಿಸಿದನು. ಆತ ಯಾವಾಗಲೂ ಈ ರೀತಿ ಬೈದು ಗದರಿಸಿ ಮಾಡುತ್ತಿದ್ದರೂ ಅಂದೇಕೋ ಉದಯಗಿರಿಗೆ ಕೋಪ ಬಂದು ಅವನ ಮೇಲೆ ಏರಿ ಬಂತು. ಆ ನೌಕರ ಹೇಗೋ ಪ್ರಾಣ ಉಳಿಸಿಕೊಂಡು ಓಡಿ ಬಂದು ಮಾಹುತನೆದುರು ದೂರಿಕೊಂಡ. ಮಾವುತ ಕೂಡ ಹಿಂದೆ ಮುಂದೆ ಯೋಚಿಸದೆ ಬಂದು ಉದಯಗಿರಿಯನ್ನು ಗದರಿಸತೊಡಗಿದನು. ಉದಯಗರಿಯ ಕೋಪವಿನ್ನೂ ಶಾಂತವಾಗಿರಲಿಲ್ಲ. ಅದು ಸೊಂಡಿಲಿಯಿಂದ ಮಾವುತನನ್ನೆತ್ತಿ ಕೆಳಕ್ಕೆಸೆದು ಕೊಂದುಹಾಕಿತು.

ಆಸ್ಪತ್ರಿಗೊಯ್ದಿದ್ದ ಮಾವುತನ ಶವವನ್ನು ತಿರುಗಿತಂದು ಉದಯಗಿರಿಯ ಎದುರು ಇಟ್ಟಾಗ ಅದು ಪುನಃ ಪುನಃ ಸೊಂಡಿಲಿಂದ ಶವವನ್ನು ಮುಟ್ಟತೊಡಗಿತು. ಅದರ ಕಣ್ಣುಗಳಿಂದ ನೀರು ಹರಿಯಿತು. ಮುಂದೆ ಎಷ್ಟೋ ದಿನಗಳ ವರೆಗೆ ಎಷ್ಟು ಪುಸಲಾಯಿಸಿದರೂ ಉದಯಗಿರಿ ಹೊಟ್ಟೆ ತುಂಬ ತಿನ್ನಲಿಲ್ಲ. ಅದರ ಕಣ್ಣು ಸದಾ ತೇವವಾಗಿರುತ್ತಿತ್ತು. ಖಡ್ಗ ಬಹಾದ್ದೂರ ಕೇವಲ ಅದರ ಮಾವುತನಾಗಿರಲಿಲ್ಲ. ಸಮವಯಸ್ಸಿನ ಮಿತ್ರನಂತಿದ್ದ; ಇಬ್ಬರೂ ಒಂದೇ ವರ್ಷ ಹುಟ್ಟಿದ್ದರು.

ಪ್ರಜಾರಾಜ್ಯ ದಿನದಂದುಮಾತ್ರ ಸಿಂಗಾರವಾಗಿ ಉದಯಗಿರಿ ಮೆರವಣಿಗೆಯಲ್ಲಿ ಭಾಗವಹಿಸುತ್ತಿತ್ತು. ಅಂದು ಅದರ ಬೆನ್ನಮೇಲೆ ಚಿನ್ನಬೆಳ್ಳಿಗಳಿಂದ ಕೂಡಿದ "ನವಿಲುಅಂಬಾರಿ" ಇರುತಿತ್ತು.

ಚೀನದ ಪ್ರಧಾನಮಂತ್ರಿ ಚೌ-ಎನ್. ಲಾಯ, ತಿಬೇಟದ ದಲಾಯಿ ಲಾಮಾರಂಥ ಶ್ರೇಷ್ಠ ವಿದೇಶಿ ಅತಿಥಿಗಳು ಉದಯಗಿರಿಯ ಮೇಲೆ ಸವಾರಿ ಮಾಡಿದ್ದಾರೆ. ನಮ್ಮ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂರವರೂ ಒಮ್ಮೆ ಅದರ ಮೇಲೆ ಸವಾರಿ ಮಾಡಿದ್ದರು.

ಕೆಲವು ಮಹತ್ವದ ಶೋಧನೆಗಳು

ವರ್ಷ ಕ್ರಿ. ಶ.	ವಸ್ತುಗಳು	ಕಂಡುಹಿಡಿದವರು	ಸಂಶೋಧಕರ ರಾಷ್ಟ್ರ
೧. ೧೪೫೦	ಅಚ್ಚಿನ ಮೊಳೆಗಳು	ಗಟೆನ್‌ಬರ್ಗ್	ಜರ್ಮನಿ
೨. ೧೬೦೮	ದೂರದರ್ಶಕ (ಟೆಲಿಸ್ಕೋಪ್)	ಲಿಪ್ಪರ್‌ಶೇ	ಹಾಲೆಂಡ್
೩. ೧೬೪೩	ಬ್ಯಾರೋಮೀಟರ್	ಟೋರಿಸೆಲಿ	ಇಟಲಿ
೪. ೧೭೬೫	ಉಗಿಯ ಯಂತ್ರ (ಇಂಜೆನ್)	ವ್ಯಾಟ್	ಸ್ಕಾಟ್ಲೆಂಡ್
೫. ೧೭೯೩	ಅರಳಿಯನ್ನು ಹಿಂಜುವ ಯಂತ್ರ (ಜಿನ್)	ವ್ಹಿಟ್ನೆ	ಅಮೇರಿಕ
೬. ೧೮೧೯	ಸ್ಟೆತೋಸ್ಕೋಪ್	ಲೇನೆಕ್	ಫ್ರಾನ್ಸ
೭. ೧೮೨೯	ಉಗಿಬಂಡಿ	ಸ್ಟೀಫನ್‌ಸನ್	ಇಂಗ್ಲೆಂಡ್
೮. ೧೮೩೧	ವಿದ್ಯುತ್ತಿನ ಡೈನಮೋಯಂತ್ರ	ಫ್ಯಾರಡೆ	,,
೯. ೧೮೩೭	ತಾರು	ಮೋರ್ಸ್	ಅಮೇರಿಕೆ
೧೦. ೧೮೪೬	ಹೊಲಿಗೆಯ ಯಂತ್ರ	ಹೋವೆ	,,
೧೧. ೧೮೬೮	ಟೈಪ್‌ರೈಟರ್	ಶೋಲ್ಸ್	,,
೧೨. ೧೮೭೬	ಟೆಲಿಫೋನ್	ಬೆಲ್	,,
೧೩. ೧೮೭೭	ಮೈಕ್ರೋಫೋನ್	ಬರ್ಲಿನರ್	,,
೧೪. ೧೮೮೪	ಫೌಂಟನ್‌ಪೆನ್	ವಾಟರ್‌ಮ್ಯಾನ್	,,
೧೫. ೧೮೮೫	ಲೈನೋಟೈಪ್	ಮೆರ್ಗೆನ್‌ಥೇಲರ್	,,
೧೬. ೧೮೮೯	ರೇಯಾನ್ (ಕೃತ್ರಿಮ ರೇಶಿಮೆ)	ಡೀ ಚಾರ್ಡೋನೆಟ್	ಫ್ರಾನ್ಸ
೧೭. ೧೮೯೨	ವರ್ಣರಂಜಿತ ಫೋಟೋ ವಿದ್ಯೆ	ಐವೀಸ್	ಅಮೇರಿಕೆ
೧೮. ೧೮೯೩	ಡೀಸೆಲ್ ಇಂಜೆನ್	ಡೀಸೆಲ್	ಜರ್ಮನಿ
೧೯. ೧೯೦೦	ಸಬ್ ಮರೀನ್	ಹಾಲೆಂಡ್	ಅಮೇರಿಕೆ
೨೦. ೧೯೦೩	ವಿಮಾನ	ರೈಟ್ ಬಂಧುಗಳು	,,
೨೧. ೧೯೧೪	ಸೈನ್ಯದಲ್ಲಿ ಉಪಯೋಗಿಸುವ ಟ್ಯಾಂಕ	ಸ್ವಿಂಟನ್	ಇಂಗ್ಲೆಂಡ್
೨೨. ೧೯೨೫	ದೂರದರ್ಶಿ (ಟೆಲಿವ್ಹಿಜನ್)	ಬೇರ್ಡ್	ಸ್ಕಾಟ್ಲೆಂಡ್
೨೩. ೧೯೪೫	ಅಣುಬಾಂಬು	ಅಮೇರಿಕೆ ಹಾಗೂ ಬ್ರಿಟಿಶ್ ವಿಜ್ಞಾನಿಗಳ ಸಂಘ	

ರಾ. ನ. ಮುಳಗಿ

೧೯೨೧ ರಲ್ಲಿ ಪ್ರಿನ್ಸ್ ಆಫ್ ವೇಲ್ಸರು ಪುಣೆಗೆ ಭೆಟ್ಟಿಕೊಟ್ಟಾಗ ಕಾಂಗ್ರೆಸ್ಸು ಅವರಿಗೆ ಕರೇ ನಿಶಾನೆ ಏಕೆ ತೋರಿಸಲಿಲ್ಲ ?

ಸಿಂಧೆ ಮಹಾರಾಜರ ರಹಸ್ಯ ಯಾತ್ರೆ

ಶ್ರೀ ಜಿ. ಎಸ್. ಪಥಿಕ



೧೯೨೧ ರ ಕಾಲ. ಜಗತ್ತಿನಲ್ಲಿಯೇ ಮೊದಲನೆಯ ಸಲ ಮಹಾತ್ಮಾ ಗಾಂಧಿಯವರು ಪ್ರಪಂಚದಲ್ಲೆ ಬಲಾಢ್ಯವೆನಿಸಿದ ಸಾಮ್ರಾಜ್ಯ ಶಕ್ತಿಯೊಡನೆ ನಿಶ್ಶಸ್ತ್ರ ಅಹಿಂಸಾತ್ಮಕ ಯುದ್ಧವನ್ನು ಹೂಡಿದ್ದರು. ಭಾರತದ ಈ ಯುದ್ಧವನ್ನು ಏಶಿಯ ಮತ್ತು ಆಫ್ರಿಕೆಗಳ ಪೀಡಿತ ದೇಶಗಳು ಆಶಾಯುಕ್ತ ದೃಷ್ಟಿಯಿಂದ ನೋಡಿದವು. ಅದರಲ್ಲಿ ಒಂದು ದಿನ ತಮ್ಮ ಸ್ವಾತಂತ್ರ್ಯಪ್ರಾಪ್ತಿಯ ಮಾರ್ಗದರ್ಶನವನ್ನು ಪಡೆದ್ದವು. ಆದರೆ ಈ ನಿಶ್ಶಸ್ತ್ರ ಬಹಿರಂಗ ಬಂಡಾಯವನ್ನು ಹೇಗೆ ನಿಗ್ರಹಿಸಬೇಕು ಎಂಬುದು ಗ್ರೇಟ್ ಬ್ರಿಟನ್ನಿಗೆ ಮಾತ್ರವಲ್ಲ, ಇತರ ಸಾಮ್ರಾಜ್ಯವಾದಿ ಶಕ್ತಿಗಳಿಗೆ ಕೂಡ ಹೊಳೆಯಲಿಲ್ಲ. ದೇಶದ ವಿಷಮ ಪರಿಸ್ಥಿತಿಯನ್ನು ಕಂಡು ಬ್ರಿಟಿಶ ರಾಜಸಿಂಹಾಸನದಲ್ಲಿ ಭಾರತೀಯರಿಗೆ ಭಕ್ತಿಯನ್ನು ಹುಟ್ಟಿಸಲೆಂದು ಬ್ರಿಟಿಶ್ ಪಾರ್ಲಿಮೆಂಟು ಈ ಉಗ್ರ ಆಂದೋಲನ ನಡೆದ ಕಾಲದಲ್ಲಿ ಭಾರತಕ್ಕೆ ಪ್ರಿನ್ಸ್ ಆಫ್ ವೇಲ್ಸ (ಇಂಗ್ಲಂಡಿನ ಯುವರಾಜ) ರನ್ನು ಕಳಿಸುವುದಾಗಿ ಘೋಷಿಸಿತು.

ಮುಂಬಯಿಯಲ್ಲಿ ನನ್ನ ಶಿಕ್ಷಣ ಮುಗಿದಿತ್ತು,

ಹಿಂದೀ "ಸರಸ್ವತಿ" ಯಿಂದ

ರಾಜಕೀಯ ಚಳವಳಿಯಲ್ಲಿ ನಾನು ಪ್ರವೇಶಿಸಿದ್ದೆ. ಕಾಲೇಜಿನಲ್ಲಿ ಅರ್ಥಶಾಸ್ತ್ರದ ಶಿಕ್ಷಣ ಪಡೆದಿದ್ದೆ. ಅದರ ಪರಿಣಾಮವಾಗಿ ಒಮ್ಮಿಂದೊಮ್ಮೆ ಗಾಂಧೀಜಿಯವರ ಖಾದಿ ಅರ್ಥಶಾಸ್ತ್ರದಲ್ಲಿ ನನಗೆ ಆಸ್ಥೆ ಹುಟ್ಟಿರಲಿಲ್ಲ. ನಾನು ಪಡೆದ ಶಿಕ್ಷಣ ದಿಂದ ನಾನು ದೊಡ್ಡ ನೌಕರಿ ಸಂಪಾದಿಸಿ ಅಥವಾ ವ್ಯಾಪಾರ ಕ್ಷೇತ್ರದಲ್ಲಿ ಪ್ರವೇಶಿಸಿ ಧನಾರ್ಜನೆ ಮಾಡಬಹುದಿತ್ತು. ಆದರೆ ಅದಾವುದೂ ನನಗೆ ಸೇರಲಿಲ್ಲ. ಜೀವನದ ಪ್ರವಾಹ ಬೇರೆಡೆಗೆ ಹರಿಯಿತು. ಗಾಂಧೀಜಿ, ಸೇಠ ಜಮನಾಲಾಲ ಬಜಾಜ, ಲಾಲಾ ಲಾಜಪತರಾಯ ಮತ್ತು ಮುಂಬಯಿಯ ಇತರ ಧುರೀಣರ ಸಂಪರ್ಕದಿಂದ ದೇಶದ ರಾಜಕೀಯ ರಂಗದಲ್ಲಿ ನಾನು ಧುಮುಕಿದೆ.

ಒಂದು ದಿನ ಮುಂಬಯಿಗೆ ಹೋಗಲೆಂದು ಗ್ವಾಲ್ಹೇರ ಸ್ಟೇಶನ್ನಿನ ಪ್ಲಾಟಫಾರ್ಮಿನ ಮೇಲೆ ಗಾಡಿಯ ಹಾದಿ ಕಾಯುತ್ತ ನಿಂತಿದ್ದೆ. ಗಾಡಿ ಬರುವುದು ಅಂದು ತಡವಿತ್ತು. ನಾನು ಹಾಗೆ ನಿಂತಿದ್ದಾಗ ಪ್ಲಾಟಫಾರ್ಮಿನಲ್ಲಿ ನೆರೆದಿದ್ದ ಮೂರನೆಯ ವರ್ಗದ ಪ್ರವಾಸಿಕರ ನಡುವೆ ಗ್ವಾಲ್ಹೇರದ ಮಹಾರಾಜರು ಬಂದು ನಿಂತಿದ್ದನ್ನು ಕಂಡು ಆಶ್ಚರ್ಯದಿಂದ ದಂಗಾಗಿ ಹೋದೆ. ಜಯವಿಲಾಸ ಮಹಲಿನಿಂದ ತಾವೇ ಸ್ವತಃ ಕಾರು ನಡೆಯಿಸಿಕೊಂಡು ಅವರು ಸ್ಟೇಶನ್ನಿಗೆ ಬಂದಿದ್ದರು. ಕಾರಿನಲ್ಲಿ ಡ್ರಾಯವರನೂ ಇರಲಿಲ್ಲ, ಸಾಮಾನೂ ಇದ್ದಿಲ್ಲ. ಯಾರೊಡನೆಯೂ ಹೇಳದೆ ಮಾಡದೆ ಸ್ಟೇಶನ್ನಿಗೆ ಬಂದ ಮಹಾರಾಜರ ತಲೆಯಲ್ಲಿ ಯಾವ ಚಿಂತೆ ತಾಂಡವವಾಡುತ್ತಿತ್ತೋ ಏನೋ? ಇಂದು ರಾಜ-ಮಹಾರಾಜರಿರದಿದ್ದರೂ ಆಗಿನ ದಿನಗಳಲ್ಲಿ ಅರಸರು ಈ ರೀತಿ ಸಾಧಾರಣ ಜನರ ಜೊತೆಯಲ್ಲಿ ನಿಲ್ಲುವುದು ಅದ್ಭುತ ಮಾತಾಗಿತ್ತು. ಆ ದಿನಗಳಲ್ಲಿ ರಾಜ-ಮಹಾರಾಜರು, ವೈಸರಾಯರು, ಗವರ್ನರರು ವಿಶೇಷ ಸಲೂನಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಅವರ ಪ್ರಯಾಣದ ಸಿದ್ಧತೆಯನ್ನು, ಏರ್ಪಾಡನ್ನು ಮೊದಲೇ ಮಾಡಿಡುತ್ತಿದ್ದರು. ಗ್ವಾಲ್ಹೇರದ ಮಹಾರಾಜರು ತಮ್ಮ ರಾಜ್ಯದಲ್ಲಿ ರೇಲ್ವೆ ಸಾರಿಗೆಯನ್ನು ನಡೆಸುತ್ತಿದ್ದರು. ಅವರಿಗಾಗಿ ಇತರ ರೇಲ್ವೆ ಲಾಯಿನ್‌ಗಳಲ್ಲಿ ಸದಾ ಸಲೂನು ರಿಜರ್ವಾಗಿ ಇರುತ್ತಿತ್ತು.

ಆದರೆ ಇಂದು ಸ್ಟೇಶನ್ ಮಾಸ್ತರರಿಗೆ ಮೊದಲಿಗೇ ಸೂಚನೆ ಕೊಡದೆ ಗ್ವಾಲ್ಹೇರ ಮಹಾರಾಜರು ಸ್ಟೇಶನ್ನಿಗೆ ಬಂದದ್ದು ಒಂದು ವಿಶೇಷ ಸಂಗತಿಯಾಗಿತ್ತು. ಶ್ರೀ ಮಾಧವರಾವ ಸಿಂಧೆಯವರ ಜೀವನ ಕ್ರಮದಲ್ಲಿ ಇದೇನೂ ಅಚ್ಚರಿಪಡಬೇಕಾದ ಮಾತಾಗಿರಲಿಲ್ಲ. ಅವರು ತಮ್ಮ ರಾಜ್ಯದ ರೈತರು ಮತ್ತು ಜಮೀನುದಾರರ ಜೊತೆಯಲ್ಲಿ ಬೆರೆಯಲು ಸಂಕೋಚಪಟ್ಟುಕೊಳ್ಳುತ್ತಿರಲಿಲ್ಲ. ರೈತರು ತಮ್ಮ ಅನ್ನದಾತರೆಂದು ಅವರನ್ನುತ್ತಿದ್ದರು. ಅವರೆದುರು ನಮ್ರಭಾವದಿಂದ ನಿಂತಿರುತ್ತಿದ್ದರು.

ನಾನು ಮಹಾರಾಜರಿಗೆ ನಮಸ್ಕಾರ ಮಾಡಿದೆ. ಅವರು ನನ್ನ ಕೈಹಿಡಿದುಕೊಂಡು ಮುಂದೆ ಸಾಗಿದರು. ನಾನೆಲ್ಲಿಗೆ ಹೊರಟಿದ್ದೇನೆಂದು ಕೇಳಿದರು. ಮುಂಬಯಿಗೆಂದು ನಾನು ಹೇಳಿದೆ. ಮಹಾರಾಜರು ನಕ್ಕು "ಉಳಿದುಕೊಂಡೆ" ಎಂದರು. ನಾನು ಎರಡನೆಯ ಕಡೆಗೆ ಹೋಗುವವನಿದ್ದರೆ ಅವರು ನನ್ನ ಕಾರ್ಯಕ್ರಮವನ್ನೆ ಬದಲಾಯಿಸುತ್ತಿದ್ದರು. ಸ್ಟೇಶನ್ನಿನಲ್ಲಿ ಸ್ಪೆಶಲ್ ಟ್ರೇನ್ ಅಥವಾ ಸಲೂನು ಇಲ್ಲ ಎಂದು ಸ್ಟೇಶನ್ ಮಾಸ್ತರರು ಚಡಪಡಿಸಹತ್ತಿದರು. ಬರುವ ಗಾಡಿಯಲ್ಲಿ ಮೊದಲನೆ ವರ್ಗದ ಡಬ್ಬಿಯಾದರೂ ಖಾಲಿ ಇರುವುದೊ ಇಲ್ಲವೋ ಹೇಳಲು ಬರುವಂತಿರಲಿಲ್ಲ. ಆದರೆ ಮಹಾರಾಜ ಸಿಂಧೆಯವರು ತಮಗೆ ಇದೇ ಗಾಡಿಯಿಂದ ಮುಂಬಯಿಗೆ ಹೋಗಬೇಕಾಗಿದೆಯೆಂದೂ ತಾವು ಮೂರನೆಯ ವರ್ಗದ ಡಬ್ಬಿಯಲ್ಲಿ ಇತರರೊಂದಿಗೆ ಕುಳಿತು ಆನಂದದಿಂದ ಪ್ರವಾಸ ಮಾಡುವುದಾಗಿಯೂ ಹೇಳಿದರು. ಕೂಡ್ರಲು ಸ್ಥಳ ಮಾತ್ರ ಸಿಕ್ಕರೆ ಸಾಕು ಎಂದರವರು. ಮುಂಬಯಿಗೆ ಹೋಗಲು ಇಷ್ಟೊಂದು ಆತುರರಾಗಿರಬೇಕಾದರೆ ಮಹಾರಾಜರ ಮನಸ್ಸಿನಲ್ಲಿ ಏನಿತ್ತು? ಆ ಕಾಲದಲ್ಲಿ ವಿಮಾನಗಳಿರಲಿಲ್ಲ. ಟಪಾಲು ಗಾಡಿಯೇ ಅತಿವೇಗದ ವಾಹನ

ವಾಗಿತ್ತು. ಬಡ ಸ್ಟೇಶನ್ ಮಾಸ್ತರರು ಟೆಲಿಫೋನ್ ಮಾಡಿಯೆ ಮಾಡಿದರು. ಮೊದಲನೆ ವರ್ಗದ ಡಬ್ಬಿಯೊಂದು ಪೂರ್ಣ ಖಾಲಿಯಿದೆ ಎಂದವರಿಗೆ ತಿಳಿದುಬಂತು.

ನಾನು ನನ್ನ ಒಬ್ಬ ಮಿತ್ರರ ಜೊತೆ ಮುಂಬಯಿಗೆ ಹೊರಟಿದ್ದೆ. ಅವರು ಆಗ್ರಾದಿಂದ ಇದೇ ಗಾಡಿಯಲ್ಲಿ ಬರಲಿದ್ದರು. ನಾನು ಇಲ್ಲಿಂದ ಮುಂದೆ ಅವರ ಜೊತೆಯಲ್ಲಿ ಪ್ರಯಾಣ ಮಾಡತಕ್ಕವನಿದ್ದೆ. ಅವರೊಂದಿಗೆ ನನಗೆ ಅಗತ್ಯವಾದ ಕಾರ್‍ಯವಿತ್ತು. ಅದರ ಬಗ್ಗೆ ಮಾತುಕತೆಗಳೆಲ್ಲ ಗಾಡಿಯಲ್ಲೆ ನಡೆಯಲಿದ್ದವು. ಆದರೆ ಮಹಾರಾಜರು ನಾನು ಅವರ ಜೊತೆ ಕೂಡ್ರಬೇಕು ಎಂದು ಒತ್ತಾಯಪಡಿಸುತ್ತಿದ್ದರು. ಬಹಳಷ್ಟು ಮಾತಾದ ನಂತರ ನಾನು ನನ್ನ ಮಿತ್ರರ ಜೊತೆಯಲ್ಲಿ ಪ್ರವಾಸ ಮಾಡಬಹುದು, ಆದರೆ ಮುಂಬಯಿ ತಲುಪಿದ ನಂತರ ಮಾತ್ರ ನಾನು ಬೇರಾರ ಜೊತೆಯಲ್ಲಿಯೂ ಹೋಗಕೂಡದು ಎಂದು ಮಹಾರಾಜರು ಹೇಳಿದರು. ಮತ್ತೆ ನಾನು ಮುಂಬೈ ನಗರದೊಳಗೆ ಹೋಗುವುದು ಕೂಡ ಸಾಧ್ಯವಿಲ್ಲವೆಂದೂ ಮಹಾರಾಜರು ಹೇಳಿದರು. ನಾನು ನಗುತ್ತ "ನಾನು ಇಲ್ಲಿ ನಿಮ್ಮೆದುರಿನಲ್ಲಿಯೇ ನಿಂತಿದ್ದೇನೆ. ಅಷ್ಟು ದೂರ ಮುಂಬಯಿವರೆಗೆ ಒಯ್ದು ನನ್ನನ್ನೇಕೆ ಬಂಧಿಸುತ್ತೀರಿ?" ಎಂದು ಕೇಳಿದೆ. ಎಲ್ಲಾ ಮುಂಬಯಿ ಸ್ಟೇಶನ್ನಿನಲ್ಲಿಯೆ ಗೊತ್ತಾಗುವುದು ಎಂದು ಮಹಾರಾಜರು ಹೇಳಿದರು. ತಮ್ಮ ಕಾರ್‍ಯದ ವಿಚಾರದಲ್ಲಿ ಅವರು ಒಂದಿನಿತು ಸುಳಿವನ್ನೂ ಹತ್ತಗೊಡಲಿಲ್ಲ. ತಂದೆ ಮಗನೊಂದಿಗೆ ವ್ಯವಹರಿಸುವಂತೆ ಮಹಾರಾಜರು ನನ್ನೊಂದಿಗೆ ವ್ಯವಹರಿಸುತ್ತಿದ್ದರು.

ಗ್ವಾಲ್ಹೇರದ ಮಹಾರಾಜರು ಈ ಟ್ರೇನಿನಲ್ಲಿ ಹೊರಟಿದ್ದ ಸಮಾಚಾರ ಎಲ್ಲ ಸ್ಟೇಶನ್ನುಗಳಿಗೂ ಮುಟ್ಟಿತ್ತು. ಮುಂಬಯಿಗೂ ಸಮಾಚಾರ ಹೋಗಿತ್ತು. ಮತ್ತೇನೇನು ವ್ಯವಸ್ಥೆ ಮಾಡಿದ್ದರೋ ನನಗೆ ಗೊತ್ತಿರಲಿಲ್ಲ. ಒಂದು ನಿಲ್ದಾಣದಲ್ಲಿ ಮಹಾರಾಜರು ನನಗೆ ಊಟಕ್ಕೆ ಆಮಂತ್ರಣ ಕೊಟ್ಟರು. ನಾನು ಅಳುಕುತ್ತಲೇ ಹೋದೆ. ಆಗ ಊಟ ಪಾನೀಯಗಳ ವಿಚಾರದಲ್ಲಿ ನಾನು ತುಂಬ ಕಠಿಣ ವ್ರತಧಾರಿಯಾಗಿದ್ದೆ. ಗಾಡಿಯಲ್ಲಿ ಊಟ ಮಾಡುವುದಂತಿರಲಿ, ನೀರನ್ನೂ ಕುಡಿಯುತ್ತಿರಲಿಲ್ಲ. ಊಟದ ವಿಚಾರದಲ್ಲಿ ಮಹಾರಾಜರಿಗೆ ನನ್ನ ವಿಚಾರವನ್ನು ತಿಳಿಸಿದೆ. ಆಗ ಅವರು, "ಒಳ್ಳೇದು ದೂರದ ಸೀಟಿನಲ್ಲಿ ಕುಳಿತು ಫಲಗಳನ್ನೂ ಮಿಠಾಯಿಯನ್ನೂ ಹಾಲನ್ನೂ ಸೇವಿಸಿರಿ," ಎಂದರು. ನಿರುಪಾಯನಾಗಿ ಒಪ್ಪಿದೆ. ಆ ಹಣ್ಣುಗಳನ್ನು ತಿನ್ನುತ್ತಿರುವಾಗ ಜೀವನದ ಅವಸಾನ ಕಾಲದಲ್ಲಿ ನನ್ನ ನಿಯಮವೊಂದೂ ಉಳಿಯಲಿಕ್ಕಿಲ್ಲ ಎಂಬ ಕಲ್ಪನೆ ಆಗ ನನಗೆ ಬರಲಿಲ್ಲ.

ಗಾಡಿಯಲ್ಲಿ ಮಹಾರಾಜರು ದೇಶದ ರಾಜಕೀಯ ಚಳವಳಿಯನ್ನು ಕುರಿತು ಚರ್ಚಿಸಿದರು. ಅನೇಕ ವಿಷಯಗಳನ್ನು ಕೇಳಿದರು. ಧುರೀಣರ ಬಗ್ಗೆ, ಗ್ವಾಲ್ಹೇರ ರಾಜ್ಯದ ಸಂಬಂಧದಲ್ಲಿ ಪ್ರಶ್ನೆಗಳನ್ನು ಕೇಳಿದರು. ಆದರೆ ತಮ್ಮ ಪ್ರವಾಸದ ಬಗ್ಗಾಗಲಿ, ಕಾರ್ಯಕ್ರಮದ ಬಗ್ಗಾಗಲಿ ಒಂದು ಮಾತನ್ನೂ ಹೇಳಲಿಲ್ಲ. ಮುಂಬಯಿಗೆ ಹೋದ ಬಳಿಕ ತಾನೇ ತಿಳಿಯುತ್ತದಲ್ಲ ಎಂದು ನಾನೂ ಆ ಬಗ್ಗೆ ಒತ್ತಾಯಿಸಲಿಲ್ಲ. ಗ್ವಾಲ್ಹೇರದ ನರೇಶರು ತುಂಬ ಅಭಿಮಾನಿ, ಶೀಘ್ರಕೋಪಿ ವ್ಯಕ್ತಿಯಾಗಿದ್ದರು.

ಮುಂಬಯಿ ತಲುಪಿದ ನಂತರ "ಪುಣೆಗೆ ಹೋಗೋಣ ನಡೆಯಿರಿ" ಎಂದು ಮಹಾರಾಜರು ಹೇಳಿದರು. ಪುಣೆಗೆ ಹೋಗಲು ಮೊದಲೇ ಸ್ಪೆಶಲ್ ಟ್ರೇನಿನ ವ್ಯವಸ್ಥೆಯಾಗಿತ್ತು. ನನ್ನ ಸಾಮಾನನ್ನು ನನ್ನ ಮಿತ್ರರ ಹತ್ತರ ಕೊಟ್ಟು ನಾನು ಮಹಾರಾಜರ ಜೊತೆಯಲ್ಲಿ ಹೊರಟೆ. ಪುಣೆಗೆ ಯಾಕೆ ಹೋಗಬೇಕು ಎಂಬುದು ಇನ್ನೂ ರಹಸ್ಯವಾಗಿಯೇ ಉಳಿದಿತ್ತು. ಗಾಡಿಯಲ್ಲಿ ಮಹಾರಾಜರು ಏನೂ ಹೇಳಲಿಲ್ಲ. ಮರಾಠಾ ಅರಸರಾದ್ದರಿಂದ ಮುಂಬಯಿಯಿಂದ ಪುಣೆಯವರೆಗೆ ಜನರು ಅವರನ್ನು ಸ್ವಾಗತಿಸಿದರು.

ಸ್ಪೆಶಲ್ ಟ್ರೇನ್ ಪುಣೆ ತಲುಪಿತು. ಮಹಾರಾಜರು ಸ್ಟೇಶನ್ನಿನ ಹೊರಗೆ ಬಂದರು. ಮೋಟಾರಿನ ವ್ಯವಸ್ಥೆ ಮಾಡುವುದಾಗಿ ಸ್ಟೇಶನ್ನಿನ ಅಧಿಕಾ

ರಿಗಳು ಹೇಳಲು ಮಹಾರಾಜರು ಬೇಡವೆಂದರು. ಆಗ ಬಾಡಿಗೆ ಟ್ಯಾಕ್ಸಿಗಳ ಅಭಾವವಿತ್ತು. ಮಹಾರಾಜರ ಹೇಳಿಕೆಯಂತೆ ವಿಕ್ಟೋರಿಯಾ (ನಾಲ್ಕು ಚಕ್ರದ ಟಾಂಗಾ) ಗೊತ್ತುಮಾಡಲ್ಪಟ್ಟಿತು. ಅದರಲ್ಲಿ ನಾನು ಮಹಾರಾಜರೊಂದಿಗೆ ಕುಳಿತೆ. ಟಾಂಗಾದವನಿಗೆ ಗಾಯಕವಾಡಾದಲ್ಲಿದ್ದ "ಕೇಸರಿ" ಆಫೀಸಿಗೆ ಗಾಡಿ ಹೊಡೆಯಲು ಮಹಾರಾಜರು ಹೇಳಿದರು.

ಈಗ ಮಹಾರಾಜರ ಗುಟ್ಟು ಬಯಲಾಯಿತು. ನಾನು ಟಾಂಗಾದವನಿಗೆ ತಾತ್ಯಾ ಸಾಹೇಬರ ಮನೆಗೆ ಹೊಡಿ ಎಂದೆ. ಪುಣೆಯಲ್ಲಿ ತಾತ್ಯಾ ಸಾಹೇಬರನ್ನು ಅರಿಯದವರಾರು? "ಕೇಸರಿ" ಪತ್ರಿಕೆಯ ಸಂಪಾದಕ ಶ್ರೀ ನರಸಿಂಹ ಚಿಂತಾಮಣಿ ಕೇಳಕರರ ಉಪನಾಮ ತಾತ್ಯಾಸಾಹೇಬ ಎಂದು. ಕೇಳಕರರ ಮನೆ ಮುಟ್ಟಿದೊಡನೆ ಮಹಾರಾಜರು ಟಾಂಗಾದವನಿಗೆ ಹತ್ತು ರೂಪಾಯಿಯ ನೋಟು ಕೊಟ್ಟರು. ಬಾಡಿಗೆ ಮುರಿದುಕೊಂಡು ಉಳಿದ ಹಣ ತಿರುಗಿ ಕೊಡಬೇಕಾಗಿಲ್ಲ; ಅದನ್ನು ಇನಾಮೆಂದು ಕೊಟ್ಟಿದೆಯೆಂದು ನಾನಂದಾಗ ಬಡ ಟಾಂಗಾದವ ಬೆಪ್ಪಾದ.

ಕೇಳಕರ ಸಾಹೇಬರ ಮನೆ ಹೊಕ್ಕೆವು. ಅಲ್ಲಿ ನನಗೆ ಹೊಸಬನಾದ ಯಾವನೋ ಒಬ್ಬ ಆಳು ಇದ್ದ. ನಾನು ಗ್ವಾಲ್ಹೇರದ ಯಾರೋ ಒಬ್ಬ ಗೃಹಸ್ಥರೊಡನೆ ಬಂದಿದ್ದೇನೆಂದು ಕೇಳಕರರಿಗೆ ತಿಳಿಸಲು ಹೇಳಿ ನನ್ನ ಹೆಸರನ್ನು ಕೊಟ್ಟೆ. "ನೀವು ಕಾಂಗ್ರೆಸ್‌ವಾಲರು ಸಾಹೇಬರಿಗೆ ವಿಶ್ರಾಂತಿ ತೆಗೆದುಕೊಳ್ಳಲೂ ಬಿಡುವುದಿಲ್ಲ. ಇದೇ ಈಗ ತಾತ್ಯಾಸಾಹೇಬರು ಸ್ನಾನ ಮಾಡಿ ಪೂಜೆಗೆ ಕುಳಿತಿದ್ದಾರೆ. ಆ ಮೇಲೆ ಊಟ ಮಾಡಿ ಒಂದೆರಡು ಗಳಿಗೆ ವಿಶ್ರಾಂತಿಪಡೆಯುವರು. ಅಲ್ಲಿಯವರೆಗೆ ಅವರಿಗೆ ಯಾವ ಸುದ್ದಿಯನ್ನೂ ಮುಟ್ಟಿಸುವುದಿಲ್ಲ" ಎಂದ ಆಳು. "ಗ್ವಾಲ್ಹೇರ ರಾಜದರ್ಬಾರದಿಂದ ತಾತ್ಯಾಸಾಹೇಬರ ಭೆಟ್ಟಿಗಾಗಿ ಇವರು ಬಂದಿದ್ದಾರೆ" ಎಂದು ನಾನನ್ನಲು ಅವನು ಭೆಟ್ಟಿಯಾಗುವವರು ಕಾಂಗ್ರೆಸ್ ಆಫೀಸಿನಲ್ಲಿ ಭೆಟ್ಟಿಯಾಗಬೇಕು ಎಂದ. "ಹಗಲು ರಾತ್ರಿ ಭೆಟ್ಟಿಗೆಂದು ಜನ ಬರುತ್ತಾರೆ. ವಿದೇಶೀ ಬಟ್ಟೆಗಳ ಹೋಳಿ ನಡೆದಿದೆ. ಶಾಲೆಗಳಿಂದ ಹುಡುಗರು ಹೊರಬೀಳುತ್ತಿದ್ದಾರೆ. ಸಭೆಗಳು ಜರುಗುತ್ತಿವೆ ಇವೆಲ್ಲವುಗಳ ಗದ್ದಲದಲ್ಲಿ ತಾತ್ಯಾಸಾಹೇಬರಿಗೆ "ಕೇಸರಿ" ಆಫೀಸಿಗೂ ಹೋಗುವುದಾಗುವುದಿಲ್ಲ. ಕಾಂಗ್ರೆಸ್ಸಿನ ಈ ಗೊಂದಲದಲ್ಲಿ ನನ್ನ ಮಗನ ವಿದ್ಯಾಭ್ಯಾಸ ನಿಂತಿತು. ಆತ ಓದಿಕೊಂಡಿದ್ದರೆ ಕೇಸರಿ ಆಫೀಸಿನಲ್ಲಿ ಕಾರಕೂನನಾಗುತ್ತಿದ್ದ," ಎಂದು ದೂರಿಕೊಂಡ. ನಾನು ಬಂದಿರುವ ಸಮಾಚಾರವನ್ನು ಸಾಹೇಬರಿಗೆ ತಿಳಿಸು ಎಂದು ನಾನು ಮತ್ತೊಮ್ಮೆ ಅವನಿಗೆ ಹೇಳಿದೆ.

ನಾವು ದಿವಾಣಖಾನೆಯ ಕೋಣೆಯಲ್ಲಿ ಕುಳಿತೆವು. "ಒಳ್ಳೇದು, ಕೋಣೆಯಲ್ಲಿ ಕೂತುಕೊಳ್ಳಿ" ಎಂದು ಆಳು ಹೇಳಿದ. ಗ್ವಾಲ್ಹೇರ ನರೇಶರು ಸಾದಾ ಉಡುಪಿನಲ್ಲಿದ್ದರು. ನಾವು ಕುಳಿತೆವು; ಕುಳಿತೇ ಕುಳಿತೆವು. ಆಳಿನ ಪತ್ತೆಯೇ ಇರಲಿಲ್ಲ. ಕೇಳಕರ ಸಾಹೇಬರು ಪೂಜೆ ಮುಗಿಸಿ ಊಟಕ್ಕೆ ಹೋದರು; ಮತ್ತೆ ಅವರು ಮಲಗಲಿಕ್ಕೆ ಹೋಗತಕ್ಕವರು. ಖಡಾವಿನ ಸಪ್ಪಳ ಮಾಡುತ್ತ ಅಡಕತ್ತಿಯಿಂದ ಅಡಿಕೆ ಕತ್ತರಿಸುತ್ತ ಅವರು ಶತಪಥ ನಡೆಸಿದ್ದರು. ಕೇಳಕರರು ಮಲಗಲು ಹೋದರೆ ಅವರನ್ನು ಕಾಣಲು ತುಂಬ ತಡವಾದೀತೆಂದು ನಾನಂದೆ. ನಾನು ಗಟ್ಟಿಯಾಗಿ ಮಾತಾಡಿದ್ದರಿಂದ ಅವರ ಗಮನ ದಿವಾಣಖಾನೆಯತ್ತ ಬಿತ್ತು. ಹೊರಗೆ ಯಾರಿದ್ದಾರೆಂದು ಅವರು ಆಳನ್ನು ಕೇಳಿದರು. "ಮತ್ತಾರು? ಕಾಂಗ್ರೆಸ್‌ವಾಲರು. ಅವರ ಜೊತೆಯಲ್ಲಿ ಒಬ್ಬ ಮರಾಠಾ ಇದ್ದಾನೆ. ನಿಮ್ಮ ಅತಿಥಿಯಾಗಿ ಬಂದಿದ್ದಾನಂತೆ. ಆದರೆ ನನಗಂತೂ ಅವನು ಇಲ್ಲಿಯ ಸ್ಟೋರ್‌ವಾಲನಿರಬೇಕೆನಿಸುತ್ತದೆ. ಬಹುಶಃ ವಿಲಾಯತಿ ಬಟ್ಟೆ ಮಾರುತ್ತಿರಬೇಕು" ಎಂದು ಆಳು ಹೇಳಿದ. ಮಹಾರಾಜರು ಅವನ ಮಾತನ್ನು ತುಂಬ ಮೋಜಿನಿಂದ ಕೇಳುತ್ತಲಿದ್ದರು.

ಕೇಳಕರ ಸಾಹೇಬರು ಹೊರಗೆ ಬಂದರು. ಮಹಾರಾಜರನ್ನು ಕಂಡೊಡನೆ ವಿಚಲಿತರಾದರು. "ಸಿಂಧೆ ಸರಕಾರ! ತಾವು ನನಗೆ ಸುದ್ದಿ ಕೂಡ

ತಿಳಿಸಲಿಲ್ಲವಲ್ಲ. ನಾನೇ ಮುಂಬಯಿಗೆ ಬರುತ್ತಿದ್ದೆ. ಶ್ರೀಮಂತ (ಮಹಾರಾಜ) ರು ಬಂದ ಸಮಾಚಾರವನ್ನು ಆಳು ಕೂಡ ತಿಳಿಸಲಿಲ್ಲ" ಎಂದರು. "ತಾತ್ಯಾಸಾಹೇಬ, ಇವರು ಸರ್ ಮಾಧವರಾವ ಸಿಂಧೆಯವರಲ್ಲ. ಪುಣೆಯ ಸ್ಟೋರವಾಲಾ" ಎಂದು ಹೇಳಬೇಕೆಂದುಕೊಂಡೆ. ಆದರೆ ಮಹಾರಾಜರ ಗಂಭೀರ ವದನವನ್ನು ಕಂಡು ಸುಮ್ಮನಾದೆ. ಕೇಳಕರರು ಬಂದೊಡನೆ ಮಹಾರಾಜರು ಎದ್ದು ನಿಂತಿದ್ದರು. "ನಾನು ಹೇಗೂ ಪುಣೆಗೆ ಬರಬೇಕಾಗಿತ್ತು. ಮತ್ತೆ ನನ್ನ ಕೆಲಸವಿದ್ದಾಗ ನಿಮ್ಮನ್ನು ಮುಂಬಯಿ ಅಥವಾ ಗ್ವಾಲ್ಹೇರಕ್ಕೆ ಹೇಗೆ ಕರೆಸಿಕೊಳ್ಳಲಿ?" ಎಂದು ಅವರು ಕೇಳಕರರಿಗೆ ಹೇಳಿದರು.

ಕೇಳಕರರು ಮಹಾರಾಜರಿಗೆ ವಂದಿಸಿದರು. ಮಹಾರಾಜರ ಫಲಾಹಾರದ ವ್ಯವಸ್ಥೆಯಾಯಿತು. ಮಹಾರಾಜರು ತಮ್ಮಲ್ಲಿಗೆ ಬಂದರೆಂದು ಅವರು ಸಂತುಷ್ಟರಾದರೂ ಅವರಿಗೆ ನಾನು ಇಷ್ಟೊಂದು ಕಷ್ಟಕೊಟ್ಟೆನೆಂದು ನನ್ನ ಮೇಲೆ ಕೋಪಿಸಿಕೊಂಡಿದ್ದರು. ನಾನು ಕೇಳಕರರಲ್ಲಿ ಯಾವಾಗಲೂ ಬಂದು ಹೋಗುವವನಾಗಿದ್ದೆ. "ಇವರು ಗ್ವಾಲ್ಹೇರದ ಮಹಾರಾಜರಾದರೆ ನೀವು ಮಹಾರಾಷ್ಟ್ರ ಕಾಂಗ್ರೆಸ್ಸಿನ ಧುರೀಣರು. ಕಾಂಗ್ರೆಸ ಹಾಯ್‌ಕಮಾಂಡಿನಲ್ಲಿ ನಿಮಗೆ ಸ್ಥಾನವಿದೆ," ಎಂದು ನಾನು ಕೇಳಕರರಿಗೆ ಹೇಳಿದೆ.

ಮಹಾರಾಜರಿಗೂ ಕೇಳಕರ ಸಾಹೇಬರಿಗೂ ಮಾತುಕತೆ ನಡೆದವು. "ಮರಾಠರು ಮಹಾರಾಷ್ಟ್ರದಲ್ಲಿ ಕ್ಷತ್ರಿಯ ಹಿತಕಾರಿಣಿ ಸಭೆಯನ್ನು ಸ್ಥಾಪಿಸಿದ್ದಾರೆ. ಪುಣೆಯಲ್ಲಿ ಮಹಾರಾಷ್ಟ್ರದ ವೀರ ಛತ್ರಪತಿ ಶಿವಾಜಿಯ ಮೂರ್ತಿಯನ್ನು ಸ್ಥಾಪಿಸುವ ನಿಶ್ಚಯವನ್ನು ಈ ಸಭೆ ಮಾಡಿದೆ. ಇವೆಲ್ಲ ನಿಮಗೆ ಗೊತ್ತಿದೆ. ಮಹಾರಾಷ್ಟ್ರ ಕ್ಷತ್ರಿಯ ಹಿತಕಾರಿಣಿ ಸಭೆಗೆ ಶಿವಾಜಿ ಮಹಾರಾಜರ ವಂಶಜರಾದ ಕೊಲ್ಹಾಪುರ ರಾಜರು ಅಧ್ಯಕ್ಷರಿದ್ದಾರೆ. ನಾನು ಕಾರ್ಯದರ್ಶಿಯಾಗಿದ್ದೇನೆ. ಶಿವಾಜಿಯ ಮೂರ್ತಿಯ ಸ್ಥಾಪನೆ ಮತ್ತು ಅನಾವರಣದ ಕಾರ್ಯಕ್ರಮಗಳ ಭಾರವನ್ನೆಲ್ಲ ನಾನು ಹೊತ್ತಿದ್ದೇನೆ. ಈ ಸ್ಮಾರಕ ಕೇವಲ ಮಹಾರಾಷ್ಟ್ರದ್ದಲ್ಲ. ಆದರೆ ಇಡೀ ದೇಶದ ಆಕಾಂಕ್ಷೆಗಳ ಪ್ರತೀಕವಾಗಿದೆ. ಶಿವಪ್ರಭುವು ಇಡೀ ಭಾರತವನ್ನು ಮುಕ್ತಗೊಳಿಸಿದರು.

"ಶಿವಾಜಿ ಮಹಾರಾಜರ ವಿಷಯದಲ್ಲಿ ಆಂಗ್ಲ ಇತಿಹಾಸಕಾರರು ಎಂಥೆಂಥ ಹೀನ ಮಾತುಗಳನ್ನು ಬರೆದಿದ್ದಾರೆ, ಅವರ ಮೇಲೆ ಎಂಥೆಂಥ ಮಿಥ್ಯಾರೋಪಗಳನ್ನೂ ಹೊರಿಸಿದ್ದಾರೆಂಬುದು ವಿದಿತವೇ ಇದೆ. ಮರಾಠರು ಮತ್ತು ಶಿವಾಜಿ ಮಹಾರಾಜರನ್ನು ಹೀಗಳೆಯುಲು ಮತ್ತು ಹಿಂದು ಮುಸ್ಲಿಮರಲ್ಲಿ ಭೇದವನ್ನು ಹುಟ್ಟಿಸಲು ಎಂಥೆಂಥ ಮಾತುಗಳನ್ನು ಬರೆದಿದ್ದಾರೆ! ಶಿವಾಜಿ ಮಹಾರಾಜರನ್ನು ಗುಡ್ಡದ ಇಲಿ, ದರೋಡೆಗಾರ ಎಂದಿದ್ದಾರೆ. ಅಫಝುಲಖಾನನ ವಧೆಯ ವೃತ್ತಾಂತವನ್ನು ತಪ್ಪಾಗಿ ಬಣ್ಣಿಸಿದ್ದಾರೆ ಈ ಮಾತುಗಳಿಂದ ಯಾವ ಮಹಾರಾಷ್ಟ್ರೀಯನಿಗೆ ಅಪಾರ ದುಃಖವಾಗದು!

"ಇಂಥ ಹೀನ ಮಾತುಗಳನ್ನು ಖಂಡಿಸಿ ನಾವು ತಕ್ಕ ಪರಿಮಾರ್ಜನೆ ಮಾಡದಿದ್ದರೆ ದೇಶದ ಹೊಸ ಪೀಳಿಗೆ ಶಿವಾಜಿ ಮಹಾರಾಜರ ವಿಷಯದಲ್ಲಿ ಏನೆಂದು ತಿಳಿದುಕೊಂಡೀತು? ಮಹಾರಾಷ್ಟ್ರ ಕ್ಷತ್ರಿಯ ಸಭೆಯು ಮಹಾರಾಷ್ಟ್ರ ಇತಿಹಾಸ ಸಂಶೋಧಕ ಮಂಡಲ ಮತ್ತು ಇತರ ಎಲ್ಲ ಇತಿಹಾಸಕಾರರಿಗೆ ಶಿವಾಜಿ ಮಹಾರಾಜರ ಜೀವನದ ವಿಚಾರದಲ್ಲಿ ಸಂಶೋಧನೆ ಮಾಡಲು ತಿಳಿಸಿದೆ. ಗ್ವಾಲ್ಹೇರ ದರ್ಬಾರವು ಈ ಕಾರ್ಯದಲ್ಲಿ ತುಂಬ ವೆಚ್ಚ ಮಾಡಿದೆ. ಶಿವಾಜಿಯ ಜೀವನ ವಿಚಾರದಲ್ಲಿ ಮಹಾರಾಷ್ಟ್ರ ಕ್ಷತ್ರಿಯ ಸಭೆಯವರಿಂದ ಒಂದು ಲೇಖನ ತಯಾರಿಸಿಕೊಂಡು ಅದನ್ನು ಬ್ರಿಟಿಶ್ ರಾಜವಂಶದವರಿಗೆ ಮತ್ತು ಪ್ರಧಾನ ಮಂತ್ರಿಗೆ ನಾನು ಕಳಿಸಿದ್ದೇನೆ. ಈ ಸಭೆಯ ಸೂಚನೆಯ ಮೇರೆಗೆ ಬ್ರಿಟಿಶ್ ಸರಕಾರ ಮತ್ತು ರಾಜ ಮನೆತನವು ಶಿವಾಜಿಯ ಮೂರ್ತಿಯ ಅನಾವರಣವನ್ನು ಪ್ರಿನ್ಸ್ ಆಫ್ ವೇಲ್ಸರಿಂದ ಮಾಡಿಸಲು ಮತ್ತು ಅವರ ಭಾಷಣದಲ್ಲಿ ನಾವು ಕಳಿಸಿದ ಲೇಖನದ ವಿಷಯವನ್ನು ಪ್ರಸ್ತಾ

ಪಿಸಲು ಒಪ್ಪಿಕೊಂಡಿವೆ.''

ಇಷ್ಟು ಹೇಳಿ ಮಹಾರಾಜರು ಕೇಳಕರರ ಎದುರು ಸಭೆಯ ಲೇಖನ ಮತ್ತು ಪ್ರಿನ್ಸ್ ಆಫ್ ವೇಲ್ಸರ ಭಾಷಣದ ಪ್ರತಿಗಳನ್ನು ಇಟ್ಟರು "ಯಾವ ಇಂಗ್ಲೀಷರು ಮಹಾರಾಷ್ಟ್ರದ ಧುರೀಣನ ಅವಹೇಳನ ಮಾಡಿದರೊ ಆ ಇಂಗ್ಲಿಷರ ರಾಜಕುಮಾರನೇ ಅದರ ಪರಿಮಾರ್ಜನೆ ಮಾಡಲಿದ್ದಾನೆ. ಪ್ರಿನ್ಸರ ಭಾಷಣದಲ್ಲಿ ಒಂದಕ್ಷರವೂ ಬಿಟ್ಟು ಹೋಗಬಾರದು. ವಾಸ್ತವದಲ್ಲಿ ಇದನ್ನು ಕಾಂಗ್ರೆಸ್ ಮಾಡಬೇಕಿತ್ತು.

"ಇಂಥ ಸಮಯದಲ್ಲಿ ಕಾಂಗ್ರೆಸ್ಸು ಬ್ರಿಟಿಶ್ ಸರಕಾರದ ವಿರುದ್ಧ ಯುದ್ಧ ಹೂಡಿದೆ. ಈಗ ಏನು ಮಾಡಬೇಕು ಹೇಳಿರಿ. ಪುಣೆಯಲ್ಲಿ ಎಲ್ಲ ಸಿದ್ಧತೆಯಾಗಿದೆ. ಮೂರ್ತಿಯ ಅನಾವರಣಕಾಗಿ ಪ್ರಿನ್ಸರು ಮುಂಬಯಿಯಿಂದ ಪುಣೆಗೆ ಬರುವರು. ಯಾವ ಮಹಾಪುರುಷನು ದೇಶದ ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡಿದನೊ ಆತನ ಮೂರ್ತಿಯ ಉದ್ಘಾಟನ ಕಾಲಕ್ಕೆ ಪ್ರಿನ್ಸ್ ಆಫ್ ವೇಲ್ಸರಿಗೆ ಕಪ್ಪು ಧ್ವಜ ತೋರಿಸುವುದೂ ಅದಕ್ಕಾಗಿ ಜನರ ಮೇಲೆ ಪೋಲೀಸರು ಲಾಠಿ ಪ್ರಹಾರಮಾಡಿ ಅವರನ್ನು ಬಂಧಿಸುವುದೂ ರಾಷ್ಟ್ರೀಯ ಮಹೋತ್ಸವ ಕಾಲದಲ್ಲಿ ದುರ್ಘಟನೆಯಾಗುವುದೂ ಯೋಗ್ಯವೆಂದು ನಿಮಗನಿಸುವುದೇ? ಕಾಂಗ್ರೆಸ್ಸಿನ ಚಳವಳಿ ಇಂದು ನಡೆದಿರದಿದ್ದರೆ ಬ್ರಿಟಿಶ್ ಸರಕಾರದೊಡನೆ ಮತಭೇದವಿದ್ದರೂ ನೀವು ಈ ಉತ್ಸವದಲ್ಲಿ ಭಾಗವಹಿಸುತ್ತಿದ್ದಿಲ್ಲವೇ?

"ಕೇಳಕರ ಸಾಹೇಬ, ಇಂಥ ಪ್ರಸಂಗದಲ್ಲಿ ಒಂದೆಡೆ ಸ್ವಾತಂತ್ರ್ಯ ಸೇನಾನಿಯ ಮೂರ್ತಿಯ ಉದ್ಘಾಟನೆ ಮತ್ತು ಇನ್ನೊಂದೆಡೆ ಇಂದು ಸ್ವರಾಜ್ಯಕ್ಕಾಗಿ ಹೋರಾಡುವವರ ಮೇಲೆ ಲಾಠಿ ಪ್ರಹಾರವಾಗುವುದು ನನಗೆ ಇಷ್ಟವಿಲ್ಲ. ಪೋಲೀಸರು ಮತ್ತು ಮಿಲಿಟರಿಯವರ ಕಾವಲಿನಲ್ಲಿ ಪ್ರಿನ್ಸ್ ಆಫ್ ವೇಲ್ಸರ ಆಗಮನಕ್ಕೇನೂ ವ್ಯತ್ಯಯವುಂಟಾಗಲಾರದು. ಆದರೆ ಪುಣೆ ಸ್ಟೇಶನ್ನಿನಿಂದ ಮೂರ್ತಿಯ ಸ್ಥಾನದ ವರೆಗೆ ಕಪ್ಪುಧ್ವಜ ಪ್ರದರ್ಶನವಾಗುವುದು, ಬಂಧನ ಸತ್ರವಾಗುವುದು ಅಶಾಂತಿ ಹಬ್ಬುವುದು ನನಗೆ ಬೇಡವಾಗಿದೆ. ಈ ಕಾರ್ಯಕ್ರಮ ಬಹುದಿನಗಳ ಹಿಂದೆಯೆ ನಿಶ್ಚಿತವಾದದ್ದು. ನಾನಿಂದು ಸ್ವಾತಂತ್ರ್ಯವೀರನ ಸನ್ಮಾನಕ್ಕಾಗಿ ಕಾಂಗ್ರೆಸ್ಸಿನಿಂದ ಭಿಕ್ಷೆ ಬೇಡುತ್ತಿದ್ದೇನೆ. ಪ್ರಿನ್ಸ್ ಆಫ್ ವೇಲ್ಸರಿಂದ ಮೂರ್ತಿಯ ಉದ್ಘಾಟನೆ ಮಾಡಿಸುವುದರಲ್ಲಿ ಮರಾಠರ ಉದ್ದೇಶವೇನು ಎಂಬುದನ್ನೂ ಕಾಂಗ್ರೆಸ್ಸು ಲಕ್ಷಿಸಬೇಕು.

"ನಾವು ಬಯಸುವುದಿಷ್ಟೇ. ಸ್ಟೇಶನ್ನಿನಿಂದ ಮೂರ್ತಿಯ ಸ್ಥಾನದ ವರೆಗೆ ಮೆರವಣಿಗೆಯ ಮಾರ್ಗದಲ್ಲಿ ಕಪ್ಪು ಧ್ವಜ ಪ್ರದರ್ಶನವಾಗಗೊಡಬೇಡಿರಿ. ಪುಣೆಯಲ್ಲೇ ಹರತಾಳವಾಗಬಾರದು, ಸಭೆಗಳಾಗಬಾರದು, ವಿರೋಧ ಪ್ರಕಟಿಸಬಾರದು ಎಂದೇನೂ ನಾವು ಹೇಳುವುದಿಲ್ಲ. ಏನನ್ನುತ್ತೀರಿ ಕೇಳಕರ ಸಾಹೇಬ?" ಮಹಾರಾಜರು ತಮ್ಮ ಮಾತು ಮುಗಿಸಿದರು.

ತಾತ್ಯಾಸಾಹೇಬರು ಶಾಂತಚಿತ್ತದಿಂದ ಎಲ್ಲವನ್ನೂ ಕೇಳಿಕೊಂಡರು ಇದುವರೆಗೂ ಅವರು ಒಂದು ಶಬ್ದವನ್ನೂ ಆಡಿರಲಿಲ್ಲ. ಅವರು ಏನನ್ನಾದರೂ ಹೇಳುವ ಮೊದಲೇ ಗ್ವಾಲ್ಹೇರ ಮಹಾರಾಜರು ಇನ್ನೊಂದು ಘೋಷಣೆ ಮಾಡಿದರು. "ಮಹಾರಾಷ್ಟ್ರ ಕ್ಷತ್ರಿಯ ಸಭೆಯ ಮೂಲಕ ಈ ಮೂರ್ತಿಯ ಸ್ಥಾಪನೆಯಾಗಲಿದೆ. ಸ್ವಾತಂತ್ರ್ಯ ಯುದ್ಧದ ಈ ವೀರನ ಇನ್ನೊಂದು ಸ್ಮಾರಕವನ್ನು ನಿಲ್ಲಿಸಲು ಕಾಂಗ್ರೆಸ್ಸು ಬಯಸಿದರೆ ನಾನು ಅದರ ಸರ್ವ ಭಾರವನ್ನು ಹೊರುವೆನು," ಎಂದರವರು.

ಮಹಾರಾಜರು ಎಷ್ಟೊಂದು ಕಳಕಳಿಯಿಂದ ಇದನ್ನೆಲ್ಲ ಹೇಳಿದರೆಂಬುದನ್ನು ವರ್ಣಿಸಲಾರೆ.

"ಶಿವಾಜಿಯ ಮೂರ್ತಿಯ ಉದ್ಘಾಟನದಿಂದ ಮಹಾರಾಷ್ಟ್ರ ಮತ್ತು ಇಡೀ ದೇಶಕ್ಕೆ ಸಂತೋಷವಾಗಬೇಕು. ಆದರೆ ಪ್ರಿನ್ಸ್ ಆಫ್ ವೇಲ್ಸರಿಗೆ ಬಹಿಷ್ಕಾರ ಹಾಕಲು ಕಾಂಗ್ರೆಸ್ಸು ನಿಶ್ಚಯಿಸಿದೆ. ಆ ನಿಶ್ಚಯವನ್ನು ಬದಲಿಸುವುದು ಸಾಧ್ಯವಿಲ್ಲ. ನಾನಾಗಲಿ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ಸಾಗಲಿ ಏನು ಮಾಡಬಲ್ಲೆವು? ಈ ನಿರ್ಣಯ ಅಖಿಲ ಭಾರತ ಕಾಂಗ್ರೆಸ್ಸಿನದು'' ಎಂದು ತಾತ್ಯಾಸಾಹೇಬರು ಹೇಳಿದರು.

ಮಹಾರಾಜರಿಗೆ ನಿರಾಶೆಯಾಯಿತು. ಅವರು ಹೊರಡಲನುವಾದರು. ಅಷ್ಟರಲ್ಲಿ ಕೇಳಕರರು, "ಗಾಂಧೀಜಿಯವರು ಬಯಸಿದರೆ ಪುಣೆಯ ಕಾರ್ಯಕ್ರಮದಲ್ಲಿ ಬದಲಾವಣೆಯಾಗಬಹುದು. ಅವರ ಆದೇಶವಿದ್ದರೆ ಬದಲಾವಣೆ ಸಾಧ್ಯ" ಎಂದರು.

" ಹಾಗಾದರೆ ಮುಂಬೈಗೆ ನಡೆಯಿರಿ. ಗಾಂಧೀಜಿಯವರ ಸಮ್ಮತಿ ಪಡೆಯಿರಿ " ಎಂದು ಮಹಾರಾಜರು ಕೇಳಕರರಿಗೆ ಹೇಳಿದರು.

ಗ್ವಾಲ್ಹೇರ ಮಹಾರಾಜರ ಸೇವೆಯಿಂದ ಕೇಳಕರರ ಮೇಲೆ ತುಂಬ ಪ್ರಭಾವವಾಗಿತ್ತು. ಶಿವಾಜಿ ಮಹಾರಾಜರ ಯುದ್ಧದಿಂದ ಲೋಕಮಾನ್ಯ ತಿಲಕರಿಗೆ ಸ್ವರಾಜ್ಯ ಆಂದೋಲನಕ್ಕೆ ಹೂಡಲು ಸ್ಫೂರ್ತಿ ಸಿಕ್ಕಿತ್ತು. ಅವರು ಅನೇಕ ಭಾಷಣ ಲೇಖನಗಳಲ್ಲಿ ಈ ಮಾತನ್ನು ಪ್ರಸ್ತಾವಿಸಿದ್ದರು. ಇಂದು ರಾಷ್ಟ್ರದ ಈ ಸ್ಥಿತಿಯಲ್ಲಿ ಕೇಳಕರರೂ ಇತರ ಕಾಂಗ್ರೆಸ್ಸಿಗರೂ ಈ ಸಮಾರಂಭದಲ್ಲಿ ಭಾಗ ವಹಿಸಲು ಅಸಮರ್ಥರಾಗಿದ್ದರೂ ಅದರೊಡನೆ ಅವರ ಸಹಾನುಭೂತಿ ಇದ್ದೇ ಇತ್ತು. ಶಿವಾಜಿ ಮಹಾರಾಜರ ಧ್ಯೇಯಪೂರ್ತಿಗಾಗಿಯೇ ಅವರೂ ಇಂದು ಸಕ್ರಿಯವಾಗಿ ಪ್ರವೃತ್ತರಾಗಿದ್ದರಲ್ಲವೆ ?

ಕೇಳಕರರು ಮಹಾರಾಜರ ಸ್ಪೆಶಲ್ ಟ್ರೇನಿನಲ್ಲಿ ಮುಂಬಯಿಗೆ ತೆರಳಿದರು. ಮಹಾರಾಜರು ಪುಣೆಯಲ್ಲಿಯೇ ಉಳಿದರು. ಅವರು ಅನಾವರಣ ಸಮಾರಂಭದ ಎಲ್ಲ ವ್ಯವಸ್ಥೆಯನ್ನು ನಿರೀಕ್ಷಿಸಿದರು. ನನ್ನೊಂದಿಗೆ "ಕೇಸರಿ" ಕಾರ್ಯಾಲಯಕ್ಕೂ ಭೆಟ್ಟಿಯಿತ್ತರು.

ಮುಂಬಯಿಯಲ್ಲಿ ಕೇಳಕರರು ಗಾಂಧೀಜಿಯೆದುರು ಮಹಾರಾಜರ ಅಭೀಷ್ಟವನ್ನು ಅರುಹಿದರು. ಮಹಾರಾಜರನ್ನು ಸಂಗಡ ಏಕೆ ಕರತರಲಿಲ್ಲ ಎಂದು ಗಾಂಧೀಜಿ ಅವರನ್ನು ಕೇಳಿದರು. ಪುಣೆಯಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ಸು ಯಾವ ಮತಪ್ರದರ್ಶನವನ್ನೂ ಮಾಡಲಾಗದು ಎಂದು ಗಾಂಧೀಜಿ ಒಪ್ಪಿಕೊಂಡರು. ಗಾಂಧೀಜಿ ತುಂಬ ವ್ಯವಹಾರ ಕುಶಲರಾಗಿದ್ದರಲ್ಲವೇ ?

ಮರುದಿನ ಪುಣೆಗೆ ಬಂದು ಕೇಳಕರರು ಗಾಂಧೀಜಿಯವರ ಆದೇಶದ ವಿಷಯವನ್ನು ಮಹಾರಾಜರಿಗೆ ತಿಳಿಸುತ್ತ, " ಸಿಂಧೆ ಸರಕಾರ, ನಿಮ್ಮ ಈ ಸೇವೆಗಾಗಿ ಮಹಾರಾಷ್ಟ್ರವು ನಿಮಗೆ ಆಭಾರಿಯಾಗಿದೆ. ನಿಮ್ಮ ಈ ಕಾರ್ಯವು ಸ್ಮರಣೀಯವಾಗಿ ಉಳಿಯುವುದು " ಎಂದು ನುಡಿದರು.

೧೯೫೭ ರಲ್ಲಿ ಪ್ರತಾಪಗಡದಲ್ಲಿ ಶಿವಾಜಿಯ ಮೂರ್ತಿಯ ಸ್ಥಾಪನೆಯಾದಾಗ ಗ್ವಾಲ್ಹೇರ ಮಹಾರಾಜರು ಜೀವಂತರಾಗಿರಲಿಲ್ಲ. ಅದನ್ನು ಪ್ರಧಾನ ಮಂತ್ರಿ ನೆಹರೂ ಅವರು ಉದ್ಘಾಟಿಸಲಿದ್ದಾಗ ಅವರೂ ಮುರಾರಜಿ ದೇಸಾಯಿಯವರೂ ಹಿಂದೆ ಶಿವಾಜಿ ಮಹಾರಾಜರ ವಿಚಾರಕ್ಕೆ ತೆಗೆದಿದ್ದ ಉದ್ಗಾರಗಳ ಬಗ್ಗೆ ಎದ್ದ ಚರ್ಚೆ ಮೂವತ್ತೈದು ವರ್ಷಗಳ ಹಿಂದೆ ಗ್ವಾಲ್ಹೇರ ಮಹಾರಾಜರು ಹೇಳಿದ ಸಂಗತಿಗಳನ್ನು ಎತ್ತಿ ತೋರಿಸುತ್ತದೆ. ಇಂಗ್ಲೀಷ್ ಇತಿಹಾಸಗಾರರು ಶಿವಾಜಿಯನ್ನು ಕುರಿತು ಬರೆದಿದ್ದುದನ್ನೋದಿ ತಮ್ಮ ಆತ್ಮಕಥೆಯಲ್ಲಿ ಅದೇ ರೂಪದಲ್ಲಿ ಶಿವಾಜಿಯ ಬಗ್ಗೆ ಬರೆದುದಾಗಿ ನೆಹರೂ ಅವರು ಹೇಳಿದರು. ನಿಜವಾದ ಸಂಗತಿಗಳು ತಿಳಿದುಬಂದ ಮೇಲೆ ಆತ್ಮಕಥೆಯ ಮುಂದಿನ ಆವೃತ್ತಿಗಳಲ್ಲಿ ಅದನ್ನು ಅವರು ತಿದ್ದಿಕೊಂಡರು.

ಅಂತೂ ನೆಹರೂ ಅವರ ವಿಚಾರದಲ್ಲಿ ಪರಿವರ್ತನೆಯಾಯಿತು. ಪ್ರತಾಪಗಡದ ಉಚ್ಚ ಶಿಖರದಲ್ಲಿ ಶಿವಾಜಿಯ ಭವ್ಯ ಮೂರ್ತಿಯನ್ನು ಉದ್ಘಾಟಿಸುತ್ತ ಅವರು, " ಶಿವಾಜಿ ಕೇವಲ ಮಹಾರಾಷ್ಟ್ರದವರಲ್ಲ, ಇಡೀ ಭಾರತದವರು " ಎಂದರು.

(ಈ ಲೇಖದ ಆರಂಭದಲ್ಲಿರುವ ಶಿವಾಜಿಯ ಅಶ್ವಾರೂಢ ಚಿತ್ರ ಪ್ರತಾಪಗಡದಲ್ಲಿ ಉದ್ಘಾಟಿಸಿದ ಮೂರ್ತಿಯ ಅನುಕೃತಿಯಾಗಿದೆ.)

ಸ್ವಪ್ನ ಚಮತ್ಕಾರ

ಜ. ಬಿ. ರ್‍ಯಾನ್.

ಕಾಲದ ಪರಿಮಿತಿಯನ್ನು ದಾಟಿ ಮನುಷ್ಯನ ಮನಸ್ಸು ಮುಂದಾಗುವದನ್ನು ಸರಿಯಾಗಿ ಹೇಳಬಲ್ಲುದಾದರೆ ಅದು ಮನುಷ್ಯ ಮತ್ತು ವಿಶ್ವದ ಬಗ್ಗೆ ಇರುವ ಕಲ್ಪನೆಯನ್ನೆ ಬದಲಾಯಿಸೀತು. ಆದರೆ ಇಂಥ ಶಕ್ತಿಯಿದೆಯೆ? ಹೀಗೆ ಭವಿಷ್ಯ ಹೇಳುವುದು ನಿಜವಾಗಿಯೂ ಸಾಧ್ಯವೇ?

ಇಂಥದೊಂದು ಶಕ್ತಿ ಇರಬಹುದು ಎಂಬುದಕ್ಕೆ ಮೊದಲನೆಯ ಸೂಚನೆಯಾಗಿ ಮುಂದಾಗುವದರ ಕನಸು ಕಂಡ ಅನೇಕರ ಉದಾಹರಣೆಗಳನ್ನು ಹೇಳಬಹುದು.

೧೮೬೫, ಎಪ್ರಿಲ್ ತಿಂಗಳಲ್ಲಿ ಒಂದು ರಾತ್ರಿ ಅಮೇರಿಕೆಯ ಅಧ್ಯಕ್ಷ ಅಬ್ರಹಾಮ ಲಿಂಕನ್ನರು ತಮ್ಮ ಸಾವಿನ ಕನಸನ್ನು ಕಂಡರು. ಮುಂದೆ ಕೆಲವೇ ದಿನಗಳಲ್ಲಿ ಅವರ ಕೊಲೆಯಾಯಿತು.

ತಮ್ಮ ಚರಿತ್ರಕಾರ ಲಾರ್ಡ ಲಾಮನ್ನರಿಗೆ ಲಿಂಕನ್ನರು ಈ ಸ್ವಪ್ನದ ವಿಚಾರವನ್ನು ಕುರಿತು ಹೀಗೆ ಹೇಳಿದ್ದರು: "ನಾನು ಶ್ವೇತಭವನದಲ್ಲಿ ಕೋಣೆಯಿಂದ ಕೋಣೆಗೆ ಅಲೆಯುತ್ತಿದ್ದೆ. ಎಲ್ಲ ಕೋಣೆಗಳೂ ಖಾಲಿಯಾಗಿದ್ದವು. ಆದರೆ ಎಲ್ಲಿಂದಲೋ ಅಳುವ ಧ್ವನಿ ಕೇಳಿಸುತ್ತಿತ್ತು. ಪೂರ್ವ ದಿಕ್ಕಿನ ಕೋಣೆಗೆ ಬಂದಾಗ ಅಲ್ಲಿ ದುಃಖಿಸುತ್ತಿದ್ದ ಅನೇಕರನ್ನು ಕಂಡೆ. ಕೋಣೆಯ ಮಧ್ಯದಲ್ಲಿ ಒಂದು ಶವ ಪೆಟ್ಟಿಗೆಯಿತ್ತು. "ಯಾರು ಸತ್ತಿರುವರು?" ಎಂದು ಕೇಳಿದೆ. "ಅಧ್ಯಕ್ಷರು" ಎಂದು ಯಾರೋ ಉತ್ತರವಿತ್ತರು. "ಕೊಲೆಗಡುಕನೊಬ್ಬ ಅವರನ್ನು ಕೊಂದ," ಎಂದವರು ಹೇಳಿದರು. ಈ ಕನಸು ಕಂಡ ಕೆಲ ದಿನಗಳಲ್ಲಿಯೆ ಅದೇ ರೀತಿಯಲ್ಲಿ ಲಿಂಕನ್ನರ ಕೊಲೆಯಾಯಿತು.

ಅರಸು ಕ್ರೋಸಸನಿಗೆ ತನ್ನ ಮಗ ಎಥಿಸ್ ಕೊಲೆ ಮಾಡಲ್ಪಟ್ಟಂತೆ ಕನಸು ಬಿದ್ದ ಉಲ್ಲೇಖ ಇತಿಹಾಸದಲ್ಲಿ ದೊರೆಯುತ್ತದೆ. ಈ ಕನಸು ಬಿದ್ದ ಕೆಲದಿನಗಳ ನಂತರ ತನ್ನ ಸ್ವಪ್ನದಿಂದ ಅಂಜಿಕೊಂಡಿದ್ದ ಅರಸು ಯಾವನನ್ನು ತನ್ನ ಮಗನ ರಕ್ಷಣೆಗೆಂದು ನಿಯಮಿಸಿದ್ದನೋ ಆತನೇ ಎಥಿಸನ ಕೊಲೆ ಮಾಡಿದನು. ಜೂಲಿಯಸ್ ಸೀಜರನ ಹೆಂಡತಿಗೆ ಆತನ ಕೊಲೆಯಾದಂತೆ ಸ್ವಪ್ನವಾದ ನಂತರ ಜೂಲಿಯಸ್ ಸೀಜರನ ಕೊಲೆಯಾದದ್ದನ್ನು ಪ್ಲುಟಾರ್ಕ ಹೇಳಿದ್ದಾನೆ.

ಆದರೆ ಇಂಥ ಮಾತುಗಳನ್ನು ಸುಲಭದಲ್ಲಿ ನಂಬದ ಚಿಕಿತ್ಸಕಬುದ್ಧಿಯವರಿಗೆ ಇಂಥ ಸ್ವಪ್ನದ ವಿಚಾರಗಳನ್ನು ಹೇಳಿದರೆ ಸಾಲುವದಿಲ್ಲ. ಅವರಿಗೆ ಇನ್ನೂ ಬಲವಾದ ಆಧಾರಗಳನ್ನು ಕೊಡಬೇಕಾಗುತ್ತದೆ.

ಡಾ. ವಾಲ್ಟರ ಫ್ರಾಂಕ್ಲಿನ ಪ್ರಿನ್ಸ್‌ರಿಗೆ ಬಂದ ಅನುಭವವು ನನ್ನನ್ನು ಈ ವಿಷಯವನ್ನು ಶಾಸ್ತ್ರೀಯ ದೃಷ್ಟಿಯಲ್ಲಿ ನೋಡುವಂತೆ ಪ್ರೇರೇಪಿಸಿತು. ಒಂದು ದಿನ ರಾತ್ರಿ ಡಾ. ಪ್ರಿನ್ಸರಿಗೆ ಭಯಾನಕ ಸ್ವಪ್ನವೊಂದು ಬಿತ್ತು. ಒಂದು ಸುರಂಗ ದ್ವಾರದಲ್ಲಿ ಎರಡು ಪ್ಯಾಸೆಂಜರ ರೇಲ್ವೆ ಗಾಡಿಗಳು ಢಿಕ್ಕಿಹೊಡೆದಂತೆ ಅವರಿಗೆ ಸ್ವಪ್ನದಲ್ಲಿ ಕಂಡಿತು. ನಿದ್ದೆಯಲ್ಲಿ ಅವರು ನರಳಿದ್ದನ್ನು ಕೇಳಿ ಎಚ್ಚತ್ತ ಅವರ ಹೆಂಡತಿ "ಏನಾಯಿತು?" ಎಂದು ಕೇಳಲು ಅವರು ಡಬ್ಬಿಗಳು ಪುಡಿಪುಡಿಯಾಗಿ ಬಿದ್ದದ್ದನ್ನು ತಾವು ಕಂಡೆವೆಂದೂ ಜನರ

ಆರ್ತನಾದ ಕಿವಿಗೆ ಬಿದ್ದಿತೆಂದೂ ಹೇಳಿದರು. ಕೆಳಗೆ ಸಿಕ್ಕ ಜನರನ್ನು ಪಾರು ಮಾಡುವ ಕಾರ್ಯ ನಡೆದಿದ್ದಾಗ ಹೊಗೆ ಮತ್ತು ಉರಿಯೆದ್ದಿತೆಂದೂ ಆರ್ತನಾದ ಇನ್ನಿಷ್ಟು ಕರುಣಾಜನಕವಾಯಿತೆಂದೂ ಡಾ. ಪ್ರಿನ್ಸ್ ತಮ್ಮ ಪತ್ನಿಗೆ ತಮ್ಮ ಸ್ವಪ್ನದ ಸಮಾಚಾರವನ್ನು ವಿವರಿಸಿದರು.

ಮುಂದೆ ಕೆಲವೇ ತಾಸುಗಳಲ್ಲಿ ಅಲ್ಲಿಂದ ಸುಮಾರು ೭೦ ಮೈಲು ದೂರದಲ್ಲಿ ಡಾ. ಪ್ರಿನ್ಸರು ಸ್ವಪ್ನದಲ್ಲಿ ಕಂಡಂಥ ರೈಲು ಅಘಘಾತ ಸಂಭವಿಸಿತು.

ಕೆಲವರಿಗೆ ತಮಗೇ ಸಂಬಂಧಿಸಿದ ವಿಚಾರವಾಗಿ ಸ್ವಪ್ನಗಳು ಬೀಳುವವು. ಭವಿಷ್ಯತ್ತಿನ ಸೂಚನೆಯ ಸ್ವಪ್ನಗಳಲ್ಲಿ ಇಂಥ ಸ್ವಪ್ನಗಳೇ ಹೆಚ್ಚು ಅರ್ಥವಾಗಬಲ್ಲವು. ನನಗೆ ಪರಿಚಿತರಾದ ಶಿಕ್ಷಕರೊಬ್ಬರಿಗೆ ಅವರಿಗೇ ಸಂಬಂಧಪಟ್ಟ ಸ್ವಪ್ನವೊಂದು ಬಿದ್ದಿತ್ತು. ಅವರು ಮರುದಿನ ಸಮೀಪದ ಊರಿನಲ್ಲಿ ಇರುವ ತಮ್ಮ ಪ್ರೇಯಸಿಯನ್ನು ಕಾಣಲು ಹೋಗತಕ್ಕವರಿದ್ದರು. ಆದರೆ ರಾತ್ರಿಯಲ್ಲಿ ಅವರಿಗೆ ತಾವೊಂದು ಅಪಘಾತದಲ್ಲಿ ಸಿಕ್ಕಿದ್ದಾಗಿಯೂ ರೇಲ್ವೆ ಡಬ್ಬಿಯಲ್ಲಿದ್ದ ಅಗ್ಗಿಷ್ಟಿಕೆ ಉರುಳಿ ತಮ್ಮ ಮೇಲೆ ಬಿದ್ದು ತಮಗೆ ಗಾಯವಾದಂತೆಯೂ ಸ್ವಪ್ನ ಬಿದ್ದಿತು. ಅವರು ಅದರಿಂದ ಆತಂಕಗೊಂಡು ಮರುದಿನದ ಪ್ರಯಾಣವನ್ನು ರದ್ದುಗೊಳಿಸಿದರು. ಮರುದಿನ ಅವರು ಹೋಗಲಿದ್ದ ರೇಲ್ವೆಗೆ ಅಪಘಾತ ಸಂಭವಿಸಿತು ಮಾತ್ರವಲ್ಲ, ಒಂದು ಡಬ್ಬಿಯಲ್ಲಿದ್ದ ಅಗ್ಗಿಷ್ಟಿಕೆ ಉರುಳಿ ಬಿದ್ದು ಒಬ್ಬನಿಗೆ ಗಾಯವೂ ಆಯಿತು.

ಭವಿಷ್ಯತ್ತಿನ ಬಗ್ಗೆ ಬೀಳುವ ಸ್ವಪ್ನಗಳಲ್ಲಿ ಕೆಲವು ತಪ್ಪುಗಳೂ ಕಾಣಬಹುದು. ಆದರೆ ಈ ತಪ್ಪುಗಳಿಗೂ ಒಂದು ವಿಶಿಷ್ಟ ಮಹತ್ವವಿರುವದು ಕಾಣಿಸುತ್ತದೆ. ಅಮೇರಿಕೆಯ ನ್ಯಾಯಾಧೀಶರೊಬ್ಬರಿಗೆ ಒಮ್ಮೆ ತಾವು ಕ್ಯಾಥೊಲಿಕ್ ಚರ್ಚ ಒಂದರಲ್ಲಿ ದಫನವಿಧಿಯೊಂದರಲ್ಲಿ ಭಾಗವಹಿಸಿದಂತೆ ಸ್ವಪ್ನ ಬಿತ್ತು. ಅಲ್ಲಿಯ ಪಾದ್ರಿ ಈ ಈ ನ್ಯಾಯಾಧೀಶರೆಡೆ ಬೊಟ್ಟು ಮಾಡಿ ತೋರಿಸಿ "೩೧ ದಿನಗಳು" ಎಂದ. ಶವದ ಪೆಟ್ಟಿಗೆಯಲ್ಲಿ ಆಗಿನ್ನೂ ಜೀವಂತವಿದ್ದ ಅಧ್ಯಕ್ಷ ರೂಜವೆಲ್ಟರ ಶವ ನ್ಯಾಯಾಧೀಶರಿಗೆ ಕಂಡಿತು.

ನ್ಯಾಯಾಧೀಶರು ಈ ಸ್ವಪ್ನ ವಿಚಾರವನ್ನು ಹೆಚ್ಚು ಕಡಿಮೆ ಮರೆತಾಗ ಸ್ವಪ್ನ ಬಿದ್ದ ಸರಿಯಾಗಿ ೩೧ ದಿನಗಳಿಗೆ ಅವರಿಗೆ ಕ್ಯಾಥೊಲಿಕ್ ಆಸ್ಪತ್ರಿಯೊಂದರಿಂದ ಕರೆ ಬಂತು. ಅಲ್ಲಿ ಹೃದಯ ವಿಕಾರದಿಂದ ಬೇನೆ ಬಿದ್ದಿದ್ದ ಅವರ ತಾಯಿಯನ್ನು ಕರತಂದಿದ್ದರು. ಅವಳು ಅಲ್ಲಿ ಸತ್ತಳು. ನ್ಯಾಯಾಧೀಶರು ಸ್ವಪ್ನದಲ್ಲಿ ಕಂಡ ಪಾದ್ರಿಯ ಮುಖ ಅವರ ತಾಯಿಯ ಶುಶ್ರೂಷೆ ಮಾಡುತ್ತಿದ್ದ ದಾಯಿಯದಾಗಿತ್ತು.

ಬಹುಶಃ ತಮ್ಮ ಮನಸ್ಸು ಆಘಾತ ಸಹಿಸಿಕೊಳ್ಳುವ ಉದ್ದೇಶದಿಂದ ತನ್ನ ತಾಯಿಯ ಬದಲು ಸ್ವಪ್ನದಲ್ಲಿ ರೂಜವೆಲ್ಟರ ಮುಖವನ್ನು ತೋರಿಸಿತ್ತು ಎಂದು ನ್ಯಾಯಾಧೀಶರು ಈ ವಿಷಯವನ್ನು ವಿವರಿಸಿದರು. ಆದರೆ ಹೇಳಿದ ಅವಧಿ, ಶವಸಂಸ್ಕಾರ, ಕ್ಯಾಥೊಲಿಕ್ ಚರ್ಚ, ಬದಲಾದರೂ ಗುರುತು ಸಿಕ್ಕ ಮುಖ ಇತ್ಯಾದಿಗಳೆಲ್ಲ ಸ್ವಪ್ನದ ವಿಚಿತ್ರತೆಯಲ್ಲೂ ಒಂದು ಸತ್ಯವನ್ನು ಸೂಚಿಸಿತ್ತು.

ಭವಿಷ್ಯತ್ತನ್ನು ಸೂಚಿಸುವ ಸ್ವಪ್ನಗಳಲ್ಲಿ ಅನೇಕ ಸ್ವಪ್ನಗಳು ಆಗುಲಿರುವದರ ಯಥಾರ್ಥ ಚಿತ್ರವನ್ನು ತೋರಿಸುತ್ತವೆ.

ಜೆ. ಜ. ಎಂಬ ತರುಣನೊಬ್ಬ ಒಂದು ಸ್ವಪ್ನವನ್ನು ಕಂಡ. ಪ್ರಖರ ಪ್ರಕಾಶವಿದ್ದ ಒಂದು ಕೋಣೆಯಲ್ಲಿ ಒಂದು ಮೇಜಿನ ಮೇಲೆ ತರುಣನೊಬ್ಬ ಕಾಲು ಮಡಿಚಿ ಮಲಗಿಕೊಂಡಂತೆಯೂ ಅವನ ಮೇಲೆ ಬಿಳಿಯ ಚಾದರ ಹೊದಿಸಿದ್ದಂತೆಯೂ ಮುಖ ಮಾತ್ರ ಕಾಣುತ್ತಿತ್ತೆಂದೂ ಆದರೆ ಅದು ವಿಕಾರವಾಗಿ ಗುರುತಿಸಲು ಬಾರದಂತೆ ಇತ್ತೆಂದೂ ತನ್ನ ಸ್ವಪ್ನವನ್ನು ಕುರಿತು ಆತ ಹೆಂಡತಿಗೆ ಹೇಳಿದ.

ಮರುದಿನ ಅವನನ್ನು ಒಂದು ಆಸ್ಪತ್ರಿಯವರು ಕರಸಿದರು. ಅವನ ಕಕ್ಕನಿಗೆ ಅಪಘಾತವಾಗಿತ್ತು. ಆಪರೇಶನ್ ಕೋಣೆಗೆ ಹೋದಾಗ ಆತನಿಗೆ ಸ್ವಪ್ನದಲ್ಲಿ ಕಂಡ ದೃಶ್ಯದ ಯಥಾರ್ಥ ಪ್ರತಿ ಕಂಡುಬಂತು. ಸ್ವಪ್ನದಲ್ಲಿ ಕಂಡಂತೆಯೇ ಆ ಕೋಣೆಯಿತ್ತು. ಪ್ರಖರ ಪ್ರಕಾಶವಿತ್ತು.

ಮೇಜಿನ ಮೇಲೆ ಮಲಗಿಸಿದವನಿಗೆ ಮುಖವನ್ನು ಮಾತ್ರ ಬಿಟ್ಟು ಉಳಿದಿಡೀ ದೇಹವನ್ನು ಮುಚ್ಚುವಂತೆ ಬಿಳಿಯ ಚಾದರ ಹೊದಿಸಿದ್ದರು. ಮುಖ ಅಪಘಾತದಿಂದ ವಿಕಾರವಾಗಿ ಗುರುತಿಸಲು ಬಾರದಂತಿತ್ತು.

ಅಮೇರಿಕದ ಅತಿಮಾನಸ ಸಂಶೋಧನ ಸಂಸ್ಥೆಯವರು ಎರಡು ಸ್ವಪ್ನಗಳನ್ನು ಬರೆದಿಟ್ಟಿದ್ದಾರೆ.

ಕುದುರೆ ಶರ್ಯತ್ತಿನಲ್ಲಿ ಎಳ್ಳಷ್ಟೂ ಆಸ್ಥೆ ಇಲ್ಲದ, ಜೂಗಾರಾಡುವವನ್ನು ದ್ವೇಷಿಸುತ್ತಿದ್ದ ವಿಲಿಯಂ ಡಲ್‌ವಿಚ್ ಎಂಬವನಿಗೆ ೧೯೩೩' ಮೇ ೩೧ ರ ಕುದುರೆಶರ್ಯತ್ತಿನಲ್ಲಿ ಗೆದ್ದ ನಾಲ್ಕು ಕುದುರೆಗಳ ಬಗ್ಗೆ ಮುನ್ನಾದಿನ ಸ್ವಪ್ನ ಬಿತ್ತು. ಅವನು ಈ ವಿಚಾರವನ್ನು ತನ್ನ ಸ್ನೇಹಿತರೆದುರು ಹೇಳಿದನು. ಮರುದಿನ ಕುದುರೆ ಶರ್ಯತ್ತಿನ ಪರಿಣಾಮ ಪ್ರಕಟವಾದಾಗ ನಿಜವಾಗಿಯೂ ಅವನಿಗೆ ಸ್ವಪ್ನದಲ್ಲಿ ಕಾಣಿಸಿದ ಕುದುರೆಗಳೇ ಗೆದ್ದಿದ್ದವು.

ಇನ್ನೊಂದು ಸ್ವಪ್ನ ಗ್ಲಡಿಸ್ ಕ್ಲಾರ್ಕ ಎಂಬವಳಿಗೆ ಬಿದ್ದಿತ್ತು. ಅವಳಿಗೆ ತನ್ನ ಸ್ನೇಹಿತರಲ್ಲಿಗೆ ತಾನು ಹೋದ ಹಾಗೆಯೂ ತನ್ನನ್ನವರು ಕಾರಿನ ಬದಲು ಕುದುರೆ ಗಾಡಿಯಲ್ಲಿ ಕರೆದೊಯ್ದಂತೆಯೂ ರಸ್ತೆಯಲ್ಲಿ ಬಹಳಷ್ಟು ಹಣವಿದ್ದ ಒಂದು ಚೀಲ ಸಿಕ್ಕಂತೆಯೂ ಸ್ವಪ್ನ ಬಿತ್ತು. ಮುಂದೆ ಎರಡು ವಾರಗಳ ನಂತರ ಅವಳು ತನ್ನ ಸ್ನೇಹಿತರ ಊರಾದ ವರ್ಥಿಂಗಕ್ಕೆ ಹೋದಾಗ ಎಲ್ಲವೂ ಸ್ವಪ್ನದಲ್ಲಿಯಂತೆಯೇ ಜರುಗಿತು. ಹಣದ ಚೀಲವೂ ಸಿಕ್ಕಿತು.

ಇಂಥ ಸ್ವಪ್ನಗಳ ವಿಚಾರದಲ್ಲಿ ವಿಜ್ಞಾನ ಏನು ಮಾಡಬಲ್ಲದು? ಅವೇನು ಎಂದು ಸಂಶೋಧನೆ ನಡೆಸಿ ಸಾಧ್ಯವಾದರೆ ಅವುಗಳ ಹಿಂದಿರುವ ತತ್ತ್ವ ಯಾವದು ಎಂದು ಕಂಡುಹಿಡಿಯುವದೇ ಅಲ್ಲವೆ?

ಇಲ್ಲಿ ಮೊದಲು ಮಾಡಬೇಕಾದದ್ದೆಂದರೆ ಸಾಧ್ಯವಿದ್ದಷ್ಟು ಹೆಚ್ಚು ಮಾಹಿತಿಯನ್ನು ಕಲೆ ಹಾಕುವದು. ನನ್ನ ಹೆಂಡತಿ ಡಾ. ಲುಯಿಸಾರ್ಯಾನ್ ಈಗ ಸುಮಾರು ಇಂಥ ೪೦೦೦ ಸ್ವಪ್ನಗಳ ಮಾಹಿತಿಯನ್ನು ಕಲೆಹಾಕಿದ್ದಾಳೆ.

ಸ್ವಪ್ನ ವಿಚಾರಗಳಂತೂ ಸರಿ. ಜಾಗ್ರತಾವಸ್ಥೆಯಲ್ಲಿ ಕೂಡ ಇಂಥ ಅನುಭವಗಳು ಬರುವವೆಂದು ನನ್ನ ಹೆಂಡತಿ ನಡೆಸಿದ ಅಭ್ಯಾಸಗಳಿಂದ ಕಂಡುಬಂದಿದೆ. ಅದಕ್ಕೆ ಒಂದು ಉದಾಹರಣೆಯಾಗಿ ಒಬ್ಬರಿಗೆ ಬಂದ ಅನುಭವ ಇಲ್ಲಿ ಹೇಳಿದೆ:

"ನಾನು ನನ್ನ ಸ್ನೇಹಿತರು ಮತ್ತು ಅವರ ಇಬ್ಬರು ಚಿಕ್ಕ ಮಕ್ಕಳೊಡನೆ ಕುದುರೆ ಪ್ರದರ್ಶನಕ್ಕೆ ಹೋಗಿದ್ದೆ. ನಮ್ಮ ಕಾರನ್ನು ನಿಲ್ಲಿಸಿ ಎಲ್ಲರೂ ಒತ್ತಟ್ಟಿಗೆ ಕಲೆಯಲೆಂದು ನಿಂತಿದ್ದಾಗ ನನ್ನ ಮನಸ್ಸಿನಲ್ಲಿ ಒಂದು ಚಿತ್ರ ಮಿಂಚಿತು. ಒಂದು ಕರೀ ಕಾರು ಅಕಸ್ಮಾತ್ತಾಗಿ ಬಂದಂತೆಯೂ ಆ ಹುಡುಗರಲ್ಲಿ ಚಿಕ್ಕವನಿಗೆ ಅದರ ಬಲಗಾಲಿ ಬಡಿದಂತೆಯೂ ನನಗೆ ಕಂಡಿತು. ಮೂರು ತಾಸುಗಳ ನಂತರ ಪ್ರದರ್ಶನ ನೋಡಿಕೊಂಡು ತಿರುಗಿ ಬರುತ್ತಿದ್ದಾಗ ಆ ಚಿಕ್ಕ ಹುಡುಗ ನಮಗಿಂತ ಮುಂದೆ ಓಡಿದ. ನಾನವನನ್ನು ಕೂಗುವದರೊಳಗಾಗಿ ಕರೀ ಕಾರೊಂದು ಭರ್ರನೆ ಬಂತು. ಅದರ ಬಲಗಾಲಿ ಆ ಹುಡುಗನಿಗೆ ಬಡಿಯಿತು. ಸುದೈವದಿಂದ ಹುಡುಗನಿಗೆ ಅಂಥ ವಿಶೇಷ ಪೆಟ್ಟಾಗಲಿಲ್ಲ."

ಕೆಲವರಿಗೆ ಮುಂದೊದಗಲಿರುವ ಅನಾಹುತದ ಅಸ್ಪಷ್ಟ ಕಲ್ಪನೆ ಮೂಡಿ ಅವರು ಅಸ್ವಸ್ಥರಾಗುವದುಂಟು. ಮನಸ್ಸು ನಿಷ್ಕಾರಣವಾಗಿ ಖಿನ್ನವಾಗುತ್ತದೆ. ಕಾರಣ ಹೇಳುವದು ಅಸಾಧ್ಯವಾಗುತ್ತದೆ.

ಅಮೇರಿಕೆಯ ಸೈನ್ಯಾಧಿಕಾರಿಯೊಬ್ಬ ಹೆಂಡತಿಯೊಡನೆ ಕಾರಿನಲ್ಲಿ ಹೋಗುತ್ತಿದ್ದಾಗ ಅವಳು ಒಮ್ಮೆಲೆ ಅವನ ಕೈಹಿಡಿದು, "ನಮ್ಮ ಮಗಳಿಗೆ ಏನೋ ಆಗಿದೆ. ಅವಳೊಂದು ಅಪಘಾತದಲ್ಲಿ ಸಿಕ್ಕಿದ್ದಾಳೆ" ಎಂದು ನಡುಗುತ್ತ ಹೇಳಿದಳು. ಮನೆಗೆ ಬಂದೊಡನೆ ಅವರಿಗೆ ಮಗಳ ಅಪಘಾತದ ಸುದ್ದಿ ಸಿಕ್ಕಿತು. ತಾಯಿ ಗಾಬರಿಗೊಂಡ ಕ್ಷಣದಲ್ಲೇ ಆ ಅಪಘಾತ ಸಂಭವಿಸಿತ್ತು.

ಈ ಉದಾಹರಣೆಗಳಲ್ಲಿ ಮನಸ್ಸು ವಿಚಿತ್ರ ಶಕ್ತಿಯನ್ನು ತೋರಿಸಿದ್ದು ಕಾಣುವದು. ಅಂತರದ ಕಟ್ಟನ್ನು ಮೀರುವ ಮನಸ್ಸು ಸಮಯದ ಕಟ್ಟನ್ನೂ ಲೆಕ್ಕಿಸುವದಿಲ್ಲವೆಂದು ಇಲ್ಲಿ ವಿಜ್ಞಾನಿಗಳು ಗಮನಿಸಬೇಕು.

ಈ ಬಗೆಯ ಅನುಭವ ಕಥನಗಳಲ್ಲಿ ಎಷ್ಟರ ಮಟ್ಟಿಗೆ ನಾವು ನಂಬಿಗೆಯಿಡಬಹುದು ಎಂಬುದು ಒಂದು ಪ್ರಶ್ನೆ. ಇಂಥ ಸಂಗತಿಗಳ ಅಭ್ಯಾಸ ಮಾಡುವದರಿಂದ ಏನನ್ನಾದರೂ ಸಿದ್ಧಮಾಡಲು ಬಂದೀತೇ?

ಅಮೇರಿಕೆ ಮತ್ತು ಯುರೋಪಗಳಲ್ಲಿ ದೀರ್ಘ ಕಾಲ ನಡೆಸಿದ ಸಂಶೋಧನೆಗಳಿಂದ ಕೆಲವು ವ್ಯಕ್ತಿಗಳಿಗಾದರೂ ಇಂಥದೊಂದು ಶಕ್ತಿಯಿರುತ್ತದೆ ಎಂದು ಕಂಡುಬಂದಿದೆ. ಪ್ರಯೋಗಗಳ ಯಶಸ್ಸಿಗೆ ಕಾಲ ಮತ್ತು ಅಂತರದ ಸಂಬಂಧ ವಿರಲಿಲ್ಲವೆಂದೂ ಗೊತ್ತಾಯಿತು. ದೂರದ ಸ್ಥಳಕ್ಕೆ ಮತ್ತು ಭವಿಷ್ಯತ್ ಘಟನೆಗಳ ಬಗ್ಗೆ ಸಂಭವಿಸಿದ ಪ್ರಯೋಗಗಳು ಸದ್ಯದ ಹಾಗೂ ಸಮೀಪದ ಘಟನೆಗಳ ಬಗ್ಗೆ ನಡೆಸಿದ ಪ್ರಯೋಗಗಳಷ್ಟೇ ಯಶಸ್ವಿಯಾಗಿವೆ.

ಇಂದ್ರಿಯಾತೀತ ಪ್ರಜ್ಞೆ ಮನುಷ್ಯನಲ್ಲಿರುತ್ತದೆ ಎಂದು ಈಗ ಹೇಳಬಹುದಾಗಿದೆ. ಅದರ ಶಕ್ತಿ ಮತ್ತು ಪರಿಮಿತಿಗಳು ಬಹುಶಃ ನಮ್ಮ ಸದ್ಯದ ಜ್ಞಾನದ ಅಳವನ್ನು ಮೀರಿರಲೂ ಬಹುದು.

ಸ್ತ್ರೀ-ಗೋಳ!

ಸ್ತ್ರೀಯರು,
೧೭ ರಿಂದ ೨೫ ವರ್ಷ ವಯಸ್ಸಿನ ವರೆಗೆ
ಆಫ್ರಿಕಾ ಖಂಡದ ಹಾಗೆ,
ಕೆಲಭಾಗ ಶೋಧಿಸಲ್ಪಟ್ಟಿದ್ದರೆ ಮತ್ತೆ ಕೆಲಭಾಗ ಇನ್ನೂ ಅಜ್ಞಾತವಾಗಿರುವರು;
೨೫ ರಿಂದ ೩೫ ರ ವರೆಗೆ
ಅಮೇರಿಕಾ ಖಂಡದ ಹಾಗೆ,
ಸೌಮ್ಯ ಹಾಗೂ ಉಚ್ಚ ಭಾವನಾದರ್ಶಕ ಸ್ವರಭಾರವುಳ್ಳವರಾಗಿರುವರು;
೩೫ ರಿಂದ ೪೫ ರ ವರೆಗೆ
ಏಶಿಯಾ ಖಂಡದ ಹಾಗೆ,
ರಹಸ್ಯ ಮತ್ತು ಗೂಢತೆಯಿಂದೊಡಗೂಡಿರುವರು;
೪೫ ರಿಂದ ೫೫ರ ವರೆಗೆ
ಯುರೋಪು ಖಂಡದ ಹಾಗೆ,
ಪಾಳು ಬಿದ್ದಿದ್ದರೂ ಕೆಲವೆಡೆ ಆಸಕ್ತಿ ಕೆರಳಿಸುವಂತಿರುವರು;
೫೫ ರಿಂದ ಮೇಲ್ಪಟ್ಟು
ಆಸ್ಟ್ರೇಲಿಯ ಖಂಡದ ಹಾಗೆ,
ಅದೆಲ್ಲಿದೆಯೆಂದು ಪ್ರತಿಯೊಬ್ಬರಿಗೂ ತಿಳಿದಿದ್ದರೂ ಬಹಳ ಕೊಂಚ ಮಂದಿ ಅಲ್ಲಿ
ಹೋಗಲು ಇಷ್ಟಪಡುವರು.

ಸಿ. ಎಸ್. ಪಟ್ಟಾಭಿರಾಮಯ್ಯ.

ಹಾಗೆ ಕೇಳಿದರೆ ಮುತ್ತೆಂಬುದು ಒಂದು ಚಿಕ್ಕ ಗೋರಿ !

ಮುತ್ತಿನ ಕಥೆ

ಸಿ. ಎಸ್. ಪಟ್ಟಾಭಿರಾಮಯ್ಯ

ಮುತ್ತು ನವರತ್ನಗಳಲ್ಲೊಂದಾದರೂ ಇತರ ರತ್ನಗಳಂತೆ ಗಣಿಗಳಲ್ಲಿ ಸಿಗುವುದಿಲ್ಲ. ಸಮುದ್ರದಲ್ಲಿಯೂ ನದಿಗಳಲ್ಲಿಯೂ ವಾಸವಾಗಿರುವ ಕೆಲ ಜೀವಿಗಳಿಂದ ಅದು ದೊರೆಯುವುದು. ಈ ಜೀವಿಯ ಶರೀರ ಬಹಳ ಮೃದುವಾಗಿದ್ದು ಗಡುಸಾದ ಚಿಪ್ಪಿನಿಂದ ಆವೃತವಾಗಿದೆ. ಈ ವರ್ಗದ-ಅಂದರೆ ಚಿಪ್ಪಿನ-ಜೀವಿಗಳು ಹಲವಿದ್ದರೂ ಮುತ್ತುಗಳನ್ನು ಕೊಡುವುದು ಒಂದೇ ಜಾತಿ. ಇಂಗ್ಲೀಷಿನಲ್ಲಿ " ಪರ್ಲ್ ಆಯ್ಸ್ಟರ್ " ಎಂದು ಕರೆಯುವ ಮುತ್ತಿನ ಶುಕ್ತಿಜೀವಿ (ಬೆಳಚು)ಯ ಮೈಯಲ್ಲಿ ಎಲುಬೇ ಇಲ್ಲ. ಬದಲಿಗೆ ದೇಹ ರಕ್ಷಣೆಗೆ ಚಿಪ್ಪಿನ ಕವಚವಿರುತ್ತದೆ. ಸಾಮಾನ್ಯವಾಗಿ ಇಬ್ಭಾಗವಾಗಿದ್ದು ಪೆಟ್ಟಿಗೆಯಂತೆ ತೆರೆದು ಮುಚ್ಚಲು ಬರುವ ಈ ಚಿಪ್ಪನ್ನು ಈ ಬೆಳಚು ನೀರಲ್ಲಿರುವಾಗ ಸ್ವಲ್ಪ ತೆರೆದಿಟ್ಟು ಒಳಗೆ ಬಂದ ನೀರಿನಿಂದ ಪ್ರಾಣವಾಯುವನ್ನು ಹೀರಿ ಜೀವಿಸುತ್ತದೆ; ಆಹಾರಕ್ಕಾಗಿ ಸಮುದ್ರದ ಸಣ್ಣ ಕ್ರಿಮಿ-ಕೀಟಗಳನ್ನು ತಿನ್ನುತ್ತದೆ.



ಸಿಂಹಳದ ಮುತ್ತಿನ ಚಿಪ್ಪು — ಶಂಖಾಕಾರದ ಮುತ್ತಿನ ಚಿಪ್ಪು — ಕಪ್ಪು ಮುತ್ತಿನ ಚಿಪ್ಪು

ಮುತ್ತಿನ ಬೆಳಚು ಮುತ್ತನ್ನು ತಯಾರಿಸುವ ರೀತಿ ನಿಸರ್ಗದ ಮೋಜುಗಳಲ್ಲಿ ಒಂದಾಗಿದೆ. ಮನುಷ್ಯನಿಂದಾರಂಭಿಸಿ ಇಲಿಯ ವರೆಗೆ ಎಲ್ಲ ತರದ ಪ್ರಾಣಿಗಳ ಮೈಮೇಲೆ ಆ ಪ್ರಾಣಿಗಳ ಸತ್ವವನ್ನು ಶೋಷಿಸಿ ತಾವು ಬದುಕುವ ನಾನಾ ತರದ ಪರೋಪಜೀವಿ ಸೂಕ್ಷ್ಮ ಜಂತುಗಳಿವೆ. ಮುತ್ತಿನ ಬೆಳಚಿನ ಮೃದುವಾದ ಶರೀರದಿಂದ ಅದರ ಸತ್ವವನ್ನು ಹೀರಿ ಜೀವಿಸುವ ಪರೋಪಜೀವಿಗಳೂ ಇವೆ. ಅವು ಆ ಹುಳದ ಮೈಯಲ್ಲಿ ಸೇರಿಕೊಂಡು ಅದಕ್ಕೆ ಹಿಂಸೆಯನ್ನುಂಟುಮಾಡುತ್ತವೆ. ಆಗ ಮುತ್ತಿನ ಬೆಳಚು ತನ್ನ ಮೈಯಲ್ಲಿ ಒಂದು ತರದ ಧೃತಿ - ಅಥವಾ ಅಂಟು - ತಯಾರಿಸಿ ತನ್ನ ಶತ್ರುವಿನ ಮೈಯ ಸುತ್ತಲೂ ಲೇಪಿಸುತ್ತದೆ. ಗೋಡೆಗೆ ವರ್ಷ-ವರ್ಷವೂ ಸುಣ್ಣ ಬಳಿದಾಗ ಒಂದೊಂದೇ ಪದರು ಹೆಚ್ಚಾಗುವಂತೆ ಆ ಸೂಕ್ಷ್ಮ ಜಂತುವಿನ ಮೈಮೇಲೆ ಲೇಪಗಳ ಪದರುಗಳು ಏರುತ್ತ ದೊಡ್ಡ ಮುತ್ತಾಗಿ ಮಾರ್ಪಡುವುವು. ಹೀಗೆ ತಯಾರಾದ ಮುತ್ತು ಮುತ್ತಿನ ಬೆಳಚಿನ ಮೈಗೇ ಅಂಟಿಕೊಂಡಿದ್ದರೆ ಗುಂಡಾಗಿ ಇಲ್ಲವೆ ಅಂಡಾಕಾರವಾಗಿರುತ್ತದೆ; ಚಿಪ್ಪಿಗೆ ಅಂಟಿಕೊಂಡಿದ್ದಲ್ಲಿ ಒಂದು ಕಡೆ ಚಪ್ಪಟೆಯಾಗಿರುತ್ತದೆ. ಈ ಪ್ರಕಾರ ನಾವು ಅಮೂಲ್ಯ ರತ್ನವೆಂದು ಭಾವಿಸಿದ "ಮುಕ್ತಾಫಲ"ವು ಒಂದು ಕ್ಷುದ್ರ ಜಂತುವಿನ ಸಜೀವ ಗೋರಿಯಲ್ಲದೆ ಮತ್ತೇನೂ ಅಲ್ಲ. ಈ ಗೋರಿಯಲ್ಲಿ ಸುಣ್ಣದ ಅಂಶವೇ ಜಾಸ್ತಿ.

ಪರೋಪಜೀವಿ ಜಂತುವೇ ಮುತ್ತಿನ ಜನನಕ್ಕೆ ಕಾರಣವಾದರೂ ಕೆಲವೇಳೆ ಮಳಲ ಕಣ, ಮರದ ಪುಡಿ ಮುಂತಾದವುಗಳು ಮುತ್ತಿನ ಬೆಳಚಿನ ಮೈಯನ್ನು ಸೇರಿದಾಗಲೂ ಅವುಗಳ ಮೇಲೆ ಇದೇ ತರದಲ್ಲಿ ಮುತ್ತಿನ ರಸದ ಲೇಪವಾಗಿ ಮುತ್ತಾಗುವುದುಂಟು. ಈ ರಹಸ್ಯವನ್ನರಿತು ಚೀನಜಪಾನುಗಳಲ್ಲಿ ಒಂದು ದೊಡ್ಡ ಮುತ್ತಿನ ಉದ್ಯೋಗವೇ ಹುಟ್ಟಿಕೊಂಡಿದೆ. ಅಲ್ಲಿನ ಜನರು ಮುತ್ತಿನ ಬೆಳಚುಗಳನ್ನು ಸಾಕಿ ಅವುಗಳಿಂದ ಮುತ್ತಿನ ಲೇಪ ಹೊಂದಿದ ಬುದ್ಧವಿಗ್ರಹಗಳನ್ನು ಮಾಡಿಸುತ್ತಾರೆ! ಅವರು ಇದಕ್ಕೆ ಒಂದು ಉಪಾಯ ಕಂಡುಹಿಡಿದಿದ್ದಾರೆ. ಮುತ್ತಿನ ಚಿಪ್ಪುಗಳ ಬಾಯನ್ನು ತುಸು ತೆರೆದು ಅದರೊಳಗೆ ಸೀಸದ ಅಥವಾ ತವರದ ಪುಟ್ಟ ಬುದ್ಧವಿಗ್ರಹಗಳನ್ನು ತುರುಕಿ ಚಿಪ್ಪನ್ನು ಮಡುವಿನಲ್ಲಿ ಹಾಕಿಡುತ್ತಾರೆ. ಅದರಿಂದ ನೊಂದ ಮುತ್ತಿನ ಬೆಳಚು ಮುತ್ತಿನ ರಸವನ್ನು ಸ್ರವಿಸಿ ವಿಗ್ರಹದ ಸುತ್ತಲೂ ಅದನ್ನು ಲೇಪಿಸುತ್ತದೆ. ಎರಡು ಮೂರು ವರ್ಷಗಳ ನಂತರ ಚಿಪ್ಪನ್ನು ಮೇಲೆ ತೆಗೆದು ಒಳಗಿದ್ದ ಜೀವಿಯನ್ನು ತಿಂದು ಥಳಥಳಿಸುವ ವಿಗ್ರಹವನ್ನು ಅಪಾರ ಬೆಲೆಗೆ ಮಾರುತ್ತಾರೆ. ಇದೇ ಪ್ರಕಾರ ಮುತ್ತಿನ ಚಿಪ್ಪನ್ನು ಬಿಡಿಸಿ ಒಳಗೆ ಚಿಕ್ಕ ಚಿಕ್ಕ ಮಣ್ಣಿನ ಉಂಡೆ, ಮರ, ಎಲುಬು, ಹಿತ್ತಾಳೆ ಪುಡಿ ಮೊದಲಾದವನ್ನು ಸೇರಿಸಿ ಅದರಿಂದ ಆ ಜೀವಿಯನ್ನು ಕೃತಕವಾಗಿ ಉತ್ತೇಜಿತಗೊಳಿಸುವ ಮೂಲಕ ಒಳಗೆ ಮುತ್ತು ಹುಟ್ಟುವಂತೆ ಮಾಡುತ್ತಾರೆ. ಇಂಥ "ಕಲ್ಚರ್" ಮುತ್ತಿನ ದೊಡ್ಡ ಉದ್ದಿಮೆಯೇ ಜಪಾನದಲ್ಲಿದೆ.

ಎಳೆಯ ಬೆಳಚು ತಾಯಿಯನ್ನು ಬಿಟ್ಟು ಹೊರಬಂದಾಗ ನೀರಿನ ಪೊರೆಯಂತೆ ಬಹಳ ಸೂಕ್ಷ್ಮವಾಗಿರುತ್ತದೆ. ನೀರಿನ ಮೇಲೆ ತೇಲುತ್ತ ದಿನದಿನಕ್ಕೆ ಬೆಳೆದು ಗಾತ್ರದಲ್ಲಿಯೂ ತೂಕದಲ್ಲೂ ಹೆಚ್ಚಿ ಅದು ನೀರಲ್ಲಿ ಮುಳುಗಿ ಸಮುದ್ರ ತಳದಲ್ಲಿ ಒಂದು ಕಲ್ಲಿಗೋ ಬಂಡೆಗೋ ತಗಲಿಕೊಂಡು ನಿಲ್ಲುವುದು. ಅಲ್ಲಿಯೇ ಅದು ತನ್ನ ಚಿಪ್ಪಿನ ಮನೆ ಬಾಗಿಲನ್ನು ತುಸು ತೆರೆದು ನೀರಿನಿಂದ ಗಾಳಿ ಮತ್ತು ಆಹಾರವನ್ನು ಪಡೆಯುವುದು.

ಭಾರತದಲ್ಲಿ ಮನ್ನಾರ್ ಕೊಲ್ಲಿಯಲ್ಲಿ (ಮದ್ರಾಸ್) ಶತಮಾನಗಳಿಂದ ಮುತ್ತನ್ನು ತೆಗೆಯುತ್ತಿದ್ದಾರೆ. ಇರಾಣಿ ಕೊಲ್ಲಿ (Persian Gulf) ಯಲ್ಲಿ ಉತ್ತಮ ಮುತ್ತು ಸಿಗುತ್ತದೆ. ಇದಲ್ಲದೆ ಪೆಸಿಫಿಕ್ ಸಾಗರದ ಅನೇಕ

ಪ್ರದೇಶಗಳು, ಮಧ್ಯ ಅಮೇರಿಕದ ಪಶ್ಚಿಮ ತೀರ, ಆಸ್ಟ್ರೇಲಿಯದ ಪಶ್ಚಿಮ ತೀರ, ಸಿಂಹಳ, ಬ್ರಿಟನ್, ಜರ್ಮನಿ, ಅಮೇರಿಕದ ಸಂಯುಕ್ತ ಸಂಸ್ಥಾನ, ಚೀನ, ಜಪಾನುಗಳಲ್ಲಿಯೂ ಮುತ್ತು ಲಭ್ಯವಾಗುತ್ತದೆ. ಕರ್ನಾಟಕದಲ್ಲಿ ಪುತ್ತೂರಿನ ಶೈವ ದೇವಾಲಯದ ಎದುರಿಗಿರುವ ದೊಡ್ಡ ಪುಷ್ಕರಿಣಿಯಲ್ಲಿ ಮುತ್ತಿನ ಚಿಪ್ಪುಗಳು ಇವೆಯೆಂದು ಪ್ರತೀತಿ ಇದೆ. ಆದರೆ ಅವುಗಳನ್ನು ತೆಗೆಯಲು ಭಕ್ತರು ಅವಕಾಶವೀಯುವುದಿಲ್ಲ.

ಮುತ್ತುಗಳನ್ನು ತೆಗೆಯುವುದು ಅಪಾಯಕರವಾದ ವೃತ್ತಿ. ಮದ್ರಾಸ್ ರಾಜ್ಯದ ತೂತುಕುಡಿಯ ಬಳಿ ಮುತ್ತು ತೆಗೆಯುವ ಋತುವಿನಲ್ಲಿ ಪುರಾತನದಿಂದ ನಡೆದುಬಂದ ಮುತ್ತು ತೆಗೆಯುವ ಪದ್ಧತಿಯನ್ನು ಕಾಣಬಹುದು. ವಲ್ಲಂ ಎಂಬ ದೋಣಿಗಳು ಸೂರ್ಯೋದಯಕ್ಕೆ ದಡದಿಂದ ಹೊರಟು ಮುತ್ತಿನ ಚಿಪ್ಪುಗಳಿರುವ ಸಮುದ್ರ ಭಾಗವನ್ನು ತಲಪುತ್ತವೆ. ಆ ಮೇಲೆ ೬೦೦-೭೦೦ ಸಾಹಸಿಗಳಾದ ಮುಳುಗುಗಾರರು ದೋಣಿಗಳಿಂದ ಸಮುದ್ರದಲ್ಲಿ ಧುಮುಕುತ್ತಾರೆ. ಅವರು ಉಸಿರುಗಟ್ಟಿ ತಳವನ್ನು ಸೇರಿ ಕೈಗೆ ಬಂದಷ್ಟು ಚಿಪ್ಪುಗಳನ್ನು ಬಾಚಿ ಟೊಂಕಕ್ಕೆ ಕಟ್ಟಿಕೊಂಡ ಚೀಲಗಳಲ್ಲಿ ತುಂಬಿಕೊಂಡು ಮೇಲೆ ಬಂದು ದೋಣಿಗಳಲ್ಲಿ ಚೀಲಗಳನ್ನು ಬರಿದು ಮಾಡುತ್ತಾರೆ. ಐದು ನಿಮಿಷ ಕಾಲ ಹಾಯೆಂದು ವಿಶ್ರಾಂತಿ ತೆಗೆದುಕೊಂಡು ಪುನಃ ಧುಮುಕುತ್ತಾರೆ ದಿನವೂ ಈ ರೀತಿ ಮೂರು ನಾಲ್ಕು ತಾಸು ನಡೆಯುತ್ತದೆ.

ಭಾರತ ಮತ್ತು ಸಿಂಹಳದಲ್ಲಿ ಇನ್ನೂ ಈ ಪ್ರಾಚೀನ ಪದ್ಧತಿಯಲ್ಲೇ ಮುತ್ತು ಕೂಡಿಸುವುದು ನಡೆದಿದೆ. ಆದರೆ ಇರಾಣಿ ಕೊಲ್ಲಿ ಮೊದಲಾದೆಡೆಗಳಲ್ಲಿ ಆಧುನಿಕ ಉಪಕರಣಗಳನ್ನು ಮುಳುಗುಗಾರರು ಉಪಯೋಗಿಸುತ್ತಾರೆ. ಆದರೂ ಸಾಗರದ ಭೀಕರ ಆಕ್ಟೋಪಸ್, ತಿಮಿಂಗಲ ಮೊದಲಾದ ಪ್ರಾಣಿಗಳಿಂದ ಮುಳುಗುಗಾರರ ಜೀವ ಅಪಾಯದಲ್ಲೇ ಇರುತ್ತದೆ.

ಮುತ್ತಿನ ಚಿಪ್ಪುಗಳನ್ನು ದಡಕ್ಕೆ ತಂದ ಮೇಲೆ ಚಿಪ್ಪುಗಳನ್ನು ತೆರೆದು ಒಳಗೆ ಮುತ್ತುಗಳಿವೆಯೋ ಎಂದು ಹುಡುಕುವರು. ಚಿಪ್ಪುಗಳು ಬಹಳ ಇದ್ದರೆ ಅವುಗಳನ್ನು ಒಂದು ತೊಟ್ಟಿಯಲ್ಲಿ ಹಾಕಿ ಎಂಟು ಹತ್ತು ದಿನ ಕೊಳೆಯಬಿಡುತ್ತಾರೆ. ತೊಟ್ಟಿಯಿಂದ ಹೊರಬರುವ ನೀರಿನಲ್ಲಿ ಮುತ್ತುಗಳಿರುವುದರಿಂದ ಅದನ್ನು ಬೇರೊಂದು ಗುಂಡಿಗೆ ಹರಿಯಬಿಟ್ಟು ಅದರಲ್ಲಿ ಹುಡುಕಿ ಮುತ್ತುಗಳನ್ನು ಆರಿಸುವರು. ಕೊಳೆತ ಮೇಲೆ ಚಿಪ್ಪುಗಳನ್ನೂ ಇತರ ಕಶ್ಮಲಗಳನ್ನೂ ತೆಗೆದು ಹಾಕಿ ಮಿಕ್ಕದ್ದನ್ನು ಕಪ್ಪು ಒಟಾರಗಳ ಮೇಲೆ ಒಣಹಾಕುವರು. ಇದರ ದುರ್ಗಂಧ ಸಮುದ್ರ ತೀರದಲ್ಲಿ ಒಣಹಾಕಿದ ಮೀನುಗಳ ದುರ್ಗಂಧಕ್ಕಿಂತ ಇಮ್ಮಡಿಯಾಗಿರುವುದು. ಇವುಗಳಲ್ಲಿ ಉಳಿದಿರಬಹುದಾದ ಮುತ್ತುಗಳನ್ನು ಜೋಕೆಯಿಂದ ಆರಿಸುವರು. ಆ ಮೇಲೆ ಮುತ್ತುಗಳನ್ನು ಗಾತ್ರಕ್ಕನುಗುಣವಾಗಿ ವಿಂಗಡಿಸಿ ರಂಧ್ರಗಳನ್ನು ಮಾಡಿ ದಾರದಲ್ಲಿ ಪೋಣಿಸುವರು.

ಕಾಂತಿಯಲ್ಲಿಯೂ ಆಕಾರದಲ್ಲಿಯೂ ಇರಾಣಿ ಕೊಲ್ಲಿ, ಸಿಂಹಳಗಳಲ್ಲಿ ದೊರೆಯುವ ಮುತ್ತುಗಳಿಗೆ ಸಮಾನವಾದವು ಬೇರೆಡೆ ಇಲ್ಲ. ಸಿಂಹಳದ ಮುತ್ತಿನ ಬೆಳಚುಗಳು ಎಂಟು ವರ್ಷಗಳಿಗಿಂತ ಹೆಚ್ಚುಕಾಲ ಬದುಕುವುದಿಲ್ಲ. ಭಾರತದ ತೀರದ ಮುತ್ತಿನ ಬೆಳಚುಗಳ ಆಯುಷ್ಯ ೩-೩॥ ವರ್ಷವೆಂದು ತಿಳಿದಿದೆ. ಅಷ್ಟರೊಳಗೆ ಅವುಗಳನ್ನು ಮೇಲೆತ್ತದಿದ್ದರೆ ಅವು ಸಾಯುವ ಸಂಭವ ಹೆಚ್ಚು. ಮೂರು ವರ್ಷ ವಯಸ್ಸಿನ ಚಿಪ್ಪಿನೊಳಗೆ ಮುತ್ತು ಬೆಳೆಯಲಾರಂಭಿಸುತ್ತದೆ.

ಗುಂಡಾದ ಮುತ್ತು ಅಂಡಾಕಾರದ ಮುತ್ತುಗಳಲ್ಲದೆ ಚಿತ್ರವಿಚಿತ್ರಾಕಾರದ ಮುತ್ತುಗಳೂ ಸಿಕ್ಕಿವೆ. ಮೀನಿನ ಆಕೃತಿಯ ಮುತ್ತೊಂದು

ಸಿಕ್ಕಿದ ಉದಾಹರಣೆ ಇದೆ. ಚಿಕ್ಕ ಮೀನು ಚಿಪ್ಪಿನೊಳಗೆ ಹೋಗಿ ಸಿಕ್ಕಿಬಿದ್ದುದರಿಂದ ಹೀಗಾಗಿರಬಹುದು. ಅಮೇರಿಕದ ಒಂದು ಮುತ್ತು ಕಲಾವಿದ ಮೈಕಲೆಂಜೆಲೋನನ್ನು ಹೋಲುವುದಂತೆ; ಆಸ್ಟ್ರೇಲಿಯದ ಇನ್ನೊಂದು ಮುತ್ತು ಎರಡಂಗುಲ ಉದ್ದವಾಗಿದ್ದು ಮಾನವನ ರುಂಡದಾಕೃತಿಯಾಗಿದೆಯಂತೆ. ಅವಳಿ ಮುತ್ತುಗಳೂ ಸಿಗುವುದುಂಟು. ಆಸ್ಟ್ರೇಲಿಯದಲ್ಲಿ ಸಿಕ್ಕಿದ ಒಂದು ಮುತ್ತಿನ ಸಾಲಂತೂ ಒಂಭತ್ತು ಮುತ್ತುಗಳನ್ನು ಒಂದಕ್ಕೊಂದು ಬೆಸೆದಂತಿದ್ದು ಒಟ್ಟಿಗೆ ಶಿಲುಬೆಯ ಆಕಾರವಾಗಿದೆ. ಇದರ ಬೆಲೆ ರೂ. ೧,೫೦,೦೦೦.

ಮೊದಲೇ ಹೇಳಿದಂತೆ ಮುತ್ತು ಸುಣ್ಣದ ಜಾತಿಯ ಪದಾರ್ಥದಿಂದಾದದ್ದು. ಶ್ರೀಮಂತರು ಸಣ್ಣ ಮುತ್ತುಗಳನ್ನು ಸುಟ್ಟು ಸುಣ್ಣ ಮಾಡಿ ತಾಂಬೂಲಕ್ಕೆ ಉಪಯೋಗಿಸುತ್ತಾರೆ. ಭಾರತದಲ್ಲಿ ವೈದ್ಯರು ಮೌಕ್ತಿಕ ಭಸ್ಮವನ್ನು ಔಷಧಕ್ಕೆ ಉಪಯೋಗಿಸುವರು. ಆದರೆ ಮುತ್ತಿನ ಉಪಯೋಗ ಮುಖ್ಯವಾಗಿ ಸ್ತ್ರೀಯರ ಆಭರಣಗಳಲ್ಲಿ. ಸಣ್ಣ ಮುತ್ತುಗಳನ್ನು ಕಸೂತಿ ಕೆಲಸದಲ್ಲೂ ಉಪಯೋಗಿಸುತ್ತಾರೆ. ಬಡೋದೆಯ ಮಹಾರಾಜರ ಮನೆಯಲ್ಲಿ ಮುತ್ತುಗಳನ್ನು ಸೇರಿಸಿ ನೇಯ್ದ ಜಮಖಾನೆಗಳಿವೆ.

ಪ್ರಪಂಚದ ಅತಿ ಶ್ರೇಷ್ಠ ಮುತ್ತೊಂದು ಭಾರತದ್ದು. ಅದೀಗ ಮಾಸ್ಕೋ ನಗರದ ಮ್ಯೂಜಿಯಂನಲ್ಲಿದೆ. ಆಕಾರ ಗುಂಡು. ಅಸಮಾನ ಕಾಂತಿ. ತೂಕ ೨೮ ಕ್ಯಾರಟ್ (ಸುಮಾರು ಅರ್ಧ ತೊಲೆ) ಗಾತ್ರದಲ್ಲಿ ಅತಿ ದೊಡ್ಡದಾದ ಮುತ್ತು ಲಂಡನ್ನಿನ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಜಿಯಂನಲ್ಲಿದೆ. ಅದರ ಆಕಾರ ಮಾತ್ರ ಸೊಟ್ಟಗೆ. ಕಾಂತಿಯುಕ್ತವಾದ ಈ ಮೌಕ್ತಿಕದ ಸುತ್ತಳತೆ ೪॥ ಅಂಗುಲ ಮತ್ತು ತೂಕ ೭॥ ತೊಲೆ. ಇದಕ್ಕೆ ರತ್ನಖಚಿತವಾದ ಅಪರಂಜಿ ಕುಂದನವಿಟ್ಟು ಅಮೂಲ್ಯವಾದ ಪದಕವನ್ನು ಮಾಡಿದ್ದಾರೆ.

ಉತ್ತಮ ಮುತ್ತಿನ ಕ್ಯಾರಟ್ ಒಂದರ ಬೆಲೆ ರೂ. ೮೦ ಬರುತ್ತದೆ. ಅಂದರೆ ತೊಲೆಗೆ ರೂ. ೫,೦೦೦ವಾಯಿತು. ಇಜಿಪ್ತದ ಕ್ಲಿಯೊಪಾತ್ರಾ ರಾಣಿ ೧೨ ಲಕ್ಷ ಬೆಲೆಯ ಮುತ್ತೊಂದನ್ನು ಪುಡಿ ಮಾಡಿ ಪಾನೀಯದೊಡನೆ ಕುಡಿದಳೆಂದು ಕಥೆ ಇದೆ. ೧೬೩೩ ರಲ್ಲಿ ಇರಾಣ ದೇಶದ ಅಧಿಪತಿಯು ಒಬ್ಬ ಅರಬನಿಂದ ರೂ. ೧,೫೦,೦೦೦ ಬೆಲೆ ಕೊಟ್ಟು ಒಂದು ಮುತ್ತು ಕೊಂಡನಂತೆ. ನ್ಯೂಯಾರ್ಕಿನ ಒಬ್ಬ ವರ್ತಕನು ೮೦ ಸಾವಿರ ಬೆಲೆಗೆ ಒಂದು ಲಕ್ಷಣವಾದ ಕಪ್ಪು ಮುತ್ತನ್ನು ಕೊಂಡನು.

ಆಕಾರದಲ್ಲಿ ಸೊಟ್ಟಗಿರುವ ಮುತ್ತುಗಳನ್ನು ಸಾಣೆ ಹಿಡಿದು ಗುಂಡಗೆ ಮಾಡಿ ಮುತ್ತಿನ ಪುಡಿಯಿಂದ ಉಜ್ಜಿ ನಯ ಮಾಡುವರು.

ಸಾಮಾನ್ಯವಾಗಿ ಮುತ್ತುಗಳೆಲ್ಲ ಬೆಳ್ಳಗಿನವು. ಆದರೆ ವೆಸ್ಟ್ ಇಂಡೀಸ್ ದ್ವೀಪದ ಬಳಿ ದೊರೆಯುವ ಶಂಖಾಕೃತಿಯ ಮುತ್ತಿನ ಚಿಪ್ಪುಗಳಲ್ಲಿ ಎಳೆಗೆಂಪು ಛಾಯೆಯ ಮುತ್ತುಗಳು ದೊರೆಯುತ್ತವೆ. ಮತ್ತೆ ಕೆಲ ಜಾತಿಯ ಜೀವಿಗಳು ಕಪ್ಪು ಮುತ್ತನ್ನು ತಯಾರಿಸುವವು. (ಇವು ಮೆಕ್ಸಿಕೋ ಕೊಲ್ಲಿಯಲ್ಲಿ ಸಿಗುವವು). ನೀಲಿ, ಹಸರು, ಹಳದಿ ಮುತ್ತುಗಳೂ ಅಪರೂಪವಾಗಿ ಸಿಗುವುದುಂಟು.

ಮುತ್ತುಗಳನ್ನು ಮೈಮೇಲೆ ಧರಿಸದೆ ಬಹುಕಾಲ ತೆಗೆದಿಟ್ಟಲ್ಲಿ ಅವು ಕಳೆಗುಂದುತ್ತ ಹೋಗ್ಗುವವು. ಆದ್ದರಿಂದ ಮೌಕ್ತಿಕ ಪರೀಕ್ಷಕರು ಮುತ್ತಿನ ಸರವನ್ನು ಲಲನೆಯರು ಮೈಗೆ ಸೋಕುವಂತೆ ಧರಿಸಿಕೊಂಡಿರಬೇಕೆಂದು ಹೇಳುವರು. ಅಲೆಗ್ಝಾಂಡ್ರಿಯದ ರಾಣಿಯೊಬ್ಬಳಲ್ಲಿ ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಮುತ್ತಿನ ಸರಗಳಿದ್ದವು ಅವುಗಳಲ್ಲಿ ಒಂದು ಸರ ಕಳೆಗುಂದುತ್ತಿರುವುದನ್ನು ಕಂಡ ಅವಳು ರತ್ನಪರೀಕ್ಷಕರನ್ನು ಕರೆಸಿದಳು. ಅವರು ಸರವನ್ನು ಮೂರು ತಿಂಗಳ ಕಾಲ ಸಮುದ್ರದಲ್ಲಿ ಮುಳುಗಿಸಿಟ್ಟು ತೆಗೆದು ನೋಡಿದಾಗ ಮೊದಲಿನ ಕಾಂತಿ ಸಂಪೂರ್ಣವಾಗಿ

ಬಂದಿತ್ತು. ಕೆಲ ಸ್ತ್ರೀಯರಿಗೆ ಮುತ್ತನ್ನು ಧರಿಸಿದರೆ ಅನಾರೋಗ್ಯವಾಗುತ್ತದೆ. ಮತ್ತೆ ಕೆಲವರು ಮುತ್ತುಗಳನ್ನು ಧರಿಸಿದರೆ ಸೌಭಾಗ್ಯ ಬರುವುದೆಂದು ನಂಬುತ್ತಾರೆ.

ಮುತ್ತುಗಳನ್ನು ಎಲ್ಲರೂ ಬಯಸುವುದರಿಂದ ಕೃತಕ ಮುತ್ತುಗಳು ತಯಾರಾಗುತ್ತಿವೆ. ಮುತ್ತಿನ ಬಣ್ಣ, ಕಾಂತಿ, ಹೊಳಪು, ನೀರು ಇವೆಲ್ಲ ಬರುವಂತೆ ಕೃತಕ ಮುತ್ತು ತಯಾರಿಸುವ ಪರಿಶ್ರಮ ನಡೆದಿದೆ. ನಿಜವಾದ ಮುತ್ತಿಗೂ ಇದಕ್ಕೂ ವ್ಯತ್ಯಾಸವೇ ಕಾಣಿಸುವುದಿಲ್ಲ. ಇವನ್ನು ಕಾಜಿನಿಂದ ತಯಾರಿಸುತ್ತಾರೆ. ಕಾಜಿನ ಮಣಿಗಳಿಗೆ ಮುತ್ತಿನ ಬಣ್ಣ ಬರಲು ಒಂದು ಜಾತಿಯ ಮೀನಿನ ಮೈತೊಗಲಿನ ಕಣಗಳನ್ನಾಗಲಿ ತವರದ ಲವಣಗಳ ಹೊಗೆಗೆ ಹಿಡಿದ ಅಭ್ರಕದ ಪುಡಿಗಳನ್ನಾಗಲಿ ತಕ್ಕಂತೆ ಧೃತಿಯಲ್ಲಿ ಬೆರಸಿ ಕಾಜಿನ ಗುಂಡಿನೊಳಗೆ ಹೊಯ್ದು ಆರಿಸಿ ಅದರ ರಂಧ್ರಕ್ಕೆ ಮೇಣ ತುಂಬಿ ಮುಚ್ಚಿಬಿಡುವರು. ಜನರನ್ನು ಠಕ್ಕಿಸಲು ನಿಜಮುತ್ತಿನಂತೆ ಅದನ್ನು ತುಸು ಓರೆಕೋರೆಯಾಗಿಯೂ ಮಾಡುವುದುಂಟು.

ಮುತ್ತಿನ ಚಿಪ್ಪುಗಳೂ ಉಪಯೋಗಕ್ಕೆ ಬರುವವು. ಚಿಪ್ಪುಗಳಿಗೆ ಕೀಲು ಹಾಕಿ ಹಣದ ಪೆಟ್ಟಿಗೆ ಮಾಡುವುದುಂಟು. ಚಾಕುಗಳ ಹಿಡಿಕೆ, ತಟ್ಟೆ, ಆಟದ ಸಾಮಾನು ಮೊದಲಾದವುಗಳನ್ನು ನಿರ್ಮಿಸುವುದೂ ಉಂಟು.

ವರ್ಷದ ಕೆಲ ಋತುಗಳಲ್ಲಿ ಮುತ್ತಿನ ಚಿಪ್ಪುಗಳು ಸಮುದ್ರದ ಮೇಲೆ ಬಂದು ಬಾಯಿ ತೆರೆದಿರುತ್ತವೆಂದೂ ಆಗ ಸ್ವಾತಿ ಮಳೆಯ ಹನಿಗಳು ಅದರೊಳಗೆ ಬಿದ್ದರೆ ಮುತ್ತಾಗುತ್ತದೆಂದೂ ಹಿಂದೆ ಭಾವಿಸಿದ್ದರು. ಈ ಭಾವನೆ ಜಗತ್ತಿನ ಅನೇಕ ದೇಶಗಳಲ್ಲಿ ಬೇರೆ ಬೇರೆ ರೂಪದಲ್ಲಿ ಪ್ರಚಲಿತವಾಗಿದೆ. ಅದು ಮುತ್ತಿನ ಜೀವಿಯ ತತ್ತಿಯೆಂದು ಬೇರೆ ಕೆಲವರ ಹೇಳಿಕೆಯಿದೆ. ಈ ಊಹೆಗಳೆಲ್ಲವೂ ಸುಳ್ಳೆಂದು ಕಂಡುಹಿಡಿದು ಮುತ್ತು ಹುಟ್ಟುವ ನಿಜವಾದ ರೀತಿಯನ್ನು ಜಗತ್ತಿಗೆ ತೋರಿಸಿಕೊಟ್ಟವರು ಚೀನೀಯರು.

ವಿಜ್ಞಾನಿಗಳು ಮುತ್ತಿನ ರಚನೆಯ ಗುಟ್ಟನ್ನೆಲ್ಲ ರಾಸಾಯನಿಕ ವಿಶ್ಲೇಷಣದಿಂದ ಕಂಡುಹಿಡಿದಿದ್ದಾರೆ. ಆದರೆ ನಿಜವಾದ ಮುತ್ತಿನ ಸಕಲ ಗುಣಗಳಿಂದೊಡಗೂಡಿದ ಕೃತಕ ಮುತ್ತನ್ನು ತಯಾರಿಸಲು ಮಾತ್ರ ಅವರಿಂದಾಗಿಲ್ಲ. ಹೀಗಾಗಿ ಅಪ್ಪಟ ಮುತ್ತನ್ನು ತಯಾರಿಸುವ ಗುತ್ತಿಗೆ ಮುತ್ತಿನ ಬೆಳಚುಗಳದೇ ಉಳಿದಿದೆ.

ಮುತ್ತಿನ ಸಮಸ್ಯೆ

ಒಬ್ಬ ಸಾಹುಕಾರನು ಕೆಲವು ಮುತ್ತುಗಳನ್ನು ಗಳಿಸಿದ್ದನು. ಆತನು ತನ್ನ (೭) ಜನ ಮಕ್ಕಳಿಗೆ ಮುತ್ತುಗಳನ್ನು ಸರಿಯಾಗಿ ಹಂಚಿಕೊಳ್ಳಿರೆಂದು ಸಾಯುವ ವೇಳೆಗೆ ಹೇಳಿದನು. ಆತನ ಮರಣಾನಂತರ ಮೊದಲನೇ ಮಗ ಮತ್ತು ಎರಡನೇ ಮಗ ಇಬ್ಬರು ಕಲೆತು ಮುತ್ತುಗಳನ್ನು ಹಂಚಿಕೊಳ್ಳುತ್ತಿದ್ದಾಗ ಒಂದು ಮುತ್ತು ಹೆಚ್ಚಿಗೆ ಉಳಿಯಿತು. ಕಾರಣ ಅವರು ಮೂರನೇ ಮಗನನ್ನು ಸೇರಿಸಿಕೊಂಡರೂ ಅದೇ ಒಂದು ಮುತ್ತು ಹೆಚ್ಚಿಗೆ ಉಳಿಯಿತು. ಹೀಗೆಯೇ ಆರನೇ ಮಗನನ್ನು ಸೇರಿಸಿಕೊಂಡರೂ ಒಂದು ಮುತ್ತು ಹೆಚ್ಚಿಗೆ ಉಳಿಯಿತು. ಈಗ ಅವರೆಲ್ಲರೂ ಅಂದರೆ ಏಳು ಮಕ್ಕಳು ಕಲೆತು ಮುತ್ತುಗಳನ್ನು ಹಂಚಿಕೊಳ್ಳಲಾಗಿ ಅವರವರ ಪಾಲಿಗೆ ಸರಿಯಾಗಿ ಬಂದವು. ಈಗ ನೀವು ಹೇಳಿರಿ ಆ ಮುತ್ತುಗಳ ಸಂಖ್ಯೆ ಎಷ್ಟು?

ಉತ್ತರ

೩೦೧ ಮುತ್ತುಗಳು — ರಮೇಶ ಕಿರಣಗಿ

ಸಂಕಟಗ್ರಸ್ತ ಫ್ರಾನ್ಸಿನ ನಾಯಕನಾಗಿ ನೇಮಕಹೊಂದಿದ
ಡಿ ಗಾಲೆಯ ಸ್ವರೂಪದರ್ಶನ

"ನಾನೇ ಫ್ರಾನ್ಸ್" ಎಂದ ಧೀರ

೧೯೪೦ರ ಬೇಸಿಗೆಯಲ್ಲಿ ಫ್ರಾನ್ಸ್ ದೇಶ ಜರ್ಮನ್ ಮಿಲಿಟರಿ ಶಕ್ತಿಯ ಎದುರು ತತ್ತರಿಸಿ ಹಿಟ್ಲರನ ಕಾಲಡಿಯಲ್ಲಿ ಬಿದ್ದಾಗ ಹಿಂದೆ ಯಾರೂ ಕೇಳಿರದ ಗಂಭೀರ ದನಿಯೊಂದು ಲಂಡನ್ನಿನಿಂದ ರೇಡಿಯೋದಲ್ಲಿ ಫ್ರಾನ್ಸಿನ ಗತ ವೈಭವಗಳ ನೆನಪು ಕೊಟ್ಟು ಉದ್ಘೋಷಿಸಿತು: "ಫ್ರಾನ್ಸ್ ಒಂದು ಕಾಳಗದಲ್ಲಿ ಸೋತಿದೆ, ಆದರೆ ಅದು ಯುದ್ಧದಲ್ಲಿ ಸೋತಿಲ್ಲ!"

ಮತ್ತು ಇಡೀ ಫ್ರಾನ್ಸಿನ ದೇಶಭಕ್ತರು ಈ ಆವೇಶಪೂರ್ಣ ಅಪರಿಚಿತ ದನಿಯ ಸುತ್ತ ನೆರೆದರು. ಲಕ್ಷಾಂತರ ತರುಣ ಫ್ರೆಂಚರು ಜೀವವನ್ನು ಪಣವಿಟ್ಟು ಜರ್ಮನ್ ಆಕ್ರಮಿತ ಫ್ರಾನ್ಸಿನಿಂದ ಪಾರಾಗಿ ಬಂದು ಹೋರಾಡಲನುವಾದರು. "ಫ್ರಾನ್ಸ್ ಒಂದು ಕಾಳಗದಲ್ಲಿ ಸೋತಿದೆ ಹೊರತು ಯುದ್ಧದಲ್ಲಲ್ಲ!" ಎಂಬುದು ಫ್ರೆಂಚರ ರಣಮಂತ್ರವಾಯಿತು.



ಈ ದನಿ ಜನರಲ್ ಚಾರ್ಲ್ಸ್ ಡಿ ಗಾಲೆ ಎಂಬ ಅಜ್ಞಾತ ಫ್ರೆಂಚ್ ಸೇನಾಪತಿಯದಾಗಿತ್ತು. ಫ್ರಾನ್ಸಿನ ಸೇನಾಪತಿ ಮಂಡಲವು ದೇಶವನ್ನೂ ಅಭಿಮಾನವನ್ನೂ ಜರ್ಮನರ ಪದತಲದಲ್ಲಿ ಅರ್ಪಿಸುತ್ತಿದ್ದಾಗ ಈತ ಒಂದು ಚಿಕ್ಕ ವಿಮಾನದಲ್ಲಿ ಫ್ರಾನ್ಸಿನಿಂದ ಪಾರಾಗಿ ಇಂಗ್ಲಂಡಿಗೆ ಬಂದು ಫ್ರೆಂಚ್ ಜನತೆಯ ಹೋರಾಡುವ ನಿರ್ಧಾರವನ್ನು ಪ್ರಕಟಪಡಿಸಿದ್ದರು.

ಆ ಕ್ಷಣದಿಂದ ಅವರ ಹೆಸರ ಸುತ್ತ ಹಬ್ಬಿದ ಪ್ರಭಾವಲಯ ಇಂದಿಗೂ ಕಳೆಗುಂದಿಲ್ಲ. ಕಳೆದ ಹನ್ನೊಂದು ವರ್ಷದಿಂದ ಅವರು ರಾಜಕೀಯ ವನವಾಸದಲ್ಲಿದ್ದರು. ಈಗ ಮತ್ತೆ ಕಷ್ಟಕ್ಕೆ ಸಿಲುಕಿದ ಫ್ರಾನ್ಸು ಡಿ ಗಾಲೆಯನ್ನು ಮತ್ತೆ ನಾಯಕತ್ವಕ್ಕೆ ಕರೆದಿದೆ. ಫ್ರಾನ್ಸಿನ ರಾಜಕಾರಣಿಗಳು ಉಂಟುಮಾಡಿದ ಗಲಿಬಿಲಿಯಿಂದ ಫ್ರಾನ್ಸನ್ನು ಪುನಃ ಎತ್ತಲು ಅವರು ಬರಬೇಕಾಯಿತು.

ಡಿ ಗಾಲೆ ೧೯೪೦ರಲ್ಲಿ ಫ್ರೆಂಚರ ನಾಯಕತ್ವ ವಹಿಸಿದಾಗ ಅವರ ಬಗ್ಗೆ ವಿಶೇಷ ವಿವಾದಗಳಿದ್ದಿಲ್ಲ. ಆದರೆ ಇಂದು ಅವರ ಪುನರಾಗಮನವನ್ನು ದೇಶದೊಳಗೂ ಹೊರಗೂ ಶಂಕೆ-ಭೀತಿ-ಸಂತೋಷಗಳ ಮಿಶ್ರಭಾವದಿಂದಲೇ ಸ್ವಾಗತಿಸಲಾಗಿದೆ. ಫ್ರೆಂಚ ಪ್ರಜಾಸತ್ತಾವಾದಿಗಳು ಅವರನ್ನು ಸರ್ವಾಧಿಕಾರಿ ಮನೋವೃತ್ತಿಯವರು

ಎಂದು ಭಾವಿಸಿದ್ದಾರೆ. ಆರು ತಿಂಗಳ ವರೆಗೆ ಫ್ರೆಂಚ್ ಪಾರ್ಲಿಮೆಂಟು ಸೇರತಕ್ಕದ್ದಲ್ಲ, ತನಗೆ ಸಂಪೂರ್ಣ ಕ್ರಿಯಾಸ್ವಾತಂತ್ರ್ಯ ಕೊಡಬೇಕು ಎಂಬ ಕರಾರು ಹಾಕಿಯೇ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಕಮ್ಯುನಿಸ್ಟರು ಅವರು ಫ್ಯಾಸಿಸ್ಟ್ ಮನೋವೃತ್ತಿಯವರೆಂದು ದೂರು ತ್ತಾರೆ. ಆಂಗ್ಲೋ ಅಮೇರಿಕನ್ನರು ಈ ಹಟ ಮಾರಿ ಮನುಷ್ಯ ಫ್ರಾನ್ಸಿನ ಗತವೈಭವದ ಪುನ-ರುತ್ಥಾನದ ಹುಮ್ಮಸದಲ್ಲಿ ರಶಿಯದೊಡನೆ ಸಂಧಿ ಮಾಡಿಕೊಂಡು ತಮ್ಮ ನ್ಯಾಟೊ ಮಿಲಿಟರಿ ಯೋಜನೆಗೆ ಘಾತಮಾಡಬಹುದೆಂದು ಅಂಜಿ ದ್ದಾರೆ. ಏನೇ ಇರಲಿ, ಡಿ ಗಾಲೆ ಮಾಡುವ-ಬಿಡುವ ಸಂಗತಿಗಳ ಮೇಲೆ ಫ್ರಾನ್ಸಿನ—ಮತ್ತು ಕೆಲವುಟ್ಟಿಗೆ ಜಗತ್ತಿನ—ಹಣೆಬರಹ ಅವಲಂಬಿ ಸಿದೆ ಎಂಬುದಂತೂ ನಿಜವೆಂದು ತೋರುತ್ತದೆ.

ಫ್ರಾನ್ಸಿನ ಸಂಧಿಕಾಲದ ಈ ವಿವಾದಾಸ್ಪದ ನಾಯಕ ಲಿಲ್ ಎಂಬಲ್ಲಿ ೧೮೯೦ ರಲ್ಲಿ ಹುಟ್ಟಿ-ದರು. ಅವರ ತಂದೆ ಹೆನ್ರಿ ಡಿಗಾಲೆ ತತ್ತ್ವಜ್ಞಾನ ಮತ್ತು ಫ್ರೆಂಚ್ ಸಾಹಿತ್ಯದ ಪ್ರೊಫೆಸರರಾಗಿದ್ದರು. ನಿಷ್ಠಾವಂತ ಕೆಥೋಲಿಕ ಮನೆತನದಲ್ಲಿ ಹುಟ್ಟಿ-ಬೆಳೆದ ಅವರಿಗೆ ಧರ್ಮ ಮತ್ತು ಫ್ರಾನ್ಸ ದೇಶದ ವೈಭವ ಇವು ಅವಳಿಜವಳಿ ಜೀವನಧ್ಯೇಯ-ಗಳಾಗಿ ಚಿಕ್ಕಂದಿನಿಂದ ರೂಪುಗೊಂಡವು. ಹುಡುಗತನದಲ್ಲಿ ಪ್ಯಾರೀಸಿನಲ್ಲಿದ್ದಾಗ ನೋಟರ್ ಡೇಮ್, ವಿಜಯತೋರಣ (Arc de Triomphe), ನೆಪೋಲಿಯನ್ನನ ಗೋರಿ ಮೊದಲಾದ ಫ್ರೆಂಚ್ ವೈಭವಚಿನ್ಹಗಳನ್ನು ಕಂಡು ಅವರು ರೋಮಾಂಚಿತರಾಗುತ್ತಿದ್ದರು.

ಫ್ರಾನ್ಸಿನ ಭಾಗ್ಯ ಅಂದಿನಿಂದಲೂ ಡಿ ಗಾಲೆ ಯರ ಪ್ರಧಾನ ಚಿಂತನಾವಿಷಯವಾಗಿದೆ. "ಫ್ರಾನ್ಸಿನ ದೈವ—ಅದರ ಇತಿಹಾಸದ ರೂಪ ದಲ್ಲಿರಲಿ ರಾಜಕೀಯದ ಪಣವಾಗಿಯೇ ಇರಲಿ —ನನಗೆ ಎಲ್ಲಕ್ಕೂ ಪ್ರಿಯವಿಷಯವಾಗಿತ್ತು," ಎಂದವರು ಬರೆದಿದ್ದಾರೆ.

ಈ ಫ್ರಾನ್ಸಿನ ದೈವದಲ್ಲಿ ಹೇಗೋ ತಾನು ಪ್ರಧಾನ ಪಾತ್ರ ವಹಿಸಲಿದ್ದೇನೆ ಎಂಬೊಂದು "ಅಪರೋಕ್ಷಜ್ಞಾನ" ಆಗಲೇ ಅವರ ಹೃದಯದಲ್ಲಿ ಉದ್ಬೋಧಿತವಾಗಿತ್ತು. "ಫ್ರಾನ್ಸು ಒಂದು ದಿನ ನನ್ನನ್ನು ಮುಂದೆ ಕರೆಯಲಿದೆ" ಎಂದು ಅವರು ಮಿಲಿಟರಿ ವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿ ದ್ದಾಗ ಒಂದು ಪತ್ರದಲ್ಲಿ ಬರೆದಿದ್ದರು. ಅವರ ಜೀವನಸ್ಮೃತಿಗಳ ತುಂಬೆಲ್ಲ ಇದೇ ಸಂಗತಿ ಅನುಭವಿಕ ವಚನಗಳಂತೆ ಮರಳಿ ಮರಳಿ ಕಾಣಿ ಸುತ್ತದೆ. "ಫ್ರಾನ್ಸಿನ ವೈಭವ", "ಭಾಗ್ಯ ವಿಧಾತ", ಮಹಾ ಘಟನೆಗಳಲ್ಲಿ ಮಹಾಪಾತ್ರ ವಹಿಸುವ ತೀವ್ರ ಉತ್ಕಂಠೆ" ಎಂಬ ಪದಪುಂಜ ಗಳು ಬೇಕಷ್ಟು ದೊರಕುತ್ತವೆ. "ಭಾಗ್ಯದೇವತೆ ಯಾವಾಗಲೂ ತನ್ನನ್ನು ಕುರಿತು ಕನವರಿಸಿದವ ರಿಗೇ ಒಲಿಯುತ್ತಾಳೆ" ಎಂದು ಅವರು ಬರೆದಿ ದ್ದಾರೆ.

೬ ಅಡಿ ೬ ಇಂಚು ಎತ್ತರದ ಡಿಗಾಲೆಗೆ ಅವರ ಸಹಪಾಠಿಗಳು "ಮಹಾ ಅಸ್ಪರಾಗಸ್" ವೃಕ್ಷ ಎಂದು ಮಿಲಿಟರಿಶಾಲೆಯಲ್ಲಿ ಅಡ್ಡ ಹೆಸರಿಟ್ಟಿದ್ದರು. ವಿದ್ಯಾಲಯದಿಂದ ಹೊರಬಿದ್ದ ಮೇಲೆ ಮೊದ-ಲನೇ ಮಹಾಯುದ್ಧದ ವೀರರಲ್ಲೊಬ್ಬರಾಗಲಿದ್ದ ಮತ್ತು ಎರಡನೇ ಮಹಾಯುದ್ಧದಲ್ಲಿ ಫ್ರೆಂಚ್ ಶರಣಾಗತಿಗೆ ಕಾರಣನಾದ ಹೇಡಿಯೆನಿಸಲಿದ್ದ ಮಾರ್ಶಲ್ ಪಿಟೇನರ ಕೆಳಗೆ ಸೆಕೆಂಡ್ ಲೆಫ್ಟಿನೆಂಟಾಗಿ ನೇಮಕ ಹೊಂದಿದರು.

ಮೊದಲನೇ ಮಹಾಯುದ್ಧದಲ್ಲಿ ಡಿಗಾಲೆಯ ಶೌರ್ಯದ ಉಲ್ಲೇಖ ಮಿಲಿಟರಿ ವರದಿಗಳಲ್ಲಿ ಮೇಲಿಂದ ಮೇಲೆ ಕಾಣಿಸುತ್ತದೆ. ಕೊನೆಗೆ ಅವರು ರಣರಂಗದಲ್ಲಿ ತೀವ್ರ ಗಾಯಗೊಂಡು ಬಿದ್ದಿದ್ದಾಗ ಜರ್ಮನರ ಸೆರೆಯಾಳಾದರು, ಸೆರೆ ಯಿಂದ ಪಾರಾಗಲು ಐದು ಸಲ ಯತ್ನಿಸಿ ವಿಫಲ ರಾದ ಅವರು ಯುದ್ಧ ಕೊನೆಗೊಂಡ ಮೇಲೆಯೇ ಫ್ರಾನ್ಸಿಗೆ ಮರಳಿದ್ದು.

ಡಿ ಗಾಲೆ ಕೇವಲ ಮಿಲಿಟರಿ ಅಧಿಕಾರಿಯಾಗಿ ರದೆ ಮಿಲಿಟರಿ ಚಿಂತಕರೂ ಆಗಿದ್ದರು. ಅವರು ಸೈನಿಕ ವಿಚಾರಗಳಲ್ಲಿ ಅನೇಕ ಭಾಷಣಗ ಳನ್ನು ಮಾಡಿದರು, ಪುಸ್ತಕಗಳನ್ನು ಬರೆದರು. ಮಾರ್ಶಲ್ ಪಿಟೇನರು ಒಮ್ಮೆ ಅವರ ಪರಿಚಯ ಮಾಡಿಕೊಡುತ್ತ, "ಈತನ ಗುರುತಿರಲಿ, ಒಂದು

ದಿನ ಕೃತಜ್ಞತಾಭಾವದಿಂದ ಫ್ರಾನ್ಸು ಇವನನ್ನು ಕರೆಯಲಿದೆ” ಎಂದಿದ್ದರು. ಆದರೆ ಈ ಕರೆ ತಮ್ಮ ವಿರುದ್ಧವೇ ಬರಲಿದೆಯೆಂದು ಮಾತ್ರ ಭವಿಷ್ಯವಾದಿ ಪಿಟೇನರಿಗೆ ಆಗ ತಿಳಿದಿರಲಿಲ್ಲ.

ಅವರು ಆ ಸಮಯದಲ್ಲಿ ಬರೆದ ಒಂದು ಪುಸ್ತಕವನ್ನು ಉಲ್ಲೇಖಿಸಬೇಕು. ಭಾವಿ ಸೈನ್ಯಗಳ ಯಶಸ್ಸು ಅವುಗಳ ತ್ವರಿತ ಚಲನಶಕ್ತಿಯನ್ನೇ ಅವಲಂಬಿಸಿದೆಯೆಂದೂ, ಅದನ್ನು ಸಾಧಿಸುವ ಉಪಾಯಗಳೇನೆಂದೂ ಅದರಲ್ಲಿ ಅವರು ಚರ್ಚಿಸಿದ್ದರು. ಅದನ್ನು ಫ್ರೆಂಚ ಅಧಿಕಾರಿಗಳು ಓದಲಿಲ್ಲ. ಆದರೆ ಅದರ ಅನೇಕ ಪ್ರತಿಗಳು ಜರ್ಮನಿಯಲ್ಲಿ ಮಾರಾಟವಾದವು. ಮುಂದೆ ಫ್ರಾನ್ಸಿನ ೫೦,೦೦,೦೦೦ ಸೈನ್ಯವನ್ನು ೧೯೪೦ರಲ್ಲಿ ದಿಕ್ಕಾಪಾಲಾಗಿ ಓಡಿಸಿದ ಜರ್ಮನ್ ಪಾಂಜರ್ ದಲಗಳು ಡಿಗಾಲೆಯ ಪುಸ್ತಕದಲ್ಲಿದ್ದ ಮಿಲಿಟರಿ ವಿಚಾರಗಳನ್ನು ಬಹುಮಟ್ಟಿಗೆ ಅನುಸರಿಸಿದ್ದವೆಂಬುದನ್ನರಿತು ಫ್ರೆಂಚರು ಕೈತಿಕ್ಕಿಕೊಂಡರು.

ಎರಡನೇ ಮಹಾಯುದ್ಧದಲ್ಲಿ ಒಂದು ಟ್ಯಾಂಕ್ ಪಡೆಯ ನಾಯಕರಾಗಿ ಡಿಗಾಲೆಯವರು ಜರ್ಮನರ ವಿರುದ್ಧ ಕೆಲ ವಿಜಯಗಳನ್ನು ಪಡೆದು ಜನರಲ್ ಪದಕ್ಕೇರಿಸಲ್ಪಟ್ಟರು. ಆದರೆ ಮಾರ್ಶಲ್ ಪಿಟೇನರು ಜರ್ಮನರಿಗೆ ಫ್ರಾನ್ಸನ್ನು ಶರಣಾಗತಗೊಳಿಸಿದಾಗ ಡಿಗಾಲೆ ಸೋಲೊಪ್ಪಲು ಸಿದ್ಧರಾಗಲಿಲ್ಲ. ತಾವು ಭಾಗ್ಯವಿಧಾತನಾಗುವ ಕಾಲ ಬಂದಿದೆಯೆಂದು ಅವರಿಗೆ ಅನಿಸಿತು. ಅವರು ಏಕಾಕಿಯಾಗಿ ವಿಮಾನದಲ್ಲಿ ಲಂಡನ್ನಿಗೆ ಹಾರಿದರು.

ಈ ಘಟನೆಯನ್ನು ವರ್ಣಿಸುತ್ತ ವಿನ್‌ಸ್ಟನ್ ಚರ್ಚಿಲ್ಲರು ಬರೆದದ್ದು: ‘‘ಡಿ ಗಾಲೆ ಈ ಚಿಕ್ಕ ವಿಮಾನದಲ್ಲಿ ಫ್ರಾನ್ಸಿನ ಗೌರವವನ್ನು ತೆಗೆದುಕೊಂಡು ಬಂದಿದ್ದ,’’ ಎಂದು.

ಲಂಡನ್ನಿಗೆ ಬಂದವರೇ ಅವರು ‘‘ಸ್ವತಂತ್ರ ಫ್ರೆಂಚ್’’ ಚಳವಳಿಯನ್ನು ಸಂಘಟಿಸಿ ಅದರ ಅಧ್ಯಕ್ಷರಾದರು; ಫ್ರೆಂಚ ರಾಷ್ಟ್ರೀಯ ಸಮಿತಿಯನ್ನು ನಿರ್ಮಿಸಿ ಅದರ ನಾಯಕತ್ವ ವಹಿಸಿದರು; ಮತ್ತು ಇಂಗ್ಲಂಡಿನಿಂದ ೫ ಲಕ್ಷದ ಒಂದು ಫ್ರೆಂಚ್ ಸೈನ್ಯ ಮತ್ತು ನೌಕಾಪಡೆಯನ್ನು ಸಂಘಟಿಸಿದರು. ಅವರ ವಾಣಿ ಫ್ರೆಂಚರ ಮುಗ್ಗರಿಸಿದ ಅಭಿಮಾನವನ್ನು ಎದ್ದು ನಿಲ್ಲಿಸಿತು. ಡಿ ಗಾಲೆಯಂತೆ ಫ್ರೆಂಚ್ ಜನರನ್ನು ಹುರಿದುಂಬಿಸಿದ ನಾಯಕ ನೆಪೋಲಿಯನ್ನನ ನಂತರ ಹುಟ್ಟಿರಲಿಲ್ಲ.

ಸಮುದ್ರದಾಚೆ ಜರ್ಮನ್ನರು ಕೋಪದಿಂದ ಕುಣಿದಾಡಿದರು. ಪಿಟೇನರ ಸರಕಾರ ಡಿಗಾಲೆಯ ವಿಚಾರಣೆ ನಡೆಸಿತು. ತಮ್ಮ “ಕರ್ತವ್ಯದ ಸ್ಥಾನವನ್ನು ಬಿಟ್ಟು” ಹೋದ ಅಪರಾಧಕ್ಕಾಗಿ ಅವರಿಗೆ ಮರಣದಂಡನೆ ವಿಧಿಸಲಾಯಿತು. ಆದರೆ ಆಪಾದಿತ ಅವರ ಕೈಗೆ ನಿಲುಕದಷ್ಟು ದೂರವಿದ್ದ.

ವಿಮೋಚನಾ ದಿನದಂದು (೧೯೪೪) ಡಿ ಗಾಲೆ ಪ್ಯಾರೀಸಿನಲ್ಲಿ ವಿಜಯಿ ಅನುಯಾಯಿಗಳ ಮುಂದಾಳಾಗಿ ಪ್ರವೇಶಿಸಿದಾಗ ಅವರನ್ನು ದೇವತೆಯಂತೆ ಜನ ಸ್ವಾಗತಿಸಿತು. ಅವರು ತಾತ್ಪೂರ್ತಿಕ ಫ್ರೆಂಚ ಸರಕಾರದ ವರಿಷ್ಠರಾದರು.

ಯುದ್ಧಕಾಲದ ಈ ನಾಯಕನಿಗೆ ಶಾಂತಿಕಾಲದಲ್ಲಿ ಬೇಗನೆ ತೊಡಕುಗಳು ಎದುರಾದವು. ಯುದ್ಧ ಮುಗಿದೊಡನೆ ಫ್ರೆಂಚ ರಾಜಕಾರಣಿಗಳು ಮತ್ತೆ ಮೊದಲಿನಂತಾಗಿದ್ದರು. ಮೊದಲಿನಂತೆ ಗುಂಪುಗಳು, ಬಣಗಳು, ಕೂಡುಪಾಟುಗಳು ಪ್ರಾರಂಭವಾದವು. ಯುದ್ಧಪೂರ್ವದಲ್ಲಿ ಫ್ರಾನ್ಸಿನಲ್ಲಿ ಸರಾಸರಿ ಆರು ತಿಂಗಳಿಗೊಂದು ಮಂತ್ರಿಮಂಡಲ ಉರುಳಿ, ದೇಶಕಾರ್ಯ ದಿಕ್ಕು ತಪ್ಪಿದ್ದರಿಂದಲೇ ಎರಡನೇ ಮಹಾಯುದ್ಧದಲ್ಲಿ ಫ್ರಾನ್ಸಿಗೆ ಸೋಲು ಬಂತೆಂಬ ಸಂಗತಿಯನ್ನು ರಾಜಕಾರಣಿಗಳು ಮರೆತರು. ಇಂಥ ಅವಸ್ಥೆಯನ್ನು ನಿವಾರಿಸುವುದಕ್ಕಾಗಿ ಸರಕಾರಕ್ಕೆ ಹೆಚ್ಚು ಅಧಿಕಾರವನ್ನು ಕೊಟ್ಟು ದೃಢವಾದ ಸರಕಾರಕ್ಕೆ ಆಸ್ಪದ ಮಾಡುವಂತೆ ರಾಜ್ಯಘಟನೆ ತಯಾರಿಸಬೇಕೆಂದು ಡಿ ಗಾಲೆ ಸೂಚಿಸಿದರು.

ಆದರೆ ಅದಕ್ಕೆ ರಾಜಕಾರಣಿಗಳು ಒಪ್ಪಲಿಲ್ಲ. ಡಿ ಗಾಲೆಗೆ ಸರ್ವಾಧಿಕಾರ ಬೇಕಾಗಿದೆಯೆಂದು ಅವರು ಆರೋಪಿಸಿದರು. ಬೇಸತ್ತು ಡಿ ಗಾಲೆ ೧೯೪೬ ಜನವರಿಯಲ್ಲಿ ರಾಜೀನಾಮೆ ಕೊಟ್ಟು ಹೊರಬಿದ್ದರು.

ಅಂದಿನಿಂದ ಅವರು ತಮ್ಮ ಹಳ್ಳಿಯಲ್ಲಿ ನಿವೃತ್ತ ಜೀವನ ನಡೆಸುತ್ತ ಇದ್ದರು. ಆದರೆ ಫ್ರಾನ್ಸಿನ

ದೈವದ ಚಿಂತನೆ ಅವರನ್ನೆಂದಿಗೂ ಬಿಟ್ಟಿರಲಿಲ್ಲ. ನಿವೃತ್ತರಾದ ಅವರು ತಮ್ಮ ಸಂಸ್ಮರಣೆಗಳನ್ನು ಬರೆಯುತ್ತಲೇ ಇದ್ದರು, ಫ್ರಾನ್ಸಿನ ಅವಸ್ಥೆಯನ್ನು ಯೋಚಿಸುತ್ತಲೇ ಇದ್ದರು. ತಾಯ್ನಾಡಿನ ಕರೆ ಪುನರಪಿ ತಮಗೆ ಬರುವುದೆಂದರಿತೇ ಇದ್ದರು.

೧೯೫೮ರಲ್ಲಿ, ಅವರು ಸರಕಾರದಿಂದ ಹೊರಬಿದ್ದ ೧೨ ವರ್ಷಗಳಲ್ಲಿ, ಆ ಕರೆ ಬಂತು. ಪಾರ್ಲಿಮೆಂಟಿಗೆ ಸರ್ವಾಧಿಕಾರ, ಸರಕಾರಕ್ಕೆ ಏನೂ ಇಲ್ಲ ಎನ್ನುವ ರಾಜ್ಯಘಟನೆಯ ಫಲ ಡಿ ಗಾಲೆ ಎಣಿಸಿದಂತೆಯೇ ಆಗಿತ್ತು. ಎರಡನೇ ಮಹಾಯುದ್ಧಾನಂತರ ಫ್ರಾನ್ಸಿನಲ್ಲಿ ೨೫ ಮಂತ್ರಿ ಮಂಡಲಗಳು ಎದ್ದವು, ಬಿದ್ದವು. ಇಂಡೋಚೀನ ಕೈ ಬಿಟ್ಟಿತು, ಉತ್ತರ ಆಫ್ರಿಕದಲ್ಲಿ ಲಕ್ಷಾಂತರ ಫ್ರೆಂಚ ಸೈನಿಕರು ಅರ್ಥವಿಲ್ಲದ ಸಾಮ್ರಾಜ್ಯವಾದಿ ಯುದ್ಧದಲ್ಲಿ ತೊಡಕಿಕೊಂಡಿದ್ದರು. ಈ ಗೊಂದಲವನ್ನು ಒಂದು ಹಾದಿಗೆ ತರಲು ಯಾವ ಸರಕಾರಕ್ಕೂ ಧೈರ್ಯದ ಕ್ರಮ ಕೈಕೊಳ್ಳಲು ಸಾಧ್ಯವಿರಲಿಲ್ಲ. ಅವ್ಯವಸ್ಥೆಯನ್ನು ಸೈರಿಸಲಾರದೆ ಅಲ್ಜೀರೀಯದಲ್ಲಿದ್ದ ಫ್ರೆಂಚ ಸೈನ್ಯಾಧಿಕಾರಿಗಳು ಸರಕಾರದ ವಿರುದ ಬಂಡೆದ್ದು "ಡಿ ಗಾಲೆಯನ್ನು ಅಧಿಕಾರಕ್ಕೆ ತನ್ನಿ, ಇಲ್ಲದಿದ್ದರೆ ನಾವು ನಿಮಗೆ ವಿಧೇಯರಾಗಿರಲಾರೆವು!" ಎಂದರು.

ಫ್ರಾನ್ಸು ಯಾದವೀಯುದ್ಧದ ನಿಟ್ಟಿನಲ್ಲಿ ನಿಂತಿತ್ತು. ಫ್ರೆಂಚ ರಾಜಕಾರಣಿಗಳು ಉಪಾಯವಿಲ್ಲದೆ ಡಿ ಗಾಲೆಯನ್ನು ಕರೆತಂದರು. "ಭಾಗ್ಯವಿಧಾತ" ತಿರುಗಿ ಫ್ರಾನ್ಸಿನ ಕರ್ಣಧಾರನಾಗಿದ್ದಾನೆ.

ಡಿ ಗಾಲೆಯ ಸ್ವಭಾವ ಸ್ವಲ್ಪ ವಿಕ್ಷಿಪ್ತ. ಚರ್ಚಿಲ್ ಅಥವಾ ನೆಹರೂ ರೀತಿಯಿಂದ ಅವರೆಂದೂ ''ಜನಪ್ರಿಯ'' ರಾಗಿಲ್ಲ. ಮಾತು ಕಡಿಮೆ ಮತ್ತು ಚುಟುಕು—ಮತ್ತು ಹರಿತ. ಹೊಂದಿಕೊಳ್ಳುವ ಪ್ರವೃತ್ತಿ ಇಲ್ಲ. ಫ್ರಾನ್ಸಿನ ದೈವ ಮತ್ತು ತಮ್ಮ ಭಾಗ್ಯವಿಧಾತತ್ವದ ನಂಬಿಕೆ ಈ ವಿಚಾರಗಳಲ್ಲಿ ಮಗ್ನರಾದ ಡಿ ಗಾಲೆ ಅಹಂಕಾರಿ, ದುರಭಿಮಾನಿ ಎಂಬಂತೆ ವರ್ತಿಸುತ್ತಾರೆ. ಒಮ್ಮೆ ಅವರು "ನಾನು ಕೆಸರಿನಿಂದೆತ್ತಿ ನಿಲ್ಲಿಸಿದ ಈ ಪ್ರಜಾರಾಜ್ಯದಲ್ಲಿ ನಾನು ಅಧಿಕಾರಕ್ಕೆ ಸ್ಪರ್ಧಿಸಬೇಕೇ?" ಎಂದಿದ್ದರು. ಯುದ್ಧಕಾಲದಲ್ಲೊಮ್ಮೆ "ನಾನೇ ಫ್ರಾನ್ಸ್" ಎಂದಿದ್ದ ಅವರ ನುಡಿಯನ್ನು ಅವರ ವಿರೋಧಿಗಳು ಯಾವಾಗಲೂ ಎತ್ತಿ ತೋರಿಸುತ್ತಾರೆ. ಆದರೆ ಡಿ ಗಾಲೆಗೆ ಸರ್ವಾಧಿಕಾರದ ಗಂಡಾಂತರಗಳು ಚೆನ್ನಾಗಿ ಗೊತ್ತು. ಆದ್ದರಿಂದಲೇ ಅವರು ಸಾಧ್ಯವಿದ್ದರೂ ಕ್ರಾಂತಿಯಿಂದ ಅಧಿಕಾರವನ್ನು ಕಿತ್ತುಕೊಳ್ಳಲಿಲ್ಲ.

ತೊಂದರೆಯೆಂದರೆ ಅವರಿಗೆ ಫ್ರಾನ್ಸಿನ ಅಭಿಮಾನದ ಚಿಂತೆ ಮಿತಿಮೀರಿ ಇರುವುದು. "ಫ್ರಾನ್ಸು ಪ್ರಥಮ ಶ್ರೇಣಿಯಲ್ಲಿರಬೇಕು, ಇಲ್ಲದಿದ್ದರೆ ಅದು ಫ್ರಾನ್ಸೇ ಅಲ್ಲ" ಎಂಬುದು ಅವರ ವಾಕ್ಯ. ಇದರಿಂದ ಅವರ ಯುದ್ಧಕಾಲದಲ್ಲಿ ಮಿತ್ರರಾಷ್ಟ್ರಗಳಿಗೂ ಅವರು ಯಾವಾಗಲೂ ಉಪದ್ರವಕಾರಿಯೆಂದು ತೋರಿದ್ದಾರೆ. ಆದರೆ ಡಿ ಗಾಲೆಯನ್ನು ಮೆಚ್ಚಲಿ ಬಿಡಲಿ ಅವರ ವ್ಯಕ್ತಿತ್ವದ ಚೈತನ್ಯ ಯಾರನ್ನೂ ಪ್ರಭಾವಿತಗೊಳಿಸದಿರುವುದಿಲ್ಲ.

ಡಿ ಗಾಲೆ ಫ್ರಾನ್ಸನ್ನು ಉಳಿಸಬಲ್ಲರೆ? ಇದಕ್ಕೆ ಉತ್ತರ ಈಗಲೇ ಹೇಳುವುದು ದುಡುಕಿನ ಮಾತಾದೀತು. ಅವರ ಹಿಂದಿನ ಚರಿತ್ರೆಯನ್ನು ನೋಡಿದರೆ ಫ್ರಾನ್ಸಿನ ಸ್ವಾಭಿಮಾನದ ಚಿಂತೆ ಎಷ್ಟಿದ್ದರೂ ವಸಾಹತುಗಳ ಬಗ್ಗೆ ಅವರ ವಿಚಾರಗಳು ಉದಾರವಾಗಿವೆಯೆಂದು ತಿಳಿಯುತ್ತದೆ. ಆದರೆ ಅವರ ಔದಾರ್ಯದ ಪ್ರಮಾಣ ಅಲ್ಜೀರಿಯದ ಮುಸ್ಲಿಂ ಸ್ವಾತಂತ್ರ್ಯವಾದಿಗಳನ್ನು ಸಂತುಷ್ಟಗೊಳಿಸಲು ಸಾಲುವುದೇ, ಫ್ರೆಂಚ ವಸಾಹತು ಸಾಮ್ರಾಜ್ಯವಾದಿಗಳು ಇಂಥ ಔದಾರ್ಯ ತೋರಿಸಲು ಡಿ ಗಾಲೆಗೇ ಆದರೂ ಅವಕಾಶಕೊಡುವರೇ ಎಂಬುದೀಗ ಪ್ರಶ್ನೆ.

ಆಧ್ಯಾತ್ಮ, ವಿಶ್ವಶಾಂತಿ ಮತ್ತು ಗಣಿತ
ಮುಪ್ಪುರಿಗೊಂಡ—

ಜಗದ್ಗುರು ಪುರಿ ಶಂಕರಾಚಾರ್ಯರು

ಕೆ. ವೆಂಕಟೇಶ ರಾವ್

ಈ ವರ್ಷ ಫೆಬ್ರವರಿ ಪ್ರಾರಂಭದಲ್ಲಿ ಅಮೇರಿಕದ ಲಾಸ್ ಎಂಜಲ್ಸ್ ನಗರದ ಪತ್ರಿಕೆಗಳ ಮುಖಪುಟಗಳು ದೊಡ್ಡ ದೊಡ್ಡ ತಲೆಬರೆಹಗಳ ಕೆಳಗೆ ವರದಿ ಮಾಡಿದ ಒಂದು ಘಟನೆ ಭಾರತದಲ್ಲಿ ಹೆಚ್ಚು ಕಡಿಮೆ ಅಲಕ್ಷಿತವಾಗಿಯೇ ಉಳಿಯಿತು. ಭಾರತದಲ್ಲಿ ಈ ಘಟನೆ ಅವಶ್ಯವಾಗಿ ಗಮನಿಸತಕ್ಕದ್ದಿತ್ತು. ಅದು ಭಾರತದ ಸಾಂಪ್ರದಾಯಿಕ ಧಾರ್ಮಿಕ ಆಚಾರವಿಚಾರಗಳ ಮೇಲೆ ತುಂಬ ಪರಿಣಾಮ ಮಾಡಬಹುದಾದಂಥಾದ್ದು. ಏಕೆಂದರೆ ಭಾರತದ ಸನಾತನ ಧರ್ಮಪೀಠವೊಂದರ ಆಚಾರ್ಯರು "ಕಾಳಾಪಾಣಿ"ಯನ್ನು ದಾಟಿ ಅಮೇರಿಕಕ್ಕೆ ಬಂದ ಸಮಾಚಾರವೇ ಆ ವರದಿಗಳ ವಸ್ತುವಾಗಿತ್ತು.



ಹಿಂದೂ ಸ್ವಾಮಿಗಳೊಬ್ಬರು ಅಮೇರಿಕಕ್ಕೆ ಹೋಗುವುದು ಇದೇನೂ ಮೊದಲ ಸಲವಲ್ಲವೆಂಬುದು ನಿಜ. ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ ಮೊದಲಾದವರ ಹೆಸರುಗಳು ತತ್ಕ್ಷಣ ನಮ್ಮ ಸ್ಮೃತಿಪಥಕೆ ಬರುವವು. ಆದರೆ ಅವರೆಲ್ಲರೂ ಸುಧಾರಕ ಪಂಥದ ನೂತನ ಮಠಗಳ ಸ್ವಾಮಿಗಳು. ಇವರು ಹಾಗಲ್ಲ. ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಪ್ರಧಾನ ಧರ್ಮಪೀಠಗಳಲ್ಲಿ ಒಂದಾದ ಪುರಿ ಗೋವರ್ಧನ ಮಠದ ಜಗದ್ಗುರು ಶ್ರೀ ಶಂಕರಾಚಾರ್ಯ ಭಾರತೀಕೃಷ್ಣ ತೀರ್ಥ ಶ್ರೀಪಾದಂಗಳವರು ವಿದೇಶ ಪ್ರವಾಸ ಮಾಡಿದ್ದು ಅಭೂತಪೂರ್ವ ಘಟನೆಯಲ್ಲದೆ ಮತ್ತೇನು?

ನಾಲ್ಕು ತಿಂಗಳ ವಿದೇಶ ಪ್ರವಾಸವನ್ನು ಮುಗಿಸಿಕೊಂಡು ಈಗ ಭಾರತಕ್ಕೆ ಮರಳಿರುವ ಭಾರತೀಕೃಷ್ಣತೀರ್ಥರು ಶಾಂಕರ ಪೀಠಗಳ ಜೀವಂತ ಆಚಾರ್ಯರಲ್ಲೆಲ್ಲ ಹಿರಿಯರು. ಆದರೆ ಅವರ ಚಟುವಟಿಕೆ ಎಳೆವರೆಯದವರನ್ನೂ ನಾಚಿಸುವಂತಿದೆ. ೫ ಅಡಿ ಎತ್ತರದ ಕೃಶಕಾಯದ ಈ ಸ್ವಾಮಿಗಳು ಕೆಲ ವಾರಗಳಲ್ಲೇ ಹಲವು ಸಾವಿರ ಮೈಲುಗಳನ್ನು ನಾನಾ ವಾಹನಗಳಲ್ಲಿ ಕ್ರಮಿಸಿ ಹಲವಾರು ವಿಷಯಗಳ ಮೇಲೆ ನೂರಾರು ಭಾಷಣಗಳನ್ನು ಮಾಡಿದರು. ಲಾಸ್ ಎಂಜಲ್ಸಿನಲ್ಲಿ

ಅವರು "ಜಾಗತಿಕ ಶಾಂತಿ"ಯನ್ನು ಕುರಿತು ಮಾತಾಡಿದರು. ಹೋಲಿವುಡ್ಡಿನಲ್ಲಿ "ಪ್ರಾಚೀನ ಭಾರತದ ಬೆಳಕ"ನ್ನು ಬೀರಿದರು. ಅದೇ ಸಂಜೆ ವೆಸ್ಟ್‌ವುಡ್ಡಿನಲ್ಲಿ "ಕರ್ಮಯೋಗ"ವನ್ನು ವಿಸ್ತರಿಸಿದರು. ಅವರು ಟೆಲಿವಿಜನ್‌ನಲ್ಲಿ ಕಾಣಿಸಿಕೊಂಡರು, "ಭಾರತ-ಅಮೇರಿಕ ಸಂಬಂಧ"ವನ್ನು ಚರ್ಚಿಸಿದರು, "ಸರ್ವಧರ್ಮಗಳ ಮೂಲ ಐಕ್ಯ"ವನ್ನು ಪ್ರತಿಪಾದಿಸಿದರು, "ಕ್ರೈಸ್ತ ಮತ್ತು ಹಿಂದೂ ವಿಶ್ವಾಸಗಳ ಸಾಮ್ಯ"ವನ್ನು ತೋರಿಸಿಕೊಟ್ಟರು. ಅವರು ಅಮೇರಿಕದಲ್ಲಿರುವ ಹಿಂದೂ ಸಂಸ್ಥೆಗಳಲ್ಲಿ, ಕ್ರೈಸ್ತ ಇಗರ್ಜಿಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ, ಪತ್ರಿಕಾಪರಿಷತ್ತುಗಳಲ್ಲಿ, ತತ್ವಜ್ಞಾನಿಗಳ ಮುಂದೆ, ವಿಜ್ಞಾನಿಗಳ ಸಮ್ಮುಖದಲ್ಲಿ ಮಾತಾಡಿದರು ಮತ್ತು ಪ್ರಸಿದ್ಧ ವಿಜ್ಞಾನ ಸಂಸ್ಥೆಯಾದ "ಕೆಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ"ಯಲ್ಲಿ ಗಣಿತಶಾಸ್ತ್ರವನ್ನು ಕುರಿತು ಭಾಷಣ ಮಾಡಿದರು.

ಜಗದ್ಗುರುಗಳು ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರು. ಭಾರತೀಯ ದರ್ಶನಗಳ ವಿಷಯದಲ್ಲಿ ಅವರಿಗೆ ಸರಿದೂಗುವ ವಿದ್ವಾಂಸರು ತೀರ ವಿರಳವಾಗಿ ಸಿಗಬಹುದು. ಅವರು ಹನ್ನೆರಡು ಆಧುನಿಕ ಭಾಷೆಗಳನ್ನು ಮಾತೃಭಾಷೆಯಷ್ಟೇ ಸಲೀಸಾಗಿ ಮಾತಾಡಬಲ್ಲರು. ಅವರು ಇಂಗ್ಲಿಷಿನಲ್ಲಿ ಇಂಗ್ಲೀಷರೂ ಮೆಚ್ಚುವಷ್ಟು ಚೆನ್ನಾಗಿ ಮಾತಾಡುತ್ತಾರೆ. "ಇಂಗ್ಲೀಷಿನ ಮೇಲೆ ಎಂಥ ಪ್ರಭುತ್ವ!" ಎಂದು ಅಮೇರಿಕನ್ ತಜ್ಞನೊಬ್ಬ ಅವರ ರೇಡಿಯೋ ಭಾಷಣ ಕೇಳಿದ ಮೇಲೆ ಹೇಳಿದ.

ಶಂಕರಾಚಾರ್ಯರ ಪಾಂಡಿತ್ಯ ಕೇವಲ ಭಾರತೀಯ ಧಾರ್ಮಿಕ ವಿಷಯಗಳ ತಳ ಕಂಡಷ್ಟರಿಂದಲೇ ತೃಪ್ತಿ ಹೊಂದಿಲ್ಲ. ಅವರು ಜಗತ್ತಿನ ಎಲ್ಲ ಪ್ರಧಾನ ಧರ್ಮಗಳ ಪವಿತ್ರ ಗ್ರಂಥಗಳನ್ನು ಅಭ್ಯಸಿಸಿದ್ದಾರೆ. ಭಾಷಣದಲ್ಲಿ ಸಂಸ್ಕೃತ ಗ್ರಂಥಗಳಿಂದೆಷ್ಟೋ ಅಷ್ಟೇ ಮಟ್ಟಿಗೆ ಬೈಬಲ್ಲಿನಿಂದ, ಕುರಾಣದಿಂದ ಆಧಾರ ವಾಕ್ಯಗಳನ್ನು ಅವರು ಉದ್ಧರಿಸುವ ಸಂಭವವಿದೆ. ಬರಿ ತಮ್ಮ ಮತದ ಗ್ರಂಥರಾಶಿಯಲ್ಲಿ ಮುಳುಗಿ ಜಗತ್ತನ್ನು ಅವಗಣಿಸಿದ ಸಂನ್ಯಾಸಿ ಅವರಲ್ಲ. ಇಂದಿನ ದಿನಮಾನ ಹೇಗಿದೆ, ಜಗತ್ತಿನ ಸಂಕಟಗಳೆಂಥವು, ಮಾನವ ಕುಲದ ಸಮಸ್ಯೆಗಳೇನು ಎಂದು ಬಲ್ಲ ಅವರು ಈ ಜಂಜಡದಿಂದ ಮಾನವನ ಆತ್ಮವನ್ನು ಪಾರುಗಾಣಿಸುವ ಕಾರ್ಯದಲ್ಲಿ ಸಕ್ರಿಯವಾಗಿ ಆಸಕ್ತರಾಗಿದ್ದಾರೆ.

ಅವರ ಕುಳ್ಳ ನಿಲುವು, ದಂಭಶಾಠ್ಯಗಳಿಂದ ದೂರವಾದ ವರ್ತನೆ, ಆತ್ಮೀಯವಾದ ಮಾತಿನ ಸರಣಿ, ನಿಶ್ಶಬ್ದವಾದ ನಗೆ ಇವನ್ನು ನೋಡಿದರೆ ಅವರ ಶ್ರೇಷ್ಠತೆ ಒಮ್ಮೆಗೇ ಮನೋನೀತವಾಗುವಂತಿಲ್ಲ. ಅವರು ಮಾತಾಡತೊಡಗಿದೊಡನೆ ಮಾತ್ರ ಅವರ ಜ್ಞಾನದ ಶಕ್ತಿ, ಅವರ ಪ್ರತಿಪಾದನೆಯ ನಿಷ್ಕೃಷ್ಟತೆ, ಅವರ ಅಕ್ರೂರವಾದ ಖಂಡನೆ ಮತ್ತು ಅತಿಶಯೋಕ್ತಿಯಿಲ್ಲದ ಮಂಡನೆಯಿಂದ ಅವರ ಹಿರಿಮೆ ಬೇಗನೇ ವಿದಿತವಾಗುತ್ತದೆ ಈ ಚಿಂತಾತುರ, ಸಂಶಯಗ್ರಸ್ತ ಜಗತ್ತಿನೊಳಗಿದ್ದೂ ಹೊರನಿಂತ ಅವರು ಚಿತ್ತಶಾಂತಿ ಮತ್ತು ನಿಸ್ಸಂದಿಗ್ಧ ವಿಶ್ವಾಸವನ್ನು ಬೀರುತ್ತಾರೆ.

ವೇದಾಂತಿಕ ವಿಚಾರಗಳಲ್ಲಿ ಮಗ್ನರಾದ ಭಾರತೀ ಕೃಷ್ಣ ತೀರ್ಥರ ಎರಡು ಪ್ರೀತಿಯ ಲೌಕಿಕ ವಿಷಯಗಳೆಂದರೆ ವಿಶ್ವಶಾಂತಿ ಮತ್ತು ಗಣಿತಶಾಸ್ತ್ರ. ಅವರು ನಾಗಪುರದಲ್ಲಿ ಸ್ಥಾಪಿಸಿದ ವಿಶ್ವಪುನರ್ನಿರ್ಮಾಣ ಸಂಘವು ಜಾಗತಿಕ ಶಾಂತಿ ಬಾಂಧವ್ಯಗಳನ್ನು ಧ್ಯೇಯವಾಗಿಟ್ಟುಕೊಂಡಿದೆ. ಅದರ ಆಡಳಿತ ಮಂಡಲದಲ್ಲಿ ಭಾರತದ ಉಪಾಧ್ಯಕ್ಷ ಡಾ. ಸರ್ವಪಲ್ಲಿ ರಾಧಾಕೃಷ್ಣನ್, ನ್ಯಾಯಮೂರ್ತಿ ಬಿ. ಪಿ. ಸಿಂಹ, ಭಾರತದ ಹಿಂದಿನ ಅರ್ಥಮಂತ್ರಿ ಚಿಂತಾಮಣಿ ದೇಶಮುಖ, ಮುಸ್ಲಿಮರಾದ ಡಾ. ಸೈಫುದ್ದೀನ್ ಕಿಚಲು ಮೊದಲಾದವರಿದ್ದಾರೆ.

ಹಲ ವರ್ಷಗಳ ಹಿಂದೆ ಶಂಕರಾಚಾರ್ಯರು ತಮ್ಮ ಗಣಿತ ಶಾಸ್ತ್ರೀಯ ಶೋಧಗಳಿಂದ ಭಾರತದ ಪತ್ರಿಕೆಗಳನ್ನೂ ವಿಶ್ವವಿದ್ಯಾಲಯ ಪ್ರೊಫೆಸರುಗಳನ್ನೂ ದಂಗುಬಡಿಸಿದರು. ಇದಕ್ಕಾಗಿ ಅವರು ಎಂಟು ವರ್ಷ ಕಾಲ ತಪಸ್ಸು ಮಾಡಿದ್ದ

ರಂತೆ—ಅರಣ್ಯದಲ್ಲಿ ಒಂಟಿಗಾಲ ಮೇಲೆ ನಿಂತು ಕೊಂಡಲ್ಲ, ಭಾರತದ ಜ್ಞಾನನಿಧಿಗಳಾದ ವೇದಗಳಲ್ಲಿ ಹೊಕ್ಕು ಹುಡುಕಾಡಿ. ಅದರ ಕಥೆ ಕೇಳುವಂತಿದೆ

ವೇದಗಳಲ್ಲಿದ್ದ ಹದಿನಾರು ಸೂತ್ರಗಳು ವೇದ ವಿದ್ವಾಂಸರಿಗೊಂದು ಕಗ್ಗಂಟಾಗಿದ್ದವು. ಕೋಲ್ ಬ್ರೂಕನಿಂದಾರಂಭಿಸಿ ಇಂದಿನ ವರೆಗೆ ವೇದವನ್ನು ಅಭ್ಯಸಿಸಿದ ಯಾರಿಗೂ ಅವುಗಳಲ್ಲಿ ಯಾವುದೊಂದು ಗಹನಾರ್ಥವನ್ನು ಕಾಣುವುದು ಅಸಾಧ್ಯವಾಗಿತ್ತು. ೧೯೧೧ ರ ಸುಮಾರಿಗೆ ಶಂಕರಾಚಾರ್ಯರು ಅವುಗಳಿಂದ ಒಂದು ಅರ್ಥವನ್ನು ಹೊರಪಡಿಸಿದರು. "ಇವು ಗಣಿತ ಸೂತ್ರಗಳು ಅನಾದಿಯಿಂದ ಅದ್ಯಪರ್ಯಂತದ ಮಾನವನ ಜ್ಞಾನವೆಲ್ಲ ಇವುಗಳಲ್ಲಿ ಅಡಗಿದೆ!" ಎಂದರವರು.

ಪೂರ್ವಾಶ್ರಮದಲ್ಲಿ ಸ್ವತಃ ಒಂದು ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶಂಕರಾಚಾರ್ಯರು ತಮ್ಮ ಶೋಧಗಳನ್ನು ಮೊದಲ ಬಾರಿ ೧೯೧೯ ರಲ್ಲಿ ಬನಾರಸ ವಿಶ್ವವಿದ್ಯಾಲಯದ ಫೆಕಲ್ಟಿಯ ಮುಂದೆ ವಿವರಿಸಿದರು. "ಈ ಸೂತ್ರಗಳನ್ನನುಸರಿಸಿದರೆ ಗಣಿತವೆಂಬುದೆಲ್ಲ ಮಕ್ಕಳ ಆಟದಷ್ಟು ಲೀಲಾಜಾಲವಾಗಿಬಿಡುತ್ತದೆ. ಅತ್ಯಂತ ಜಟಿಲವಾದ ಗಣಿತ ಸಮಸ್ಯೆಯನ್ನು ಮಕ್ಕಳೂ ಬಿಡಿಸಬಹುದು; ಅತಿ ದೀರ್ಘ ಗುಣಕಾರವನ್ನು ಬರೆದುಕೊಳ್ಳುವ ಕಷ್ಟವೂ ಇಲ್ಲದೆ ಕ್ಷಣದಲ್ಲಿ ಬಿಡಿಸಬಹುದು" ಎಂದು ಅವರು ಹೇಳಿದರು. ವಿಶ್ವವಿದ್ಯಾಲಯದ ಗಣಿತ ಪಂಡಿತರು ಅವರ ಪ್ರದರ್ಶನವನ್ನು ನೋಡಿದ ಮೇಲೆ ಅವರು ಹೇಳಿದ್ದು ಸರಿಯೆಂದೊಪ್ಪಲೇಬೇಕಾಯಿತು. ಅಂದಿನಿಂದ ಅವರು ಅದನ್ನು ಅನೇಕ ವಿಶ್ವ-ವಿದ್ಯಾಲಯಗಳ ಮುಂದೆ ಪ್ರದರ್ಶಿಸಿದ್ದಾರೆ; ಪ್ರತಿಯೊಂದೆಡೆಯಲ್ಲಿಯೂ ಪಂಡಿತರನ್ನು ಮೂಕವಿಸ್ಮಿತರನ್ನಾಗಿ ಮಾಡಿದ್ದಾರೆ.

ವರ್ಗಮೂಲ ಘನಮೂಲಗಳನ್ನು ಕಣ್ಮುಚ್ಚಿ ತೆರೆಯುವುದರೊಳಗಾಗಿ ಮಾನಸಿಕ ಗಣಿತದಿಂದ ತೆಗೆದು ಯುರೋಪು ಅಮೇರಿಕ ಮೊದಲಾದೆಡೆಗಳಲ್ಲಿ ಎಲ್ಲರನ್ನೂ ದಂಗುಬಡಿಸಿದ ಬೆಂಗಳೂರಿನ ಶಕುಂತಲೆಯ ಸುದ್ದಿ ನೀವು ಓದಿರಬೇಕು. ಹೋದ ವರ್ಷ ಅವಳ ತಂದೆ ಇಂಥದೇ ಗಣಿತಶಾಸ್ತ್ರೀಯ ಪವಾಡವನ್ನು ಹುಬ್ಬಳ್ಳಿಯಲ್ಲಿ ತೋರಿಸಿದರು. ಅವು ಪವಾಡಗಳೇನೋ ನಿಜ ಆದರೆ ಅವುಗಳನ್ನು ಇತರರಿಗೆ ಕಲಿಸಲು ಅವರಿಂದಾಗಲಿಲ್ಲ, ಅಥವಾ ಕಲಿಸಲು ಅವರು ಸಿದ್ಧರಿರಲಿಲ್ಲ—ಆದರೆ ಶಂಕರಾಚಾರ್ಯರದು ಹಾಗಲ್ಲ. ಅದರಲ್ಲಿ ರಹಸ್ಯವೇನೂ ಇಲ್ಲ. ಕಲಕತ್ತೆಯಲ್ಲಿ ಅವರನ್ನು ಕಂಡ ಧೂರ್ತ "ಸ್ಟೇಟ್ಸ್‌ಮನ್" ಪ್ರತಿನಿಧಿ ತನ್ನ ವರದಿಯಲ್ಲಿ ಈ ಅರ್ಥದ ಮಾ-ತನ್ನು ಬರೆದಿದ್ದಾನೆ: "ನಾನು ನಂಬುವ ಮನೋಭಾವದಲ್ಲಿ ಅವರಲ್ಲಿಗೆ ಹೋಗಲಿಲ್ಲ. ಇದೂ ಒಂದು ಢೋಂಗಿ ಎಂದುಕೊಂಡಿದ್ದೆ. ಆದರೆ ಅವರು ಕರಿಹಲಗೆಯ ಮೇಲೆ ಬರೆದು ತೋರಿಸಿದಂತೆ ನಾನು ನಂಬಲೇಬೇಕಾಯಿತು. . . . . . ಗಣಿತವೆಂದರೆ ಶಾಲೆಯ ದಿನಗಳಿಂದಲೂ ನನಗೆ ಶತ್ರು. . . . ಆದರೆ ಶಂಕರಾಚಾರ್ಯರಿಂದ ಕೆಲ ನಿಮಿಷ ಹೇಳಿಸಿಕೊಂಡಮೇಲೆ ನಾನೂ ಅವರ ಸೂತ್ರಗಳ ಬಲದಿಂದ ದ್ವಿಪದ ಸಮೀಕರಣಗಳನ್ನು (simultaneous equations) ಚಟಚಟನೆ ಬಿಡಿಸಿ ನನ್ನನ್ನೇ ನಾನು ಬೆರಗುಗೊಳಿಸಿಕೊಂಡೆ."

"ಟೈಂಸ್ ಆಫ್ ಇಂಡಿಯ"ದ ಪ್ರಸಿದ್ಧ ವರದಿಗಾರನಾದ "ರಾಂಬ್ಲರ"ನಾದರೂ ಅಷ್ಟೇ ಚಕಿತನಾಗಿ ಬರೆದಿದ್ದಾನೆ: "ಅದು ಪುಟ್ಟಪೂರಾ ವಿಸ್ಮಯಜನಕವಾಗಿದೆ. ಅದು ನಂಬಲಸದಳವಾಗಿತ್ತು—ಅದು ಸತ್ಯವೆಂದು ಖಚಿತವಾಗಿರದಿದ್ದರೆ."

ವೇದಗಳಲ್ಲಿ ಇಂಥ ಅಪಾರ ಜ್ಞಾನ ಸೂತ್ರರೂಪವಾಗಿ ಅಡಕವಾಗಿದೆ; ಶ್ರದ್ಧೆಯಿಂದ ಅದನ್ನು ಉಪಾಸನೆ ಮಾಡುವವರಿಗೇ ಅದರ ಉಪಯೋಗವಾಗಲೆಂದು ಪುರಾತನರು ಇಂಥ ಸೂತ್ರಗಳಲ್ಲಿ ಅದನ್ನು ಧೂರ್ತತನದಿಂದ ಅಡಗಿಸಿಟ್ಟಿದ್ದಾರೆ ಎಂದು ಶಂಕರಾಚಾರ್ಯರು ಹೇಳುತ್ತಾರೆ. ೨೪೮೯೬೪೪೩೫೮೪೫೫೮೫೨೧ ರಂಥ ಸಂಖ್ಯೆ

ಗಳ ಘನಮೂಲವನ್ನು ಥಟ್ಟನೆ ಹೇಳುವ ಶಕುಂತಲೆಯೂ ಕೇಂಬ್ರಿಜ್ಜಿನ ಗಣಿತ ವಿದ್ವಾಂಸರನ್ನು ಮಂಗಾಣದಂತೆ ಮಾಡಿದ ಗಣಿತ ಪ್ರಚಂಡ ರಾಮಾನುಜನ್‌ನೂ ಈ ಸೂತ್ರಗಳಲ್ಲೊಂದರ ಅಲ್ಪಾಂಶವನ್ನು ಹೇಗೋ ತಿಳಿದುಕೊಂಡಿರಬೇಕೆಂದವರ ಅಭಿಪ್ರಾಯ.

ಈ ಜ್ಞಾನದಿಂದ ಜಗತ್ತನ್ನು ಬೆರಗುಗೊಳಿಸುವುದು ಶಂಕರಾಚಾರ್ಯರ ಉದ್ದೇಶವಲ್ಲ. ಗಣಿತ ಶಿಕ್ಷಣದ ಕ್ರಮವನ್ನೇ ಬದಲಾಯಿಸಿ ಮಕ್ಕಳಿಗೆ ಮಗ್ಗಿಗಿಂತಲೂ ಸುಲಭವಾಗಿ ಪ್ರೌಢ ಗಣಿತವನ್ನು ಕಲಿಸುವಂತಾಗಬೇಕೆಂದು ಅವರು ಬಯಸುತ್ತಾರೆ. ನಮ್ಮ ಪುರಾತನ ಜ್ಞಾನಭಂಡಾರವನ್ನು ಅರಸಿ ಶುದ್ಧ ಹಿಂದೂ ಧರ್ಮದ ಮೇಲೆ ಜನತೆಯ ವಿಶ್ವಾಸವನ್ನು ಕುದುರಿಸುವುದಕ್ಕಾಗಿ ಅವರು ಒಂದು ಸಂಸ್ಥೆಯನ್ನೇ ಕಟ್ಟಬೇಕೆಂದಿದ್ದಾರೆ.

ಜಗದ್ಗುರು ಭಾರತೀಕೃಷ್ಣರು ಜೀವನದ ಎಲ್ಲ ಆಶ್ರಮಗಳನ್ನೂ ಬಾಳಿ ಸಂನ್ಯಾಸದಲ್ಲಿ ಪರಿಣತಿ ಹೊಂದಿದವರು. ಅನೇಕ ವರ್ಷಗಳ ವರೆಗೆ ಗೃಹಸ್ಥರಾಗಿ ಶಿಕ್ಷಣ ವ್ಯವಸಾಯದಲ್ಲಿದ್ದ ಅವರು ಶಿಕ್ಷಣತಜ್ಞರೂ ಹೌದು ಇಂದಿನ ವಿದ್ಯೆಯನ್ನು ಮನನ ಮಾಡಿದ್ದರೂ ವಿರಕ್ತಿ ಬಂದು ಸಂನ್ಯಾಸಾಶ್ರಮ ಸ್ವೀಕಾರ ಮಾಡಿದ ಅವರು ೧೯೨೦ ರಿಂದ ೧೯೨೫ ರ ವರೆಗೆ ದ್ವಾರಕಾಪೀಠದ ಜಗದ್ಗುರುಗಳಾಗಿದ್ದರು ಅನಂತರ ಪುರಿಗೋವರ್ಧನ ಮಠದ ಅಧಿಪತಿಯಾದರು.

ಜ್ಞಾನವೃದ್ಧರಾದ ಅವರನ್ನು ಭಾರತಸರಕಾರ ಅನೇಕ ಧಾರ್ಮಿಕ ಪ್ರಶ್ನೆಗಳಲ್ಲಿ ವಿಚಾರಿಸುತ್ತದೆ. ಅಮೇರಿಕಕ್ಕೆ ಅವರು ಹೋಗುವ ಮುಖ್ಯ ಉದ್ದೇಶ ಶಾಂತಿ ಪ್ರಚಾರವಾಗಿತ್ತು. ವಿಶ್ವದ ನಾನಾ ಜನಾಂಗಗಳಲ್ಲಿ ಭ್ರಾತೃತ್ವ ಬರಲು ಮೂಲಭೂತ ಆತಂಕವೇನೂ ಇಲ್ಲವೆಂದು ಅವರು ಹೇಳುತ್ತಾರೆ. ಸ್ವತಃ ಹಿಂದೂ ಧರ್ಮದ ಅದ್ವೈತ ವೇದಾಂತದ ಪೀಠಾಧಿಪತಿಯಾದರೂ ಅವರು ಸಕಲ ಧರ್ಮಗಳ ಮೂಲಭೂತ ಕಲ್ಪನೆಗಳು ಒಂದೇ ಎಂದು ಭಾವಿಸಿದ್ದಾರೆ

ಭಾರತದಲ್ಲಿ ಜನಪ್ರಿಯತೆ ಕಳೆದುಕೊಳ್ಳುತ್ತಿರುವ ಈ ಶಿರಸ್ತ್ರಾಣ ವಿದೇಶಗಳಲ್ಲಿ ಜಯಜಯಕಾರ ಪಡೆಯುತ್ತಿದೆ



ಗಾಂಧೀಟೋಪಿ ಜಿಂದಾಬಾದ!

ಗೋಪಾಲ ಪ್ರಸಾದ ವ್ಯಾಸ

ನನ್ನ ಜೀವನದಲ್ಲಿ ನಾನು ಗಾಂಧಿ ಟೊಪ್ಪಿಗೆಯ ಹಲವಾರು ಚಮತ್ಕಾರಗಳನ್ನು ಕಂಡಿದ್ದೇನೆ. ಗಾಂಧಿ ಟೊಪ್ಪಿಗೆಯನ್ನು ಧರಿಸಲು ಜನ ಅಂಜುತ್ತಿದ್ದ ಕಾಲವೊಂದಿತ್ತು. ಈ ಟೊಪ್ಪಿಗೆಯ ಮಾನ ಮರ್ಯಾದೆಯನ್ನು ರಕ್ಷಿಸಲು ಜನರು ತಮ್ಮ ಪ್ರಾಣವನ್ನೇ ಪಣವಾಗಿಡುತ್ತಿದ್ದ ಕಾಲವೂ ಇತ್ತು. ಅನಂತರ ಗಾಂಧಿ ಟೊಪ್ಪಿಗೆ ರಾಜಮುಕುಟವಾಯಿತು. ನೋಡನೋಡುತ್ತಿದ್ದಂತೆಯೇ ಈ ಟೊಪ್ಪಿಗೆಯ ಬಗ್ಗೆ ಆದರ ಕಡಿಮೆಯಾಗುತ್ತ ಹೋಗಿ ಜನ ಇದನ್ನು ಧರಿಸಲು ಮತ್ತೆ ಹಿಂದೆಮುಂದೆ ನೋಡುತ್ತಿರುವ ಕಾಲವೂ ಬಂದಂತಾಗಿದೆ.

ನನ್ನ ಮಟ್ಟಿಗೆ ಟೊಪ್ಪಿಗೆಯ ವಿಚಾರದಲ್ಲಿ ನಾನು ಬಂಗಾಲೀ ಪದ್ಧತಿಯವನು. ಖಾದಿ ಬಟ್ಟೆಯನ್ನು ಧರಿಸತೊಡಗಿ ೨೫ ವರ್ಷಗಳು ಸಂದು ಹೋಗಿದ್ದರೂ ಗಾಂಧಿ ಟೊಪ್ಪಿಗೆಯನ್ನು ನಾನು ಧರಿಸಿದವನಲ್ಲ. ಆದರೆ ವಿದೇಶಗಳಿಗೆ ಹೋಗತೊಡಗಿದಾಗ ನಾನು ಅಲ್ಲಿ ಗಾಂಧಿ ಟೊಪ್ಪಿಗೆಯನ್ನು ಅವಶ್ಯವಾಗಿ ಧರಿಸಬೇಕು ಎಂದು ನನ್ನ ಮಿತ್ರರು ಸಲಹೆಯಿತ್ತರು. ನೆಹರೂರ ಮೂಲಕ ವಿದೇಶಗಳಲ್ಲಿ ಗಾಂಧಿ ಟೊಪ್ಪಿಗೆ ತುಂಬ ಲೋಕಪ್ರಿಯವಾಗಿದೆ; ನನ್ನ ನೀಳ ಮುಖಕ್ಕೆ ಗಾಂಧಿ ಟೊಪ್ಪಿಗೆ ಬಹು ಚೆನ್ನಾಗಿ ಒಪ್ಪುವದು ಎಂದು ನನ್ನ ಮಹಿಳಾ ಮಿತ್ರಳೊಬ್ಬಳು ಹೇಳಿದಳು. ಅವಳು ಹೇಳಿದ ಎರಡು ಕಾರಣಗಳಲ್ಲಿ ಮೊದಲಿನ ಕಾರಣಕ್ಕಾಗಿ ಸ್ವಲ್ಪ, ಮತ್ತು ಎರಡನೇ ಕಾರಣಕ್ಕಾಗಿ ಹೆಚ್ಚು, ಅಂದರೆ ಜನರ ಕಣ್ಣಿಗೆ ಹೆಚ್ಚು ಚೆನ್ನಾಗಿ ಕಾಣಬೇಕೆಂಬ ಉದ್ದೇಶದಿಂದ-ಸಂಗಡ ಕೆಲವು ಇಸ್ತ್ರಿ ಮಾಡಿ ಮಿರಿ ಮಿರಿ ಮಿರುಗುತ್ತಿದ್ದ ಗಾಂಧಿ ಟೊಪ್ಪಿಗೆಗಳನ್ನು ಒಯ್ದೆ.

ಪಾಲಂ ಸಿಲ್ದಾಣದಲ್ಲಿ, ವಿಮಾನ ಏರಿದೊಡನೆ ನಾನು ಗಾಂಧಿ ಟೊಪ್ಪಿಗೆ ಹಾಕಿಕೊಂಡೆ. ಅದನ್ನು ಹಾಕಿಕೊಂಡೊಡನೆಯೆ ಮನಸ್ಸಿನಲ್ಲಿ ಏನೋ ಒಂದು ಬಗೆಯ ಹುರುಪು ಹುಟ್ಟಿತು. ಹೊಸ ಆಭರಣ ಧರಿಸಿದಾಗ ನವತರುಣಿಯ ಮನಸ್ಸಿನಲ್ಲಿ

ಸಾಪ್ತಾಹಿಕ "ಹಿಂದುಸ್ತಾನ" ದಿಂದ

ಹುಟ್ಟಬಹುದಾದಂಥ ಭಾವನೆಗಳೇ ನನ್ನ ಮನದಲ್ಲಿ ಉದಯಿಸಿದವೆನ್ನಬಹುದು. ಯಾರಾದರೂ ಇದನ್ನು ನೋಡಬೇಕು, ಏನನ್ನಾದರೂ ಹೇಳಬೇಕು ಎಂದೆನಿಸಿತು. ವಿಮಯಾನ ಪ್ರಾಣದಲ್ಲಿ ನನ್ನ ಜೊತೆಯ ಪತ್ರಿಕಾಕರ್ತರ ನಡುವೆ ಈ ರಾಜಮುಕುಟವನ್ನು ಧರಿಸಿದ ಮಾತ್ರಕ್ಕೆ ನಾನು ಪ್ರತಿಷ್ಠಿತನಾಗುವೆ ಎಂದು ಬಯಸುವದು ನನ್ನ ಮೂರ್ಖತನವೇ ಆಗಿತ್ತು. ಆದರೆ ಆ ಸಮಯದಲ್ಲಿ ನನ್ನ ಮಹಿಳಾ ಮಿತ್ರಳ ನೆನಪು ಖಂಡಿತವಾಗಿಯೂ ಬಂತು. ಟೊಪ್ಪಿಗೆ ನನಗೆ ಹೇಗೆ ಕಾಣುತ್ತದೆ ಎಂದು ಹೇಳಲು ಯಾರೂ ಇಲ್ಲದಿರುವದೊಂದೇ ನನ್ನ ಈ ಯಾತ್ರೆಯಲ್ಲಿಯ ಕೊರತೆ ಎಂದೆನಿಸಿತು. ಈ ಕೊರತೆಯನ್ನು ತುಂಬಿಕೊಳ್ಳಲೆಂದು ನಾನು ಕನ್ನಡಿಯಲ್ಲಿ ನೋಡಿಕೊಂಡೆ. ನನ್ನ ದೇಹ ಮಾತ್ರವಲ್ಲ, ಮನಸ್ಸು ಕೂಡ ಈ ಸಮಯದಲ್ಲಿ ಗಗನ ಕುದುರೆಯ ಮೇಲೆ ಸವಾರಿ ಮಾಡುತ್ತಿತ್ತು. ಖಾದಿಯ ಪ್ಯಾಂಟು, ಜೋಧಪುರಿ ಕೋಟು, ಇಸ್ತ್ರಿ ಮಾಡಿದ ಗಾಂಧಿ ಟೊಪ್ಪಿಗೆ, ಎಲ್ಲ ಸೇರಿ, ನಿಜ ಹೇಳುತ್ತೇನೆ – ಯಾವದೋ ಹಿಂದುಳಿದ ಪ್ರದೇಶದ ಹೊಸತಾಗಿ ನೇಮಕವಾದ ಕಾಂಗ್ರೆಸ್ ಮಂತ್ರಿಯಂತೆಯೇ ನಾನು ಕಾಣಿಸುತ್ತಿದ್ದೆ!

ಆದರೆ ಕಲ್ಪನೆಯ ಸಾಮ್ರಾಜ್ಯದಲ್ಲಿ ಮಂತ್ರಿಯಾಗಿದ್ದ ನನ್ನ ಸ್ವಪ್ನವನ್ನು ನನ್ನ ಜೊತೆಗಾರರು ಕೆಲ ಕ್ಷಣದಲ್ಲಿಯೇ ಭಂಗಗೊಳಿಸಿದರು. ಈ ಬುದ್ಧಿ ಜೀವಿಗಳು ಟೊಪ್ಪಿಗೆಯನ್ನು ಕುರಿತು ವಾದ ವಿವಾದಕ್ಕೆ ತೊಡಗಿದ್ದರು. ನಮ್ಮ ಮನೆಯಲ್ಲಿ ಅಲ್ಲದಿದ್ದರೂ ಹೊರಗೆ ನಾವು ಅವಶ್ಯವಾಗಿಯೂ ನಮ್ಮ ರಾಷ್ಟ್ರೀಯ ಪೋಷಾಕನ್ನು ಧರಿಸಿರಬೇಕು ಎಂದು ನಾನಂದೆ.

ನನ್ನ ಈ ವಾದಕ್ಕೆ ಎರಡು ಚುಟುಕು ಉತ್ತರಗಳು ಬಂದವು.

"ಗಾಂಧಿ ಟೊಪ್ಪಿಗೆ ರಾಷ್ಟ್ರೀಯ ಪೋಷಾಕೆಂದು ನಿಮಗೆ ಹೇಳಿದವರಾರು? ಅದು ಇಂದಿನ ಶಾಸಕರ ಪೋಷಾಕೇನೋ ಹೌದು ಎನ್ನಬಹುದಾದರೂ ಅದು ಖಂಡಿತವಾಗಿಯೂ ರಾಷ್ಟ್ರೀಯವಲ್ಲ."

ನಾನು ಈ ವಾದದಿಂದ ಹಿಂತೆಗೆದೆ. ವಿಮಾನದ ಕಿಡಿಕಿಯಿಂದ ಹೊರಗೆ ಕೆಳಗಡೆ ನೋಡತೊಡಗಿದೆ. ಆದರೆ ಕೆಳಗಡೆಗೂ ಮನಸ್ಸನ್ನು ಪ್ರಸನ್ನಗೊಳಿಸುವ ದೃಶ್ಯವಿರಲಿಲ್ಲ. ನಮ್ಮ ದೇಶದ ಅನೇಕತಾವಾದಿಗಳು ಒಂದೇ ತಾಯಿಯನ್ನು ಎರಡು ತುಂಡುಗಳನ್ನಾಗಿ ಮಾಡಿದ್ದರು. ಒಂದೇ ಭೂಮಿಯ ಮೇಲೆ ಎರಡು ದೇಶಗಳನ್ನು ಮಾಡಿಟ್ಟಿದ್ದರು. ಈಗ ನಾವು ನಮ್ಮ ದೇಶದಲ್ಲಿಯೆ ವಿದೇಶಿಗಳಾಗಿದ್ದೆವು. ಕರಾಚಿ ಸಮೀಪಕ್ಕೆ ಬಂದಿತ್ತು.

ಆದರೆ ಇದು ಮನೆತನದ ಮಾತಾಯಿತು. ನಾವು ಹಿಂದುಸ್ತಾನಿಗಳು ನಮ್ಮವರ, ನಮ್ಮದೆನ್ನುವದರ ಮಹತ್ವವನ್ನಾದರೂ ಎಲ್ಲಿ ಎಣಿಸುತ್ತೇವೆ? ಗಾಂಧೀಜಿಯವರನ್ನೆ ಬದುಕಗೊಡದಿದ್ದ ನಮಗೆ ಅವರ ಹೆಸರಿನ ಟೊಪ್ಪಿಗೆಯ ಬೆಲೆಯಾದರೂ ಏನು? ಆದರೆ ಹೊರಗೆ ಹೀಗಿಲ್ಲ. ಗಾಂಧೀಜಿ ಹಿಂದುಸ್ತಾನದಲ್ಲಿ ಸತ್ತು ಹೊರಗೆ ಜನ್ಮ ತಾಳುತ್ತಿದ್ದಾರೆ. ಅವರ ಟೊಪ್ಪಿಗೆ ಕೂಡ ಇಲ್ಲಿಂದ ಜಾರಿ ಹೊರಗೆ ಬೆಲೆ ಪಡೆಯತೊಡಗಿದೆ. ನನಗಂತೂ ಹೀಗೆ ಅನುಭವ ಬಂತು. ನಾನು ಅರಬ ದೇಶಗಳಿಗೆ ಹೋದೆ. ನನಗೆ ಅರಬ್ಬಿ ಭಾಷೆ ಬರುತ್ತಿರಲಿಲ್ಲ. ನನ್ನ ಭಾವನೆಗಳನ್ನು ಸರಿಯಾಗಿ ವ್ಯಕ್ತಪಡಿಸುವಷ್ಟು ಇಂಗ್ಲೀಷೂ ಬರುತ್ತಿರಲಿಲ್ಲ. ಆದರೆ ಅಲ್ಲಿ ನಾನು ದೊಡ್ಡ ದೊಡ್ಡವರನ್ನು ಭೆಟ್ಟಿಯಾಗಬೇಕಾಯಿತು. ದೊಡ್ಡ ದೊಡ್ಡ ಹೊಟೆಲುಗಳಲ್ಲಿ ಇರಬೇಕಾಯಿತು. ನನಗೆ ವಿದೇಶೀ ಶಿಷ್ಟಾಚಾರ ಗೊತ್ತಿರಲಿಲ್ಲ. ಚಾಕು-ಮುಳ್ಳುಗಳಿಂದ ಊಟ ಮಾಡಲೂ ಬರುತ್ತಿರಲಿಲ್ಲ. ನನ್ನ ಸ್ವಭಾವವೂ ನಿಷ್ಕಾಳಜಿಯದೇ. ಪತ್ರಿಕೋದ್ಯಮಿಗಳ ಇತರ ಗುಣಗಳನ್ನು ಕಲಿತಿರದಿದ್ದರೂ ಅವರ ಜಿಗುಟುತನ ಮಾತ್ರ ಹದಿನಾರಾಣೆ ನನ್ನಲ್ಲಿ ಸೇರಿಕೊಂಡಿತ್ತು.

ನನ್ನ ದೋಷಗಳನ್ನಷ್ಟು ಹೇಳಲೆ? ನಾನು ಮದ್ಯ ಕುಡಿಯುತ್ತಿರಲಿಲ್ಲ. ಮಾಂಸವನ್ನೂ ತಿನ್ನುತ್ತಿರಲಿಲ್ಲ. ವಿದೇಶ ಪ್ರವಾಸ ಮಾಡುವವರಲ್ಲಿ ಇಂಥ ಅವಗುಣಗಳಿರುವದು ಅಕ್ಷಮ್ಯವೇ ಸರಿ. ನನ್ನ ಜೊತೆಗಾರರಿಗೂ ನನ್ನ ಈ ಅವಗುಣ

ಗಳಿಂದ ಏನಾಗುವದೋ ಎಂಬ ಶಂಕೆಯಿತ್ತು. ಅವರು ನನಗೆ ಮಿನಿಮಿನಿಟಿಗೆ ಬುದ್ಧಿ ಹೇಳುತ್ತಿದ್ದರು. ನಾನು ಕಿವಿಯಲ್ಲಿ ಹಾಕಿಕೊಳ್ಳದಿರಲು ಸಿಟ್ಟಿಗೂ ಬರುತ್ತಿದ್ದರು. ಕೊನೆಗೆ ಸೋತು ಅವರು ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಟ್ಟರು. ಪಾಪ! ನನ್ನ ಸಲುವಾಗಿ ಅವರೂ ಅಸಭ್ಯರು ಹೇಗಾದಾರು?

ಆದರೆ ನಿಜ ಹೇಳುತ್ತೇನೆ, ಕೇವಲ ಈ ಗಾಂಧಿ ಟೊಪ್ಪಿಗೆಯ ಮೂಲಕವೇ ನನಗೆ ಎಲ್ಲಿಯೂ ಏನೂ ತೊಂದರೆ-ಆತಂಕಗಳು ಬರಲಿಲ್ಲ. ನನಗೆ ಯಾವ ಕೊರತೆಯೂ ಆಗಲಿಲ್ಲ. ನನ್ನ ಜೊತೆಗಾರರು ನನ್ನನ್ನು ಏನೆಂದಾದರೂ ತಿಳಿದುಕೊಂಡಿರಲೊಲ್ಲರೇಕೆ, ಗಾಂಧಿ ಟೊಪ್ಪಿಗೆಯ ಬಲದಿಂದ ಊಟದ ಮೇಜಿನಿಂದ ಹಿಡಿದು ಅಧ್ಯಕ್ಷ ನಾಸೀರರ ಭೆಟ್ಟಿಯ ವರೆಗಿನ ಪ್ರಸಂಗಗಳಲ್ಲಿ ಜನರು ನನ್ನನ್ನು ನಮ್ಮ ತಂಡದ ನಾಯಕನೆಂದು ತಿಳಿಯುತ್ತಿದ್ದರು. ಹಸ್ತಲಾಘವದಿಂದ ಹಿಡಿದು ಫೋಟೊ ತೆಗೆಯುವ ವರೆಗಿನ ಕಾರ್ಯಕ್ರಮಗಳಲ್ಲಿ ಸದಾ ನನಗೆ ಅಗ್ರಪಟ್ಟ ದೊರೆಯುತ್ತಿತ್ತು.

ಪೇಟೆಗಳಲ್ಲಿ, ರಸ್ತೆ-ಕೂಟಗಳಲ್ಲಿ, ಎಲ್ಲೆಡೆಯಲ್ಲಿ ನನ್ನ ಜೊತೆಗಾರರು ಮತ್ತು ಮಾರ್ಗದರ್ಶಕರು ನನ್ನ ಬಗ್ಗೆ ತುಂಬ ಜಾಗರೂಕರಾಗಿರುತ್ತಿದ್ದರು. ನಾನು ಎಲ್ಲಿಯಾದರೂ ತಪ್ಪಿಸಿಕೊಳ್ಳಬೇಕು, ಹಾದಿ ಮರೆಯಬೇಕು, ಬಳಿಕ ಯಾರಾದರೂ ತರುಣ ಅಥವಾ ಸುಂದರಿಯಾದ ತರುಣಿಯ ಹತ್ತಿರ "ನಾನೆಲ್ಲಿದ್ದೇನೆ, ನಾಳಿದುಕೊಂಡಿರುವ ಸ್ಥಳ ಎಲ್ಲಿದೆ" ಎಂದು ಕೇಳಬೇಕು ಎಂದು ನನಗೆ ಸದಾ ಅನಿಸುತ್ತಿತ್ತು. ಆದರೆ ನನ್ನ ತಲೆಯ ಮೇಲೆ ಗಾಂಧಿ ಟೊಪ್ಪಿಗೆ ಇದ್ದುದರಿಂದ ನನ್ನ ಮಿತ್ರರಿಗೆ ಪೋಲೀಸ ಸ್ಟೇಶನ್ನಿಗೆ ಫೋನ್ ಮಾಡುವ ಪ್ರಸಂಗ ಎಂದೂ ಬರಲಿಲ್ಲ; ನಾನಾಗಿಯೇ ಯಾರನ್ನಾದರೂ ಮಾತನಾಡಿಸುವ ಪ್ರಸಂಗವೂ ಬರಲಿಲ್ಲ. ಹಾದಿಯಲ್ಲಿ ಹೋಗುವದೇ ತಡ, ಜನರು "ಹಿಂದೀ?" ಅಂದರೆ ನೀವು ಹಿಂದುಸ್ತಾನದವರೇ ಎಂದು ಕೇಳುತ್ತಿದ್ದರು.

ಹೌದೆಂದು ನಾನು ತಲೆಯಲ್ಲಾಡಿಸಿದೊಡನೆ ಅವರ ಕಣ್ಣುಗಳು ಹೊಳೆಯುತ್ತಿದ್ದವು. ಅವರು ಉತ್ಸಾಹದಿಂದ ಕೈಮೇಲಕ್ಕೆತ್ತಿ, "ನೆಹರೂ?" ಎನ್ನುತ್ತಿದ್ದರು.

ಇದರ ಅರ್ಥ "ನಿಮ್ಮ ಧುರೀಣ ಬಹಳ ದೊಡ್ಡವರು. ನಾವವರನ್ನು ಗೌರವಿಸುತ್ತೇವೆ, ಪ್ರೀತಿಸುತ್ತೇವೆ," ಎಂದಿರುತ್ತಿತ್ತು.

ನಾನು ನೆಹರೂರ ಗುಣವರ್ಣನೆ ಮಾಡಿ ನಾಲ್ಕು ಶಬ್ದಗಳನ್ನು ಹೇಳಬೇಕೆನ್ನುವದರೊಳಗೆ ಅವರು "ಫ್ರೆಂಡ್ಸ್" ಎಂದು ನನ್ನನ್ನಪ್ಪಿಕೊಳ್ಳುತ್ತಿದ್ದರು. ಸಮೀಪದಲ್ಲಿ ರೆಸ್ಟಾರಂಟ ಇದ್ದರೆ ಕಾಫಿ ಅಥವಾ ಕೋಲಾ ಕುಡಿಸುತ್ತಿದ್ದರು. ಬಹುಶಃ ತಾವೇ ಜೊತೆಗೆ ಬಂದು ನನ್ನನ್ನು ನನ್ನ ಹೊಟೆಲ್ಲಿಗೆ ಮುಟ್ಟಿಸುತ್ತಿದ್ದರು. ದಮಾಸ್ಕಸದ ನಾಪಿತನೊಬ್ಬನಂತೂ ಪುಕ್ಕಟೆಯಾಗಿ ನನ್ನ ಕ್ಷೌರ ಮಾಡಿದ. ಆತ ಬಹಳ ಹೊತ್ತಿನ ವರೆಗೆ ನೆಹರೂರ ವಿಷಯವಾಗಿ ಮಾತನಾಡಿದ. ಅವನಿಗೆ ಮೆನನ್ನರ ಭಾಷಣದ ಕೆಲ ಅಂಶವೂ ನೆನಪಿತ್ತು. ನೆಹರೂರ ಕೂದಲು ಕತ್ತರಿಸುವ ಅವಕಾಶ ಸಿಗಬೇಕೆಂಬುದೇ ಅವನ ಏಕಮೇವ ಮಹತ್ವಾಕಾಂಕ್ಷೆಯಾಗಿತ್ತು!

ಗಾಂಧಿ ಟೊಪ್ಪಿಗೆಯ ಪುಣ್ಯ ಪ್ರಭಾವದಿಂದಲೇ ನಾನು ವಿದೇಶಗಳಲ್ಲಿ ಕೆಲವು ಪಾಪಕಾರ್ಯಗಳಿಂದ ಉಳಿದುಕೊಂಡೆ. ಕಾಯರೊದಲ್ಲಿ "ನಾಯಿಟ-ಕ್ಲಬ್" ಗಳು ತುಂಬ ಹೆಸರಾದವು. ನಾನು ಹಿಂದುಸ್ತಾನದಿಂದ ಹೊರಟಾಗ ನನ್ನ ಕವಿ ಮಿತ್ರರೊಬ್ಬರು ಬೀಳ್ಕೊಡುವ ಸಮಾರಂಭವೊಂದರಲ್ಲಿ ನನ್ನನ್ನುದ್ದೇಶಿಸಿ ಒಂದು ಕವಿತೆಯನ್ನು ಓದಿದ್ದರು; "ನೀನು ಅರಬ ದೇಶಗಳಿಗೆ ಹೋಗುತ್ತಿರುವಿ, ಆದರೆ ಮಿತ್ರ, ಅಲ್ಲಿಯ ಹೂರಿಂದ ಉಳಿದುಕೊ. ಭೋಳೇ ಸ್ವಭಾವದ ಕವಿಯೆ, ಅಲ್ಲಿಯ ಹೂಗಳು ರಾತ್ರಿ ಅರಳುತ್ತವೆ, ಅವುಗಳ ಸುವಾಸನೆಗೆ ಮೋಹಿತನಾಗಿ ನೀನು ನಮ್ಮ ಅತ್ತಿಗೆಯನ್ನು ಮರೆಯದಿರು," ಎಂದು ಅದರ ತಾತ್ಪರ್ಯವಾಗಿತ್ತು.

ನನ್ನ ಕೆಲ ಜೊತೆಗಾರರು ಈ ರಾತ್ರಿ-ಕ್ಲಬ್ಬುಗಳ ರಸವನ್ನಾಸ್ವಾದಿಸುತ್ತಿದ್ದರು. ಪ್ರತಿ ನಿತ ಮುಂಜಾನೆ ತಿರುಗಿ ಬಂದು "ನಿನ್ನೆ ಇಷ್ಟು ಹಣ

ಹಾಳಾಯಿತು, ಮೊನ್ನೆ ಇಷ್ಟು ಹಣ ಹಾಳಾಯಿತು" ಎಂದು ಪಶ್ಚಾತ್ತಾಪಪಡುತ್ತಿದ್ದರು. ರಾತ್ರಿ ಅತಿಯಾಗಿ ಮದ್ಯಪಾನ ಮಾಡಿ ಬಂದು ಬೆಳಿಗ್ಗೆ ನನ್ನ ಹತ್ತಿರ ಚೂರ್ಣ ಕೇಳುತ್ತಿದ್ದರು. ಇಲ್ಲವೆ ಆಸ್ಪ್ರೋ ಗುಳಿಗೆ ತರಿಸುತ್ತಿದ್ದರು. ಅವರಲ್ಲಿ ಒಬ್ಬ ನನಗೆ ಪದೇ ಪದೇ "ಸುಮ್ಮನೆ ವಿದೇಶಕ್ಕೆ ಬಂದು ಏಕೆ ನೂಣ ಝಾಡಿಸುತ್ತಿ? ನಡಿ ಇಂದು ನಮ್ಮ ಸಂಗಡ'' ಎನ್ನುತ್ತಿದ್ದನು.

"ನಾನೆಲ್ಲಿ ಬರುವದಿಲ್ಲವೆನ್ನುತ್ತೇನೆ? ಆದರೆ ನೀನೇ ನನ್ನನ್ನು ಜೊತೆ ಮಾಡಿಕೊಳ್ಳುವದಿಲ್ಲವಲ್ಲ'' ಎಂದು ನಾನು ಉತ್ತರ ಕೊಡುತ್ತಿದ್ದೆ.

''ಹೇಗೆ ಜೊತೆ ಮಾಡಿಕೊಳ್ಳುವದು? ಯಾವಾಗ ನೋಡಿದರೂ ನಿನ್ನ ತಲೆಯ ಮೇಲೆ ಈ ಗಾಂಧಿ ಟೊಪ್ಪಿಗೆ ಇರುತ್ತದೆ. ಇದನ್ನು ತೆಗೆದಿಟ್ಟು ಬೇಕಾದಾಗ ನಮ್ಮ ಸಂಗಡ ಬಾ."

ಆದರೆ ನಾನು ಟೊಪ್ಪಿಗೆ ತೆಗೆದಿಡುತ್ತಿರಲಿಲ್ಲ, ಅವರು ನನ್ನನ್ನು ಜೊತೆಗೊಯ್ಯುತ್ತಿರಲೂ ಇಲ್ಲ. ನನ್ನ ತಲೆಯ ಮೇಲೆ ಗಾಂಧೀ ಟೊಪ್ಪಿಗೆಯ ಛತ್ರವಿರದಿದ್ದರೆ ಏನಾಗುತ್ತಿತ್ತೊ ಯಾರು ಬಲ್ಲರು? ಗಂಡಸಿನ ಮನಸ್ಸು ಮತ್ತು ಹೆಂಗಸಿನ ಕಾಲು ಜಾರಲು ಎಷ್ಟು ಹೊತ್ತು ಬೇಕು? ಆದರೆ ಈ ಗಾಂಧಿ ಟೊಪ್ಪಿಗೆಯೇ ನನ್ನನ್ನು ರಕ್ಷಿಸಿಕೊಂಡಿತು.

ಮಾರ್ಚ ೨೦ ರಂದು ಕಾಯರೋದಲ್ಲಿ ನಾನು ಗಾಂಧಿ ಟೊಪ್ಪಿಗೆಯ ಎಲ್ಲಕ್ಕೂ ಅದ್ಭುತ ಚಮತ್ಕಾರವನ್ನು ಕಂಡೆ. ಇಜಿಪ್ತ ಮತ್ತು ಸಿರಿಯಗಳ ಒಕ್ಕೂಟದ ಸಪ್ತಾಹವಾಚರಿಸಲ್ಪಡುತ್ತಿತ್ತು. ಒಕ್ಕೂಟ ರಚನೆಯ ನಂತರದಲ್ಲಿ ಅಧ್ಯಕ್ಷ ನಾಸಿರರು ಪ್ರಥಮ ಬಾರಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಲಿದ್ದರು. ಸಹಸ್ರಾರು ಸಂಖ್ಯೆಯಲ್ಲಿ ಹಳ್ಳಿಗರು ಈ ಸಭೆಗಾಗಿ ಕಾಯರೋಕ್ಕೆ ಬಂದಿದ್ದರು. ಸಭೆಯಲ್ಲಿ ಜನಸಂದಣಿ ವಿಪರೀತವಾಗಿತ್ತು. ನಮಗೂ ಈ ಸಭೆಗೆ ಬರಲು ಆಮಂತ್ರಣವಿತ್ತು, ಸಭೆ ಪ್ರಾರಂಭವಾಗಲು ಅರ್ಧ ತಾಸಿದ್ದಾಗ ನಮ್ಮನ್ನು ಅಲ್ಲಿಗೆ ಕರೆದೊಯ್ಯಲಾಯಿತು. ಸಭಾ ಮಂಟಪ ಕಿಕ್ಕಿರಿದು ತುಂಬಿತ್ತು. ನಾವು ಹೋದೊಡನೆಯೆ ಜನ ಕಿವಿ ಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ಜನ ಎದ್ದೆದ್ದು ನೋಡತೊಡಗಿದರು. ಅರಬಿ ಭಾಷೆಯಲ್ಲಿ ಹಿಂದುಸ್ತಾನಕ್ಕೆ ಸಂಬಂಧಪಟ್ಟ ಕೆಲ ಘೋಷಣೆಗಳೂ ಕೇಳಿಬಂದವು. ನಮ್ಮ ತಂಡದವರಲ್ಲಿ ನಾನೇ ಎಲ್ಲರಿಗಿಂತ ಮುಂದಿದ್ದೆ. ನನ್ನ ಹಿಂದೆ, ಹೆಚ್ಚು ಕಡಿಮೆ ನನ್ನ ಮಗ್ಗಲಲ್ಲೆ ಸೀರೆಯನ್ನುಟ್ಟು ಭಾರತೀಯ ಮಹಿಳೆಯೊಬ್ಬಳು ನಡೆದಿದ್ದಳು. ಚಪ್ಪಾಳೆ ಯಾರ ಸಲುವಾಗಿ ಎಂದು ನಮ್ಮಿಬ್ಬರಲ್ಲಿ ಸ್ನೇಹಪೂರ್ಣವಾದ ತರ್ಕ ನಡೆಯಿತು. ಇದು ಗಾಂಧಿ ಟೊಪ್ಪಿಗೆಯ ಚಮತ್ಕಾರ ಎಂದು ನಾನಂದರೆ ಅವಳು ಇದು ಭಾರತೀಯ ಸೀರೆಯ ಮಹಿಮೆ ಎಂದು ವಾದಿಸಿದಳು. ಆದರೆ ಅರಬರು ನನ್ನನ್ನು ಸುತ್ತುಗಟ್ಟಿ ನಾಮುಂದೆ ನೀಮುಂದೆ ಎಂದು ನನ್ನ ಕೈಕುಲುಕಿಸತೊಡಗಿದಾಗ, ನನ್ನ ಹಸ್ತಾಕ್ಷರ ಪಡೆದಾಗ ಅವಳ ಭ್ರಮೆ ಅಳಿದಿರಬೇಕು. ಇದು ಗಾಂಧಿ ಟೊಪ್ಪಿಗೆಯ ಪ್ರಭಾವ, ಹಿಂದುಸ್ತಾನದ ಮಹಿಮೆ, ನೆಹರೂರ ವರ್ಚಸ್ಸಿನ ಗೌರವ ಎಂದು ಅವಳಿಗೆ ಗೊತ್ತಾಗಿರಬೇಕು. ನಮ್ಮ ತಂಡದಲ್ಲಿ ನನಗಿಂತ ತುಂಬ ಓದಿದವರು, ಅನುಭವಿಕರು, ಜಗತ್ತನ್ನು ಕಂಡವರು ಬೇರೆ ಇದ್ದರು.

ಅನಂತರ ನನ್ನ ಜೊತೆಗಾರರ ಮೇಲೂ ಗಾಂಧಿ ಟೊಪ್ಪಿಗೆಯ ಪ್ರಭಾವ ಕಾಣಿಸಿಕೊಂಡಿತು. ಅಧ್ಯಕ್ಷ ನಾಸೀರರನ್ನು ಭೆಟ್ಟಿಯಾಗಲು ನಾವು ಹೋಗುವ ದಿನ ನನ್ನ ಮಿತ್ರರಲ್ಲಿ ಕೆಲವರು ಗಾಂಧಿ ಟೊಪ್ಪಿಗೆಗಳನ್ನು ಬೇಡಿದರು. ಆದರೆ ಆ ಹೊತ್ತಿಗೆ ನನ್ನಲ್ಲಿದ್ದ ಟೊಪ್ಪಿಗೆಗಳೆಲ್ಲ ಕೊಳೆಯಾಗಿ ಬಿಟ್ಟಿದ್ದವು. ಅಂದು ನನ್ನ ಹತ್ತಿರ ಕೇವಲ ಒಂದೇ ಒಂದು ಶುಭ್ರ ಗಾಂಧಿ ಟೊಪ್ಪಿಗೆಯಿತ್ತು. ಅದನ್ನು ಯಾವ ಬೆಲೆಗೂ ಬೇರೆಯವರಿಗೆ ಕೊಡಲು ನಾನು ಸಿದ್ಧನಿರಲಿಲ್ಲ.

ಶಾಲಾ ವಿದ್ಯಾರ್ಥಿಗಳೂ ಇಂದು ಕೆಮರಾ ಹೆಗಲಿಗೆ ಜೋತು ಹಾಕಿಕೊಂಡು ಫೋಟೋ ತೆಗೆಯುತ್ತ ತಿರುಗುತ್ತಾರೆ. ಆದರೆ ಅದರ ಮೂಲ ಪುರುಷನು ಪಟ್ಟ ಶ್ರಮವನ್ನವರು ಬಲ್ಲರೇ?



ಫೋಟೋಗ್ರಫಿಯ ಪಿತಾಮಹ ಲುಯಿ ದಗೇರ

ಲುಯಿ ದಗೇರನಿಗೆ ನಿಸರ್ಗವನ್ನು ಇದ್ದಕ್ಕಿದ್ದ ಹಾಗೆ ಚಿತ್ರದಲ್ಲಿ ಪಡಿಮೂಡಿಸಬೇಕೆಂಬ ಹುಚ್ಚು ಹಿಡಿದಿತ್ತು. ಫ್ರೆಂಚ್ ಹಳ್ಳಿಗಾಡಿನ ಸೌಂದರ್ಯ ಅವನನ್ನು ಚಿಕ್ಕಂದಿನಿಂದಲೇ ಮೋಹಿಸಿತ್ತು. ಹುಡುಗನಾಗಿದ್ದಾಗ ಅವನು ಆ ಸೌಂದರ್ಯವನ್ನು ಬಣ್ಣಗಳಲ್ಲಿ ಪಡಿಮೂಡಿಸಲು ದಿನವೂ ತಾಸುಗಟ್ಟಳೆ ದುಡಿಯುತ್ತಿದ್ದ; ನಿಸರ್ಗ ಚಿತ್ರಗಳಲ್ಲಿ ಅವನ ಕಲಾ ಪ್ರೌಢಿಮೆ ಉತ್ಕೃಷ್ಟವೂ ಆಗಿತ್ತು. ಆದರೆ ಅವನಿಗೆ ಅಷ್ಟರಿಂದ ತೃಪ್ತಿಯಿರಲಿಲ್ಲ. ದೃಶ್ಯಗಳನ್ನು ಯಥಾವತ್ತಾಗಿ ಮೂಡಿಸಲು ಆತ ಹಂಬಲಿಸುತ್ತಿದ್ದ. ಅವನಿಗೆ ನಿಸರ್ಗದ ನೋಟಗಳನ್ನು ಚಿತ್ರಗಳಲ್ಲಿ ಸೆರೆ ಹಿಡಿಯುವುದು ಬೇಕಾಗಿತ್ತು.

ಚಿತ್ರ ಕಲೆಯಲ್ಲಿ ತರಬೇತಿ ಪಡೆದಿದ್ದರೂ ದಗೇರನು ಜೀವನಕ್ಕಾಗಿ ಪ್ರಾರಂಭದಲ್ಲಿ ಫ್ರೆಂಚ ಸರಕಾರದ ಕಂದಾಯ ಖಾತೆಯಲ್ಲಿ ಕೆಲಸ ಹಿಡಿದಿದ್ದನು. ಆದರೆ ಚಿತ್ರಗಳು ಅವನನ್ನು ಎಷ್ಟು ಆಕರ್ಷಿಸಿದ್ದವೆಂದರೆ ಆ ನೌಕರಿಗೆ ತಿಲಾಂಜಲಿಯಿತ್ತು ನಾಟಕ ಗೃಹಗಳಿಗಾಗಿ ಪಡದೆಗಳನ್ನು ಬರೆಯುವ ಕೆಲಸ ಪ್ರಾರಂಭಿಸಿದ. ಆ ಕಾಲದಲ್ಲಿ "ಪನೋರಾಮಾ" ಚಿತ್ರಗಳು ಜನಪ್ರಿಯವಾಗಿದ್ದವು. ಪ್ರಚಂಡ ಪಡದೆಗಳ ಮೇಲೆ ದೃಶ್ಯಗಳನ್ನು ಬರೆದು ಸುರುಳಿ ಸುತ್ತಿ ಅವುಗಳನ್ನು ಸಾವಕಾಶವಾಗಿ ಪ್ರೇಕ್ಷಕರ ಮುಂದೆ ಬಿಡಿಸಿ ತೋರಿಸಿ ಚಿತ್ರಕಾರರು ಹಣ ಸಂಪಾದಿಸುತ್ತಿದ್ದರು.

ಆದರೆ ಈ ದೃಶ್ಯಗಳು ತೀರ ನಿರ್ಜೀವವೆಂದು ಅವನಿಗೆ ತೋರಿ ಚಾರ್ಲಸ್ ಬೌಟನ್ನನೆಂಬ ಇನ್ನೊಬ್ಬ ಮಿತ್ರನೂ ಅವನೂ ಸೇರಿ "ದಯೋರಾಮಾ" ಎಂಬ ಹೊಸ ತರದ ದೃಶ್ಯಾವಳಿಯನ್ನು ನಿರ್ಮಿಸಿದರು. ಅರ್ಧ - ಪಾರದರ್ಶಕ ಪಟದ ಮೇಲೆ ಎರಡೂ ಬದಿಗೆ ದೃಶ್ಯಗಳನ್ನು ಚಿತ್ರಿಸಿ ವಿಶಿಷ್ಟ ತರದಲ್ಲಿ ಬೆಳಕನ್ನು ಬಿಟ್ಟು ದೃಶ್ಯಗಳು ಹೆಚ್ಚು ವಾಸ್ತವ ಮತ್ತು ಜೀವಂತವೆನಿಸುವಂತೆ ಅವರು ಮಾಡಿದ್ದರು.

ದಯೊರಾಮಾವನ್ನು ಪ್ಯಾರೀಸಿನ "ಪವಾಡ ಮಂದಿರ"ದಲ್ಲಿ ಪ್ರದರ್ಶಿಸಿದಾಗ ಜನ ಹುಚ್ಚೆದ್ದು ಅದನ್ನು ನೋಡಲು ಮುಕುರಿತು. ದಗೇರ ಮಾತ್ರ ಸಿನೇಮಾಗಳಿಗಿಂತಲೂ ಅಂದಿನ ಈ ದೃಶ್ಯಾವಳಿಯಿಂದ ಸಂತುಷ್ಟನಾಗದೆ ನಿಸರ್ಗವನ್ನು ಸೆರೆ ಹಿಡಿಯುವ ಕನಸುಗಳಲ್ಲಿ ಮಗ್ನನಾಗಿದ್ದನು.

೧೭೮೭ರಲ್ಲಿ ಹುಟ್ಟಿದ ಲುಯಿ ಜ್ಯಾಕ್ ಮಾಂಡೆ ದಗೇರನು ಪ್ರಾಯ ಪ್ರಬುದ್ಧನಾಗುತ್ತಿದ್ದಾಗ

ವಿವಿಧ ಮೂಲಗಳಿಂದ

ಯುರೋಪಿನಲ್ಲೆಲ್ಲ ವಿಜ್ಞಾನ ಪ್ರಗತಿಯ ಉತ್ಸಾಹ ತುಂಬಿ ತುಳುಕುತ್ತಿತ್ತು. ಅನೇಕ ಅದ್ಭುತಗಳನ್ನು ಮಾಡಿ ತೋರಿಸುತ್ತಿದ್ದ ವಿಜ್ಞಾನಕ್ಕೆ ಕಾಗದದ ಮೇಲೆ ನಿಸರ್ಗದ ದೃಶ್ಯಗಳನ್ನು ಇದ್ದಕ್ಕಿದ್ದಂತೆ ಪಡಿಮೂಡಿಸಲು ಸಾಧ್ಯವಾಗಲೇಬೇಕೆಂದು ಅವನಿಗೆ ಅನಿಸುತ್ತಿತ್ತು.

ಅನೇಕ ಶತಮಾನಗಳ ಹಿಂದೆಯೆ ಒಂದು ಸೂಕ್ಷ್ಮ ತೂತಿನ ಮೂಲಕ ಪ್ರಕಾಶವು ಕತ್ತಲು ಕೋಣೆಯಲ್ಲಿ ಪ್ರವೇಶಿಸುವಂತೆ ಮಾಡಿದರೆ ಹೊರಗಿನ ದೃಶ್ಯವು ತಲೆಕೆಳಗಾಗಿ ಕೋಣೆಯೊಳಗಿನ ಪಡದೆಯ ಮೇಲೆ ಬೀಳುವುದೆಂದು ಗೊತ್ತಿತ್ತು. ಅನಂತರ ವಿವಿಧ ಭೂತಗನ್ನಡಿಗಳು ನಿರ್ಮಿಸಲ್ಪಟ್ಟು ಅವುಗಳ ಮೂಲಕ ದೃಶ್ಯಗಳನ್ನು ಮೂಡಿಸಬಹುದೆಂದೂ ಸಿದ್ಧವಾಗಿತ್ತು. ೧೭೨೭ ರಲ್ಲಿ ಬೆಳ್ಳಿಯ ಲವಣಗಳ ದ್ರಾವಕವನ್ನು ಲೇಪಿಸಿದ ತಗಡುಗಳ ಮೇಲೆ ಬೆಳಕು ಬಿದ್ದರೆ ಅದು ಬಿದ್ದಷ್ಟು ಸ್ಥಳ ಕಪ್ಪಾಗುವುದೆಂದು ಶೂಲ್ಟ್ಜನು ಕಂಡುಹಿಡಿದಿದ್ದನು. ಹೀಗಿರುವಾಗ ದೃಶ್ಯಗಳನ್ನು ಪ್ರಕಾಶದ ಕ್ರಿಯೆಯಿಂದ ಸೆರೆಹಿಡಿಯಲು ಏಕೆ ಸಾಧ್ಯವಾಗಬಾರದು?

ದಗೇರನು ಪ್ರಯೋಗಗಳನ್ನು ಪ್ರಾರಂಭಿಸಿದನು. ಒಳ್ಳೇ "ಫೋಟೊ" ತಯಾರಿಸಬೇಕಾದರೆ ಮುಖ್ಯವಾಗಿ ಎರಡು ಸಂಗತಿಗಳು ಅವಶ್ಯವೆಂದು ಅವನಿಗೆ ಖಂಡಿತವಾಗಿತ್ತು.

(೧) ಪ್ರಕಾಶ ಬಿದ್ದೊಡನೆ ಪ್ರತಿಕ್ರಿಯೆ ಹೊಂದುವ ದ್ರಾವಕವನ್ನು ಲೇಪಿಸಿದ "ಪ್ಲೇಟ್" ತಯಾರಿಸಿ ಅದನ್ನು "ಕೆಮೆರಾ"ದೊಳಗೆ ಇರಿಸಬೇಕು.

(೨) ಅದರಲ್ಲಿ ದೃಶ್ಯ ಮೂಡಿದ ಕೂಡಲೆ ಪ್ಲೇಟನ್ನು ತೆಗೆದು ಬೇರೊಂದು ದ್ರಾವಕದಲ್ಲಿ ಅದ್ದಿದರೆ ಆ ದೃಶ್ಯ ಪ್ಲೇಟನಲ್ಲಿ ಶಾಶ್ವತವಾಗಿ ಉಳಿಯುವಂತಾಗಬೇಕು.

ದಗೇರನು ನಾನಾ ತರದ ಭೂತಗನ್ನಡಿಗಳನ್ನೂ ಇತರ ರಾಸಾಯನಿಕ ದ್ರವ್ಯಗಳನ್ನೂ ಕೊಳ್ಳಲಾರಂಭಿಸಿದನು. ಅವನ ಕೋಣೆ ಕಲಾವಿದನ ಮಂದಿರವಾಗಿ ಉಳಿಯದೆ ಪ್ರಯೋಗಶಾಲೆಯಾಯಿತು. ಲೆಕ್ಕವಿಲ್ಲದಷ್ಟು ಪ್ರಯೋಗಗಳಾದವು. ಅವನಿಗೆ ಅನ್ನ ನೀರಿನ ಭಾನ ಉಳಿಯಲಿಲ್ಲ. ಸಂಸಾರದ ಕಡೆ ಕೂಡ ಲಕ್ಷ್ಯವಿರಲಿಲ್ಲ. ಅವನ ಹೆಂಡತಿ "ನನ್ನ ಗಂಡನಿಗೆ ಬುದ್ಧಿ ಭ್ರಂಶವಾಗುತ್ತಿದೆ. ಅವರು ತಮ್ಮ ಕಲೆಯನ್ನು ಬಿಟ್ಟು ನಿರರ್ಥಕವಾದ ರಾಸಾಯನಿಕ ಪ್ರಯೋಗಗಳಲ್ಲಿ ನಿರತರಾಗಿದ್ದಾರೆ. ಸದ್ಯ ಅವರಿಗೆ ಲೋಹದ ತಗಡುಗಳ ಮೇಲೆ ದೃಶ್ಯಗಳನ್ನು ಮುದ್ರಿಸುವ ಹುಚ್ಚು ಹಿಡಿದಿದೆ. ಅವರು ಮನೆಯ ಸೊತ್ತುಗಳನ್ನು ಮಾರಿ ರಾಸಾಯನಿಕಗಳನ್ನೂ ಉಪಕರಣಗಳನ್ನೂ ಕೊಳ್ಳುತ್ತಿದ್ದಾರೆ'' ಎಂದು ದೂರಿಕೊಳ್ಳತೊಡಗಿದಳು.

ದಗೇರನ ಪ್ರಯತ್ನಗಳಿಗೆ ಫಲ ದೊರೆಯಲಿಲ್ಲ. ಅಯೋಡಿನ್ ಹಬೆಯಿಂದ ಸಂಸ್ಕೃತವಾದ ಬೆಳ್ಳಿ ತಗಡಿನ ಮೇಲೆ ಅಸ್ಪಷ್ಟವಾದ ದೃಶ್ಯಗಳನ್ನು ಮೂಡಿಸಲು ಮಾತ್ರ ಅವನಿಗೆ ಸಾಧ್ಯವಾಗಿತ್ತು. ಮೇಲಾಗಿ ಇದಕ್ಕೆ ಕೂಡ ಅವನು ತಾಸುಗಟ್ಟಳೆ ಎಕ್ಸ್‌ಪೋಜರ್ ಕೊಡಬೇಕಾಗಿತ್ತು.

ನಾಲ್ವತ್ತಕ್ಕೆ ಹತ್ತಿರವಾಗಿದ್ದ ದಗೇರನೀಗ ವೈಜ್ಞಾನಿಕ ಬಿಸಿಲುಗುದುರೆಯ ಬೆನ್ನಟ್ಟಿ ಇದ್ದದ್ದನ್ನೆಲ್ಲ ಕಳೆದುಕೊಂಡಂತಾಗಿತ್ತು. ಅವನ ಹೆಂಡತಿ ಅವನಿಗೆ ಹುಚ್ಚು ಹಿಡಿದಿದೆಯೆಂಬ ಸಂಶಯ ತಾಳಿದ್ದಳು. ಇಂಥ ನಿರಾಶೆಯ ಸಮಯದಲ್ಲಿ ಅವನಿಗೆ ಪ್ರಯೋಗಗಳನ್ನು ಮುಂದುವರಿಸಲು ಒಂದು ಅನಿರೀಕ್ಷಿತ ಸಹಾಯ ಒದಗಿತು.

ದಗೇರನಿಗೆ ಭೂತಗನ್ನಡಿ ಮೊದಲಾದವುಗಳನ್ನೊದಗಿಸುತ್ತಿದ್ದ ಕೆವಲಿಯರನೆಂಬ ಅಂಗಡಿಗಾರನು ಅವನಿಗೆ ಅವನಂತೆಯೇ ಬಿಸಿಲಿನ ಕ್ರಿಯೆಯಿಂದ ದೃಶ್ಯಗಳನ್ನು ಸೆರೆಹಿಡಿಯುವ ಹವ್ಯಾಸದಲ್ಲಿ ಮುಳುಗಿದ್ದ ಜೌಸೇಫ್ ನೈಸೆಫೋರ್ ನಿಯಪ್ಸನೆಂಬವನ ಪರಿಚಯ ಮಾಡಿಕೊಟ್ಟನು. ಈ ಮನುಷ್ಯ ಅನುಕೂಲಸ್ಥನೂ ರಸಾಯನ ಮತ್ತು ಭೌತಶಾಸ್ತ್ರ ಪಂಡಿತನೂ ಆಗಿದ್ದನು. ಪ್ರತಿಬಿಂಬಗಳನ್ನು ಮುದ್ರಿಸುವ ಯತ್ನದಲ್ಲಿ ಅವನು ದಗೇರನಿಗಿಂತ ಒಂದು ಹೆಜ್ಜೆ ಮುಂದೆ

ಹೋಗಿದ್ದನು. ಅವನು ಬಿಟುಮೆನ್ ಲೇಪಿಸಿದ ತಗಡಿನ ಮೇಲೆ ಪದಾರ್ಥದ ಪ್ರತಿಬಿಂಬ ಮೂಡಿಸಿ ಆ ಮೇಲೆ ಅದನ್ನು ಲಿವೆಂಡರ್ ಎಣ್ಣೆಯಲ್ಲಿ ಅದ್ದಿ ತೊಳೆಯುತ್ತಿದ್ದನು. ಸೂರ್ಯಪ್ರಕಾಶ ತಗಲಿದ ಭಾಗವನ್ನುಳಿದು ಉಳಿದ ಭಾಗದ ಬಿಟುಮೆನ್ ತೊಳೆದು ಹೋಗುವುದರಿಂದ ತಗಡಿನ ಮೇಲೆ ಶಾಶ್ವತ ಪ್ರತಿಬಿಂಬ ಮೂಡುತ್ತಿತ್ತು. ಇಂದಿನ ಕೆಮರಾವನ್ನು ಹೋಲುವ ಒಂದು ಉಪಕರಣವನ್ನೂ ಆತ ನಿರ್ಮಿಸಿದ್ದನು. ಆದರೆ ಹೀಗೆ ಪ್ರತಿಬಿಂಬ ಮೂಡಿಸಲು ಎಂಟು ತಾಸ್ಸುಗಳ ವರೆಗೆ ಎಕ್ಸ್‌ಪೋಜರ್ ಕೊಡಬೇಕಾಗುತ್ತಿತ್ತೆಂಬುದೀಗ ಇಲ್ಲಿಯೂ ಮುಖ್ಯ ತೊಡಕಾಗಿತ್ತು.

೧೮೨೯ ರಲ್ಲಿ ಈ ಇಬ್ಬರು ಸಾಹಸಿಗಳಲ್ಲಿ ಹತ್ತು ವರ್ಷದ ಪಾಲುಗಾರಿಕೆಯ ಕರಾರಾಯಿತು. ಇಬ್ಬರೂ ಸೇರಿ ಮತ್ತೆ ನಾಲ್ಕು ವರ್ಷ ಕಾಲ ದುಡಿದರು. ದಗೇರನು ನಿಯಪ್ಸನ ವಿಧಾನಗಳಲ್ಲಿ ಎಷ್ಟೋ ಸುಧಾರಣೆ ಮಾಡಿದನು. ಆದರೆ ಕಡಿಮೆ ಸಮಯದ ಎಕ್ಸ್‌ಪೋಜರಿನಿಂದ ಶಾಶ್ವತ ಪ್ರತಿಬಿಂಬ ಮೂಡಿಸುವುದರಲ್ಲಿ ಮಾತ್ರ ಅವರು ಮೊದಲಿದ್ದಲ್ಲಿಯೇ ಇದ್ದರು.

ಅಷ್ಟರಲ್ಲಿ ನಿಯಪ್ಸ್ ಸತ್ತು ಹೋದನು. ದಗೇರನೊಬ್ಬನೇ ಪ್ರಯೋಗಗಳನ್ನು ಮುಂದುವರಿಸಬೇಕಾಯಿತು. ಮತ್ತೆ ಆರು ವರ್ಷ ಕಾಲ ಯಶಸ್ಸಿನ ಕಿರಣವನ್ನೂ ಕಾಣದೆ ಅವನು ದುಡಿದನು. ಈ ನಡುವೆ ಅವನ ದಯೋರಾಮಾ ಬೆಂಕಿಗೆ ಆಹುತಿಯಾಗಿ ಇದ್ದ ಒಂದು ಜೀವನಾಧಾರವೂ ಇಲ್ಲದಂತಾಗಿತ್ತು. ಆ ಮೇಲೆ ಒಂದು ದಿನ ದಗೇರನು ಹದಿನೈದು ವರ್ಷಗಳಿಂದ ಹುಡುಕುತ್ತಿದ್ದುದು ಆಕಸ್ಮಾತ್ತಾಗಿ ಅವನಿಗೆ ಸಿಕ್ಕಿ ವಿಜ್ಞಾನದ ಒಂದು ಮೈಲುಗಲ್ಲಾಯಿತು. ಅದು ಹೀಗೆ :

ದಗೇರನಿಗೆ ಬಿಡಿಸಲಾಗದಿದ್ದ ಸಮಸ್ಯೆಯೆಂದರೆ ಸ್ಪಷ್ಟವಾದ ಪ್ರತಿಬಿಂಬ ತಗಡಿನಲ್ಲಿ ಹೇಗೆ ಮೂಡಿಸಬೇಕೆಂಬುದಾಗಿತ್ತು. ಎಷ್ಟು ಹೊತ್ತು ಎಕ್ಸ್‌ಪೋಜರ್ ಕೊಟ್ಟರೂ ಕೊನೆಗೆ ಅಸ್ಫುಟ ಪ್ರತಿಬಿಂಬ ಮಾತ್ರ ದೊರೆಯುತ್ತಿತ್ತು. ಒಂದು ದಿನ ಹೀಗೆ ಅಸ್ಫುಟ ಪ್ರತಿಬಿಂಬ ಮೂಡಿದ ತಗಡನ್ನು ಅವನು ಬೇಸರದಿಂದ ಒಂದು ಕಪಾಟಿನಲ್ಲಿ ಒಗೆದನು. ಮರುದಿನ ಅದಕ್ಕೆ ಪುನಃ ಲೇಪ ಹಚ್ಚಿ ಉಪಯೋಗಿಸಿದರಾಯಿತೆಂದು ಅವನು ಭಾವಿಸಿದ್ದನು. ಆದರೆ ಮರುದಿನ ಅದನ್ನು ಹೊರತೆಗೆದು ನೋಡಿದಾಗ ಅವನಿಗೆ ತನ್ನ ಕಣ್ಣುಗಳನ್ನು ನಂಬುವುದೇ ಕಷ್ಟವಾಯಿತು. ಅದರಲ್ಲಿ ದೃಶ್ಯವು ನಿಚ್ಚಳವಾಗಿ ಮೂಡಿತ್ತು. ಈ ಅಸ್ಪಷ್ಟ ಪ್ರತಿಬಿಂಬ ರಾತ್ರೋರಾತ್ರಿ ನಿಚ್ಚಳವಾದ ದೃಶ್ಯವಾಗಿ ಬದಲಾವಣೆ ಹೊಂದಿದ್ದು ಹೇಗೆ? ಈ ರಹಸ್ಯ ಅವನಿಗೆ ಹೊಳೆಯಲೇ ಇಲ್ಲ. ಅಂದು ಅವನು ಮತ್ತೊಂದು ಅಸ್ಫುಟ ಪ್ರತಿಬಿಂಬದ ತಗಡನ್ನು ಅದೇ ಕಪಾಟಿನಲ್ಲಿಟ್ಟನು. ಮರುದಿನ ಅದೂ ಸ್ಪಷ್ಟ ಚಿತ್ರವಾಗಿ ರೂಪುಗೊಂಡಿತ್ತು.

ಕಪಾಟಿನಲ್ಲಿದ್ದ ಯಾವ ರಾಸಾಯನಿಕ ದ್ರವ್ಯವು ಈ ಮಾಯಕವನ್ನುಂಟುಮಾಡಿತ್ತೆಂದು ದಗೇರ್ ಈಗ ಶೋಧಿಸತೊಡಗಿದನು. ಎಷ್ಟೋ ಹೊತ್ತಿನ ನಂತರ ಒಂದು ಮೂಲೆಯಲ್ಲಿ ಪಿಂಗಾಣಿ ತಟ್ಟೆಯಲ್ಲಿದ್ದ ಪಾರಜವೇ ಮಂತ್ರದ್ರವ್ಯವೆಂದು ಅವನಿಗೆ ಸಂಶಯ ಬಂತು. ಅವನು ಇನ್ನೊಂದು ಅಸ್ಪಷ್ಟ ಪ್ರತಿಬಿಂಬದ ತಗಡನ್ನು ಅದರ ಮೇಲೆ ಹಿಡಿದನು. ಪಾರಜದ ಹಬೆ ತಗಲಿದಂತೆ ಆ ಪ್ರತಿಬಿಂಬ ಅವನ ಕಣ್ಮುಂದೆಯೇ ಸ್ಪಷ್ಟ ಚಿತ್ರವಾಗಿ ರೂಪಾಂತರ ಹೊಂದಿತು! ಪಾರಜದ ಹಬೆಯನ್ನು ಶೋಷಿಸಿ ಬೆಳಕು ತಗಲಿದ ಭಾಗದ ಛಾಯೆ ಸ್ಪಷ್ಟವಾಗುತ್ತದೆಂದು ಅವನಿಗೆ ತಿಳಿಯಿತು.

ಸಮಸ್ಯೆ ಬಗೆಹರಿದಂತಾಯಿತು. ಆದರೆ ಕೆಲಸ ಮುಗಿಯಲಿಲ್ಲ. ಈ ಚಿತ್ರ ಬೆಳಕು ತಗಲಿದರೆ ಕೆಟ್ಟು ಹೋಗುತ್ತಿತ್ತು. ಅವನ್ನು ಕತ್ತಲು ಕೋಣೆಯಲ್ಲೇ ಇಡಬೇಕಾದರೆ ಏನು ಸಾಧಿಸಿದಂತಾಯಿತು? ಚಿತ್ರ ಚಿರಸ್ಥಾಯಿಯಾಗಬೇಕಾದರೆ ಅದನ್ನು ಬೇರಾವುದಾದರೂ ದ್ರವದಿಂದ ಸಂಸ್ಕರಿಸಿ ಮುಂದೆ ಬೆಳಕಿನ ಪರಿಣಾಮವಾಗದಂತೆ ಮಾಡಬೇಕಾಗಿತ್ತು. ಹಲವು ವಿಫಲ ಪ್ರಯೋಗಗಳ ನಂತರ ಉಪ್ಪು ನೀರಿನಲ್ಲಿ ತೊಳೆದರೆ ಚಿತ್ರ ಚಿರಸ್ಥಾಯಿಯಾಗುವುದೆಂದು ದಗೇರನಿಗೆ ಗೊತ್ತಾಯಿತು. ಆ ಮೇಲೆ ಉಪ್ಪು ನೀರಿಗಿಂತಲೂ

ಸೋಡಿಯಂ ಹೈಪೊಸಲ್ಫೇಟಿನಲ್ಲಿ ತೊಳೆದರೆ ಬೆಳಕು ತಾಗದಿದ್ದ ಭಾಗದ ಲೇಪವು ತೊಡೆದು ಹೋಗಿ "ಫೋಟೋ" ಪ್ಲೇಟಿನಲ್ಲಿ ಚಿತ್ರವು ಶಾಶ್ವತವೂ ನಿರ್ದುಷ್ಟವೂ ಆಗಿ ಉಳಿಯುವುದೆಂದು ಅವನು ಕಂಡುಕೊಂಡನು.

ಈ ಪ್ರಕಾರ ಜಗತ್ತಿನ ಪ್ರಪ್ರಥಮ ಯಶಸ್ವಿ "ಫೋಟೋಗ್ರಾಫ"ನ್ನು ಲುಯಿ ದಗೇರನು ನಿರ್ಮಿಸಿದವನಾದನು. ಅದಕ್ಕೆ "ದಗೇರೊಟೈಪ್" ಎಂದೇ ಹೆಸರು ಬಿತ್ತು. ದಗೇರೊಟೈಪನ್ನು ಆಧುನಿಕ ದೃಷ್ಟಿಯಿಂದ ಫೋಟೋಗ್ರಾಫ್ ಎನ್ನಲು ಬಾರದು. ಕಾಗದದ ಮೇಲೆ ಮೂಡಿಸುವ ಫೋಟೋ ಪದ್ಧತಿಯನ್ನು ಕಂಡುಹಿಡಿದವನು ಬ್ರಿಟಿಶ ವಿಜ್ಞಾನಿಯಾದ ಫಾಕ್ಸ್ ಟಾಲ್ಬಟ್. ದಗೇರೊಟೈಪನ್ನು ಲೋಹದ ತಗಡಿನ ಮೇಲೆ ಮುದ್ರಿಸಲಾಗುತ್ತಿತ್ತು.

ಹಳ್ಳಿಯ ನ್ಯಾಯಾಲಯದ ಪೇದೆಯ ಮಗನಾಗಿ ಹುಟ್ಟಿ, ಚಿತ್ರಕಾರನಾಗಿ ತರಬೇತಿ ಹೊಂದಿದ್ದ ದಗೇರನು ಈಗ ವಿಜ್ಞಾನವಿಸ್ಮಯವೊಂದನ್ನು ಸಾಧಿಸಿ ೫೦ನೇ ವಯಸ್ಸಿನಲ್ಲಿ ಜಗತ್ಪ್ರಸಿದ್ಧ ವ್ಯಕ್ತಿಯಾಗಿ ಬಿಟ್ಟನು. ೧೮೩೯ ರಲ್ಲಿ ಪೆಲೆಮರಾಜಿನ್‌ನಲ್ಲಿ ಅವನು ದಗೇರೊಟೈಪನ್ನು ಪ್ರದರ್ಶಿಸಿದ ಮೇಲೆ ಜನರಿಗೆ ದಗೇರೊಟೈಪಿನ ಹುಚ್ಚೇ ತಗಲಿಬಿಟ್ಟಿತು. ಭೂತಕನ್ನಡಿಯ ಸರಕುಗಳ ಅಂಗಡಿಗಳನ್ನು ದಗೇರೊಟೈಪ್ ಉಪಕರಣಗಳಿಗಾಗಿ ಅವರು ಮುತ್ತತೊಡಗಿದರು.

ಅಮೇರಿಕದಿಂದ ದಗೇರನನ್ನು ಸಂದರ್ಶಿಸಲು ಪತ್ರಿಕಾ ಪ್ರತಿನಿಧಿಗಳು ಬಂದರು. ಫ್ರೆಂಚ ಸರಕಾರ ಅವನಿಗೆ ಶಾಶ್ವತವಾದ ವಿರಾಮವೇತನವನ್ನು ಮಂಜೂರು ಮಾಡಿತಲ್ಲದೆ ಲೀಜನ್ ಆಫ್ ಆನರ್ ಪದವಿಯನ್ನಿತ್ತು ಗೌರವಿಸಿತು. ಲಂಡನ್ ರಾಯಲ್ ಸೊಸೈಟಿಗೂ ನ್ಯೂಯಾರ್ಕಿನ ನ್ಯಾಶನಲ್ ಅಕಾದಮಿಗೂ ಅವನನ್ನಾರಿಸಲಾಯಿತು. ದಗೇರೊಟೈಪನ್ನು ಹೇಗೆ ತೆಗೆಯಬೇಕೆಂದು ವಿವರಿಸುವ ಅವನ ಪುಸ್ತಕ ಐದು ತಿಂಗಳಲ್ಲಿ ೨೯ ಪುನರ್ಮುದ್ರಣಗಳನ್ನು ಕಂಡಿತು.

ಭೂತಗನ್ನಡಿ ಉಪಕರಣಗಳ ವ್ಯಾಪಾರಿಗಳು ದಗೇರನ ಆವಿಷ್ಕಾರದ ದೆಸೆಯಿಂದ ಕೋಟಿಗಟ್ಟಳೆ ಲಾಭ ಹೊಡೆಯುತ್ತಿದ್ದು ಜನರು ಅವುಗಳಿಗಾಗಿ ಮುಗಿಬೀಳುತ್ತಿದ್ದಾಗ ಕೆಲ ಅಪಸ್ವರಗಳು ಕೇಳಿಸದಿರಲಿಲ್ಲ. "ಇಂದಿನಿಂದ ಚಿತ್ರಕಲೆಯ ಸಮಾಪ್ತಿಯಾದಂತೆ" ಎಂದು ಕಲಾವಿದ ಡಿಲಾರೋಚೆ ಹಳಹಳಿಸಿದನು; ಲೇಪ್‌ತ್ಸಿಕ್ಕಿನ ಪತ್ರಿಕೆಯೊಂದು ದೇವರ ಹೆಸರಲ್ಲಿ ಶಂಖವಾದ್ಯಮಾಡಿತು. "ಈ ಆವಿಷ್ಕಾರ ಧರ್ಮಬಾಹಿರವಾದದ್ದು. ಮಾನವನು ದೇವರ ಪ್ರತಿಬಿಂಬವಾಗಿ ನಿರ್ಮಿಸಲ್ಪಟ್ಟಿದ್ದಾನೆ. ದೇವರನ್ನು ಈ ಕರೇಗೂಡಿನಲ್ಲಿ ಬಂಧಿಸಿಡಲು ಇವರಾರು!" ಎಂದು ಆರ್ಭಟಿಸಿತದು.

ಫ್ರೆಂಚ ಸರಕಾರ ದಗೇರನಿಂದ ಈ ಆವಿಷ್ಕಾರದ ಗೋಪ್ಯವನ್ನು ಕೊಂಡುಕೊಂಡು ಲೋಕಹಿತಾರ್ಥವಾಗಿ ಬಹಿರಂಗ ಪಡಿಸಿತು. ಪ್ರತಿಯೊಬ್ಬನೂ ಮೋಟು ಮರಗಳ, ಒಡಕು ಗೋಡೆಗಳ, ಮುರುಕು ಇಗರ್ಜಿಗಳ ಚಿತ್ರಗಳನ್ನು ತಗಡಿನ ಮೇಲೆ ತೆಗೆದು ಅದ್ಭುತವನ್ನು ಸಾಧಿಸಿದವನಂತೆ ತನ್ನನ್ನು ತಾನೇ ಅಭಿನಂದಿಸುವಂತಾಯಿತು.

ಆ ಸಮಯದಲ್ಲಿ ಈ ವಿಜ್ಞಾನ ಸಿದ್ಧಿಯ ಮಹತ್ಪರಿಣಾಮಗಳೇನಾಗಬಹುದೆಂದು ದಗೇರ ಕೂಡ ಊಹಿಸಿರಲಾರ. ಪ್ರತಿಯೊಂದು ಶಾಸ್ತ್ರದ ಪ್ರಗತಿಗೂ ಫೋಟೋಗ್ರಾಫಿಯು ಕೊಡಬಹುದಾದ ಕಾಣಿಕೆಯ ಕಲ್ಪನೆ ಅವನಿಗಿರಲಿಲ್ಲ. ಅವನು ಇದರಿಂದ ವಿಶೇಷ ಹಣ ಕೂಡ ಸಂಪಾದಿಸಲಿಲ್ಲ. ವಿಜ್ಞಾನದ ಮೈಲುಗಲ್ಲೊಂದನ್ನು ಸ್ಥಾಪಿಸಿದ ಮೇಲೆ ಅವನು ತನ್ನ ಹಳ್ಳಿಗೆ ಮರಳಿ ಅಲ್ಲಿ ವಿರಾಮವಾಗಿ ತನ್ನ ಅಪರ ವಯಸ್ಸನ್ನು ಫೋಟೋಗ್ರಾಫಿಯಲ್ಲಲ್ಲ—ಚಿತ್ರಗಳನ್ನು ಬರೆಯುವುದರಲ್ಲಿ ಕಳೆದನು.

"ಗಂಡ ಹೆಂಡತಿಗೆ ಹನ್ನೊಂದನೇ ಮಗುವಿನಂತಾಗಲಿ"
ಎಂದು ಋಷಿಗಳು ಹೇಳಿದರು

ಹಿಂದೂ ಗೃಹಿಣಿಯ ಆದರ್ಶ

ಡಿ. ಎನ್. ಶಾನಭಾಗ

ಹಿಂದುಗಳ ಶಾಸ್ತ್ರಗಳಿಗೆಲ್ಲ ಮೂಲಾಧಾರವಾದ ವೇದಗಳಲ್ಲಿ ಕಂಡುಬರುವ ವಿವಾಹದ ಕಲ್ಪನೆ ವಿಶಿಷ್ಟವಾಗಿದೆ. ವಿವಾಹವು ಹಿಂದುಗಳಲ್ಲಿ ಷೋಡಶ ಸಂಸ್ಕಾರಗಳಲ್ಲೊಂದಾಗಿದೆ. ಮನುಷ್ಯನ ದೇಹದ ಮತ್ತು ಮನಸ್ಸಿನ ಬೆಳವಣಿಗೆಯ ಆಯಾ ಹಂತಗಳಲ್ಲಿ ಅವುಗಳಿಗೆ ಅನುರೂಪವಾದ ಬೇರೆ ಬೇರೆ ಸಂಸ್ಕಾರಗಳನ್ನು ಹಿಂದೂ ಶಾಸ್ತ್ರಜ್ಞರು ಕಲ್ಪಿಸಿದ್ದಾರೆ. ಆ ಸಂಸ್ಕಾರಗಳಲ್ಲಿ ವಿವಾಹ ಸಂಸ್ಕಾರಕ್ಕೆ ಒಂದು ಪ್ರಮುಖ ಸ್ಥಾನವಿದೆ. ಪತಿಪತ್ನೀ ಸಂಬಂಧವು ಕೇವಲ ಕಾಮಪಿಪಾಸೆಯನ್ನು ತಣಿಸಲಿಕ್ಕೆ ಮಾತ್ರವಲ್ಲವೆಂಬದನ್ನು ವೇದಕಾಲದ ಋಷಿಗಳು ಸ್ಪಷ್ಟಪಡಿಸಿದ್ದಾರೆ.

ಹೆಣ್ಣು ಎಂದರೆ ಕೇವಲ ಪುರುಷನ ಸೌಖ್ಯಾಸೌಖ್ಯಗಳನ್ನು ಕಾಣುವ ಮಾನವ ಯಂತ್ರವೆಂದು ಋಷಿಗಳು ಪರಿಗಣಿಸಲಿಲ್ಲ. ಅಥವಾ ಹೆಣ್ಣು-ಗಂಡುಗಳು ತಮಗೆ ಬೇಕಾದಾಗ ವಿವಾಹದ ಕರಾರನ್ನು ಮಾಡಿಕೊಳ್ಳಬಹುದು; ಮತ್ತು ಕ್ಷಣಿಕ ವಿರಸವಾದರೂ ಸಹಿಸದೆ ಕೂಡಲೇ ಆ ಕರಾರನ್ನು ರದ್ದುಮಾಡಿ ಬೇರೆ ಬೇರೆಯಾಗಿ ಉಳಿಯಬಹುದೆಂಬದನ್ನೂ ಅವರು ಒಪ್ಪಲಿಲ್ಲ. ಕೇವಲ ಪುರುಷನ ಗೆಳೆತನವೇ ಹೆಣ್ಣಿನ ಧ್ಯೇಯವೆಂತಲೂ ಅವರು ನಂಬಲಿಲ್ಲ. ಅವರ ದೃಷ್ಟಿ ಉದಾತ್ತವಾಗಿತ್ತು. ಹೆಣ್ಣಿನ ಬಗ್ಗೆ ಪವಿತ್ರ ಕಲ್ಪನೆ ಅವರಲ್ಲಿತ್ತು. ಪುರುಷನ ಸಖ್ಯಕ್ಕಿಂತ ಗೃಹಿಣೀತ್ವ ಮಾತೃತ್ವಗಳೇ ನಾರಿಯ ಜೀವನದ ಮುಖ್ಯ ಗುರಿಯೆಂದು ಅವರು ದೃಢವಾಗಿ ನಂಬಿದ್ದರು.



ಇದಕ್ಕೆ ಆಧಾರವಾಗಿ ವಿವಾಹ - ಸಂಸ್ಕಾರದ ಸಮಯದಲ್ಲಿ ವರನು ವಧುವಿನ ಕೈ ಹಿಡಿಯಬೇಕಾದರೆ ಹೇಳುವ ಮಂತ್ರಗಳನ್ನು ಪರಿಶೀಲಿಸಬಹುದು:

ಗೃಭ್ಣಾಮಿ ತೇ ಸೌಭಗತ್ವಾಯ ಹಸ್ತಂ
ಮಯಾ ಪತ್ಯಾ ಜರತ್ ಅಷ್ಟಿಃ ಯಥಾ ಅಸಃ।
ಭಗಃ ಅರ್ಯಮಾ ಸವಿತಾ ಪುರಂಧಿಃ
ಮಹ್ಯಂ ತ್ವಾ ಅದುಃ ಗಾರ್ಹಪತ್ಯಾಯ
ದೇವಾಃ ॥

(ಋ. ೧೦-೮೫-೩೬)

"ಈ ನಿನ್ನ ಕೈಯನ್ನು ನಾನು ನಿನ್ನ ಸೌಭಾಗ್ಯದ ಸಲುವಾಗಿ ಹಿಡಿಯುತ್ತೇನೆ. ನಿನ್ನ ಗಂಡನಾದ ನನ್ನ ಸಂಗಡಲೇ ನೀನು ವೃದ್ಧಳಾಗು. ನೋಡಿಲ್ಲಿ, ಭಾಗ್ಯಾಧಿಪತಿಯೂ ಆರ್ಯಮನೂ ಸವಿತೃವೂ ಇಂದ್ರನೂ ನಾನು ಗೃಹಸ್ಥಾಶ್ರಮವನ್ನು ಸರಿಯಾಗಿ ಆಚರಿಸಲೆಂದು ನಿನ್ನನ್ನು ನನ್ನ ಕೈಯಲ್ಲಿ ಕೊಟ್ಟಿದ್ದಾರೆ."

ಇಹ ಪ್ರಿಯಂ ಪ್ರಜಯಾ ತೇ ಸಂಋಧ್ಯತಾಂ
ಅಸ್ಮಿನ್ ಗೃಹೇ ಗಾರ್ಹಪತ್ಯಾಯ ಜಾಗೃಹಿ।
ಏನಾ ಪತ್ಯಾ ತನ್ವಂ ಸಂಸೃಜಸ್ವ
ಅಧಾಜಿವೀ ವಿದಥಂ ಆವದಾಥಃ ॥

(ಋ ೧೦-೮೫-೨೭)

"ನಿನಗೆ ಸೇರುವ ಎಲ್ಲ ವಿಷಯಗಳೂ ಇಲ್ಲಿ ನಿನ್ನ ಮಕ್ಕಳ ಯೋಗದಿಂದ ಅಭಿವೃದ್ಧಿ ಹೊಂದಲಿ. ಈ ಮನೆಯಲ್ಲಿ ಗೃಹಸ್ಥ ಧರ್ಮವು ಸರಿಯಾಗಿ ಪಾಲಿಸಲ್ಪಡುವಂತೆ ನೀನು ದಕ್ಷಳಾಗಿರು. ನೀನು ಈ ಪತಿಯ ಸಂಗಡ ಸಮರೂಪಳಾಗಿ ವೃದ್ಧಾಪ್ಯದಲ್ಲಿ ಇತರರಿಗೂ ಇದೇ ಉಪದೇಶವನ್ನು ಮಾಡುವಂಥವಳಾಗು."

"ಸೋಮಃ ದದತ್ ಗಂಧರ್ವಾಯ
ಗಂಧರ್ವಃ ದದತ್ ಅಗ್ನಯೇ।
ರಯಿಂ ಚ ಪುತ್ರಾನ್ ಚ ಅದಾತ್
ಅಗ್ನಿಃ ಮಹ್ಯಂ ಅಥೋ ಇಮಾಮ್ ॥ ೪೧ ॥

"ಸೋಮನು ಗಂಧರ್ವನ ಕೈಯಲ್ಲೂ, ಗಂಧರ್ವನು ಅಗ್ನಿಯ ಕೈಯಲ್ಲೂ ಮತ್ತು ಅಗ್ನಿಯು ಇವಳನ್ನು ನನ್ನ ಕೈಯಲ್ಲೂ ಕೊಟ್ಟು ಸಂಪತ್ತನ್ನೂ ಪುತ್ರರನ್ನೂ ಕೊಟ್ಟನು"

ಮುಂದೆ ೪೩ ರಿಂದ ೪೭ರ ವರೆಗಿನ ಮಂತ್ರಗಳು ಅತಿ ಮಹತ್ವದ್ದಾಗಿವೆ. ಅವುಗಳ ಅರ್ಥ ಹೀಗಿದೆ:

"ಪ್ರಜಾಪತಿಯಾದ ಈಶ್ವರನು ನಮ್ಮಲ್ಲಿ ಸಂತತಿಯಾಗುವಂತೆ ಮಾಡಲಿ. ಆರ್ಯ ಜನರನ್ನು ಪ್ರೀತಿಸುವ ಅರ್ಯಮನು ವೃದ್ಧಾಪ್ಯದಲ್ಲಿ ಕೂಡ ಆರೋಗ್ಯವಂತರನ್ನಾಗಿ ಇಡಲಿ. ಮಂಗಲಪ್ರದಳಾದ ನೀನು ಈಗ ಪತಿಗೃಹವನ್ನು ಪ್ರವೇಶಿಸು; ಮತ್ತು ಮನುಷ್ಯರಿಗೂ ಪಶುಗಳಿಗೂ ಮಂಗಲದಾಯಕಳಾಗು. ನಿನ್ನ ದೃಷ್ಟಿಯು ಮಂಗಲಕಾರಕವಿರಲಿ. ಪತಿಯನ್ನು ದೀರ್ಘಾಯುಷಿ ಮಾಡುವಂಥ ಪವಿತ್ರ ಮನಸ್ಸಿನವಳೂ ತೇಜಸ್ವಿನಿಯೂ ಆಗಿ ಪಶುಗಳ ಮೇಲೆ ಪ್ರೀತಿ ಮಾಡುವಂಥಳಾಗು. ಈಶ್ವರಭಕ್ತೆಯೂ ವೀರಪ್ರಸೂತೆಯೂ ಆಗು. ಉದಾರಿಯಾದ ಇಂದ್ರನೇ, ನೀನು ಇವಳನ್ನು ಸುಪುತ್ರವತಿ ಮತ್ತು ಸೌಭಾಗ್ಯವತಿಯನ್ನಾಗಿ ಮಾಡು. ಇವಳಿಗೆ ನೀನು ಹತ್ತು ಮಕ್ಕಳನ್ನು ನೀಡು ಮತ್ತು ಇವಳ ಪತಿಯು ಹನ್ನೊಂದನೆಯವನನಾಗಲಿ. ಮಾವನಿಗೂ ಅತ್ತೆಗೂ ನೀನು ಮನೆಯ ರಾಣಿಯಾಗಿ ತೋರಲಿ. ನಿನ್ನ ಮೈದುನರಿಗೂ ನೀನು ಮನೆಯ ರಾಣಿಯೆಂಬುದು ತಿಳಿಯಲಿ. ಎಲ್ಲಾ ದೇವತೆಗಳೂ ನಮ್ಮನ್ನು ಉತ್ಕೃಷ್ಟ ಸ್ಥಿತಿಯಲ್ಲಿಡಲಿ. ಆಪೋದೇವತೆಯು ನಮ್ಮ ಅಂತಃಕರಣಗಳನ್ನು ಸೇರಿಸಲಿ. ವಾಯುದೇವತೆಯೂ ಪರಮೇಶ್ವರನೂ ನಮ್ಮನ್ನು ಸುದೃಢರನ್ನಾಗಿ ಮಾಡಲಿ."

ದಾಂಪತ್ಯ ಜೀವನದಲ್ಲಿ ವೇದಕಾಲದ ಆರ್ಯರು ಗೃಹಿಣಿಯಿಂದ ಏನನ್ನು ಅಪೇಕ್ಷಿಸುತ್ತಿದ್ದರೆಂಬುದು ಈ ಮೇಲಿನ ಉದ್ಗಾರಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಮನೆಯಲ್ಲಿ ಹೊಸದಾಗಿ ಪ್ರವೇಶಿಸುವ ಗೃಹಿಣಿಯು ಮನೆಯಲ್ಲಿಯ ಅತ್ತೆ-ಮಾವ, ಮೈದುನರ ಮನಸ್ಸನ್ನು ಗೆದ್ದು ಮನೆಯ ಅಧಿದೇವತೆಯಾಗಬೇಕೆಂಬುದನ್ನು ಪತಿಯೇ ಅಪೇಕ್ಷಿಸುತ್ತಾನೆಂದಮೇಲೆ ಅವರ ಮನಸ್ಸು ಎಷ್ಟು ಉದಾತ್ತವಾಗಿರಬೇಕು! "ಗೃಹಿಣೀ ಗೃಹಮುಚ್ಯತೇ" ಎಂದು ಅವರು

ಶಬ್ದಾಡಂಬರಕ್ಕೆ ಹೇಳಿದ್ದಲ್ಲ. ಆ ಮಾತು ಅರ್ಥವತ್ತಾಗಿದೆ. ಪತಿ-ಪತ್ನಿಯರ ಜೀವನ ಪರಸ್ಪರ ನಿಷ್ಠೆಯ ಹೊರತು ಸುಖಿಯಾಗುವುದಿಲ್ಲ. ಮನೆಗೆ ಬರುವ ಪತ್ನಿ ನಿಜವಾಗಿ "ಮಹಾಲಕ್ಷ್ಮೀ" ಸ್ವರೂಪಿಯೇ ಆಗಿದ್ದಳು. ಅವಳು ಕೇವಲ ಮನುಷ್ಯಮಾತ್ರಕ್ಕೆ ಮಂಗಲಕಾರಕಳಾದರೆ ಸಾಕಾಗಿರಲಿಲ್ಲ. ಇತರ ಪ್ರಾಣಿಗಳನ್ನೂ ಅವಳು ಪ್ರೀತಿಯಿಂದ ಕಾಣಬೇಕಿತ್ತು. ಗೃಹಿಣಿ ಎಂದರೆ ಪ್ರೇಮ ವಾತ್ಸಲ್ಯಗಳ ಪ್ರತಿಮೂರ್ತಿಯೇ ಆಗಿದ್ದಳು. ಅದಕ್ಕೇ ಅವರು "ಪತಿಮೇಕಾದಶಂ ಕೃಧಿ" ಪತಿಯನ್ನು ಹನ್ನೊಂದನೆಯ ಪುತ್ರನನ್ನಾಗಿ ನೋಡು ಎಂದು ಹೇಳಿದ್ದು. ಪತಿಯನ್ನು ಕೂಡ ವಾತ್ಸಲ್ಯದಿಂದ ಕಾಣಬೇಕಾದರೆ ಅವಳು ಶ್ರೇಷ್ಠಮಾತೆ ಆಗಿದ್ದಳೆಂಬುದಕ್ಕೆ ಸಂಶಯವಿಲ್ಲ.

ಕಾಮವಾಸನೆಯು ತಣಿಯಲಿಕ್ಕೆ ವಿವಾಹವೆಂಬ ಸಾಮಾಜಿಕ ಕರಾರು ಎಂಬ ಮಾತನ್ನು ಅವರು ಅಲ್ಲಗಳೆದದ್ದನ್ನು ಇಲ್ಲಿ ಕಾಣಬಹುದು. ಗೃಹಸ್ಥಾಶ್ರಮದಲ್ಲುಳಿದು ಇಂದ್ರಿಯನಿಗ್ರಹವನ್ನು ಹೇಗೆ ಗಳಿಸಬಹುದೆಂಬುದನ್ನೂ ಇದು ತಿಳಿಸಿಕೊಡುತ್ತದೆ. ಪತಿ-ಪತ್ನಿಯರ ಸಹಜೀವನ ಯಾವಾಗಲೂ ಮುಗಿಯದೇ ಇರಲಿ ಎಂಬ ಇಚ್ಛೆಯನ್ನು ವ್ಯಕ್ತ ಮಾಡುವಾಗಲೇ ದಾಂಪತ್ಯಜೀವನದ ಪರಿಣತಿಯು ಕಟ್ಟಕಡೆಗೆ ಕಾಮಗಂಧಹೀನತೆಯಲ್ಲಿ ಹೊಂದಿ ಸ್ತ್ರೀಯು ತನ್ನ ಶುದ್ಧವಾತ್ಸಲ್ಯದ ಆಶ್ರಯದಲ್ಲಿ ಪತಿಯನ್ನು ಕೂಡ ತೆಗೆದುಕೊಳ್ಳಬೇಕೆಂದೂ ಜಗತ್ತಿನ ಕಡೆಗೆ ನೋಡುವ ಅವಳ ದೃಷ್ಟಿ ಕೂಡ ವಾತ್ಸಲ್ಯಮಯವಾಗಬೇಕೆಂದೂ ಅವರು ಹೇಳುತ್ತಾರೆ.

ವಿವಾಹದ ಕಾಲಕ್ಕೆ ವಧುವಿನ ತಂದೆಯು ಹೇಳುವ ಮಾತುಗಳು ಕೂಡ ಅರ್ಥವತ್ತಾಗಿವೆ.

ಪ್ರ ಇತಃ ಮುಂಚಾಮಿ ನ ಅಮುತಃ
ಸುಬದ್ಧಾಂ ಅಮುತಃ ಕರವ್ |
ಯಥಾ ಇಯಂ ಇಂದ್ರಮೀಢ್ವಃ
ಸುಪುತ್ರಾ ಸುಭಗಾ ಅಸತಿ ||

(ಋ. ೧೦-೮೫-೨೫)

"ನಾನು ನಿನ್ನನ್ನು ಪಿತೃಗೃಹದಿಂದ ಬಿಡಿಸುತ್ತೇನೆ. ಆದರೆ ಆ ಇನ್ನೊಂದು ಮನೆಯಿಂದ (ಪತಿಗೃಹದಿಂದ) ಬಿಡಿಸುವುದಿಲ್ಲ. ಅಲ್ಲಿ ನಾನು ನಿನ್ನನ್ನು ಗಟ್ಟಿಯಾಗಿ ಬಿಗಿದಿಡುತ್ತೇನೆ. ಉದಾರಿಯಾದ ಇಂದ್ರನೇ, ಇವಳನ್ನು ಸೌಭಾಗ್ಯವತಿಯನ್ನಾಗಿಯೂ ಸುಪುತ್ರವತಿಯನ್ನಾಗಿಯೂ ಮಾಡು."

ಮದುವೆಯ ಕಾಲಕ್ಕೆ ಇಷ್ಟ-ಮಿತ್ರರನ್ನು ಕರೆಯುವುದು ಇಂದು ವಾಡಿಕೆಯಾಗಿಬಿಟ್ಟಿದೆ. ಅದೊಂದು ಆಪ್ತೇಷ್ಟರು ಕೂಡಿ ನಲಿಯುವ ದಿನವಾಗಿದೆ. ವೇದಕಾಲದ ಋಷಿಗಳು ಆಪ್ತೇಷ್ಟರನ್ನು ಕರೆದು ಅವರಿಂದ ವಟುವಿಗೆ ಆಶೀರ್ವಾದ ಕೊಡಿಸುತ್ತಿದ್ದರು. ಆಪ್ತೇಷ್ಟರನ್ನೂ ಕೂಡಿದ ಜನರನ್ನೂ ಸಂಬೋಧಿಸಿ ಹೇಳುವ ಮಂತ್ರ ಅವರನ್ನು ಕರೆದ ಉದ್ದೇಶದ ಮಹತಿಯನ್ನು ತೋರಿಸುತ್ತದೆ.

ಸುಮಂಗಲೀರಿಯಂ ವಧೂಃ ಇಮಾಂ
ಸಮೇತ ಪಶ್ಯತ |
ಸೌಭಾಗ್ಯಮಸ್ಯೈ ದತ್ವಾಯ ಅಥಾಸ್ತಂ
ವಿ ಪರಾ ಇತನ ||

(೧೦-೮೫-೩೩)

"ಈ ವಧುವು ಸುಮಂಗಲಿಯಾಗಿದ್ದಾಳೆ. ಬನ್ನಿ, ಸಮೀಪ ಬಂದು ಇವಳನ್ನು ನೋಡಿರಿ. ಇವಳು ಸೌಭಾಗ್ಯವತಿಯಾಗಲಿ ಎಂಬ ಆಶೀರ್ವಾದ ಕೊಟ್ಟು ನಿಮ್ಮ ನಿಮ್ಮ ಮನೆಗಳಿಗೆ ಹೋಗುವಂಥವರಾಗಿರಿ."

ಒಂದು ಚಿತ್ತವೇಧಕ ಮರಾಠಿ ಕಥೆ

ರಘು ಕದ್ದ ಹಿಟ್ಟು

ಗೋಪಾಲ ವಿ. ವೈದ್ಯ

ಶಾಲೆಯ ಗಡಿಯಾರದಲ್ಲಿ ಐದು ಹೊಡೆದದ್ದು ಕಾಣಿಸಿದೊಡನೆ ಶಾಲೆಯ ಶಿಪಾಯಿ ಶಿವನು, ಶಂಕರನ ದೇವಾಲಯದಲ್ಲಿ ಶೋಭಿಸಬಹುದಾದಂಥ ಶಾಲೆಯ ದೊಡ್ಡ ಗಂಟೆಯನ್ನು ಘಣ ಘಣ ಬಾರಿಸಿದನು. ಧ್ವನಿಗಿಂತ ಪ್ರಕಾಶದ ವೇಗ ಹೆಚ್ಚಿಗಿರುವದೆಂದು ಸಿದ್ಧಮಾಡುವಷ್ಟು ತ್ವರಿತದಿಂದ ಎಲ್ಲ ಹುಡುಗರು ತಮ್ಮ ತಮ್ಮ ವರ್ಗಗಳಿಂದ ಹೊರಬಿದ್ದು ಕುಣಿಯುತ್ತ ಕೆಲೆಯುತ್ತ ಮನೆಯ ಹಾದಿ ಹಿಡಿದರು. ಹೆಡ್ಮಾಸ್ತರ ಕಡೇಕರರು ಖುರ್ಚಿ ಬಿಟ್ಟೆದ್ದು ನಿತ್ಯ ಪದ್ಧತಿಯಂತೆ ಹೊರಗಿನ ಜಗಲಿಗೆ ಬಂದು ನಿಂತರು. ತಮ್ಮ ಭರ್ಜರಿ ಮೀಸೆಯ ಮೇಲೆ ಕೈಯಾಡಿಸುತ್ತ ಹುಡುಗರಿಗೆ ಹೆದರಿಕೆಯಿಂದ ಮೈಜುಮ್ಮೆನ್ನಬೇಕು ಎನ್ನುವಷ್ಟು ತೀಕ್ಷ್ಣ ದೃಷ್ಟಿಯಿಂದ ಸುಮ್ಮನೆ ಅವರತ್ತ ನೋಡುತ್ತ ಒಂದು ನಾಲ್ಕೈದು ನಿಮಿಷ ಅಲ್ಲಿ ನಿಲ್ಲುವದು ಅವರ ನಿತ್ಯದ ಪರಿಪಾಠವಾಗಿತ್ತು.

ಅರ್ಧಮರ್ಧ ಸುಧಾರಿಸಿದ ಹಳ್ಳಿಯ ಪ್ರಾಥಮಿಕ ಶಾಲೆಯಲ್ಲಿಯ ಅರ್ಧಮರ್ಧ ಬುದ್ಧಿವಂತ ಮತ್ತು ಅರ್ಧಮರ್ಧ ಸ್ವಚ್ಛ ಹುಡುಗರು ಆಟ-ಪಾಟಗಳ, ಗದ್ದಲ-ಗೊಂದಲಗಳ ವಿಚಾರದಲ್ಲಿ ಮಾತ್ರ ಅರ್ಧಮರ್ಧ ಇರುವದಿಲ್ಲ ಎಂದು ಮಾಸ್ತರರಿಗೆ ಅನಿಸಿತು. ಕೊಂಡವಾಡೆಯಿಂದ ಹೊರಬೀಳುವ ದನಕರುಗಳಂತೆ ಈ ಮಕ್ಕಳು ಸಂಜೆ ಶಾಲೆಯಿಂದ ಹೊರಬೀಳುತ್ತಾರೆ ಎಂಬ ವಿಚಾರ ಅವರ ತಲೆಯಲ್ಲಿ ಮಕ್ಕಳನ್ನು ನೋಡುತ್ತಿದ್ದಂತೆ ಸುಳಿದುಹೋಯಿತು. ಒಂದು ವೇಳೆ ಮಕ್ಕಳು ಪಶುಗಳಾಗಿರಬಹುದು. ಆದರೆ ತಮ್ಮ ಶಾಲೆಯೆಂದರೆ ಕೊಂಡವಾಡೆಯೆ? ಮತ್ತೆ ತಾವು ಯಾರು? ಛೆ! ಛೆ! ಎಂಜಿನ್ನಿನಲ್ಲಿ ತುಂಬಿಕೊಂಡ ಉಗಿಯಂತೆ ಈ ಮಕ್ಕಳು ಹೊರಬಿದ್ದವು. ಉಗಿ ಕಡಿಮೆ ಮಾಡುವ ಡ್ರಾಯವ್ಹರನೇನೋ ಎನ್ನುವಂತೆ ಅವರು ತಮ್ಮೆದುರಿನಲ್ಲಿ ನಡೆದಿದ್ದ ರಘುವನ್ನು ಕರೆದರು.

ತನ್ನ ಗೆಳೆಯರ ಗುಂಪನ್ನು ಬಿಟ್ಟುಕೊಟ್ಟು ರಘು ಮಾಸ್ತರರ ಎದುರಿಗೆ ಬಂದು ನಿಂತನು. ಫೌಜದಾರನು ಆರೋಪಿಯನ್ನು ಪ್ರಶ್ನಿಸುವ ಮಾದರಿಯಲ್ಲಿ ಅವರು "ನೀನು ಇಂದು ಮುಂಜಾನೆ ನನ್ನನ್ನೇಕೆ ಭೆಟ್ಟಿಯಾಗಲಿಲ್ಲ?" ಎಂದು ರಘು



" ಮನೋಹರ " ದಿಂದ

ವನ್ನು ಕೇಳಿದರು. ಗಂಡನೊಡನೆ ಮೊದಲನೆಯ ಸಲ ಮಾತಾಡುವಾಗ ಗೊಂದಲಕ್ಕೊಳಗಾಗುವ ನವವಧುವಿನಂತೆ ರಘು ಕೆಳಗೆ ಮುಖ ಹಾಕಿ ಸುಮ್ಮನೆ ನಿಂತುಕೊಂಡಿದ್ದ. "ಇಂದು ಫೀ ತಂದು ಕೊಡುವದಾಗಿ ನೀನು ಹೇಳಿದ್ದೀಯಲ್ಲವೇ ?" ಕಡೇಕರ ಮಾಸ್ತರರು ಪುನಃ ಕೇಳಿದರು.

"ಹೌದು ಸರ್," ಕೇಳಿಸೀತೊ ಇಲ್ಲವೋ ಎನ್ನುವಷ್ಟು ಸಣ್ಣ ದನಿಯಲ್ಲಿ ರಘು ಉತ್ತರ ಕೊಟ್ಟ.

"ನೀನು ನನ್ನನ್ನು ಭೆಟ್ಟಿಯಾಗಲೂ ಇಲ್ಲ, ಫೀ ತಂದು ಕೊಡಲೂ ಇಲ್ಲ. ಮತ್ತೆ ಹಾಗೆಯೇ ಮನೆಗೆ ಹೊರಟಿದ್ದಿಯಲ್ಲವೇ ?"

"ಮನೆಯಲ್ಲಿ ಇಂದು ಫೀ ಹಣ ಸಿಗಲಿಲ್ಲ," ತಡವರಿಸುತ್ತ ರಘು ಹೇಳಿದ.

"ನೀನು ನಿನ್ನ ತಂದೆಗೆ ನನ್ನ ನಿರೋಪವನ್ನು



ಮುಟ್ಟಿಸಿದೆಯೊ ಇಲ್ಲವೋ ?"

"ಹೌದು."

"ಏನು ಹೇಳಿದೆ ?"

"ಬಹಳ ದಿನಗಳಿಂದ ಫೀ ಹಣ ಬಾಕಿ ಇದೆ ಯೆಂದೆ."

"ರಘೂ, ನೋಡು. ಕಳೆದ ವರ್ಷದಿಂದ ನಿನ್ನ ಫೀ ಬಾಕಿ ಇದೆ. ಜೊತೆಗೆ ಮೇ ರಜೆ ಮತ್ತು ಜೂನ್-ಜುಲೈ ಎರಡು ತಿಂಗಳು ಕಳೆದಿವೆ. ಫೀ ಬಾಕಿ ಇದ್ದರೆ ನಾನು ಯಾರಿಗೂ ಪರೀಕ್ಷೆಗೆ ಕೂಡ್ರಲು ಸಹಿತ ಕೊಡುವದಿಲ್ಲ. ಆದರೆ ನಿನಗೆ ಪರೀಕ್ಷೆಗೆ ಕೂಡ್ರಲು ಕೊಟ್ಟೆ, ಇಷ್ಟೇ ಅಲ್ಲ, ಮೇಲಿನ ವರ್ಗದಲ್ಲಿ ಕೂಡ್ರಲು ಸಹಿತ ಅಪ್ಪಣೆ ಕೊಟ್ಟೆ. ಇನ್ನು ಫೀಗಾಗಿ ಹಾದಿ ಕಾಯುವದು ಸಾಧ್ಯವಿಲ್ಲ. ನಾಳೆ ಶಾಲೆಗೆ ಬರುವದಾದರೆ ಫೀ ತೆಗೆದುಕೊಂಡೇ ಬಾ. ಇಲ್ಲವಾದರೆ ನಿನ್ನ ಹೆಸರನ್ನು ಕಿತ್ತು ಹಾಕಬೇಕಾದೀತು. ಮತ್ತೆ ಹೊಸ ಪುಸ್ತಕಗಳನ್ನು ತೆಗೆದುಕೊಂಡಿರುವಿಯೇನು ?"

"ಇಲ್ಲ."

"ಇಲ್ಲವಷ್ಟೇ ? ಏನೂ ಸಾಧ್ಯವಿಲ್ಲ. ನಿನ್ನ ಹೆಸರು ತೆಗೆದು ಹಾಕದೆ ಬೇರೆ ಉಪಾಯವೇ ಇಲ್ಲ."

"ಮನೆಯಲ್ಲಿ ತುಂಬ ಅಡಚಣಿ ಇದೆ, ಸರ್."

"ನಿನ್ನ ಮನೆಯಲ್ಲಿ ಯಾವಾಗ ಅಡಚಣಿ ಇರುವದಿಲ್ಲ? ಮತ್ತೆ ಅಡಚಣಿ ನಿನಗೊಬ್ಬನಿಗೆ ಮಾತ್ರವೇ ಇದೆಯೇನು ?"

ಈಗ ಮಾಸ್ತರರಿಗೆ ಎಲ್ಲವನ್ನೂ ತುಸು ವಿವರಿಸಿ ಹೇಳಬೇಕು ಎಂದೆನಿಸಿ ರಘು ಹೇಳಿದ: "ಸರ್, ಹಾಗೇನೂ ಇಲ್ಲ. ಎಷ್ಟೋ ಸಲ ನಾನು ಒಪ್ಪೊತ್ತೇ ಊಟ ಮಾಡುತ್ತೇನೆ. ಹಾಕಿಕೊಂಡಿರುವ ಇವೇ ಚಡ್ಡಿ-ಅಂಗಿಗಳನ್ನು ತೊಳೆದು ಒಣಗಿಸಿ ಹಾಕಿಕೊಳ್ಳುತ್ತೇನೆ. ನನ್ನ ತಂದೆ ದಿನಗೂಲಿ ಮಾಡುತ್ತಾರೆ. ಒಂದೊಂದು ಸಲ ನಾಲ್ನಾಲ್ಕು ದಿನಗಳ ವರೆಗೆ ಅವರಿಗೆ ಕೆಲಸ ಸಿಗುವದಿಲ್ಲ. ಮನೆಯಲ್ಲಿ ನಾವು ಸಣ್ಣವರು ದೊಡ್ಡವರು ಸೇರಿ ಒಟ್ಟು ಐದು ಜನ ಇದ್ದೇವೆ" ಪ್ರತಿಯೊಂದು ಶಬ್ದದ ಜೊತೆಗೆ ರಘುವಿನ ಕಂಠ ಗದ್ಗದಿತವಾ

ಗುತ್ತ ನಡೆದಿತ್ತು. ಆತ ಕೆಳಗೆ ಮುಖ ಹಾಕಿಕೊಂಡೇ ಮಾತನಾಡುತ್ತಿದ್ದುದರಿಂದ ಅವನ ಕಣ್ಣುಗಳಲ್ಲಿ ನೀರು ತುಂಬುತ್ತಿದ್ದುದು ಮಾಸ್ತರರಿಗೆ ಕಾಣಿಸಲಿಲ್ಲ. ಅವರು ಸಿಟ್ಟಿನಿಂದ "ನೋಡಿಲ್ಲಿ, ನಿನ್ನ ಕರ್ಮಕಥೆ ಕೇಳಲು ನನಗೆ ಸಮಯವಿಲ್ಲ. ಹೋಗು. ಶಾಲೆಗೆ ಬರುವದಾದರೆ, ಎಲ್ಲ ಫೀ ಮತ್ತು ಪುಸ್ತಕಗಳನ್ನು ತೆಗೆದುಕೊಂಡೇ ಬಾ. ಇಲ್ಲವಾದರೆ ಹೆಸರು ಕಿತ್ತು ಹಾಕಲ್ಪಟ್ಟಿತು ಎಂದೇ ತಿಳಿದುಕೊ" ಎಂದರು.

ಭಾರವಾದ ಹೆಜ್ಜೆಯಿಂದ, ಅದಕ್ಕೂ ಭಾರವಾದ ಮನಸ್ಸಿನಿಂದ ರಘು ಅಲ್ಲಿಂದ ಹೊರಟ. ಇಷ್ಟು ಹೊತ್ತಿಗೆ ಶಾಲೆ ಶಾಂತವಾಗಿತ್ತು. ವರ್ಗಗಳ ಕೋಣೆಗಳಿಗೆ ಬೀಗ ಹಾಕುತ್ತ ಶಿವ ಈಗ ಕಡೇಕರ ಮಾಸ್ತರರ ಕೋಣೆಗೆ ಬಂದಿದ್ದ. ಮಾಸ್ತರರ ಕೋಣೆಗೆ ಬೀಗ ಹಾಕಿ ಕೀಲಿಕೈ ಗೊಂಚಲನ್ನು ಅವರ ಕೈಗಿತ್ತ.

ಮನೆಗೆ ಬಂದು ಕೈಕಾಲು ತೊಳೆದು ಮಾಸ್ತರರು ನಿತ್ಯದಂತೆ ಅಡಿಗೆ ಮನೆಯಲ್ಲಿ ಹಾಕಿಟ್ಟಿದ್ದ ಮಣೆಯ ಮೇಲೆ ಕುಳಿತರು. ಆದಷ್ಟು ಕಡಿಮೆ ವೇಳೆಯಲ್ಲಿ ಅವರು ಉಪಾಹಾರ ಮುಗಿಸಿ ತಮ್ಮ ಮನೆಯ ಮಗ್ಗಲಿನ ಬಯಲಲ್ಲಿ ಹಾಕಿದ್ದ ಹಿಟ್ಟಿನ ಗಿರಣಿಗೆ ಹೋಗುತ್ತಿದ್ದರು. ಮಾಸ್ತರಿಕೆಯ ಜೊತೆಗೆ ಅವರು ಹಿಟ್ಟಿನ ಗಿರಣಿಯನ್ನು ಪ್ರಾರಂಭಿಸಿದ್ದರು ಅದು ಅವರ ವ್ಯವಹಾರ ಕೌಶಲ್ಯದ ಸಾಕ್ಷಿಯಾಗಿತ್ತು ಅವರು ಮೂಲತಃ ಇದೇ ಊರಿನವರು. ಶಾಲೆಯ ವೇಳೆಯನ್ನುಳಿದು ಇತರ ಸಮಯವನ್ನೆಲ್ಲ ಅವರು ಗಿರಣಿಯ ಕೆಲಸಕ್ಕೆ ಮೀಸಲಾಗಿಡುತ್ತಿದ್ದರು. ಸ್ವತಃ ಗಲ್ಲೆಯ ಮೇಲೆ ಕುಳಿತು ಕೆಲಸ ನಿರೀಕ್ಷಿಸುತ್ತಿದ್ದರು. ಗಿರಣಿಯಲ್ಲಿ ತಮ್ಮ ಸಹಾಯಕ್ಕೆಂದು ಅವರು ಒಬ್ಬ ನೌಕರನನ್ನು ಇಟ್ಟುಕೊಂಡಿದ್ದರು.

ಹಿಟ್ಟಿನ ಧೂಳು ತಮಗೆ ತಾಗಬಾರದು, ಆದರೆ ಜನರಿಂದ ಹಣ ಸ್ವತಃ ಪಡೆಯಲು ಅನುಕೂಲವಾಗಿರಬೇಕು ಇಂಥ ಸ್ಥಳದಲ್ಲಿ ಒಂದು ಗಾದಿ ಹಾಕಿಕೊಂಡು ಮಾಸ್ತರರು ಕೂಡ್ರುತ್ತಿದ್ದರು. ದಿನಾಲು ಅವರಿಗೆ ಮೂರು-ನಾಲ್ಕು ರೂಪಾಯಿಗಳ ಉತ್ಪನ್ನ ಬರುತ್ತಿತ್ತು.

ಚಕ್ಕಿಯಲ್ಲಿಯ ಕಾಳು ಮುಗಿದದ್ದರಿಂದ ಬಂದ ಗರಗರ ಸಪ್ಪಳ ಕೇಳಿ ಅವರು "ದತ್ತು, ಎಲ್ಲಿದೆ ಲಕ್ಷ್ಯ? ಮುಂದಿನವರ ಕಾಳು ಹಾಕು" ಎಂದರು. ದತ್ತುಗೆ ಹಿಟ್ಟು ಬೀಸಿಕೊಳ್ಳಲು ಬಂದವರೊಡನೆ ಹರಟೆ ಕೊಚ್ಚುವ ಚಟಬಿದ್ದಿತ್ತು. ಮಾಸ್ತರರ ಧ್ವನಿ ಕೇಳಿ ಎಚ್ಚತ್ತು ಆತ ಕೆಲಸದ ಕಡೆಗೆ ಗಮನವಿತ್ತ.

ಮನುಷ್ಯರ ಕೂದಲು ಬೆಳ್ಳಗಾಗಲು ಸಾಮಾನ್ಯವಾಗಿ ಮೂರು ತಪಗಳು ಹಿಡಿದರೆ ಈ ಹಿಟ್ಟಿನ ಗಿರಣಿಯಲ್ಲಿ ಮೂರು ತಾಸಿನೊಳಗೆ ದತ್ತುವಿನ ಕೂದಲು ಬೆಳ್ಳಗಾಗಿಬಿಡುತ್ತಿತ್ತು. ರಾತ್ರಿ ೭-೮ ಗಂಟೆಗೆ ಗಿರಣಿ ಮುಚ್ಚಿದ ನಂತರ ಆತ ಪ್ರತಿನಿತ್ಯ ಸ್ನಾನ ಮಾಡಬೇಕಾಗುತ್ತಿತ್ತು. ಅವನಿಗೆ ಇದು ಬೇಸರದ ಮಾತಾಗಿತ್ತು. ಆದರೆ ಇದಕ್ಕಿಂತಲೂ ಹೆಚ್ಚಾಗಿ ಅವನಿಗೆ ಕಡೇಕರ ಮಾಸ್ತರರ ಅತ್ತಿಶಿಸ್ತು ಬೇಸರ ತರುತ್ತಿತ್ತು. ಗಿರಣಿ ಬಂದಾದೊಡನೆ ಹಿಟ್ಟು ಬೀಳುವ ಸ್ಥಳದಲ್ಲಿ ಕೆಳಗೆ ನೆಲದಲ್ಲಿ ತೋಡಿದ ತಗ್ಗಿನಲ್ಲಿ ಎಷ್ಟು ಹಿಟ್ಟು ಕೂಡಿಬಿದ್ದಿದೆಯೆಂದು ಮೊದಲು ನೋಡಿ ನಂತರವೇ ಮಾಸ್ತರರು ರೊಕ್ಕವನ್ನೆಣಿಸಲು ಪ್ರಾರಂಭಿಸುತ್ತಿದ್ದರು.

ನೌಕರಿ ಹಿಡಿದು ಕೆಲದಿನಗಳ ವರೆಗೆ ದತ್ತುಗೆ ಈ ತಂತ್ರ ಯಶಸ್ವಿಯಾಗಿ ಸಾಧಿಸಿರಲಿಲ್ಲ. ಬಳಿಕ ಮಾಸ್ತರರು ಅವನಿಗೆ ತಕ್ಕ ಶಿಕ್ಷಣ ಕೊಟ್ಟಿದ್ದರು. ಒಮ್ಮೆ ಹಾಕಿದ ಕಾಳು ಪೂರ್ಣ ಹಿಟ್ಟಾಗುವದ ರೊಳಗೆ ಕೆಳಗಿನ ಡಬ್ಬಿ ತೆಗೆದು, ಹೊಸ ಕಾಳನ್ನು ಹಾಕಿ ಮತ್ತೆ ಡಬ್ಬಿಯನ್ನು ಇಡುವದ ರೊಳಗೆ ೨-೩ ಮುಷ್ಟಿ ಹಿಟ್ಟಾದರೂ ಕೆಳ ಅದಕ್ಕೆಂದೇ ತೋಡಿಟ್ಟಿದ್ದ ತಗ್ಗಿನಲ್ಲಿ ಬೀಳುತ್ತಿತ್ತು. ನಿತ್ಯವೂ ಈ ರೀತಿ ಸಾಕಷ್ಟು ಹಿಟ ಸಂಗ್ರಹವಾಗದಿದ್ದರೆ ಮಾಸ್ತರರು ದತ್ತುವಿನ ಅ ಕ್ಷವೇ ಅದಕ್ಕೆ ಕಾರಣವೆಂದು ಸಿಟ್ಟಾಗುತ್ತಿದ್ದರು.

ಅಕಸ್ಮಾತ್ ಯಾರಾದರೂ ಈ ಬಗ್ಗೆ ತ ರಾರು ಮಾಡಿದರೆ "ನಮ್ಮೂರಿನಲ್ಲಿಯೆ ಕಾ ಅಳೆಯಿರಿ, ಬಳಿಕ ಹಿಟ್ಟು ಅಳೆದುಕೊಳ್ಳಿರಿ ಎಂಬ ಉತ್ತರವನ್ನು ಕೊಡಲು ಮಾಸ್ತರ

ದತ್ತೂಗೆ ಕಲಿಸಿದ್ದರು. ಊರಲ್ಲಿ ಎರಡೇ ಗಿರಣಿಗಳಿದ್ದವು. ಮಾಸ್ತರರಿದ್ದ ಭಾಗದ ಜನರಿಗೆ ಇನ್ನೊಂದು ಗಿರಣಿ ತುಂಬ ದೂರವಾಗುತ್ತಿತ್ತು. ಆದ್ದರಿಂದ ಅವರಿಗೆ ತಮ್ಮ ಗಿರಣಿಯನ್ನು ಬಿಟ್ಟರೆ ಗತಿಯಿಲ್ಲವೆಂದು ಮಾಸ್ತರರು ಮನಗಂಡಿದ್ದರು.

ರಘುವಿನ ತಾಯಿ ಮೂರು ನಾಲ್ಕು ಮನೆಗಳಲ್ಲಿ ಕಸಮುಸರೆ ಮಾಡುತ್ತಿದ್ದಳು. ಮನೆಯ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಳು. ಆದ್ದರಿಂದ ಅವಳೂ ವಾರಕ್ಕೆ ಒಂದೆರಡು ಸಲ ಗಿರಣಿಯಲ್ಲಿ ಕಾಳನ್ನು ಬೀಸಿಸಿಕೊಂಡು ಹೋಗುತ್ತಿದ್ದಳು. ಇಂದವಳು ಗಿರಣಿಯಿಂದ ಬಂದೊಡನೆ ರಘು ಅವಳಿಗೆ ಶಾಲೆಯಲ್ಲಿ ನಡೆದದ್ದೆಲ್ಲವನ್ನು ಹೇಳಿದನು. ಅವಳು ನಿಟ್ಟಿಸಿರುಬಿಟ್ಟು "ಇರಲಿ ಬಿಡು. ಏನಾದರೂ ಮಾಡೋಣಂತೆ. ಈಗ ನಿನಗೆ ಹಸಿವೆಯಾಗಿರಬೇಕು. ಒಂದಿಷ್ಟು ಹೊತ್ತು ಕೂಸನ್ನಾಡಿಸಿಕೊಂಡಿರು. ನಾನು ರೊಟ್ಟಿ ಸುಡುತ್ತೇನೆ. ಮತ್ತೆ, ಹೋಗಿ ಎರಡು ಕಡ್ಡಿ ಪೆಟ್ಟಿಗೆ ತೆಗೆದುಕೊಂಡು ಬಾ. ತಗೋ ಈ ಆಣೆ," ಎಂದಳು. "ಒಮ್ಮೆಲೆ ಎರಡು ಪೆಟ್ಟಿಗೆ ಯಾಕೆ ಅವ್ವಾ? ಒಂದು ಪೆಟ್ಟಿಗೆಯಲ್ಲಿ ೪೦ ಕಡ್ಡಿಗಳಿರುತ್ತವೆ," ಎಂದು ರಘು ಹೇಳಲು ಅವಳು, "ಹೇಳಿದಷ್ಟು ಕೇಳಬೇಕು. ನಿನ್ನ ತಂದೆ ಕಡ್ಡಿಪೆಟ್ಟಿಗೆ ಒಯ್ದರೆಂದರೆ ಮನೆಯಲ್ಲಿ ಮತ್ತೊಂದು ಬೇಕಾಗುವದಿಲ್ಲವೇ ?'' ಎಂದಳು.

ಕೂಸನ್ನೆತ್ತಿಕೊಂಡು ರಘು ಹೊರಗೆ ಹೋದ. ಅವನ ತಾಯಿ ಒಲೆಗೆ ಉರಿ ಹೊತ್ತಿಸಿ ಹಿಟ್ಟು ಕಲಸತೊಡಗಿದಳು. ಅಷ್ಟರಲ್ಲಿ ರಘುವಿನ ತಂದೆ ಮನೆಗೆ ಬಂದ. ದಣಿದಿದ್ದ ಆತ ಮೂಲೆಯಲ್ಲಿ ಹಾಸಿದ ಕಂಬಳಿಯ ಮೇಲೆ ಕುಳಿತ. ಅಲ್ಲೇ ಬದಿಗೆ ಅರ್ಧ ಚೀಲದ ಮೇಲೆ, ಅರ್ಧ ನೆಲದ ಮೇಲೆ ದೇಹ ಚಲ್ಲಿ ಅವನ ಮಗಳು ಶೇವಂತಿ ಮಲಗಿದ್ದಳು. ಎಣ್ಣೆ ಕಾಣದೆ ಗುಂಗುರುಗಟ್ಟಿದ್ದ ಅವಳ ಕೂದಲ ಮೇಲೆ ತನ್ನ ಕೆಸರು ಕೈಯನ್ನಾಡಿಸಿ ರಘುವಿನ ತಂದೆ, '' ಶೇವಂತಿ ರೊಟ್ಟಿ ತಿಂದಳೆ?" ಎಂದು ಕೇಳಿದ.

''ಇಲ್ಲ. ಹಸಿವೆ ಹಸಿವೆಯೆನ್ನುತ್ತ ನಿದ್ದೆ ಮಾಡಿದಳು."

ರಘುವಿನ ತಂದೆ ಭಿವಾ ಮೇಲಕ್ಕೆದ್ದು ಅಂಗಿ ಕಳಚಿಟ್ಟು ಹೋಗಿ ಕೈಕಾಲು ತೊಳೆದುಕೊಂಡು ತನ್ನ ಮಲಿನ ದೋತರಕ್ಕೆ ಕೈಯೊರೆಸುತ್ತ ಹೆಂಡತಿಯ ಹತ್ತರ ಬಂದು ಕುಳಿತ.

ಪಾರ್ವತಿ ಅವನಿಗೆ ರಘುವಿನ ಶಾಲೆಯ ವಿಷಯವನ್ನು ತಿಳಿಸಿದಳು. ಆಗ ಭಿವಾ "ಹುಂ. ಯಾವಾಗಲಾದರೂ ಆತ ಶಾಲೆಗೆ ಹೋಗುವದು ನಿಲ್ಲುವದೇ ಖಂಡಿತ. ಅವನ ಫೀ ಪುಸ್ತಕಗಳಿಗಾಗಿ ಹೊತ್ತಿಗೆ ಸರಿಯಾಗಿ ಎಲ್ಲಿಂದ ಹಣ ತರಲಿ?" ಎಂದ.

''ಆದರೆ ಮನೆಯಲ್ಲಿ ಕುಳಿತು ಅವನೇನು ಮಾಡಬೇಕು ?''

'' ನಿನಗೆ ಸಹಾಯ ಮಾಡುತ್ತಾನೆ. ಕೂಸನ್ನು ನೋಡಿಕೊಳ್ಳುತ್ತಾನೆ. ಆಡು ಮೇಯಿಸಿಕೊಂಡು ಬರುತ್ತಾನೆ. ಬಾವಿಯಿಂದ ನೀರು ಜಗ್ಗಿ ಕೊಡುತ್ತಾನೆ.''

'' ಅವನ ಈ ವಯಸ್ಸಿನಲ್ಲಿ ಅವನನ್ನು ಮನೆಯಲ್ಲಿ ಕೂಡ್ರಿಸುವದು ಸರಿಯಲ್ಲ."

" ಅಲ್ಲೆ, ನನ್ನ ಹೊಲವಿದ್ದಿದ್ದರೆ ಆತ ನನ್ನೊಡನೆ ಹೊಲದಲ್ಲಿ ಕೆಲಸ ಮಾಡುತ್ತಿರಲಿಲ್ಲವೇ ? ಇರಲಿ ಬಿಡು. ಆತನಿಗೆ ಯೋಗ್ಯವಾದ ಕೆಲಸವನ್ನು ಎಲ್ಲಿಯಾದರೂ ಹುಡುಕುತ್ತೇನೆ.''

ಮರುದಿನದಿಂದ ರಘು ಮನೆಯಲ್ಲಿಯೇ ಇರಬೇಕಾಯಿತು. ತಾಯಿ ಮಂದಿಯ ಮನೆಗೆ ಕೆಲಸಕ್ಕೆ ಹೋದಬಳಿಕ ಮನೆಯಲ್ಲಿ ಕೂಸು ಮತ್ತು ಶೇವಂತಿಯರನ್ನು ಆಡಿಸುವ ಕೆಲಸ ಅವನದಾಯಿತು. ಫೀ–ಪುಸ್ತಕಗಳ ಕಾರಣದಿಂದ ಮಗ ಶಾಲೆಗೆ ಹೋಗುವದು ತಪ್ಪಿತು ಎಂದು ಭಿವಾನಿಗೆ ಅಷ್ಟೊಂದು ಕೆಡಕೆನಿಸಲಿಲ್ಲ. ಏಕೆಂದರೆ ಅವನಾದರೂ ಎಲ್ಲಿ ಶಾಲೆಗೆ ಹೋಗಿದ್ದನು? ಮತ್ತು ಶಾಲೆಗೆ ಹೋದರೂ ಹೊಟ್ಟೆಗಾಗಿ ತನ್ನ ಮಗ ತನ್ನಂತೆಯೇ ಕೂಲಿ ಮಾಡಬೇಕಾಗುವದು ಎಂಬುದನ್ನಾತ ಅರಿತಿದ್ದ.

ಮುಂದೆ ಎರಡು ಮೂರು ದಿನಗಳಲ್ಲಿ ಆತ ರಘುಗೆ ಒಂದು ಕೆಲಸ ಹಚ್ಚಿಕೊಟ್ಟ. ಆಚೆ

ಕಡೆಯ ಪೇಟೆಯಲ್ಲಿ ಇತ್ತೀಚೆಗೆ ವರ್ಗವಾಗಿ ಬಂದ ಫಾರೆಸ್ಟ ರೇಂಜರರೊಬ್ಬರು ವಾಸಿಸುತ್ತಿದ್ದರು. ಅವರ ಮನೆಗೆ ಸುಣ್ಣ ಬಳಿಯಲು ಭಿವಾ ಹೋಗಿದ್ದ. ಆತನನ್ನುದ್ದೇಶಿಸಿ ರೇಂಜರ ಸಾಹೇಬರು, "ಮನೆಯ ಚಿಲ್ಲರೆ ಕೆಲಸಕ್ಕೆ ಒಬ್ಬ ಹುಡುಗ ಅಥವಾ ಹುಡುಗಿ ಸಿಗಬಹುದೇನು ?" ಎಂದು ಕೇಳಿದ್ದರು.

"ಸಿಗದೆ ಏನು ಸಾಹೇಬರೇ ?"

"ತಿಂಗಳಲ್ಲಿ ೮-೧೦ ದಿನ ನಾನು ಸಂಚಾರದಲ್ಲಿರಬೇಕಾಗುತ್ತದೆ. ಮನೆಯಲ್ಲಿ ಇಬ್ಬರು ಚಿಕ್ಕ ಮಕ್ಕಳಿದ್ದಾರೆ. ಅವರನ್ನು ನೋಡಿಕೊಳ್ಳಲು ಮತ್ತು ಚಿಲ್ಲರೆ ಕೆಲಸ ಮಾಡಲ್ಲು ಯಾರಾದರೂ ಬೇಕು."

"ಸಾಹೇಬ, ಹತ್ತು - ಹನ್ನೆರಡು ವರುಷ ಪ್ರಾಯದ ನನ್ನ ಮಗನಿದ್ದಾನೆ. ಆತ ನಿಮ್ಮಲ್ಲಿ ಕೆಲಸ ಮಾಡಬಹುದು"ಭಿವಾ ಹೇಳಿದ. ರಘುವಿನ ವಿದ್ಯಾರ್ಥಿ ಜೀವನ ಈ ರೀತಿ ಕೊನೆಗಂಡು ಆತನ ಮೊದಲನೆಯ ನೌಕರಿ ಆರಂಭವಾಯಿತು.

ಮನೆಯ ಕಸ ಉಡುಗಿ ಹುಡುಗರನ್ನು ಆಡಿಸುತ್ತ ರಘು ಕುಳಿತಿದ್ದಾಗ ಬಾಯಿ ಸಾಹೇಬರು, "ರಘೂ, ಸಮೀಪದಲ್ಲಿ ಗಿರಣಿ ಇದೆಯೇನೋ?" ಎಂದು ಕೇಳಿದರು.

"ಇದೆ, ಬಾಯಿ ಸಾಹೇಬ."

"ಹಾಗಾದರೆ ಇದಿಷ್ಟು ಗೋದಿ ಬೀಸಿಸಿಕೊಂಡು ಬಾ," ಎಂದು ಬಾಯಿ ಸಾಹೇಬರು ಅವನ ಕೈಗೆ ಹಣ ಕೊಡುತ್ತ "ಮತ್ತೆ ವಿಜಯನನ್ನೂ ಕರೆದುಕೊಂಡು ಹೋಗು. ನಾಲ್ಕು ಸೇರು ಗೋದಿ ಇದೆ, ಹಂ ?" ಎಂದರು. ಗೋದಿ ಚೀಲದಲ್ಲಿ ತುಂಬುವಾಗ ತಮ್ಮ ಪದ್ಧತಿಯಂತೆ ಮೇಲೆ ಅರ್ಧ ಸೇರು ಹಾಕಲು ರೇಂಜರ ಬಾಯಿ ಮರೆಯಲಿಲ್ಲ.

ತಲೆಯ ಮೇಲೆ ಗೋದಿ ಚೀಲ ಹೊತ್ತು ಬಗಲಲ್ಲಿ ವಿಜಯನನ್ನೆತ್ತಿಕೊಂಡು ರಘು ಗಿರಣಿಗೆ ಹೋದ. ಮಾಸ್ತರರು ಬಂದಿದ್ದಾರೊ ಇಲ್ಲವೊ ಎಂದು ಮೊದಲು ಆತ ನೋಡಿಕೊಂಡ. ಮಾಸ್ತರರು ಬಂದಿರದ್ದನ್ನು ಕಂಡು ಅವನಿಗೆ ಅಷ್ಟೇ ಸಮಾಧಾನವಾಯಿತು. ಆದರೆ ಆ ಸಮಾಧಾನ ಕ್ಷಣಭಂಗುರವಾಯಿತು. ಆತ ಗಿರಣಿಗೆ ಹೋದಾಗ ಅಲ್ಲಿ ತುಸು ಗದ್ದಲವಿತ್ತು. ಮೊದಲು ಆವನ ಕಣ್ಣುಗಳು ಮಾಸ್ತರರನ್ನು ಹುಡುಕಿದವು. ಬಳಿಕ ಸುತ್ತಮುತ್ತು ನೋಡಿದಾಗ ಅವನಿಗೆ ಅವನ ತಾಯಿ ಕಂಡಳು. ಅವಳು ಮೊದಲೇ ಬಂದು ಸಾಲಿನಲ್ಲಿ ನಿಂತಿದ್ದಳಾದ್ದರಿಂದ ಅವಳ ಬೆನ್ನು ಅವನಿಗೆ ಕಾಣಿಸಿತು. ಸ್ವಲ್ಪ ಹೊತ್ತಿನ ನಂತರ ತಾಯಿ-ಮಕ್ಕಳ ದೃಷ್ಟಿಗಳು ಕೂಡಿದಾಗ ತಾಯಿಯ ನೀರುತುಂಬಿದ ಕಣ್ಣಿನ ಪ್ರತಿಬಿಂಬ ಮಗನ ಕಣ್ಣೀರಿನಲ್ಲಿ ಹೊಳೆಯಿತು. ಏನು ಮಾತಾಡಬೇಕು ಎಂಬುದು ತಾಯಿಗೆ ತಿಳಿಯಲಿಲ್ಲ. ಯಾರು ಮಾತಾಡಬೇಕು ಎಂಬುದು ಹುಡುಗನಿಗೆ ಹೊಳೆಯಲಿಲ್ಲ. ಈ ಹಸುಳೆಯನ್ನು ತಂದೆ ಕೆಲಸಕ್ಕೆ ಹಚ್ಚಿದನಲ್ಲ, ಆತ ಕೂಡ ತನ್ನಂತೆ ತಲೆಯ ಮೇಲೆ ಕಾಳು, ಬಗಲಲ್ಲಿ ಕೂಸು ಹೊತ್ತು ಬಂದಿರುವನಲ್ಲ ಎಂದು ತಾಯಿಗೆ ತುಂಬ ದುಃಖವಾಯಿತು. ಅವಳು ಕ್ಷಣಹೊತ್ತು ಮಗನನ್ನು ದಿಟ್ಟಿಸಿ ನೋಡಿದಳು. ಅವಳ ಆ ಮೂಕ ದೃಷ್ಟಿಯೇ ತನ್ನನ್ನು ಮಾತಾಡಿಸಿದಂತೆ ರಘೂಗೆ ಅನಿಸಿತು. ತಾಯಿಯ ದುಃಖಭಾರವನ್ನು ಕಡಿಮೆ ಮಾಡಲೆಂದು ರಘು ಮೆಲುದನಿಯಲ್ಲಿ, ''ಅಮ್ಮಾ, ಶೇವಂತಿಯನ್ನೆಲ್ಲಿ ಬಿಟ್ಟು ಬಂದೆ?'' ಎಂದು ಕೇಳಿದ.

"ನೆರೆಮನೆಯ ಜಗಲಿಯಲ್ಲಿ ಮಕ್ಕಳೊಂದಿಗೆ ಆಡುತ್ತಿದ್ದಾಳೆ" ಎಂದು ಅವಳು ಮುಖ ತಿರುವಿ ಸೆರಗಿನಿಂದ ಕಣ್ಣೊರಸಿಕೊಂಡಳು.

"ತಾನೂ ಬರುತ್ತೇನೆಂದು ಅವಳು ಹಟ ಮಾಡಿರಬೇಕಲ್ಲವೇ ?"

"ಅವಳ ಕಣ್ಣು ತಪ್ಪಿಸಿ ಬಂದಿದ್ದೇನೆ."

"ಹಾಗಾದರೆ ನೀನು ಬೇಗ ಮನೆಗೆ ಹೋಗು."

''ಹೊರಟೆ'' ಎನ್ನುತ್ತಾ ದತ್ತು ಬೀಸಿಟ್ಟಿದ್ದ ಹಿಟ್ಟನ್ನು ತೆಗೆದುಕೊಂಡು ಪಾರ್ವತಿ ಹೊರಟು ಹೋದಳು. ಹೋಗುವಾಗ ಅವಳು ತಿರುಗಿ ನೋಡಲಿಲ್ಲ. ಅದು ರಘುವಿನ ಗಮನಕ್ಕೆ ಬಂತು. ತಾಯಿ ಯಾಕೆ ತನ್ನನ್ನು ಏನೂ ಕೇಳಲಿಲ್ಲವೆಂಬುದರ ಕಲ್ಪನೆಯೂ ತುಸುಮಟ್ಟಿಗೆ ಅವನಿಗೆ ಬಂತು.

ಆತ ತನ್ನ ಚೀಲವನ್ನು ಮುಂದಕ್ಕೆ ಸರಿಸಿದ. ಮಣ್ಣು ತಿನ್ನತೊಡಗಿದ್ದ ವಿಜಯನನ್ನು ಎತ್ತಿಕೊಂಡ.

ಕಡೇಕರ ಮಾಸ್ತರರು ಗಿರಣಿಗೆ ಬಂದರು. ಅವರನ್ನು ಕಂಡೊಡನೆ ರಘು ತುಸು ಬದಿಗೆ ಸರಿದು ಜನರ ಮರೆಗೆ ನಿಂತ. ಮಾಸ್ತರರು ಹಿಟ್ಟಿನಂತೆ ಬೆಳ್ಳಗಿದ್ದ ಅರಿವೆ ಹಾಸಿದ ಗಾದಿಯ ಮೇಲೆ ಕುಳಿತುಕೊಂಡರು. ಗಲ್ಲೆ ಪೆಟ್ಟಿಗೆಯನ್ನು ತಮ್ಮ ಹತ್ತರ ಎಳೆದುಕೊಂಡು ಬೀಸಬೇಕಾದ ಬುಟ್ಟಿಗಳೆಷ್ಟಿವೆ ಎಂದು ನೋಡಿದರು. ಅವರ ಲಕ್ಷ ರಘುವಿನತ್ತ ಹೋಯಿತು. "ಯಾರವರು? ರಘು ಏನು?" ಎಂದು ಕೇಳಿದರು.

"ಹೌದು, ಸರ್" ಅವೇ ಶಬ್ದಗಳು. ಮೊದಲಿನಂತೆಯೇ ಕೆಳಗೆ ಮುಖ. ಫೀ ಸಲುವಾಗಿ ಮಾಸ್ತರರು ಪ್ರಶ್ನಿಸಿದಾಗ ಉತ್ತರಿಸಿದ ಧ್ವನಿಯಲ್ಲೇ ಈ ಉತ್ತರ ಕೂಡ.

"ಯಾರದೋ ಆ ಮಗು?"

"ರೇಂಜರ ಸಾಹೇಬರದು."

"ಅಂದರೆ ಹೊಸತಾಗಿ ವರ್ಗವಾಗಿ ಬಂದು ಆಚೆ ಕಡೆ ಪೇಟೆಯಲ್ಲಿರುವವರ ಮಗುವೇನು?"

"ಹುಂ."

"ಶಾಲೆ ಬಿಟ್ಟು ನೀನು ಅವರಲ್ಲಿ ಕೆಲಸಕ್ಕೆ ನಿಂತಿರುವಿಯಾ?" ಈ ಪ್ರಶ್ನೆಗೆ ಉತ್ತರ ಬರುವ ಮೊದಲು ಯಂತ್ರದ ಸಪ್ಪಳ ಬದಲಾದದ್ದು ಅವರ ಗಮನಕ್ಕೆ ಬಂದು ಅವರು ಸಿಡುಕಿನಿಂದ "ದತ್ತೂ, ನಿನ್ನ ಲಕ್ಷ್ಯ ಎಲ್ಲಿದೆ?" ಎಂದು ಕೇಳಿದರು.

ದತ್ತು ರಘುವಿನ ಬುಟ್ಟಿಯನ್ನು ಸರಕ್ಕನೆ ಬದಿಗೆ ಸರಿಸಿ ಹಿಟ್ಟನ್ನು ರಘುವಿನ ಚೀಲದಲ್ಲಿ ತುಂಬಿ ಕೊಟ್ಟ. ಅವನಿಂದ ರೊಕ್ಕ ಇಸಿದುಕೊಂಡು ಮಾಸ್ತರರ ಕೈಗ ಕೊಟ್ಟ.

ಹಿಟ್ಟಿನ ಚೀಲ ಹೊತ್ತು, ಬಗಲಲ್ಲಿ ರೇಂಜರರ ಮಗನನ್ನು ಎತ್ತಿಕೊಂಡು ಹೋಗುತ್ತಿದ್ದ ರಘುವಿನ ಬೆನ್ನನ್ನು ಕಂಡಾಗ ಮಾಸ್ತರರಿಗೆ ರಘುವಿನಷ್ಟೇ ವಯಸ್ಸಿನ ತಮ್ಮ ಮಗ ಬಬನನ ಪ್ರಶ್ನೆ ಕಿವಿಗ ಬಿತ್ತು. "ಅಪ್ಪಾ, ಈ ಗಣಿತವನ್ನಷ್ಟು ನೋಡಿರಿ. ಉತ್ತರ ಸರಿಯಾಗಿ ಬರುವದಿಲ್ಲ" ಎಂದು ಬಬನ್ ಹೇಳುತ್ತಿದ್ದ.

ಮಾಸ್ತರರು ಒಮ್ಮೆಲೆ ಮಗನ ಮೇಲೆ ರೇಗಿ, "ನಾನು ಗಿರಣಿಯಲ್ಲಿರುವಾಗ ಅಭ್ಯಾಸದ ಮಾತನ್ನೆತ್ತಬಾರದೆಂದು ನಿನಗೆ ಹೇಳಿಲ್ಲವೆ?" ಎಂದು ಒದರಿದರು.• ಬಬನನ ಮುಖ ಇಳಿಯಿತು. ಆತ ತನ್ನ ಪಾಟಿ ಪೆನ್ಸಿಲ್ ಪುಸ್ತಕಗಳನ್ನು ಎತ್ತಿಕೊಂಡು ಮನೆಗ ಹೊಂಟ. ಅವನ ಬೆನ್ನು ಕಂಡಾಗ್ಗೆ ಮಾಸ್ತರರಿಗೆ ತುಸು ಮೊದಲು ಅದೇ ರೀತಿ ಬೆನ್ನುಹಾಕಿ ಹೊರಟಿದ್ದ ರಘುವಿನ ನೆನಪಾಗಿ ಅವರು "ಒಳ್ಳೇದು, ಒಳ್ಳೇದು. ಬಬನ, ತಾ ನೋಡೋಣ ನಿನ್ನ ಗಣಿತ" ಎಂದರು. ರಘುವಿನ ಬಗ್ಗೆ ಮನಸ್ಸಿನಲ್ಲಿ ಸುಳಿಯುತ್ತಿದ್ದ ವಿಚಾರಗಳ ಗಣಿತವನ್ನು ಅವರು ಬಬನನ ಪುಸ್ತಕದಲ್ಲಿಯ ರೀತಿಯಿಂದ ಬಿಡಿಸುವ ಪ್ರಯತ್ನ ಮಾಡಿದರು. ಗಿರಣಿಯಲ್ಲಿ ಪ್ರತಿನಿತ್ಯ ರಾತ್ರಿ ಉಳಿಯುವ ಹಿಟ್ಟಿನಿಂದ ವಜಾಬಾಕಿ ಉತ್ತರ ಸರಿಯಾಗಿ ಬರುತ್ತದೆಂದು ಅವರಿಗೆ ಅನಿಸಿತು

ಆದರೆ ನಿಜವಾಗಿಯೂ ಕಠಿಣವಾದ ಲೆಕ್ಕವನ್ನು ಬಿಡಿಸುವ ಪಾಳಿ ರಘುವಿಗೆ ಬಂತು. ಅವನ ಮೇಲೆ ಹರಿಹಾಯ್ದು ರೇಂಜರಬಾಯಿ "ಯಾಕೊ, ಹಿಟ್ಟು ಬಹಳ ಕಡಿಮೆ ಕಾಣುತ್ತದೆ?"ಎಂದರು.

"ಇಲ್ಲ ಬಾಯಿಸಾಹೇಬ, ಸರಿಯಾಗಿಯೇ ಇರಬೇಕು."

"ಏನು ಸರಿಯಿದೆ? ಹಾಳಾದವನೇ, ನಾನು ಇದೇ ಈಗ ಅಳೆದು ನೋಡಿದ್ದೇನೆ, ನನಗೆ ಹೇಳುತ್ತೀಯೇನು? ನಾಲ್ಕು ಸೇರಿಗೆ ಹಿಟ್ಟು ಎಷ್ಟು ಬರುತ್ತದೆ ಎನ್ನುವದು ನನಗೆ ಗೊತ್ತಿಲ್ಲವೆ? ನೀನು ಬರಲು ತಡವಾದಾಗಲೇ ನನಗೆ ಸಂಶಯ ಬಂದಿತ್ತು."

"ಗಿರಣಿಯಲ್ಲಿ ಬಹಳ ಗದ್ದಲವಿತ್ತು."

"ಸಾಕು. ಒಂದು ಶಬ್ದವನ್ನೂ ಆಡಬೇಡ. ಸಮೀಪದಲ್ಲೆ ನಿನ್ನ ಮನೆಯಿದೆಯಲ್ಲವೇ? ಮನೆಗೆ ಹೋಗಿ ಒಂದಿಷ್ಟು ಹಿಟ್ಟು ಇಟ್ಟು ಬಂದಿದ್ದೀ-ಯಾದೀತು, ಮತ್ತೇನು! ಬಹಳ ತುಟ್ಟಿಯ ಗೋದಿಯನ್ನು ನಾವು ಬಳಸುತ್ತೇವೆ. ಎಲಾ, ಇದೇನು? ವಿಜಯ ಮಣ್ಣು ತಿಂದಂತೆ ಕಾಣಿ

ಸುತ್ತದೆ. ಮಗುವನ್ನು ಹೀಗೆಯೇ ನೋಡಿಕೊಳ್ಳುವದೇನು? ನಡಿ ಇಲ್ಲಿಂದ. ನನಗೆ ಇಂಥ ನೌಕರರು ಬೇಡ. ಇಂದು ಹಿಟ್ಟು ಕದ್ದಿ, ಮಗುವನ್ನು ಎಲ್ಲಿ ಬೇಕಲ್ಲಿ ಬಿಟ್ಟೆ. ನಾಳೆ ಮನೆಯೊಳಗಿನ ಸಾಮಾನನ್ನು ಎತ್ತಿ ಹಾಕಬಹುದು. ಕೆಲಸಕ್ಕೆ ಬಂದ ನಾಲ್ಕಾರು ದಿನಗಳಲ್ಲೆ ಹೀಗಾದರೆ ಮುಂದೆ ಏನಾದೀತು? ನೌಕರರ ಚಾಳಿಗಳನ್ನೆಲ್ಲ ನಾನು ಬಲ್ಲೆ. ನೀನು ಕೆಲಸಕ್ಕೆ ಬೇಡ. ನಡಿ. ಹೊರಡು.''

ಒಂದೇ ಸವನೆ ಗುಡುಗಿತು. ಆದರೆ ಬಳಿಕ ಮಳೆ ಬಿದ್ದದ್ದು ಮಾತ್ರ ರಘುವಿನ ಮನೆಯಲ್ಲಿ. ಅವನು ನಡೆದದ್ದನ್ನೆಲ್ಲ ತಾಯಿಗೆ ಹೇಳಿದಾಗ ಕಣ್ಣೀರು ಹರಿಯಿತು.

ಈಗ ರಘುಗೆ ಶಾಲೆಯೂ ಇಲ್ಲ, ಕೆಲಸವೂ ಇಲ್ಲ. ಮರುದಿನ ಶನಿವಾರವಿತ್ತು. ಊರ ಹೊರಗಿನ ಶನಿದೇವರ ಗುಡಿಗೆ ಹೋಗಿ ಎಣ್ಣೆಹಾಕಿ ಬರಲು ತಾಯಿ ಅವನನ್ನು ಕಳಿಸಿದಳು ರಘು ಗುಡಿಗೆ ಹೋಗಿ ಅರ್ಧ ಎಣ್ಣೆ ಶನಿಯ ಮೈಮೇಲೆ ಅರ್ಧ ಎಣ್ಣೆ ಅಲ್ಲಿಯ ದೀಪದ ಹಣತಿಯಲ್ಲಿ ಸುರುವಿದ. ಪ್ರದಕ್ಷಿಣೆ ಹಾಕಿ ನಮಸ್ಕಾರ ಮಾಡಿ ಗರ್ಭಗುಡಿಯ ಹೊರಗೆ ಬಂದ. ದೇವಾಲಯದ ಮುಂದುಗಡೆ ಹಾಕಿದ ಉಸುಕಿನಲ್ಲಿ ಅನೇಕ ಮಕ್ಕಳು ಆಡುತ್ತಿದ್ದವು. ಅದನ್ನು ನೋಡುತ್ತ ಆತ ನಿಂತನೇಹೊರತು ಅವರೊಂದಿಗೆ ಆಟದಲ್ಲಿ ಬೆರೆಯಲಿಲ್ಲ. ಅವನ ತಲೆಯಲ್ಲಿ ಕೆಲವು ವಿಚಾರಗಳು ಹುಚ್ಚುಚ್ಚಾಗಿ ಅಲೆಯುತ್ತಿದ್ದವು. ವಿಷಣ್ಣ ದೃಷ್ಟಿಯಿಂದ ಆತ ಮುಳುಗುತ್ತಿದ್ದ ಸೂರ್ಯನನ್ನೂ ಬರಿದಾದ ಮನಸ್ಸಿನಿಂದ ಮಕ್ಕಳ ಆಟವನ್ನೂ ನೋಡುತ್ತ ಅಲ್ಲಿಯೇ ಕುಳಿತುಕೊಂಡ.

೫-೬ ನಿಮಿಷಗಳು ಕಳೆದಿರಬಹುದು. ಕಡೇಕರ ಮಾಸ್ತರರ ಕರೆ ಅವನ ಕಿವಿಗೆ ಬಿತ್ತು. ಆತ ಗಾಬರಿಯಾಗಿ ಎದ್ದು ನಿಂತ. ಎಲಾ! ಶಾಲೆಯಲ್ಲಿಯೂ ಮಾಸ್ತರರು, ಗಿರಣಿಯಲ್ಲೂ ಮಾಸ್ತರರು, ಮತ್ತೆ ಇಲ್ಲಿ ದೇವಸ್ಥಾನದಲ್ಲಿಯೂ ಮಾಸ್ತರರು! ಈ ಶನಿಯೇ ನಮ್ಮನ್ನು ಛಲಿಸುತ್ತಿರುವನೇ? ಮಾಸ್ತರರು ಇಲ್ಲಿ, ಈ ವೇಳೆಯಲ್ಲಿ ತನ್ನನ್ನು ಯಾಕೆ ಮಾತಾಡಿಸಿದರು ಎಂದು ತಿಳಿಯದೆ ಅವನು ರೂಢಿಯಂತೆ "ಏನು ಸರ್?" ಎಂದ. ಮಾಸ್ತರರು ದೇವದರ್ಶನ ಮಾಡಿಕೊಂಡು ಹೊರಟಿದ್ದರು. ಚಪ್ಪಲಿ ಹಾಕಿಕೊಳ್ಳುವಾಗ ರಘುವನ್ನು ಕಂಡು ಕರೆದಿದ್ದರು. ಅವರು "ಇಲ್ಲೇನು ಮಾಡುತ್ತಿರುವಿ?" ಎಂದು ಕೇಳಿದರು.

"ಎಣ್ಣೆ ಹಾಕಲು ಬಂದವನು ಹಾಗೆಯೇ ತುಸು ಕುಳಿತಿದ್ದೆ."

"ಒಬ್ಬರಲ್ಲಿ ಕೆಲಸಕ್ಕಿದ್ದ ಬಳಿಕ ಹೀಗೆ ವೇಳೆ ಕಳೆಯುವದುಂಟೆ?"

"ನಾನೀಗ ಕೆಲಸದಲ್ಲಿಲ್ಲ, ಸರ್."

"ಅಂದರೆ? ಅಲ್ಲೊ, ಕೆಲಸಕ್ಕೆ ಹೋದೆ ಅನ್ನುವಷ್ಟರಲ್ಲಿ ಬಿಟ್ಟೆ ಎಂದರೇನು? ಅವರಲ್ಲಿ ಏನಾದರೂ ದುರ್ಗುಣ ತೋರಿಸಿರಬೇಕು."

''ಎಲ್ಲ ಸರ್, ನಾನು ಏನೂ ಮಾಡಲಿಲ್ಲ.''

"ಹಾಗಾದರೆ ಕೆಲಸದಿಂದ ಯಾಕೆ ತೆಗೆದು ಹಾಕಿದರು?"

"ನನ್ನಮೇಲೆ ಹಿಟ್ಟು ಕದ್ದ ಆರೋಪ ಹೊರಿಸಿ ಹೊರಗೆ ಹಾಕಿದರು."

"ನಿಜವಾಗಿಯೂ ನೀನು ಹಿಟ್ಟು ಕದ್ದಿಯೇನು?"

"ಇಲ್ಲ ಸರ್. ಗಿರಣಿಯಲ್ಲಿ ಬೀಸಿಸಿಕೊಂಡು ಬಂದಾಗ ಹಿಟ್ಟು ಕಡಿಮೆಯಾಯಿತು. ನಾನೇ ಕದ್ದೆ ಎಂದು ಅವರು ತಿಳಿದುಕೊಂಡರು." ಈ ವಾಕ್ಯ ಹೊರಬಿದ್ದ ಬಳಿಕ ತಪ್ಪಾಯಿತು ಎಂಬಂತೆ ರಘು ನಾಲಿಗೆ ಕಚ್ಚಿಕೊಂಡ.

"ಏನು? ಗಿರಣಿಯಲ್ಲಿ ಬೀಸಿದಾಗಲೇ ಹಿಟ್ಟು ಕಡಿಮೆ ಬಂತೆ?"

"ಹೌದು. ನನ್ನ ತಾಯಿ ಕೂಡ ಹಾಗೆಯೇ ಹೇಳುತ್ತಿದ್ದಳು. ದತ್ತು ಬಹಳ ಠಕ್ಕ ಮತ್ತು ಕಪಟಿ ಇದ್ದಾನೆ. ಆತ ಯಾವಾಗಲೂ ಹಿಟ್ಟು ಕಡಿಮೆ ಕೊಡುತ್ತಾನೆ ಎಂದು ಅಮ್ಮ ಅನ್ನುತ್ತಾಳೆ. ಅವನೇ ಮನೆಗೆ ಹಿಟ್ಟು ಒಯ್ಯುತ್ತಿರಬೇಕು." ರಘುವಿನ ಮೈಯಲ್ಲಿ ಸತ್ಯದ ಧೈರ್ಯ ಬಂದಿತ್ತು. ತನಗೂ ಶಾಲೆಗೂ ಈಗ ಯಾವ

ಸಂಬಂಧವೂ ಇಲ್ಲೆಂಬುದೂ ಅವನ ಲಕ್ಷ್ಯಕ್ಕೆ ಬಂದು ಆತ ತನಗೆ ನಿಜವೆನಿಸಿದ್ದನ್ನು ಹೇಳಿಬಿಟ್ಟ.

"ಅಂದರೆ ಹಿಟ್ಟಿನ ಸಲುವಾಗಿಯೇ ನಿನ್ನ ಕೆಲಸ ಹೋಯಿತು ಎನ್ನುವಿಯಾ ?"

"ಹೌದು ಸರ್."

"ಒಳ್ಳೇದು. ನಾನು ದತ್ತುವನ್ನು ವಿಚಾರಿಸಿಕೊಳ್ಳುತ್ತೇನೆ." ಎಂದು ಕಡೇಕರ ಮಾಸ್ತರರು ಹೊರಟರು. ನಾಲ್ಕು ಹೆಜ್ಜೆ ಹೋಗಿ ತುಸು ತಡೆದು ತಿರುಗಿ ನಿಂತು, "ರಘು, ನೀನು ನಾಳೆಯಿಂದ ಶಾಲೆಗೆ ಬಾ" ಎಂದರು.

"ಆದರೆ ಸರ್, ಫೀ-ಪುಸ್ತಕಗಳ ಬಗ್ಗೆ ಏನು ಮಾಡಲಿ ?"

"ಫೀ ನಾನು ನೋಡಿಕೊಳ್ಳುತ್ತೇನೆ. ನಿನಗೆ ಮಾಫಿ ಮಾಡಿಸುತ್ತೇನೆ. ಬಬನನ ಹಳೆಯ ಪುಸ್ತಕಗಳಿವೆ. ಅವನ್ನು ನಿನಗೆ ಕೊಡುತ್ತೇನೆ."

ರಘು ಕಡೇಕರ ಮಾಸ್ತರರಿಗೆ ಬಗ್ಗಿ ನಮಸ್ಕಾರ ಮಾಡಿದ. ತಲೆಯ ಮೇಲಿನ ಆಕಾಶದಲ್ಲಿ ಮುಸುಕಿದ್ದ ಮೋಡಗಳೆಲ್ಲ ಕರಗಿದಂತೆ ಅವನಿಗನಿಸಿತು.

ಮಾಸ್ತರರು ಹೋದರು. ಅವರು ಮನೆಯ ಸಮೀಪಕ್ಕೆ ಬಂದಾಗ ದತ್ತು ಗಿರಣಿಯನ್ನು ಮುಚ್ಚಿ ಹಿಟ್ಟಿನ ಚೀಲವನ್ನು ಹೊತ್ತುಕೊಂಡು ಮಾಸ್ತರರ ಮನೆ ಪ್ರವೇಶಿಸುತ್ತಿದ್ದ. ಮಾಸ್ತರರು ಅವನನ್ನು ಕರೆದು, "ದತ್ತು, ನೋಡು. ಈ ಹಿಟ್ಟನ್ನು ನಿನ್ನ ಮನೆಗೆ ತೆಗೆದುಕೊಂಡು ಹೋಗು. ನಾಳೆಯಿಂದ ಗಿರಣಿಯಲ್ಲಿ ಈ ರೀತಿಯಲ್ಲಿ ಒಂದು ಪಾವು ಸೇರು ಹಿಟ್ಟು ಕೂಡ ಸಂಗ್ರಹವಾಗಬಾರದು, ತಿಳಿಯಿತೆ ? ಎಲ್ಲರಿಗೂ ಸರಿಯಾಗಿ ಹಿಟ್ಟು ದೊರೆಯಬೇಕು. ಏನು ?" ಎಂದರು.

ಇದುವೆ ಜೀವ ಇದು ಜೀವನ

ನನ್ನ ಗೆಳೆಯನ ತಮ್ಮನ ಹುಟ್ಟು ಹಬ್ಬಕ್ಕೆಂದು ನಾನು ಅಂದು ಧಾರವಾಡಕ್ಕೆ ಹೋಗಿದ್ದೆ. ಹಟ ಹಿಡಿದು ನನ್ನ ಐದು ವರ್ಷದ ತಂಗಿ ನನ್ನ ಜತೆಗೆ ಬಂದಿದ್ದಳು. ಹುಟ್ಟು ಹಬ್ಬದ ಗದ್ದಲ ಮುಗಿದ ಮೇಲೆ ನನ್ನ ಗೆಳೆಯ ಸಂಜೆ ಬೇರೆ ಕೆಲಸದ ಮೇಲೆ ಹೊರಗೆ ಹೋಗುತ್ತ ಆವತ್ತು ರಾತ್ರಿ ನಾನು ಅಲ್ಲಿಯೇ ಉಳಿದುಕೊಳ್ಳಬೇಕೆಂದು ಒತ್ತಾಯ ಮಾಡಿ ಹೋದ. ನಾನು ಒಪ್ಪಿದೆ.

ಆ ಮೇಲೆ ಬೇಸರ ಕಳೆಯಲೆಂದು ನಾನು ತಂಗಿಯೊಡನೆ ಹೊರಬಿದ್ದು ಊರ ಹೊರಗೆ ಸಾಗಿದೆ. ಸಂಧ್ಯಾಕಾಲದ ತಂಗಾಳಿಯನ್ನು ಸೇವಿಸುತ್ತ ನಾವಿಬ್ಬರೂ ರಸ್ತೆಯ ಪಕ್ಕದ ಒಂದು ಅಲದ ಮರದ ಕೆಳಗೆ ಕುಳಿತೆವು. ಅಷ್ಟರಲ್ಲಿ ಒಂದು ಬಸ್ ನಮ್ಮ ಕಡೆ ಬರುವುದು ಕಾಣಿಸಿತು. ನನ್ನ ಕಿಡಿಗೇಡಿ ತಂಗಿ ಒಂದು ಕಲ್ಲನ್ನು ಎತ್ತಿಕೊಂಡು ಆ ಬಸ್ಸಿಗೆ ಹೊಡೆಯುತ್ತೇನೆಂದು ರಸ್ತೆಯ ಕಡೆ ಧಾವಿಸಿದಳು.

ನಾನು ಓಡಿ ಅವಳನ್ನು ಹಿಡಿದು ಎಳೆತಂದೆ. ಅವಳು ದೊಡ್ಡ ದನಿತೆಗೆದು ಅಳಲಾರಂಭಿಸಿದಾಗ ಅವಳ ಬಾಯಿಯನ್ನು ನನ್ನ ಕೈಯಿಂದ ಮುಚ್ಚಿದೆ. ಅವಳು ಗುದುಮುರಿಗೆ ಹಾಕಿದಳು.

ವೇಗವಾಗಿ ಬರುತ್ತಿದ್ದ ಬಸ್ ಹತ್ತಿರ ಬಂದು ಗಕ್ಕನೆ ನಿಂತಿತು. ಡ್ರೈವರ್ ಧಡಪಡಿಸಿ ಇಳಿದು ನನ್ನ ಕಡೆ ಬಂದವನೇ ನನ್ನ ರಟ್ಟೆ ಹಿಡಿದ. ನಾನು ದಿಙ್ಮೂಢನಾದೆ. ಬಸ್ಸಿನಲ್ಲಿದ್ದವರೆಲ್ಲ ಇಳಿದು, "ಏನು ಏನು?" ಎಂದು ಕೇಳುತ್ತಿದ್ದರು. ಡ್ರೈವರ, "ಸಿಕ್ಕಿಬಿದ್ದ! ಧಾರವಾಡದಲ್ಲಿ ಮಕ್ಕಳ ಅಪಹಾರ ಮಾಡುತ್ತಿದ್ದವ ಸಿಕ್ಕಿಬಿದ್ದ!" ಎಂದು ಹೇಳುತ್ತಿದ್ದ.

ಧಾರವಾಡದಲ್ಲಿ ಹುಡುಗಿಯರ ಅಪಹಾರವಾಗುತ್ತಿದ್ದ ಬಗ್ಗೆ ಪತ್ರಿಕೆಗಳಲ್ಲಿ ಎದ್ದಿದ್ದ ಬೊಬ್ಬಾಟದ ಸಂಗತಿ ನನಗಾಗ ನೆನಪಾಯಿತು. ಹುಟ್ಟುಹಬ್ಬಕ್ಕೆ ಬಂದ ಅತಿಥಿಗಳಲ್ಲಿ ಅದೇ ಚರ್ಚೆ ನಡೆದಿತ್ತು.

ನಾನು ನಿಜ ಸಂಗತಿ ಹೇಳಹೋದರೆ ಯಾರು ಕೇಳಬೇಕು? ಅಷ್ಟರಲ್ಲಿ ಹುಬ್ಬಳ್ಳಿ ಕಡೆಯಿಂದ ಒಂದು ಪೋಲೀಸ್ ವ್ಯಾನೂ ಅಕಸ್ಮಾತ್ತಾಗಿ ಅಲ್ಲಿ ಬಂತು. ಅದೂ ನಿಂತು ಅದರಲ್ಲಿದ್ದ ಪೋಲೀಸರೂ ನಮ್ಮನ್ನು ಮುತ್ತಿದರು. ಒಬ್ಬ ಪೋಲೀಸ ನನ್ನನ್ನು ಹಿಡಿದುಕೊಂಡ, ಇನ್ನೊಬ್ಬ ಚೀರಾಡತೊಡಗಿದ್ದ ನನ್ನ ತಂಗಿಯನ್ನೆತ್ತಿಕೊಂಡ. ಮತ್ತೊಬ್ಬ ಉತ್ಸಾಹಿ ನನಗೆ ತನ್ನ ಕೈಯ ರುಚಿ ತೋರಿಸಬೇಕೆಂದು ಧಮಕಿ ಸಹಿತ ಅಡ್ಡ ಸವಾಲು ಹಾಕತೊಡಗಿದ.

ಇನ್ನೇನು ಮೆರವಣಿಗೆ ಊರ ಕಡೆ ಹೊರಡಬೇಕು, ಅಷ್ಟರಲ್ಲಿ ನನ್ನ ದೈವ ನೆರವಿಗೆ ಬಂತು. ಅವರಲ್ಲೊಬ್ಬ ಪೋಲೀಸ ನಮ್ಮೂರಲ್ಲಿದ್ದಾಗ ನಮ್ಮ ತಂದೆಯ ಕಡೆ ಕೆಲವೊಮ್ಮೆ ಬಂದಿದ್ದು ನನ್ನನ್ನು ಬಲ್ಲವನಾಗಿದ್ದ. ಅವನು ನನ್ನನ್ನು ಹತ್ತಿರ ಬಂದು ನೋಡಿ, "ಎಲಾ! ನೀವೊ!" ಎಂದು ಉದ್ಗಾರ ತೆಗೆದ.

ಮುಂದೆ ನಾನು ಕನ್ಯಾಪಹಾರಕನಲ್ಲವೆಂದು ನೆರೆದವರಿಗೆ ಮನವರಿಕೆಯಾಗಲು ತಡ ಹಿಡಿಯಲಿಲ್ಲ. ನಮಗೆ ಗೆಳೆಯನ ಮನೆ ವರೆಗೆ ಪುಕ್ಕಟೆ ಬಸ್ ಸವಾರಿಯೂ ದೊರೆಯಿತು. ಆ ಪೋಲೀಸನಲ್ಲದೆ ಹೋಗಿದ್ದರೆ ಮಾತ್ರ ಆ ಅತಿ ಉತ್ಸಾಹಿಯ ಕೈಯಲ್ಲಿ ನನಗೆ ಕಪಾಳ ಮೋಕ್ಷದ ಯೋಗವೂ ಒದಗುತ್ತಿತ್ತೋ ಏನೊ.

— ಎಂ. ಬಿ. ರತ್ನಣ್ಣವರ

ನಾನು ವಿದ್ಯಾರ್ಥಿಯಿದ್ದಾಗ ಸುಪ್ರಸಿದ್ಧ ಇತಿಹಾಸ ಸಂಶೋಧಕ ಶಂ. ಬಾ. ಜೋಶಿಯವರಲ್ಲಿ ಒಮ್ಮೆ ಹೋಗಿದ್ದೆ. ಆಗ ನಡೆದ ಒಂದು ಪ್ರಸಂಗ ಇದು.

ನಾನು ಅವರಲ್ಲಿ ಏನನ್ನೊ ಓದುತ್ತಾ ಕುಳಿತಿದ್ದೆನು. ಅವರ ಪುಸ್ತಕ ಕೊಂಡುಕೊಳ್ಳಲು ಓರ್ವ ಗೃಹಸ್ಥರು ಅಲ್ಲಿಗೆ ಬಂದರು. ಪುಸ್ತಕ ತರಲು ಶಂ. ಬಾ. ರು ಒಳಗೆ ಹೋದಾಗ ಆ ಗೃಹಸ್ಥರು ನನ್ನ ಕಡೆಗೆ ಹೊರಳಿ, "ನೀವು ಸಾಹಿತಿ ಪೈಕಿ ಏನ್ರಿ ?" ಎಂದು ಕೇಳಿದರು. "ನಾನು ಸಾಹಿತಿ ಪೈಕಿ ಅಲ್ಲರಿ, ತಲಚೇರಕರ" ಎಂದು ಉತ್ತರ ಕೊಟ್ಟೆ.

ನನ್ನ ಉತ್ತರ ಕೇಳಿ ಅವರು ಗೊಳ್ಳೆಂದು ನಕ್ಕರು. ಅವರ ನಗೆಯ ಅರ್ಥವೇ ನನಗಾಗಲಿಲ್ಲ.

ಅವರು ಹೋದಬಳಿಕ ನಾನು, "ಸಾಹಿತಿ ಎಂಬ ಅಡ್ಡಹೆಸರು ಇದೆಯೊ ?" ಎಂದು ಶಂ. ಬಾ. ರ ಕೂಡ ಕೇಳಿದೆ. ಶಂ. ಬಾ. ರು "ಈ ವರೆಗೆ ಇಲ್ಲ," ಎಂದಾಗ ನನಗೆ ಆ ಗೃಹಸ್ಥರ ನಗೆಯ ಕಾರಣದ ಮೇಲೆ ಬೆಳಕು ಬಿತ್ತು.

ಸಾಹಿತಿಗಳೆಂದರೆ ಏನೂ ಬೇರೆ ಉದ್ಯೋಗ ಇಲ್ಲದ ಒಂದು ವಿಶಿಷ್ಟ ಮಾನವ ವರ್ಗ ಎಂದು ಸಾಮಾನ್ಯವಾಗಿ ಜನರ ತಿಳಿವಳಿಕೆ. ಶಂ. ಬಾ. ರಲ್ಲಿ ಇದ್ದ ನಾನು ಅಂತಹ ಒಬ್ಬ ವ್ಯಕ್ತಿಯಿರಬೇಕೆಂದು ಊಹಿಸಿ ಬಂದ ಗೃಹಸ್ಥರು "ನೀವು ಸಾಹಿತಿ ಪೈಕಿ ಏನ್ರಿ?" ಎಂದು ಕೇಳಿದ್ದರು. ಆದರೆ ಇದು ನನಗೆ ಫಕ್ಕನೆ ಮನಸ್ಸಿಗೆ ಹೊಳೆಯದ್ದರಿಂದ ಸಾಹಿತಿ ಎಂಬ ಅಡ್ಡ ಹೆಸರಿನ ಮನೆತನದವ ನಾನಿರಬೇಕೆಂಬ ಭಾವನೆಯಿಂದ ಆ ಪ್ರಶ್ನೆಯನ್ನು ಕೇಳಿರಬೇಕೆಂದು ಭಾವಿಸಿ ಉತ್ತರಿಸಿದ್ದೆ.

ರಂ. ರಾ. ತ., ಬೆಳಗಾವಿ

ನಾನೂ ನನ್ನ ತಂಗಿಯೂ ಯಾವುದೋ ತಿಂಡಿಗಾಗಿ ಕಚ್ಚಾಡುತ್ತಿದ್ದಾಗ ನಮ್ಮ ಅಜ್ಜಿ ಹೇಳಿದ ಸಂಗತಿ ಇದು. ಅವರ ತಾಯಿಗೂ ಅವರ ಅಣ್ಣನಿಗೂ ಸಂಬಂಧಿಸಿದ ಘಟನೆ.

ನಮ್ಮ ಮುತ್ತಜ್ಜಿ ಮತ್ತು ಅವರ ಅಣ್ಣ ಇಬ್ಬರೇ ಅವರ ತಂದೆ-ತಾಯಿಗಳಿಗೆ ಮಕ್ಕಳು. ಆ ಕಾಲದಲ್ಲಿ ಬೆಳಗ್ಗೆ ಎದ್ದ ಕೂಡಲೇ ಮಕ್ಕಳಿಗೆ ಕಾಫಿ ಕೊಡುತ್ತಿರಲಿಲ್ಲ, ಗಂಜಿ ಬಡಿಸುತ್ತಿದ್ದರು. ಅಣ್ಣ ತಂಗಿ ಇಬ್ಬರಿಗೂ ಬೇರೆ ಬೇರೆ ಬಟ್ಟಲಲ್ಲಿ ಗಂಜಿ ಹಾಕಿ ಮೇಲೆ ಒಂದೊಂದು ಚಮಚ ತುಪ್ಪ ಮತ್ತು ಒಂದೊಂದು ಚಿಟಿಕೆ ಉಪ್ಪು ಹಾಕಿ ಇಬ್ಬರ ಬಟ್ಟಲುಗಳ ನಡುವೆ ಒಂದು ಎಲೆಯ ಚೂರಿನ ಮೇಲೆ ಒಂದೇ ಹೋಳು ಮಾವಿನಕಾಯಿ ಉಪ್ಪಿನಕಾಯಿ ಇಟ್ಟು ಅವರ ತಾಯಿ ಬೇರೆ ಕೆಲಸಕ್ಕೆ ಹೋಗಿಬಿಡುತ್ತಿದ್ದರಂತೆ. ಮಕ್ಕಳಿಬ್ಬರೂ ಸಾವಕಾಶವಾಗಿ ಊಟ ಮಾಡುತ್ತಿದ್ದರು. ಇಬ್ಬರಿಗೂ ಉಪ್ಪಿನಕಾಯಿಯ ಮೇಲೆ ಆಸೆ. ಅದನ್ನು ನೋಡಿ ಬಾಯಲ್ಲಿ ನೀರೂರಬೇಕು. ತೆಗೆದು ತಿಂದು ಬಿಡಲೇ ಎಂದು ಇಬ್ಬರಿಗೂ ಅನಿಸಬೇಕು. ಆದರೆ ಇಬ್ಬರ ನಡುವೆ ಇರುವುದು ಒಂದು ಹೋಳು. ತಾನು ತೆಗೆದರೆ ತಂಗಿ ಏನೆಂದುಕೊಳ್ಳುವಳೋ ಎಂದು ಅಣ್ಣ ಅದಕ್ಕೆ ಕೈಹಾಕಲು ಹಿಂಜರಿಯುತ್ತಿದ್ದ; ಪಾಪ ಅಣ್ಣನಿಗೆ ಉಪ್ಪಿನಕಾಯಿ ತಿನ್ನುವ ಆಸೆ ಇದೆ, ನಾನು ತೆಗೆದರೆ ಏನು ತಿಳಿದುಕೊಂಡಾನು ಎಂದು ತಂಗಿ ಸುಮ್ಮನಿರುತ್ತಿದ್ದಳು. ಹೀಗೆ ಊಟ ಮುಗಿಯುವವರೆಗೂ ಇಬ್ಬರೂ ಬರಿ ಉಪ್ಪಿನಕಾಯಿಯ ಹೋಳನ್ನು ನೋಡಿನೋಡಿ, ಅದರ ಗಮಗಮವನ್ನು ಸೇವಿಸುವುದರಿಂದಲೇ ತೃಪ್ತರಾಗಿ ಎದ್ದುಬಿಡುತ್ತಿದ್ದರು. ಆ ಮೇಲೆ ಅವರ ತಾಯಿ ಬಂದು ತಾವು ಊಟ ಮಾಡುವಾಗ ಆ ಹೋಳನ್ನು ಬಾಡಿಸಿಕೊಳ್ಳುತ್ತಿದ್ದರು.

"ಅವರ ತಾಯಿ ಇಬ್ಬರಿಗೂ ಯಾಕೆ ಉಪ್ಪಿನಕಾಯಿ ಹಾಕಬಾರದಿತ್ತು ?" ನಾನು ಅಜ್ಜಿಗೆ ಕೇಳಿದೆ.

" ಆ ಕಾಲದಲ್ಲಿ ಮಕ್ಕಳು ಉಪ್ಪಿನಕಾಯಿ ತಿಂದರೆ ಒಳ್ಳೇದಲ್ಲ ಎಂಬ ಭಾವನೆ ಇತ್ತು. ಆದರೆ ಬಾರದು ಎಂದರೆ ಮಕ್ಕಳಿಗೆ ತಿಳಿಯುವುದಿಲ್ಲ. ಅದಕ್ಕೇ ತಮ್ಮ ಮಕ್ಕಳ ಪರಸ್ಪರ ಪ್ರೀತಿಯ ಮೇಲೆ ಭರವಸೆ ಇಟ್ಟು ಈ ಉಪಾಯ ಹುಡುಕಿದ್ದರು. ಅವರ ತಾಯಿ'' ಎಂದು ನಮ್ಮ ಅಜ್ಜಿ, " ನೀವಾದರೆ ಹೀಗೆ ಮಾಡುತ್ತಿದ್ದೀರಾ?'' ಎಂದರು.

—ಮುರಲೀಧರ, ಹುಬ್ಬಳ್ಳಿ

ವೈದ್ಯನ ಮೇಲಿರುವ ವಿಶ್ವಾಸವೇ ಅನೇಕ ಸಾರೆ ರೋಗನಿವಾರಣೆಗೆ ಮುಖ್ಯ ಕಾರಣವಾಗುತ್ತದೆಂಬುದನ್ನು ಪ್ರಮಾಣ ಮಾಡಿಸುವ ಕ್ರಿಯಾತ್ಮಕ ದೃಷ್ಟಾಂತ ಒಂದು ಇಂತಿದೆ.

ನನ್ನ ತಂದೆಯ ಮಿತ್ರರೊಬ್ಬರು ಬಲು ಜನಪ್ರಿಯ ವೈದ್ಯರು. ದೂರದೂರದ ಹಳ್ಳಿ ಓಣಿಗಳಿಂದ ಸಹ ಜನರು, ಹತ್ತಿರದಲ್ಲಿಯೇ ಇದ್ದ ಉಚಿತ ನಾಗರಿಕ ದವಾಖಾನೆಯನ್ನು ಬಿಟ್ಟು ಇವರಲ್ಲಿಗೇ ಬರುವದುಂಟು.

ಹೀಗಿರಲಾಗಿ, ಒಮ್ಮೆ ಬೆಳಕು ಹರಿಯುತ್ತಲೇ, ಗಾವಲ ಒಕ್ಕಲಿಗನೊಬ್ಬ ತುಂಬಾ ಜ್ವರದಿಂದ ಬಳಲಿ ಗಾಸಿಯಾಗಿದ್ದ ತನ್ನ ಹೆಂಡತಿಯನ್ನು ಇವರಲ್ಲಿ ಕರೆತಂದನು. ವೈದ್ಯರು ಆಕೆಯನ್ನು ಪರೀಕ್ಷಿಸಿ ಔಷಧವನ್ನು ಒಂದು ಕಾಗದದ ಮೇಲೆ ನಿರವಿಸಿ—" ಇಕಾs ಇದ್ನ ತಗೊಂಡು ಹೋಗು, ನೀರಾಗ ಹಾಕಿ ದಿನಕ್ಕ ಮೂರು ಸಲ ಕುಡ್ಯಾಕ ಕೊಡು. ಎರಡು ದಿವ್ಸ ಬಿಟ್ಟು ಬಂದು, ಆಕಿಗೆ ಹ್ಯಾಂಗ ಅದ ಅಂತ ಹೇಳು'' ಎಂದರು.

ತಪ್ಪದೇ ಮೂರನೇ ದಿನ ರೈತ ಹಾಜರಾದ.

" ಹ್ಯಾಂಗ ಅದನಪಾs ನಿನ್ನ ಹೇಣ್ತಿಗೆ ಈಗ ? ''

" ಓ ಈಗೆಷ್ಟೋ ಭೇಷ ಐತಿರಿ. ಜರಾ ಎಲ್ಲಾ ನಿಂತಂಗ ಆಗ್ಯಾವ್ರಿ. ಹಂತಾದ (ಅಂಥಾದ್ದು) ಇನ್ನೊಮ್ಮೆ ಕೊಟ್ ಬಿಡ್ರಿ ಅಂದ್ರ ಇದ್ದದ್ದೆಲ್ಲಾನೂ ಕಿತ್ ಹೊಕ್ಕೈತ್ರಿ'' ಎಂದ ರೈತ.

ಇದನ್ನು ಕೇಳಿ ವೈದ್ಯರು ಗಾಬರಿಯಾದರು. ಎಂಟು ದಿನಗಳಾದರೂ ಸಾಲುವಂಥಾ ದೊಡ್ಡ ಎಗ್ಸ್ಯುಮಿಕ್ಸ್ಚರ ಬಾಟ್ಲಿಯೊಂದನ್ನು ಎರಡೇ ದಿನಗಳಲ್ಲಿ ಕೊಟ್ಟು ತೀರಿಸಿದ್ದಾನೆಯೇ? ಎಂತ.

ಈದಕ್ಕೆ ರೈತನ ವಿವರಣೆ ಸುಲಭವೇ ಇತ್ತು.

" ಅಲ್ರೀ, ನೀವs ನಿಮ್ ಕೈಯಿಂದ ಔಷಧ ಕೊಟ್ರಿ, ದಿನಾs ಮೂರು ಸಾರೆ ಕೊಡು ಅಂತಾ? ಮತ್ತು ಎರಡು ದಿವ್ಸದ ವ್ಯಾಕ ಬಾ ಅಂತ? ನಂಗೂ ಬರಾಬರಿ ತಿಳೀತ್ರಿ. ನಾನೂ ಊರಿಗೆ ಹೋಗೋಗತ ಅದನ್ನ ಆರ ಭಾಗಾ ಮಾಡಿದೆ—ದಿನಕ್ಕ ಮೂರು ಸರೆ ಅಂದ್ರ ಯಾಡ ದಿನಕ್ಕ ಆರು —ಮತ್ತು ನೀರಾಗ ಹಾಕಿ ಕುಡೀಸ್ದೆ. ಆಕಿಗೂ ಕಾಗದಾ ನುಂಗಾಕ ಜೀವದ ವ್ಯಾಗs ಬರತಿತ್ರೀ. ಮಂತ್ರಾ ಮಾಡಿ ಕೊಟ್ಟಾರs ಸುಮಾಕ ಕುಡೀ ಅಂತ ಕುಡಿಸ್ತಿವರೀ.''

ಪೇಟೆಯಲ್ಲಿ ಕೊಳ್ಳಿಂದು ಔಷಧದ ಹೆಸರು ಬರೆದು ಕೊಟ್ಟ ಚೀಟಿಯನ್ನೇ ಆತ ಹೆಂಡತಿಗೆ ತಿನ್ನಿಸಿದ್ದ.

—ಸದಾನಂದ ಮಾರಾ, ಧಾರವಾಡ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥಗಳನ್ನು ವಿವರಿಸಿದೆ.

೧. ದುರ್ದಾಂತ

(ಅ) ದುಷ್ಟ (ಆ) ಹಲ್ಲುನೋವು (ಇ) ತಾಳಲಾರದ (ಈ) ಪಳಗಿಸಲು ಬಾರದ

೨. ದುರ್ವಿಪಾಕ

(ಅ) ಹಾಳಾದ ಅಡಿಗೆ (ಆ) ಉಪಟಳ (ಇ) ಕೆಟ್ಟ ಫಲ (ಈ) ನರಕ

೩. ಪಾಳಿ

(ಅ) ಸಾಲು (ಆ) ಕೇಡು (ಇ) ಕಾಪಾಡು ವವ (ಈ) ಹಾಳುಬಿದ್ದ ಸ್ಥಳ

೪. ಕಡವರ

(ಅ) ಒಂದು ಪ್ರಾಣಿ (ಆ) ಸಾಲ (ಇ) ಬಂಗಾರ (ಈ) ದ್ರೋಣಿ.

೫. ಆಧಿಕ್ಯ

(ಅ) ರೋಗ (ಆ) ಹೆಚ್ಚಳ (ಇ) ಶಾಪ (ಈ) ಚೆಲುವು

೬. ತುಂತುರು

(ಅ) ನೀರಿನ ಹನಿಗಳು (ಆ) ಒಬ್ಬ ಋಷಿ (ಇ) ಒಂದು ವಾದ್ಯ (ಈ) ತಂತಿ

೭. ಧಾರ್ಷ್ಟ್ಯ

(ಅ) ದಪ್ಪ (ಆ) ಕಡಿತ (ಇ) ದಿಟ್ಟತನ (ಈ) ಗಟ್ಟಿ

೮. ಕುನಸು

(ಅ) ಚಿನ್ನ (ಆ) ಸೇಡಿನ ಭಾವನೆ (ಇ) ಕೋಪ (ಈ) ಕ್ರೂರತನ

೯. ರೂಢಮೂಲ

(ಅ) ದೃಢವಾದ (ಆ) ಕಿತ್ತು ಹಾಕಿದ (ಇ) ಸಂಪ್ರದಾಯ (ಈ) ಮಿತಿಮೀರಿದ

೧೦. ಬಾಲಿಶ

(ಅ) ಮೂಕ (ಆ) ಹುಡುಗಾಟಿಕೆಯ (ಇ) ನಯಮಾಡುವುದು (ಈ) ಬಲವಾದ

೧೧. ಅವ್ಯಾಪಾರ

(ಅ) ಒಳ್ಳೆಯ ವ್ಯಾಪಾರ (ಆ) ಚಟ (ಇ) ಮೂಢತನ (ಈ) ಕೆಟ್ಟ ಕೃತ್ಯ

೧೨. ಶೀರ್ಣ

(ಅ) ಕರಗಿದ (ಆ) ತಲೆ (ಇ) ಒಣಗಿದ (ಈ) ತಂಪಾದ

'ಶಬ್ದಭಾಂಡಾರ' ದ ಸರಿಯಾದ ಅರ್ಥಗಳು

೧. **ದುರ್ದಾಂತ** (ಈ) ಪಳಗಿಸಲು ಬಾರದ, ಸೋಲಿಸಲಾರದ, ದುರ್ದಮ್ಯ. (ಉದಾ: ದುರ್ದಾಂತ ಪರಾಕ್ರಮಿಯಾದ ವಿಕ್ರಮಾರ್ಕ); ಅಹಂಕಾರಿ, ದರ್ಪಶೀಲ (ಉದಾ: ದುರ್ದಾಂತರನ್ನು ದಂಡ ಬಲದಿಂದ ವಿನೀತರನ್ನಾಗಿ ಮಾಡಬೇಕು). [ಸಂ. ದುರ್ + ದಾಂತ]

೨. **ದುರ್ವಿಪಾಕ** (ಇ) ಕೆಟ್ಟ ಪರಿಣಾಮಕ್ಕೆ ಕಾರಣವಾದ; ಕೆಟ್ಟ ಪರಿಣಾಮ, ಯಾವುದಾದರೂ ಕೃತಿಯ ದುಷ್ಫಲ, ಕೆಟ್ಟ ಪರಿಣಾಮ ಮಾಡುವ ಪೂರ್ವಜನ್ಮ ಅಥವಾ ಈ ಜನ್ಮದ ಕೃತ್ಯ; ಅನಿರೀಕ್ಷಿತವಾದ ಆಪತ್ತು (ಉದಾ: ದೈವದುರ್ವಿಪಾಕದಿಂದ ಹೀಗಾಯಿತು.) [ಸಂ. ದುರ್+ವಿ+ಪಾಕ]

೩. **ಪಾಳಿ** (ಅ) ಸಾಲು, ಪಂಕ್ತಿ; ಕ್ರಮ, ಯೋಗ್ಯ ಪದ್ಧತಿ; ವ್ಯವಸ್ಥೆ; ಸರದಿ; ನಿಯಮ. ಪಾಳಿ ಹಿಡಿದು ನಿಲ್ಲು ಅಂದರೆ ಅನುಕ್ರಮವಾಗಿ ನಿಲ್ಲು (ಇಂಗ್ಲಿಷಿನ "ಕ್ಯೂ" ಶಬ್ದಕ್ಕೆ ಪಾಳಿ ಸಮಾನಾರ್ಥಕ.) [ಕನ್ನಡ]

೪. **ಕಡವರ** (ಇ) ಬಂಗಾರ (ಕಸವರವೆಂದೂ ಉಂಟು), ನಿಧಿ. [ಕನ್ನಡ].

೫. **ಆಧಿಕ್ಯ**(ಅ) ಹೆಚ್ಚಳ; ಶ್ರೇಷ್ಠತೆ, ಮೇಲ್ಮೆ. (ಪಿತ್ತಾಧಿಕ್ಯದಿಂದ ಜ್ವರ ಬಂದಿದೆ ಎಂದರೆ ಪಿತ್ತ ಹೆಚ್ಚಾಗಿ ಎಂದರ್ಥ; ಶೈವರು ಶಿವಾಧಿಕ್ಯವನ್ನು ಹೇಳುವರು ಎಂದರೆ ಶಿವನೇ ಶ್ರೇಷ್ಠ ಎನ್ನುವರು). [ಸಂ. 'ಅಧಿಕ' ದಿಂದ]

೬. **ತುಂತುರು** (ಅ) ನೀರಿನ ಹನಿ; ಚಿಕ್ಕ ಹನಿಗಳ ಸಮೂಹ; ಸಣ್ಣ ಹನಿಗಳ ಮಳೆ, ಸೀಕರ. (ಉದಾ: ತುಂತುರು ಮಳೆಯಿಂದ ತೂಬಿನ ಕೆರೆ ತುಂಬೀತೆ?) [ಕನ್ನಡ].

೭. **ಧಾರ್ಷ್ಟ್ಯ** (ಇ) ದಿಟ್ಟತನ, ದರ್ಪ, ಕೆಚ್ಚು, ಅವಿನಯ (ಉದಾ: ಸುಳ್ಳು ಹೇಳುವುದರಲ್ಲಿ ಅವನ ಧಾರ್ಷ್ಟ್ಯ ಅಗಾಧವಾದದ್ದು. [ಸಂ.]

೮. **ಕುನಸು** (ಅ) ಸೇಡಿನ ಭಾವನೆ, ಸೇಡು ತೀರಿಸಿಕೊಳ್ಳುವ ಹಟಸಾಧನೆ. (ಉದಾ. ಜಯಚಂದ ಪೃಥ್ವೀರಾಜನ ಮೇಲೆ ಕುನಸು ಇಟ್ಟುಕೊಂಡಿದ್ದನು).

೯. **ರೂಢಮೂಲ** (ಅ) ದೃಢವಾದ, ಆಳವಾಗಿ ಬೇರುಬಿಟ್ಟ (ರೂಢಮೂಲವಾದ ದ್ವೇಷ ಅಂದರೆ ಬಹಳ ಕಾಲದಿಂದ ಆಳವಾಗಿ ಬೇರು ಬಿಟ್ಟದ್ದು) [ಸಂ. ರೂಢ = ಬೆಳೆದ, ಮೂಲ= ಬೇರು(ಳ್ಳ)]

೧೦. **ಬಾಲಿಶ** (ಅ) ಹುಡುಗಾಟಿಕೆಯ; ಹೆಡ್ಡತನದ, ಮೂಢ, ತಿಳಿವಳಿಕೆಯಿಲ್ಲದ. (ಉದಾ. ನಿನ್ನ ಯೋಜನೆಗಳು ಬಾಲಿಶವಾಗಿವೆ). [ಸಂ. ಬಾಲ=ಮಗು ಎಂಬುದರಿಂದ]

೧೧. **ಅವ್ಯಾಪಾರ** (ಈ) ಕೆಟ್ಟಕೃತ್ಯ, ಉಪದ್ವ್ಯಾಪ, ಮಾಡಬಾರದ ಕೆಲಸ, ಅನ್ಯಾಯ. [ಸಂ. ಅ + ವ್ಯಾಪಾರ]

೧೨. **ಶೀರ್ಣ** (ಇ) ಒಣಗಿದ, ಬಾಡಿದ, ಕೊಳೆತ, ಮುದುರಿದ; ಬಡಕಲಾದ. (ಉದಾ. ಅವನ ಮುಖ ಶೀರ್ಣವಾಗಿದೆ ಎಂದರೆ ಮುಖ ಒಣಗಿದೆ). ಶೀರ್ಣಪತ್ರ=ಬಾಡಿದ ಎಲೆ. [ಸಂ.]

ನಿಮ್ಮ ಶಬ್ದ ಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದ ಶಕ್ತಿಯ ತರಗತಿಗಳನ್ನು ಅರಿಸಿರಿ.

೬—೮ ಸರಿಯಿದ್ದರೆ ....ಸಾಧಾರಣ

೯—೧೦ " ....ಉತ್ತಮ

೧೧—೧೨ " ....ಅತ್ಯುತ್ತಮ



ಅಗ್ನಿ-ಪರೀಕ್ಷೆ

ಸಿಂಪಿ ಲಿಂಗಣ್ಣ

ಕ್ರಿ. ಶ. ೧೮೧೪ ರಲ್ಲಿ ಇಂಗ್ಲಿಷ ಸರಕಾರವು ನೇಪಾಲ ರಾಜ್ಯದ ವಿರುದ್ಧ ಯುದ್ಧವನ್ನು ಸಾರಿತು. ಒಂದು ಕಡೆಗೆ ಜನರಲ್ ಮಾರ್ಲಿಯು ಕಾಟಮಾಂಡುವನ್ನು ಆಕ್ರಮಿಸುವುದಕ್ಕೆ ತೊಡಗಿದಾಗ, ಇನ್ನೊಂದು ಕಡೆಗೆ ಜನರಲ್ ಉಡ್‌ನು ಗೋರಕ್ಷಪುರದಲ್ಲಿ ಬೀಡುಬಿಟ್ಟು, ಗಡಿನಾಡಿನಲ್ಲಿ ನುಗ್ಗಿದನು. ಜನರಲ್ ಅಕ್ಟರ್ಲೊನಿಯು ನೇಪಾಲದ ಪಶ್ಚಿಮ ಪ್ರಾಂತದಲ್ಲಿ ಅಮರಸಿಂಹನ ಸೈನ್ಯದ ವಿರುದ್ಧ ನಿಂತನಲ್ಲದೆ, ಜನರಲ್ ಗಿಲೆಸ್ಪಿಯು ಡೆಹರಾಡೂನದಿಂದ ಕಲುಂಗಾ ಪ್ರಾಂತವನ್ನು ಕೈವಶಮಾಡಿಕೊಳ್ಳಲು ಉದ್ಯುಕ್ತನಾದನು. ಈ ರೀತಿಯಾಗಿ ನೇಪಾಲ ರಾಜ್ಯವು ನಾಲ್ಕೂ ನಿಟ್ಟಿನಿಂದ ಮುತ್ತಲ್ಪಟ್ಟಿತು. ಆಗ ನೇಪಾಲರಾಜ್ಯದ ಸೈನ್ಯವೆಲ್ಲ ಕೂಡಿ ಹನ್ನೆರಡು ಸಾವಿರದಷ್ಟಿತ್ತು. ಅದರ ವಿರುದ್ಧ ಇಪ್ಪತ್ತೊಂಬತ್ತು ಸಾವಿರ ಸೈನ್ಯವನ್ನು ಇಂಗ್ಲಿಷ ಸರಕಾರವು ಕಳಿಸಿಕೊಟ್ಟಿತು. ಯುದ್ಧದ ಕಾರಣವೇನೆಂದು ಹೇಳುವುದು ಈ ಪ್ರಬಂಧದ ಉದ್ದೇಶವೂ ಅಲ್ಲ, ಪ್ರಯೋಜನವೂ ಇಲ್ಲ.

ಯುದ್ಧ ಘೋಷಣೆಯ ಸಮಯಕ್ಕೆ ನೇಪಾಲದ

ಪ್ರಸಿದ್ಧ ಸಸ್ಯವಿಜ್ಞಾನಿ ಜಗದೀಶಚಂದ್ರ ಬೋಸರ "ಅವ್ಯಕ್ತ ದರ್ಶನ" ದಿಂದ

ಸೀಮಾಂತ ಪ್ರದೇಶದಲ್ಲಿದ್ದ ಕಲುಂಗೆಯಲ್ಲಿ ಗುರ್ಖಾಜನರ ಸಣ್ಣದಾದ ಒಂದು ಸೈನ್ಯದಲವಿದ್ದಿತು. ಸೈನ್ಯಸಂಖ್ಯೆಯು ಕೇವಲ ಮೂರೇ ನೂರು. ಬಲಭದ್ರನು ಅದಕ್ಕೆ ಅಧಿನಾಯಕನಿದ್ದನು. ಆ ಸ್ಥಳದಲ್ಲಿ ಬಹು ಪುರಾತನ ಕಾಲದ ಒಂದು ಭಗ್ನವಾದ ದುರ್ಗವಿತ್ತು. ಶಸ್ತ್ರಾಸ್ತ್ರಗಳು ಸಹ ವಿಶೇಷವಾಗಿರಲಿಲ್ಲ. ಎಂದಿನವೋ ಬಿಲ್ಲು, ಬಾಣ, ಈಟಿ, ಬರ್ಚಿ ಅಲ್ಲದೆ ಹಳೆಯ ತುಬಾಕಿ ಇವೇ ಅವರ ಯುದ್ಧೋಪಕರಣಗಳಾಗಿದ್ದವು. ಆವರೆಗೆ ಯುದ್ಧದ ಯಾವ ಸಂಭವವೂ ಇಲ್ಲದ್ದರಿಂದ ಸೈನಿಕರು ತಮ್ಮ ಸತಿಸುತರೊಡನೆ ಅಲ್ಲಿ ವಾಸವಾಗಿದ್ದರು. ಸ್ತ್ರೀಯರು ಮಕ್ಕಳು ಕೂಡಿ ಅಲ್ಲಿ ಸುಮಾರು ನೂರೈವತ್ತು ಜನರಿರಬಹುದು.

ಒಮ್ಮೆಲೆ ಒಂದು ಸುದ್ದಿ ಬಂದಿತು—ಇಂಗ್ಲಿಷರು ಯುದ್ಧ ಸಾರಿದ್ದಾರಲ್ಲದೆ, ಕಲುಂಗೆಯನ್ನು ಕೈವಶಪಡಿಸಿಕೊಳ್ಳುವದಕ್ಕಾಗಿ ಮುಂದುವರಿದಿದ್ದಾರೆ. ಬಲಭದ್ರನು ಆ ಸುದ್ದಿಯನ್ನು ಕೇಳಿ ಪುರಾತನವಾದ ಆ ಭಗ್ನದುರ್ಗವನ್ನು ಹೇಗೋ ಸಬಲಗೊಳಿಸತೊಡಗಿದನು. ಗುರ್ಖಾ ಸೇನಾಪತಿಯು ಸ್ತ್ರೀಯರನ್ನೂ ಮಕ್ಕಳನ್ನೂ ಕಟ್ಟಿಕೊಂಡು ತೊಡಕಿನಲ್ಲಿ ಬಿದ್ದನಲ್ಲದೆ ಸೈನ್ಯ ಹಾಗೂ ಶಸ್ತ್ರಾಸ್ತ್ರಗಳ ಅಭಾವದಿಂದ ತುಂಬ ವಿಪತ್ತಿಗೊಳಗಾದನು. ಅಷ್ಟರಲ್ಲಿ ಇಂಗ್ಲಿಷ ಸೇನಾಪತಿಯಾದ ಮೊಬ್ರಿಯು ಮೂವತ್ತೈದು ನೂರು ಸೈನ್ಯವನ್ನೂ ಅಸಂಖ್ಯ ತೋಪುಗಳನ್ನೂ ತೆಗೆದುಕೊಂಡು ಬೇಗನೆ ಆ ಸ್ಥಳವನ್ನು ಮುತ್ತಿಬಿಟ್ಟನು.

ಜಯದ ಆಶೆಯನ್ನು ಕಾಣುವ ಯುದ್ಧವನ್ನು ಬೇಕಾದವರು ಮಾಡಬಲ್ಲರು. ಆದರೆ ಯಾವ ಯುದ್ಧದಿಂದ ಪರಾಭವವು ನಿಶ್ಚಿತವೊ ಅಂಥ ಯುದ್ಧವನ್ನು ಮಾಡಲು ಅಮಾನುಷ ಬಲವು ಬೇಕು.

ನೋಡನೋಡುವಷ್ಟರಲ್ಲಿ ಇಂಗ್ಲಿಷ ಸೈನ್ಯವು ಕೋಟೆಯ ನಾಲ್ಕೂ ಮಗ್ಗಲಿಗೆ ಮುತ್ತಿಗೆ ಹಾಕಿತು. ಆಗ ಬಲಭದ್ರನು—"ಪ್ರಭುವು ನನ್ನನ್ನು ಸುದಿನಗಳಲ್ಲಿ ಸೈನ್ಯಾಧಿಪತಿಯೆಂದು ಇತ್ತ ಕಳಿಸಿಕೊಟ್ಟನು. ಈಗ ದುರ್ದಿನವು ಮುಂದೆ ಬಂದು ನಿಂತಿದೆ. ಇಂದು ಉಪ್ಪು ಉಂಡಿದ್ದರ ಪರೀಕ್ಷೆಯಾಗಬೇಕಾಗಿದೆ" ಎಂದು ಬಗೆದನು

ಅಕ್ಟೋಬರ ೨೫ ನೇ ತಾರೀಖಿನ ರಾತ್ರಿ ಎರಡು ಗಂಟೆಯ ಸಮಯಕ್ಕೆ ಇಂಗ್ಲಿಷ ದೂತನು ಬಲಭದ್ರನ ಕಡೆಗೆ ಯುದ್ಧಪತ್ರವನ್ನು ತೆಗೆದುಕೊಂಡು ಬಂದನು. ಆಗ ಬಲಭದ್ರನು ಇಡಿಯ ದಿನವನ್ನೆಲ್ಲ ಪರಿಶ್ರಮಮಾಡಿ ನಿದ್ರೆಗೆಂದು ಅದೇ ಹೋಗಿದ್ದನು. ಆ ಪತ್ರದಲ್ಲಿ ಹೀಗೆ ಬರೆದಿದ್ದಿತು—"ಈ ಯುದ್ಧದಲ್ಲಿ ಪರಾಭವವನ್ನು ಸ್ವೀಕರಿಸುವುದು ವೀರಪುರುಷನಿಗೆ ಅಪಮಾನಕಾರಕವಲ್ಲ. ರಕ್ತಪಾತವಿಲ್ಲದೆ ದುರ್ಗಾಧಿಕಾರವನ್ನು ಬಿಟ್ಟುಕೊಡುವದೇ ಗುರ್ಖಾ ಸೇನಾಪತಿಗೆ ಮಂಗಲದಾಯಕವಿದೆ." ಅದಕ್ಕೆ ಉತ್ತರವೆಂದು ಗುರ್ಖಾ ಸೇನಾಪತಿಯು ಇಂಗ್ಲಿಷ ದೂತನಿಗೆ ತಿಳಿಸಿದ್ದೇನೆಂದರೆ—"ನಾಳೆ ಮುಂಜಾನೆ ಯುದ್ಧಕ್ಷೇತ್ರದಲ್ಲಿ ಅದಕ್ಕೆ ಉತ್ತರ ದೊರೆಯುವುದೆಂದು ನಿಮ್ಮ ಸುಭೇದಾರನಿಗೆ ಹೇಳು."

ಮರುದಿನ ಮುಂಜಾನೆ ತೋಫಿನ ಗುಂಡುಗಳು ಮುನ್ನಾದಿನದ ಆ ಹೆಮ್ಮೆಯ ಉತ್ತರಕ್ಕೆ ಪ್ರತ್ಯುತ್ತರವನ್ನು ತೆಗೆದುಕೊಂಡು ಬರತೊಡಗಿದವು. ತೋಫುಗಳ ಅಗ್ನಿ ಧೂಮವು ಮಾಯವಾಗುವುದರಲ್ಲಿಯೇ ಇಂಗ್ಲಿಷ ಸೇನಾಪತಿಯು ತನ್ನೆಲ್ಲ ಸೈನ್ಯವನ್ನು ತೆಗೆದುಕೊಂಡು ನಾಲ್ಕೂ ನಿಟ್ಟುಗಳಿಂದ ದುರ್ಗವನ್ನು ಆಕ್ರಮಿಸಿದನು. ಆದರೆ ಆ ದುರ್ಗದ ಕೊತ್ತಳಗಳಾಚೆಯಲ್ಲಿ ತೋಫಿನ ಗುಂಡುಗಳಿಂದ ಭೇದಿಸಲಿಕ್ಕೆ ಬಾರದ ಒಂದು ಅದಮ್ಯಶಕ್ತಿ ಅಡಗಿಕೊಂಡಿತ್ತು. ಆ ಮಾನಸಿಕ ಮಹಾಶಕ್ತಿಯು ವಿದ್ಯುಲ್ಲಹರಿಯಂತೆ ಪಳಂಚನೆ ಮಿಂಚಿ ಸುಭೇದಾರನಿಂದ ಸಾಮಾನ್ಯನಾದ ಒಬ್ಬ ಸಿಪಾಯಿಯ ಹೃದಯದವರೆಗೂ ಪ್ರವೇಶಿಸಿತು. ಕೇವಲ ಯೋದ್ಧರ ಹೃದಯಗಳೇ ಅಲ್ಲ, ದುರ್ಬಲರಾದ ನಾರಿಯರ ಹಾಗೂ ನಿರುಪಾಯರಾದ ಶಿಶುಗಳ ಹೃದಯಗಳು ಸಹ ಆ ಮಹಾ ಅಗ್ನಿಶಿಖೆಯನ್ನು ಉದ್ದೀಪನಗೊಳಿಸಿದವು.

ಇಂಗ್ಲಿಷ ಸೈನ್ಯವು ತಿರುತಿರುಗಿ ಮುತ್ತಿದರೂ

ದುರ್ಗವು ಅವರ ಕೈವಶವಾಗಲಿಲ್ಲ. ಕಟ್ಟಕಡೆಗೆ ಜಯದ ಆಶೆಯನ್ನು ಕಾಣದೆ ಡೆಹರಾಡೂನಿಗೆ ಸೈನ್ಯವು ತಿರುಗಿ ಹೋಯಿತು.

ಬಳಿಕ ಜನರಲ್ ಗೆಲಸ್ಪಿಯು ದುರ್ಗವನ್ನು ಭೇದಿಸಬಲ್ಲ ಹೊಸಹೊಸ ತೋಫುಗಳನ್ನು ಸಂಗ್ರಹಿಸಿಕೊಂಡು ನೂತನವಾದ ಸೈನ್ಯದೊಡನೆ ಮಾವುಬ್ರಿಯನ್ನು ಕೂಡಿಕೊಂಡನು. ಒಂದೇ ಕಾಲಕ್ಕೆ ನಾಲ್ಕೂ ದಿಕ್ಕುಗಳಿಂದ ದುರ್ಗವನ್ನು ಆಕ್ರಮಿಸಬೇಕೆಂದೂ ತೋಫುಗಳ ಗುಂಡುಗಳಿಂದ ಕೋಟೆಯ ಗೋಡೆಯನ್ನು ಭೇದಿಸಿ ಒಳನುಗ್ಗಬೇಕೆಂದೂ ಅವರು ಯೋಚಿಸಿದ್ದರು.

ಇಪ್ಪತ್ತಾರನೇ ತಾರೀಖಿನ ಒಂಬತ್ತು ಗಂಟೆಯ ಸಮಯಕ್ಕೆ ಆ ಭಯಂಕರವಾದ ಏರಾಟವು ಆರಂಭವಾಯಿತು. ಆದರೆ ಅಲ್ಪ ಸಮಯದಲ್ಲಿಯೇ ಇಂಗ್ಲಿಷ ಸೈನ್ಯವು ಪರಾಭವ ಹೊಂದಿ ಹಿಂದಿರುಗಿತು.

ಆ ಬಳಿಕ ಜನರಲ್ ಗೆಲಸ್ಪಿಯು ಮೂರು ಹೊಸ ದಲಗಳೊಡನೆ ಸ್ವತಃ ಕೋಟೆಯನ್ನು ಆಕ್ರಮಿಸಿ ಅಗ್ನಿಯನ್ನು ಕಾರುವ ತೋಫುಗಳಿಂದ ಕೋಟೆಯ ಮೇಲೆ ಗುಂಡಿನ ಮಳೆಯನ್ನು ಸುರಿಸತೊಡಗಿದನು.

ಹೆಸರಿಗೆ ಮಾತ್ರ ದುರ್ಗವೆನಿಸಿಕೊಳ್ಳುವ ಅದರ ಗೋಡೆಯು ಗುಂಡಿನೇಟುಗಳನ್ನು ತಾಳಿಕೊಳ್ಳದೆ ಕಲ್ಲು ಸ್ತೂಪಗಳು ಕುಸಿದುಬೀಳತೊಡಗಿ, ಮುತ್ತಲ್ಪಟ್ಟ ಗುರ್ಖಾಸೈನ್ಯದ ಭಾಗ್ಯಲಕ್ಷ್ಮಿಯು ಸಾವಕಾಶವಾಗಿ ಕಣ್ಮರೆಯಾಗತೊಡಗಿದಳು. ಅದೇ ಸಮಯದಲ್ಲಿಯೇ ಒಂದು ಅದ್ಭುತ ದೃಶ್ಯವು ಕಾಣಿಸಿಕೊಂಡಿತು. ಅದೇನೆಂದರೆ- ಬಿದ್ದುಹೋದ ಸ್ಥಾನಗಳೆಲ್ಲ ಒಂದೇ ಮುಹೂರ್ತದಲ್ಲಿ ಗೋಡೆಗಳಾಗಿ ನಿಂತಿದ್ದವು. ಆ ಗೋಡೆಗಳೆಲ್ಲ ಸುಕೋಮಲೆಯರಾದ ನಾರಿಯರ ದೇಹಗಳಿಂದ ರಚಿಸಲ್ಪಟ್ಟಿದ್ದವು. ಗುರ್ಖಾ ರಮಣಿಯರಿಂದ ಆದ ಅಂಥ ಸಾಹಸವು ಪೃಥ್ವಿಯ ಮೇಲೆ ಇನ್ನೆಲ್ಲಿಯೂ ನೋಡಸಿಗದು. ಕಾರ್ಥೇಜದ ರಮಣಿಯರೇನೋ ತಮ್ಮ ಕೇಶಪಾಶಗಳನ್ನು ಕತ್ತರಿಸಿ ಬಿಲ್ಲಿಗೆ ಹೆದೆಯನ್ನು ಕಟ್ಟಿದರು. ಆದರೆ ರಕ್ತಮಾಂಸಗಳಿಂದ ನಿರ್ಮಿತವಾದ ಜೀವಂತ ಶರೀರವನ್ನು ಕೊಟ್ಟು ಕೋಟೆಯನ್ನು ಕಟ್ಟಿದ್ದು ಇನ್ನೆಲ್ಲಿಯೂ ಕೇಳಸಿಗುವದಿಲ್ಲ. ಇಷ್ಟೇ ಅಲ್ಲದೆ ಆ ಕೋಮಲ ದೇಹಗಳು ಕೋಟೆಯ ಕಲ್ಲುಗಳಷ್ಟೇ ಆಗಿ ಉಳಿಯದೆ ವಜ್ರದಂತೆ ಬಿರುಸಾಗಿ ರಣದಲ್ಲಿ ಭೀಷಣವಾದ ಸಂಹಾರಕ ಅಸ್ತ್ರಗಳಾದವು.

ಆ ಸಮಯದಲ್ಲಿ ದುರ್ಗವನ್ನು ಪ್ರವೇಶಿಸಬೇಕೆನ್ನುವ ಹವ್ಯಾಸದಲ್ಲಿ ಮುಂದಡಿಯಿಡುತ್ತಿದ್ದ ಜನರಲ್ ಗೆಲಸ್ಪಿಯು ಗುಂಡಿನೇಟಿನಿಂದ ಪ್ರಾಣತ್ಯಾಗ ಮಾಡಿದನು. ಆತನ ಅನುಗಾಮಿಗಳು ಸಹ ಬಾಣಗಳಿಂದಲೂ ಗುಂಡಿನೇಟುಗಳಿಂದಲೂ ಛಿನ್ನಭಿನ್ನರಾಗಿ ಡೆಹರಾಡೂನಿಗೆ ತಿರುಗಿ ಹೋದರು.

ತರುವಾಯ ದಿಲ್ಲಿಯಿಂದ ಹೊಸ 'ಸೈನ್ಯವು ತೋಫುಗಳನ್ನೂ ಯುದ್ಧ ಸಾಮಗ್ರಿಗಳನ್ನೂ ತೆಗೆದುಕೊಂಡು ಬಂದು ನವಂಬರ ೨೭ನೇ ತಾರೀಖಿಗೆ ಕಲುಂಗೆಯನ್ನು ಮುತ್ತಿತು.

ಈ ಸಾರೆ ತೋಫುಗಳು ಬಾಂಬುಗಳನ್ನು ಸುರಿಸತೊಡಗಿದ್ದರಿಂದ ಅವು ಭೂಮಿಯನ್ನು ಮುಟ್ಟುವುದೇ ತಡ, ಭಯಂಕರವಾದ ಧ್ವನಿಯನ್ನು ಮಾಡುತ್ತ ನಾಲ್ಕೂ ದಿಕ್ಕಿಗೂ ಮೃತ್ಯುವಿನ ವಿಕರಾಳ ಆಕಾರವನ್ನು ಧರಿಸತೊಡಗಿದವು. ಇಷ್ಟು ದಿನ ಯೋದ್ಧಯೋದ್ಧರಲ್ಲಿ ಮೇಲಾಟ ನಡೆದಿದ್ದಿತು. ಆದರೆ ಇಂದು ಮೃತ್ಯುವಿನ ಸರ್ವಗ್ರಾಸಿಯಾದ ರೂಪ ಬೇರೆ ಎಲ್ಲೆಲ್ಲಿಯೂ ಹಬ್ಬಿಕೊಂಡಿದ್ದರಿಂದ ತಾಯಿಯ ತೊಡೆಯಲ್ಲಿ ಆಡುವ ಕೂಸುಗಳು ಸಹ ಪ್ರಾಣವನ್ನು ಉಳಿಸಿಕೊಳ್ಳದಾದವು.

ಈ ರೀತಿಯಾಗಿ ಮುತ್ತಿಗೆಯು ಒಂದು ತಿಂಗಳವರೆಗೆ ನಡೆಯಿತು. ಆಗ ಒಳಗಿನವರ ಆಹಾರ ಸಾಮಗ್ರಿಗಳು ಮುಗಿದುಹೋದವಲ್ಲದೆ, ಯುದ್ಧ ಸಾಮಗ್ರಿಗಳೂ ನಿಃಶೇಷವಾದವು. ಆದರೂ ಆ ಯೋಧರು ಎದೆಗೆಡಲಿಲ್ಲ. ಮೃತ್ಯುವಿನ ರಾಜ್ಯದಲ್ಲಿ ಅಡಿಯಿಡಲಿರುವ ಶತ್ರುಗಳನ್ನೆಲ್ಲ ಸಮೂಲ ನಾಶಗೊಳಿಸುವುದಕ್ಕಾಗಿ ಮಹಾಸಾಗರದ ತೆರೆ

ಗಳಂತೆ ಇಂಗ್ಲಿಷ ಸೈನ್ಯವು ಆಗಾಗ ಹೊರಕೋಟೆಯ ಮೇಲೆ ಎರಗತೊಡಗಿದರೂ ಗುರ್ಖಾ ಸೈನಿಕರು ಅಮಾನುಷ ಶಕ್ತಿಯಿಂದ ಯುದ್ಧ ಮಾಡುತ್ತ ಮದ್ದುಗುಂಡುಗಳು ತೀರಿದ ಮೇಲೆ ಬಾಣಗಳಿಂದ, ಬಾಣಗಳು ತೀರಿದ ಮೇಲೆ ಕಲ್ಲುಗಳಿಂದ ಶತ್ರುಗಳನ್ನು ನಾಶಗೊಳಿಸತೊಡಗಿದರು. ಕಡೆಗೆ ಈ ಯುದ್ಧದಲ್ಲಿಯೂ ಗುರ್ಖಾ ಜನರಿಗೇ ಜಯಮಾಲೆ ದೊರೆಯಿತು. ದುರ್ಗವು ಕೈವಶವಾಗುವ ಆಶೆಯಿಲ್ಲವೆಂದು ತಿಳಿದು ಇಂಗ್ಲಿಷ ಸೈನ್ಯವು ಡೆಹರಾಡೂನಿಗೆ ಹೊರಟು ನಿಂತಿತು.

ಅಷ್ಟರಲ್ಲಿ ಒಬ್ಬ ಗುಪ್ತಚಾರನು ಬಂದು— "ಕಲುಂಗಾ ದುರ್ಗದಲ್ಲಿ ನೀರಿನ ಅನುಕೂಲತೆಯಿಲ್ಲ. ಕೋಟೆಯ ಹೊರಮಗ್ಗಲಿನ ಒಂದು ಝರಿಯಿಂದ ರಾತ್ರಿಯ ಕಗ್ಗತ್ತಲೆಯಲ್ಲಿ ಅವರು ನೀರು ತರುತ್ತಾರೆ. ಅದನ್ನು ನಿಲ್ಲಿಸಿಬಿಟ್ಟರೆ ನಿರುಪಾಯರಾಗಿ ಅವರು ಸೋತು ಹೋಗುವರು" ಎಂದು ಸುದ್ದಿ ಹೇಳಿದನು.

ಒಡನೆಯೇ ಆ ಝರಿಯ ನೀರು ಕಟ್ಟುಮಾಡಲಾಯಿತು. ಅದರಿಂದ ದುರ್ಗದಲ್ಲಿ ಉಂಟಾದ ಯಾತನೆಯು ಕಲ್ಪನೆಗೂ ಅತೀತವಾದದ್ದು. ಗಾಯಗೊಂಡ ನರನಾರಿಯರೂ ಶಿಶುಗಳೂ ಕೂಡಿ "ನೀರು ನೀರು" ಎಂದು ಒರಲುವ ಅವರ ಆರ್ತನಾದವು ಮೃತ್ಯುವಿನ ಆಗಮನದಿಂದಲೇ ಶಾಂತವಾಗತೊಡಗಿತು.

ಇತ್ತ ಇಂಗ್ಲಿಷರು, ಶತ್ರುಗಳು ವಿಪತ್ತಿಗೊಳಗಾಗಿದ್ದನ್ನು ಕಂಡು, ಆ ಸಿಂಹಶಿಶುಗಳನ್ನು ಜೀವಂತವಾಗಿಯೇ ಬಂಧಿಸಬೇಕೆನ್ನುವ ಉದ್ಯಮದಲ್ಲಿದ್ದರು. ದುರ್ಗದ ಸುತ್ತಲೂ ಸೈನ್ಯಪಾಶವನ್ನು ಬಿಗಿದರು; ಮಹಾದ್ವಾರದ ಬಳಿಯಲ್ಲಿ ಅಸಂಖ್ಯ ಸೈನ್ಯವನ್ನು ತಂದಿರಿಸಿದರು. ಆ ಸೈನ್ಯವು ಹಗಲು ರಾತ್ರಿಯೆನ್ನದೆ ಹಾದಿಯನ್ನು ಅಡ್ಡಗಟ್ಟಿ ನಿಂತಿತು.

ಮೊದಲಿದ್ದ ಮುನ್ನೂರು ಜನರ ಗುರ್ಖಾ ಸೈನ್ಯದಲ್ಲಿ ತಿಂಗಳವರೆಗೆ ನಡೆದ ಈ ಮಹಾಯುದ್ಧದಿಂದ ಬರಿಯೆ ಎಪ್ಪತ್ತು ಜನರು ಮಾತ್ರ ಉಳಿದರು. ಅವರು ಈ ನಾಲ್ಕು ದಿನಗಳಿಂದ ಒಂದು ಹನಿ ನೀರನ್ನು ಸಹ ಸ್ಪರ್ಶ ಮಾಡಿರಲಿಲ್ಲ. ಹಸಿವೆಯನ್ನೂ ನೀರಡಿಕೆಯನ್ನೂ ಅವರು ಶಾಂತವಾಗಿ ಸಹಿಸುತ್ತಿದ್ದರು. ತಮ್ಮ ಕಷ್ಟಗಳನ್ನೆಲ್ಲ ಸಮಾಧಾನದಿಂದ ಸಹಿಸುತ್ತಿದ್ದರಾದರೂ ಹೆಂಗಳೆಯರ ಹಾಗೂ ಎಳೆಮಕ್ಕಳ ಕ್ರಂದನವು ಅವರಿಗೆ ಸಹಿಸದಾಯಿತು. ಶತ್ರುಗಳಿಗೆ ದುರ್ಗವನ್ನು ಸಮರ್ಪಿಸಿದರೆ ಈ ದಾರುಣದುಃಖವು ಕೊನೆಗಾಣುವುದೇನೋ ನಿಜ, ಆದರೆ ಕೈಯೊಳಗಿನ ಖಡ್ಗವನ್ನು ಶತ್ರುವಿನ ಪದತಲಕ್ಕರ್ಪಿಸುವುದು ಪ್ರಾಣವಿರುವವರೆಗೂ ಅವರಿಗೆ ಸಾಧ್ಯವಿರಲಿಲ್ಲ.

ರಾತ್ರಿಯ ಸುಮಾರು ಎರಡು ಗಂಟೆಯ ಸಮಯಕ್ಕೆ ಒಮ್ಮೆಲೆ ದುರ್ಗದ ಮಹಾದ್ವಾರವು ತೆರೆಯಿತು. ಬರ್ಚಿಗಳಿಂದಲೂ ತೋಪುಗಳ ಏಟುಗಳಿಂದಲೂ ತೆರೆಯದ ಬಾಗಿಲು ಇಂದು ತನ್ನಿಂದ ತಾನೇ ತೆರೆದಿದೆ. ಆತ್ಮಬಲಿದಾನಕ್ಕೆ ಸನ್ನದ್ಧರಾದ ಆ ಎಪ್ಪತ್ತು ಜನ ವೀರರು ಅಗಣಿತವಾದ ಶತ್ರುಸೈನ್ಯದ ಮೇಲೆ ಬಿದ್ದು ಬಾಣದೇಟಿನಂತೆ ಮಾರ್ಗವನ್ನು ಭೇದಿಸಿ ನಿಮಿಷಾರ್ಧದಲ್ಲಿಯೇ ಮಾಯವಾದರು!

ಬೆಳಗು ಮುಂಜಾನೆ ಇಂಗ್ಲಿಷ ಸೈನ್ಯವು ಯೋಧರು ಬಿಟ್ಟುಕೊಟ್ಟ ದುರ್ಗವನ್ನು ಪ್ರವೇಶಿಸಿ ನೋಡುವಾಗ ಉಲ್ಲಾಸಕ್ಕೆ ಬದಲು ವಿಷಾದವೇ ಬಂದು ಅವರನ್ನಾವರಿಸಿತು. ಇದೇನು ದುರ್ಗವೋ ಸ್ಮಶಾನವೋ? ಹೆಣಗಳ ದುರ್ಗಂಧದಿಂದ ಸುತ್ತುವರಿದ ಈ ಭೂಮಿಯಲ್ಲಿ ಮನುಷ್ಯರು ಇಷ್ಟು ದಿನ ಅದು ಹೇಗೆ ವಾಸವಾಗಿದ್ದರು? ಗಾಯಗೊಂಡವರ, ಇನ್ನೂ ಜೀವಿಸಿರುವವರ, ಅಲ್ಲದೆ ಸತ್ತವರ ಅದೆಂಥ ಭಯಾನಕ ಸ್ಥಿತಿ? ಅಲ್ಲಿಯೇ ಎದುರಿನಲ್ಲಿ ಸುಭೇದಾರನ ಮೃತ ಶರೀರವು ಬಿದ್ದುಕೊಂಡಿದೆ. ಆತನ ತೊಡೆಯಲ್ಲಿ ನಾಲ್ಕು ವರುಷದ ಒಂದು ಮಗು ಅವಿತುಕೊಂಡು ರೋದಿಸುತ್ತಿದೆ. ಅದಕ್ಕೆ ಹತ್ತಿರದಲ್ಲಿಯೇ ಮೃತಪ್ರಾಯಳಾಗಿ ಬಿದ್ದ ಒಬ್ಬ ಹೆಣ್ಣುಮಗಳ ತೊಡೆಯನ್ನು ತೋಫಿನ ಗುಂಡು ಭೇದಿಸಿಹೋಗಿದೆ. ಇಲ್ಲಿ ಬಾಂಬು ಬಿದ್ದು ಭಿನ್ನಭಿನ್ನವಾದದ್ದರಿಂದ

ಎಷ್ಟೋ ಕೈಕಾಲುಗಳು ಕತ್ತರಿಸಿ ಕತ್ತರಿಸಿ ನಾಲ್ಕೂ ದಿಕ್ಕಿಗೆ ಬಿದ್ದುಕೊಂಡಿವೆ. ಅದರ ಹತ್ತಿರ ದಲ್ಲಿಯೇ ರಕ್ತದಿಂದ ತೊಯ್ದು ಕೆಲವು ಎಳೆಯ ಮಕ್ಕಳು ಪ್ರಾಣವಾಯುವಿನ್ನೂ ಹಾರಿಹೋಗದೆ ನೆಲದ ಮೇಲೆ ಉರುಳಾಡಿ, "ನೀರು ನೀರು" ಎನ್ನುತ್ತ ಕಾತರಸ್ವರದಿಂದ ಹಲುಬುತ್ತಿವೆ.

ಆಗ ಬಲಭದ್ರನು ಎಪ್ಪತ್ತು ಜನ ಸಂಗಾತಿ ಗಳೊಡನೆ ಜೇತಗಡ ದುರ್ಗವನ್ನು ಆಶ್ರಯಿಸಿ ದನು. ಇಂಗ್ಲಿಷರು ಆ ದುರ್ಗವನ್ನು ಮುತ್ತಿದರಾ ದರೂ ಅದು ಅವರ ಕೈವಶವಾಗಲಿಲ್ಲ. ಆ ಮೇಲೆ ಬಲಭದ್ರನು ಸೈನ್ಯಾಧಿನಾಯಕನಾಗಿ ದುರ್ಗಕ್ಕೆ ಅಧಿಪತಿಯಾದನಲ್ಲದೆ, ನೇಪಾಲದ ಯುದ್ಧವು ಕೊನೆಗೊಂಡ ಬಳಿಕ, ತನ್ನ ಸ್ವದೇಶದಲ್ಲಿ ಇನ್ನು ತಲವಾರದ ಅಗತ್ಯವಿಲ್ಲವೆಂದು ಬಗೆದು ತನ್ನ ಸಂಗಾತಿಗಳೊಡನೆ ರಣಜಿತಸಿಂಗನ ಶೀಖ ಸೈನ್ಯ ದಲ್ಲಿ ಕೂಡಿಕೊಂಡನು.

ಆಗ ರಣಜಿತಸಿಂಗನು ಅಫಗಾನಯುದ್ಧದಲ್ಲಿ ತೊಡಗಿದ್ದನು. ಒಮ್ಮೆ ಆತನ ಸೈನ್ಯವು ಬಹು ಸಂಖ್ಯೆಯ ಅಫಗಾನ ಸೈನ್ಯದಿಂದ ಮುತ್ತಲ್ಪಟ್ಟಾಗ ಎಷ್ಟೋ ಜನರು ಓಡಿಹೋಗಿ ತಮ್ಮ ಪ್ರಾಣವನ್ನು ಉಳಿಸಿಕೊಂಡರು. ಆದರೆ ಆ ಎಪ್ಪತ್ತು ಜನರು ಮಾತ್ರ ರಣಭೂಮಿಯನ್ನು ತ್ಯಾಗಮಾಡದೆ ಶ್ರೇಣೀಬದ್ಧವಾಗಿ ಪರ್ವತದಂತೆ ಶತ್ರುಗಳ ಸಮ್ಮುಖದಲ್ಲಿ ನಿಂತುಕೊಂಡರು. ದೂರದಿಂದ ತೋಪುಗಳ ಗರ್ಜನೆಯು ಅಬ್ಬರಿಸತೊಡಗಿತು. ಆಗ ಅವರು ಒಬ್ಬೊಬ್ಬರಾಗಿ ಏಟುಗಳಿಂದ ಮಾಯವಾಗತೊಡಗಿದರಾದರೂ ಉಳಿದವರು ಒಂದಿಷ್ಟೂ ಅಲುಗಾಡಲಿಲ್ಲ... ಅಸಿಮಿಸಿಗೊಳ್ಳಲಿಲ್ಲ. ಕಟ್ಟಕಡೆಗೆ ಪ್ರಜ್ವಲಿಸುವ ಉಲ್ಕಾಪಿಂಡಗಳು ಭೂಮಿಗೆ ಬಿದ್ದು ಚಿರಶಾಂತಿಯನ್ನು ಹೊಂದುವಂತೆ ಎಪ್ಪತ್ತೂ ಶವಗಳು ಅನಂತದ ಹಾಸಿಗೆಯನ್ನು ಹಿಡಿದು ಮಲಗಿಕೊಂಡವು.

ಮುಂದೆ ಇಂಗ್ಲಿಷರ ಸೈನ್ಯವು ಕಲುಂಗೆಯನ್ನು ವಶಪಡಿಸಿಕೊಂಡು ದುರ್ಗವನ್ನು ನೆಲಸಮ ಮಾಡಿತು. ಆ ದಾರುಣವಾದ ಯುದ್ಧದ ಲೀಲಾ ಭೂಮಿಯಲ್ಲಿ ಈಗ ಗಂಭೀರವಾದ ನಿರ್ಜನ ತೆಯು ಮಾತ್ರ ವಾಸವಾಗಿದೆ. ಮೃತ್ಯುವಿನ ಈ ದಂಡೆಯಲ್ಲಿ ಪ್ರಳಯದಂಥ ಆಘಾತವಿದೆ. ಆ ಮಗ್ಗಲಿಗೆ ಚಿರಶಾಂತಿಯುಂಟು. ಮರಣಾ ನಂತರದ ಚಿರಶಾಂತಿಮಯ ಒಂದು ಆತ್ಮಚೈತ- ನ್ಯವು ಈ ರಣಸ್ಥಳಕ್ಕಿಳಿದು ಬಂದು ವಿಜಯಿಗಳ ಹೃದಯವನ್ನು ಕರುಣಾರಸದಿಂದ ಎರೆದಂತೆ ಕಾಣುತ್ತದೆ. ಏಕೆಂದರೆ ಯಾವ ಸ್ಥಳದಲ್ಲಿ ಎರಡೂ ಸೈನ್ಯಗಳ ದೇಹಕಣಗಳು ಮಿಶ್ರಿತ ವಾಗಿದ್ದವೋ ಅಲ್ಲಿ ಇಂಗ್ಲಿಷರು ಎರಡು ಸ್ಮೃತಿ ಚಿಹ್ನಗಳನ್ನು ಸ್ಥಾಪಿಸಿದ್ದಾರೆ. ಅವು ಇನ್ನೂ ಉಂಟು. ಅದರಲ್ಲಿಯ ಒಂದು ಜನರಲ್ ಗೆಲಸ್ಪಿ ಮತ್ತು ಕಲುಂಗಾಯುದ್ಧದಲ್ಲಿ ಹಳಿವಾದ ಇಂಗ್ಲಿಷ ಸೈನ್ಯದ ಸ್ಮರಣಾರ್ಥವಾಗಿ ಸ್ಥಾಪಿಸಿದೆ. ಸ್ವಲ್ಪ ದೂರದಲ್ಲಿಯೇ ಇರುವ ಇನ್ನೊಂದರ ಮೇಲೆ ಈ ರೀತಿಯಾಗಿ ಬರೆದಿದೆ:

"ರಣರಂಗದಲ್ಲಿ ತಮ್ಮ ಜೀವನವನ್ನು ತುಚ್ಛೀಕರಿಸಿದ, ಮುತ್ತು ಅಫಗಾನರ ತೋಫು ಗಳಿಗೆ ಸಮ್ಮುಖವಾಗಿ ಒಬ್ಬೊಬ್ಬರೇ ಸ್ವಸಂ- ತೋಷದಿಂದ ಪ್ರಾಣವನ್ನು ಕೊಟ್ಟ ನಮ್ಮ ವೀರಶತ್ರುಗಳಾದ ಕಲುಂಗೆಯ ದುರ್ಗಾಧಿಪತಿ ಬಲಭದ್ರ ಮತ್ತು ಆತನ ಆಧಿಪತ್ಯಕ್ಕೊಳಗಾದ ವೀರರ ಸ್ಮರಣಾರ್ಥವಾಗಿ ಈ ಸ್ಮೃತಿಚಿಹ್ನವು ಸ್ಥಾಪಿಸಲ್ಪಟ್ಟಿದೆ." *

---

* ಶ್ರೀ ಜಗದೀಶಚಂದ್ರ ಬೋಸರು ತಮ್ಮ ನೇಪಾಲ ಪ್ರವಾಸದಲ್ಲಿ ಈ ಐತಿಹಾಸಿಕ ಘಟನೆ ಗಳನ್ನು ಸಂಗ್ರಹಿಸಿದರು; ಸಾಹಿತ್ಯ ಪತ್ರಿಕೆಯಲ್ಲಿ ಶ್ರೀ. ಜಲಧರ ಸೇನರು ಅವುಗಳಿಗೆ ಸುಂದರ ಲೇಖದ ಒಪ್ಪಕೊಟ್ಟು ಪ್ರಕಟಿಸಿದರು. ಭಾರ- ತದ ಸ್ವಾತಂತ್ರ್ಯ ಯುದ್ಧದ ಇತಿಹಾಸದಲ್ಲಿ ಇದೊಂದು ಉಜ್ವಲ ಪುಟ. ಭಾರತೀಯರಲ್ಲಿ ಈ ಸ್ವಾತಂತ್ರ್ಯ ವಾಹದೊಡನೆ ಸಂಘಟನೆ, ಐಕ್ಯ, ಮೊದಲಾದುವಿದ್ದಿದ್ದರೆ, ಅವರೆಂದೂ ಪಾರ- ತಂತ್ರ್ಯಕ್ಕೆ ತುತ್ತಾಗುತ್ತಿರಲಿಲ್ಲ.

ಧಾರವಾಡದ "ಪ್ರದೀಪ"ದಿಂದ

(ಸಂ: ಶ್ರೀ ವಿನೀತ ರಾಮಚಂದ್ರರಾಯರು)

ಇಂಡೋಚೀನದ ಒಂದು ಸುಂದರ ಜಾನಪದ ಕಲ್ಪನೆ



ಎಲೆ, ಅಡಕೆ ಮತ್ತು ಸುಣ್ಣ

ನಾಲ್ಕನೆಯ ಹಂಗ ಯಾಂಗನು ಆಳುತ್ತಿದ್ದಾಗ ತಾನ ಮತ್ತು ಲಾಂಗ ಎಂಬ ಇಬ್ಬರು ಅಣ್ಣತಮ್ಮಂದಿರಿದ್ದರು. ಅವರ ಸುಂದರ ರೂಪ ಮತ್ತು ಪರಸ್ಪರ ಸಾಮ್ಯದ ಮೂಲಕ ಆ ಭಾಗದ ಜನರೆಲ್ಲ ಅವರನ್ನು ಗೌರವಾಶ್ಚರ್ಯಗಳಿಂದ ಕಾಣುತ್ತಿದ್ದರು.

ಅವರಿಬ್ಬರಲ್ಲಿ ಅಗಾಧ ಪ್ರೇಮವಿತ್ತು. ಅವರೀರ್ವರ ರೂಪಸಾಮ್ಯ ಮತ್ತು ಅವರು ಚಿಕ್ಕಂದಿನಲ್ಲಿಯೇ ಅನಾಥರಾದದ್ದು ಅವರ ಈ ಬಾಂಧವ್ಯವನ್ನು ಇನ್ನಿಷ್ಟು ಬಿಗಿಗೊಳಿಸಿತ್ತು. ಅವರು ಎಂದೂ ಒಬ್ಬರನ್ನೊಬ್ಬರು ಅಗಲಿ ಇರುತ್ತಿರಲಿಲ್ಲ-ವಾದ್ದರಿಂದ ಅವರನ್ನು ಜನರು "ಅಶ್ವಿನೀಕುಮಾರರು" ಎಂದು ಕರೆಯುತ್ತಿದ್ದರು.

ತಮ್ಮ ಹೃದಯ ಮನಸ್ಸುಗಳು ತಮ್ಮ ಪೂರ್ವಜರ ನೀತಿಯಂತೆ ರೂಪುಗೊಳ್ಳಲೆಂದು ಅವರು 'ಗುರು'ವೊಬ್ಬನನ್ನು ಹುಡುಕಿದರು. ಧರ್ಮಪರಾಯಣನಾದ ಲೂ ಎಂಬವ ತಮ್ಮ ಗುರುವಾ… ಗಲು ಯೋಗ್ಯನೆಂದು ಕಂಡು ಅವರಿಗೆ ಆನಂ… ವಾಯಿತು.

ಈ ಅಣ್ಣ-ತಮ್ಮಂದಿರಷ್ಟೇ ವಯಸ್ಸಿನ ಮ… ಳೊಬ್ಬಳು ಲೂಗೆ ಇದ್ದಳು. ಅವಳು ಆ ಭಾಗದಲ್ಲೇ… ಅತ್ಯಂತ ಸುಂದರಿಯೆಂದು ಖ್ಯಾತಳಾಗಿದ್ದಳು… ಈ ಹುಡುಗಿ ತನ್ನ ತಂದೆಯ ಈ ಇಬ್ಬರು ಶಿಷ್ಯರ… ಮೋಹಗೊಂಡು ಅವರಲ್ಲಿ ಹಿರಿಯನಾದ… ನನ್ನು ವರಿಸಬಯಸಿದಳು. ಆದರೆ ಇಬ್ಬರ… ಹಿರಿಯನಾರು? ಮಾನವಂತ ಮನೆತನದ… ಳಾದ್ದರಿಂದ ಅವಳು ಬಹಿರಂಗವಾಗಿ ಈ ಪ್ರ… ಯನ್ನು ಆ ವಿದ್ಯಾರ್ಥಿಗಳಿಗೆ ಕೇಳುವಂತಿರಲಿಲ್ಲ… ಮುಂದೊಮ್ಮೆ ಅವಳಿಗೆ ಒಂದು ಸುಸಂಧಿ ದೊ… ಕಿತು ಒಂದು ಭೋಜನ ಸಮಾರಂಭದ ಸ… ಯದಲ್ಲಿ ಅವರಿಬ್ಬರು ಊಟಕ್ಕೆ ಕುಳಿತದ್ದನ… ಅವಳು ಕಂಡಳು. ಅವರಲ್ಲಿ ಒಬ್ಬನು ಇನ…

"ವಿಯತ್ ನಾಮ್" ಪತ್ರಿಕೆಯಿಂದ

ಬ್ಬನಿಗೆ ಊಟದ ಕಡ್ಡಿಗಳನ್ನು ಕೊಟ್ಟಾಗ, ಕೊಟ್ಟವನು ಚಿಕ್ಕವನು ಎಂದು ಅವಳಿಗೆ ತಿಳಿಯಿತು.

ಅವಳ ತಂದೆ-ತಾಯಿಗಳಿಗೆ ಮಗಳ ಆಯ್ಕೆ ಮೆಚ್ಚುಗೆಯಾಯಿತು. ಲಾಂಗನಿಗೆ ಅಣ್ಣ ಸುಖಿಯಾದದ್ದನ್ನು ಕಂಡು ಸಂತೋಷವಾಯಿತು.

ಆದರೆ ಪ್ರೇಮದ ಸಾಮ್ರಾಜ್ಯ ಸುಲಭವಾಗಿ ಪಸರಿಸುತ್ತದೆ. ತಾನ ತನ್ನ ಸುಂದರ ಪತ್ನಿಯಲ್ಲಿ ಅನುರಕ್ತನಾಗಿ ತನ್ನೆಲ್ಲ ಸಮಯವನ್ನು ಅವಳಿಗಾಗಿ ವ್ಯಯಿಸತೊಡಗಿದ. ತಾನನು ಲಾಂಗನನ್ನು ಮರೆತು ಅವನನ್ನು ಅತಿ ದುಃಖಿಯನ್ನಾಗಿ ಮಾಡಿದನು.

ಸ್ವಾರ್ಥ ಸುಖದಲ್ಲಿ ಅಣ್ಣ ಮಗ್ನನಾದುದರಿಂದ ಬಂಧುಪ್ರೇಮಕ್ಕೆ ಎರವಾದ ಲಾಂಗನು ಮಾನವ ಮಾತ್ರರಿಲ್ಲದ ಏಕಾಂತ ಸ್ಥಳಕ್ಕೆ ಹೋಗಿ ಯಾರಿಗೂ ಕಾಣದಂತಿದ್ದು ತನ್ನ ಹೃದಯದ ದುಃಖವನ್ನು ಕಡಿಮೆ ಮಾಡಿಕೊಳ್ಳಬಯಸಿದನು.

ಸೂರ್ಯಕಿರಣಗಳು ಮೂಡುವುದಕ್ಕೆ ಮೊದಲು, ರಾತ್ರಿಯಿನ್ನೂ ಗಂಭೀರ ಶಾಂತಿಯಲ್ಲಿ ಮುಳುಗಿದ್ದಾಗ ಲಾಂಗ ಮನೆ ಬಿಟ್ಟು ಹೊರಟನು. ಆತ ಅಡವಿಯ ಮಾರ್ಗವಾಗಿ ನಡೆದು ಕೊನೆಗೆ ನದೀತೀರವನ್ನು ತಲುಪಿದನು. ಮನೆಯಿಂದ ಓಡಿದ ಮೊದಲ್ಗೊಂಡು ಇದುವರೆಗೆ ಆತ ವಿಶ್ರಾಂತಿ ಪಡೆದಿರಲಿಲ್ಲ. ಅದಕ್ಕೂ ಖೇದದ ಮಾತೆಂದರೆ ಅವನಿಗೆ ತನ್ನ ಸಂಗಡ ಆಹಾರವನ್ನು ತರಬೇಕು ಎಂಬ ವಿಚಾರ ಕೂಡ ಹೊಳೆದಿರಲಿಲ್ಲ. ದಣಿವಿನಿಂದ ಸೋತು ಹಸಿವೆಯಿಂದ ಕಂಗಾಲಾಗಿ ಆತ ತಾನು ದಾಟಲಾಗದ ಆ ನದಿಯ ತೀರದಲ್ಲಿ ಬಿದ್ದುಕೊಂಡ. ನದಿಯ ಪ್ರವಾಹ ಅಗಲವೂ ಆಳವೂ ವೇಗವೂ ಆಗಿತ್ತು. ಈ ಗೊತ್ತು ಗುರಿಯಿಲ್ಲದ ಪ್ರಯಾಣಿಕ ನಿರಾಶೆಯಿಂದ ಕುಗ್ಗಿ ಅಳತೊಡಗಿದ. ಆತ ಬಹು ಹೊತ್ತಿನವರೆಗೆ ಅತ್ತು ಅತ್ತು ಕೊನೆಗೆ ಆ ನಿರ್ಜನ ನದೀ ತೀರದಲ್ಲಿ ಸತ್ತುಹೋದ. ಮಾನವನ ಸುಖ ದುಃಖದ ಸಮಾಚಾರಗಳೆಲ್ಲ ಗೊತ್ತಿರುವ ಸ್ವರ್ಗದ ದೇವತೆಗಳು ಅಗಾಧ ಬಂಧುಪ್ರೇಮದ ಮೂಲಕ ಪ್ರಾಣ ತೆತ್ತ ಬಡ ಲಾಂಗನ ದೇಹವನ್ನು ಒಂದು ಕಲ್ಲುಬಂಡೆಯನ್ನಾಗಿ ಮಾರ್ಪಡಿಸಿದರು. ಆ ನಿರ್ಜನ ಪ್ರದೇಶದಲ್ಲಿ ಬಹುದೂರದಿಂದ ಈ ಕಲ್ಲುಬಂಡೆ ಕಾಣಿಸುವಂತಿತ್ತು.

ಪ್ರೇಮದ ಮೊದಲನೆಯ ಆವೇಗ ಕಡಿಮೆಯಾದ ಬಳಿಕ ತಾನನಿಗೆ ಲಾಂಗನ ನೆನಪು ಬಂತು.

ಕೆಲ ದಿನಗಳಿಂದ ಆಳುಗಳು, ಸ್ನೇಹಿತರು, ನೆರೆ ಹೊರೆಯವರು, ಹಳ್ಳಿಗರು ಯಾರೂ ಲಾಂಗನನ್ನು ಕಂಡಿರಲಿಲ್ಲ. ಆತ ಎತ್ತ ಹೋದನೆಂದು ಯಾರಿಗೂ ಗೊತ್ತಿರಲಿಲ್ಲ.

ತಾನನಿಗೆ ಲಾಂಗ ಎಲ್ಲಿರುವನೆಂದು ತಿಳಿಯಲಿಲ್ಲ. ತನ್ನ ತಪ್ಪು ಕೃತಿಯನ್ನು ಕುರಿತು ಚಿಂತಿಸಿದಂತೆಲ್ಲ ಆತನ ವಿವೇಕಕ್ಕೆ ಅದು ಅಸಹ್ಯವಾಗತೊಡಗಿತು.

ಪಶ್ಚಾತ್ತಾಪದಿಂದ ತಪ್ತನಾದ ತಾನ ಹೆಂಡತಿ ಮಲಗಿದ್ದಾಗ ಎದ್ದು ಲಾಂಗನ ಶೋಧಕ್ಕೆಂದು ಮನೆಯಿಂದ ಹೊರಟ. ಆತ ಹಾದಿಯಲ್ಲಿ ಗಟ್ಟಿಯಾಗಿ ತಮ್ಮನ ಹೆಸರು ಹಿಡಿದು ಕೂಗುತ್ತಿದ್ದ. ಆದರೆ ಅದಕ್ಕೆಲ್ಲಿ 'ಓ' ಬರಬೇಕು? ಅನೇಕ ದಿನಗಳ ವರೆಗೆ ಆತ ದಣಿವು-ವಿಶ್ರಾಂತಿಗಳ ಪರಿವೆಯಿಲ್ಲದೆ ನಡೆದ. ನಿಮಿಷ ನಿಮಿಷಕ್ಕೆ ಹಸಿವೆ ಮತ್ತು ಮನಸ್ಸಿನ ಸಂಕಟ ಅವನನ್ನು ಹಣ್ಣು ಮಾಡುತ್ತಿದ್ದವು.

ಆ ನಿರ್ಜನ ಪ್ರದೇಶದಲ್ಲಿದ್ದ ಬಂಡೆಗಲ್ಲಿನ ಬಳಿಗೆ ಬಂದಾಗ ಅವನಲ್ಲಿ ಶಕ್ತಿಯ ಲವಲೇಶವೂ ಉಳಿದಿರಲಿಲ್ಲ. ಆದರೂ ಅದನ್ನು ಹತ್ತಿ ನೋಡಿದರೆ ಏನಾದರೂ ಕಂಡೀತೆಂದು ಎಣಿಸಿ ಆತ ತನ್ನಲ್ಲಿ ಇದ್ದುಬಿದ್ದ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಬಂಡೆಗಲ್ಲನ್ನೇರಿದ. ಆದರೆ ಅಲ್ಲಿಗೆ ಆ ಶ್ರಮವನ್ನು ತಾಳಲಾರದೆ ಅವನ ಪ್ರಾಣಪಕ್ಷಿ ಹಾರಿಹೋಯಿತು.

ದೇವತೆಗಳು ಅವನ ದೇಹವನ್ನು ಒಂದು ಸಪೂರಾದ ಎತ್ತರವಾದ ಮರವನ್ನಾಗಿ ಮಾರ್ಪಡಿಸಿದರು. ಅಗಲವಾದ ಅದರ ಎಲೆಗಳು ಬೀಸಣಿಕೆಯಂತಿದ್ದವು.

ಇತ್ತ ಮನೆಯಲ್ಲಿ ಗಂಡ ಕಾಣದಾದಾಗ ಯೋಚಿಸಿ ಯೋಚಿಸಿ ಕೊನೆಗೆ ಆತ ತನ್ನ ತಮ್ಮನ ಶೋಧಕ್ಕಾಗಿ ಹೊರಟಿರಬೇಕೆಂದು ತಾನನ ಹೆಂಡತಿ ಅರಿತುಕೊಂಡಳು.

ಗಂಡನಿಗೇನಾಯಿತೋ ಎಂದು ಅಂಜಿದ ಅವಳು ಅವನನ್ನು ಹುಡುಕುತ್ತ ಹೋಟಳು. ಮತ್ತೆ ಮೂರನೆಯ ಸಲ ಅದೇ ಬಗೆಯ ಮಾರ್ಗಕ್ರಮಣ, ದಣಿವು, ಹಸಿವೆಗಳ ನಾಟಕ ನಡೆಯಿತು. ವಿಶ್ರಾಂತಿಯಿಲ್ಲದೆ, ಹಗಲು ರಾತ್ರಿಯೆನ್ನದೆ ಅನ್ನ-ನೀರುಗಳ ಪರಿವೆಯಿಲ್ಲದೆ ತಾನನ ಹೆಂಡತಿ ಗಂಡನ ಶೋಧಕ್ಕಾಗಿ ವ್ಯರ್ಥ ಹಾದಿ ಕ್ರಮಿಸಿದಳು. ಅವಳಿಗೂ ದಣಿವು-ಹಸಿವು-ನೀರಡಿಕೆಗಳು ಅಂತ್ಯಕಾಲವನ್ನು ತಂದೊಡ್ಡಿದವು. ಆ ನಿರ್ಜನ ಪ್ರದೇಶದಲ್ಲಿ ಏಕಾಂಗಿಯಾಗಿದ್ದ ಆ ಬಂಡೆಗಲ್ಲು, ಅದರ ಮೇಲಿನ ಗಿಡ-ಇವುಗಳಿಂದ ಆಕರ್ಷಿತಳಾದ ಅವಳು ಲಾಂಗ ಮತ್ತು ತಾನ ಸತ್ತ ಸ್ಥಳಕ್ಕೆ ಬಂದಳು. ಸೋತು ಸುಣ್ಣವಾದ ತನ್ನ ಕೈಗಳಿಂದ ಆ ಅಡಿಕೆ ಮರವನ್ನಪ್ಪಿಕೊಂಡು ಅವಳು ಬಂಡೆಗಲ್ಲನ್ನೇರಲು ಯತ್ನಿಸಿದಳು. ಆ ಶ್ರಮವನ್ನು ಸಹಿಸದೆ ಅವಳ ದೇಹ ಕುಸಿಯಿತು. ಪ್ರಾಣ ಹಾರಿತು. ಅವಳ ಕೊನೆಯ ಪ್ರಯತ್ನದ ಸ್ಮಾರಕವೆಂದು ದೇವತೆಗಳು ಅವಳನ್ನೊಂದು ಬಳ್ಳಿಯನ್ನಾಗಿ ಮಾಡಿದರು.

ಹೀಗೆ ಈ ಪ್ರೇಮ ನಾಟಕದ ಮೂವರು ಪ್ರಧಾನ ಪಾತ್ರಗಳು ಮೃತ್ಯುವಶರಾದರು.

ಕೆಲ ಸಮಯದ ನಂತರ ಈ ಮೂವರ ಕಥೆಯನ್ನೂ ಅವರ ದೇಹಗಳ ಮಾರ್ಪಾಟಿನ ವಿಚಾರವನ್ನೂ ಕೇಳಿದ ವಯೋವೃದ್ಧನಾದ ಮುನಿಯೊಬ್ಬನು ಅವರ ಗೌರವಾರ್ಥವಾಗಿ ಮತ್ತು ಬಂಧು-ಪ್ರೀತಿ ಹಾಗೂ ಪತಿ-ಪತ್ನಿಯರ ಪ್ರೇಮ ನಿಷ್ಠೆಗಳ ಪ್ರತೀಕವಾಗಿ ಒಂದು ದೇವಾಲಯವನ್ನು ಕಟ್ಟಿಸಿದನು.

ಆ ಸಮಯದಲ್ಲಿ ವಿಯತ್ ನಾಮದಲ್ಲಿ ಭಯಂಕರ ಬರಗಾಲ ಬಿದ್ದಿತು. ಗಿಡ ಬಳ್ಳಿಗಳೆಲ್ಲ ಒಣಗಿ ಕಮರಿಹೋದವು. ಆ ಕಾಲದಲ್ಲಿ ಆ ಅಡಿಕೆ ಮರ ಮತ್ತು ಅದನ್ನು ಬಳಸಿ ಹಬ್ಬಿದ ವೀಳ್ಯದೆಲೆಯ ಬಳ್ಳಿ ಮಾತ್ರ ಹಚ್ಚ ಹಸುರಾಗಿದ್ದು ಬೆಳೆಯುತ್ತಲೇ ಇದ್ದವು. ಈ ಅದ್ಭುತವನ್ನು ಕಾಣಲೆಂದು ಆ ಮುದುಕ ಕಟ್ಟಿಸಿದ ದೇವಾಲಯಕ್ಕೆ ಅರಸು ಹಂಗ ಯಾಂಗ ತನ್ನ ಪರಿವಾರದೊಂದಿಗೆ ಬಂದ.

ಅರಸನ ಸ್ವಾಗತಕ್ಕಾಗಿ ಆ ಗಿಡ ಮತ್ತು ಬಳ್ಳಿಗಳು ತಮ್ಮ ಸೌಂದರ್ಯ ಕಾಂತಿಗಳನ್ನು ಹೆಚ್ಚಿಸಿಕೊಂಡಿದ್ದವು. ಸುತ್ತಲಿನ ಮರುಭೂಮಿಯಂಥ ದೃಶ್ಯದಲ್ಲಿ ಈ ಜೀವಪ್ರಭೆಯನ್ನು ಕಂಡು ಅರಸನೂ ಅವನ ಪರಿವಾರದವರೂ ಆಶ್ಚರ್ಯಚಕಿತರಾದರು.

ಒಂದು ಅಡಿಕೆಯನ್ನೂ ಒಂದಿಷ್ಟು ಎಲೆಗಳನ್ನೂ ಕೊಯಿಸಿ ಹಂಗ ಯಾಂಗನು ಬಾಯಲ್ಲಿ ಹಾಕಿಕೊಂಡು ಜಗಿದನು. ಅವುಗಳ ರುಚಿ ಅವನಿಗೆ ಸುಖಕರವೆನಿಸಿತು. ಅವನ ಬಾಯಿಯಿಂದ ಒಂದು ಎಂಜಲು ಬಿಂದು ಜಗುಳಿ ಆ ಸುಣ್ಣದ ಕಲ್ಲುಬಂಡೆಯ ಮೇಲೆ ಬೀಳಲು ಅಲ್ಲೊಂದು ಕೆಂಪಗಿನ ಕಲೆಯಾದುದು ಕಾಣಿಸಿತು.

ಬಹಳ ಹಿಂದೆ ನಡೆದ ಆ ದಿನದ ಘಟನೆಯ ನಂತರವೇ ಎಲೆ-ಅಡಿಕೆ ತಿನ್ನುವ ಮತ್ತು ಅದನು ವಿವಾಹ ನಿಶ್ಚಯ ಮತ್ತು ವಿವಾಹ ಕಾಲಗಳಲ್ಲಿ ಇತರರಿಗೆ ಅರ್ಪಿಸುವ ರೂಢಿ ಬಳಕೆಗೆ ಬಂತು.

ಪ್ರೇಮ ಮತ್ತು ದಾಂಪತ್ಯ ನಿಷ್ಠೆಯ ದ್ಯೋತಕವಾದ ಈ ಎಲೆ ಅಡಿಕೆ ಸುಣ್ಣಗಳ ವಿನಿಮಯ "ಮದುವೆಯೆಂಬ ನಂಟು ಜೀವಮಾನದ ಗಂಟು" ಎಂಬುದನ್ನು ಹೃದಯಸ್ಪರ್ಶಿಯಾಗಿ ಸೂಚಿಸುತ್ತದೆ.

ತರುಣ ತರುಣಿಯರಲ್ಲಿ ಪರಸ್ಪರ ಅನುರಾಗ ಪ್ರಥಮ ಲಕ್ಷಣವೆಂದು ತಾಂಬೂಲವನ್ನು ವಿನಿಮಯ ಮಾಡುವ ಪದ್ಧತಿ ನಡೆದು ಬಂದದು ಈ ಕಾರಣದಿಂದಲೇ.


" ತಾಂಬೂಲವು ಎಲ್ಲ ಸಂಭಾಷಣೆಗೆ ಪೀಠಿಕೆಯಾಗಿದೆ. ಅದು ಬಹುಶಃ ನಿಜಪ್ರೇಮ ಮತ್ತು ಸುಖವಿವಾಹಗಳಲ್ಲಿ ಪರ್ಯವಸಾನ ಹೊಂದುವುದು" ಎಂಬೊಂದು ಉಕ್ತಿಯೂ ಬಳಕೆಯಲ್ಲಿ

ಇದು ಪ್ರಾಣಿಲೋಕದ ಅತಿಭೀಕರ ಜೀವಿಗಳಲ್ಲೊಂದು

ಹೊಟ್ಟೆಬಾಕ ರಾಕ್ಷಸ: ಸೊಂಡಿಲಿ

ಹುಲಿ, ಸಿಂಹ ಮೊದಲಾದ ಪ್ರಾಣಿಗಳಿಗಿಂತಲೂ ಕ್ರೂರವಾದ, ಅದೇಕೆ, ಜಗತ್ತಿನ ಪ್ರಾಣಿಗಳಲ್ಲೆಲ್ಲ ಅತ್ಯಂತ ಕ್ರೂರವಾದ ಪ್ರಾಣಿಯೊಂದಿದೆ.

ಈ ಅತಿ ಕ್ರೂರ ಪ್ರಾಣಿ ಆಕಾರದಲ್ಲಿ ತೀರ ಚಿಕ್ಕದು. ಆದರೆ ಆಕ್ರಮಣ ಮಾಡುವ ರೋಷ ಇದರಲ್ಲಿ ಎಷ್ಟು ತೀವ್ರವಾಗಿರುತ್ತದೆಂದರೆ ಇದು ತನಗಿಂತ ಎರಡು ಅಥವಾ ಮೂರು ಪಟ್ಟು ದೊಡ್ಡದಾದ ಪ್ರಾಣಿಯ ಮೇಲೆ ಏರಿ ಹೋಗಲು ಕೂಡ ಹಿಂದೆಮುಂದೆ ನೋಡುವದಿಲ್ಲ. ಬೇಟೆಯನ್ನು ಕೊಂದ ಬಳಿಕ ಕೂಡಲೆ ಅದನ್ನು ತಿಂದು ಬಿಡುವಲ್ಲಿ ಇದು ಬಲು ನಿಪುಣ. ಇದರ ಜೀರ್ಣ ಶಕ್ತಿಯಂತೂ ಪ್ರಚಂಡವಾದದ್ದು. ಪ್ರತಿ ಮೂರು ಅಥವಾ ನಾಲ್ಕು ತಾಸುಗಳಿಗೊಮ್ಮೆಯಾದರೂ ಇದಕ್ಕೆ ಇದರ ದೇಹದ ಇಮ್ಮಡಿ ತೂಕದಷ್ಟು ಆಹಾರ ಸಿಗಲೇ ಬೇಕು. ಇಲ್ಲವಾದಲ್ಲಿ ಇದು ಜಠರಾಗ್ನಿಯ ಜಳದಿಂದ ಮೂರು ನಾಲ್ಕು ಗಂಟೆಯೊಳಗೇ ಸತ್ತು ಹೋಗುವದು. ಬೇಟೆಯಾಡಲು ಮತ್ತು ಆಹಾರ ಜೀರ್ಣಿಸಿಕೊಳ್ಳಲು ಇದು ತನ್ನ ಜೀವನದ ಸಮಸ್ತ ಶಕ್ತಿಯನ್ನು ಹದಿನೈದು-ಹದಿನಾರು ತಿಂಗಳುಗಳಲ್ಲಿ ವ್ಯಯಿಸಿ ವೃದ್ಧಾಪ್ಯವನ್ನು ಹೊಂದಿ ಸಾಯುತ್ತದೆ. ಈ ಪ್ರಾಣಿಯ ಆಯುಷ್ಯ ಅತಿ ಹೆಚ್ಚೆಂದರೆ ಒಂದೂವರೆ ವರ್ಷ ಮಾತ್ರ.



ಗೊಬ್ಬರಕ್ಕಾಗಿ ಕಸಕಡ್ಡಿಗಳನ್ನು ಅಥವಾ ಸಗಣಿ ಮುಂತಾದವನ್ನು ತುಂಬುವ ಹೊಂಡದಲ್ಲಿ ಈ ಜಾತಿಯ ಹೆಣ್ಣು ನಾಲ್ಕರಿಂದ ಹತ್ತರವರೆಗೆ ಮರಿಗಳನ್ನು ಹಾಕುತ್ತದೆ. ಒಂದು ವಾರದೊಳಗಾಗಿ ಮರಿಗಳು ಓಡಾಡಲಾರಂಭಿಸುತ್ತವೆ. ಮೂರು ನಾಲ್ಕು ವಾರಗಳಾದ ಬಳಿಕ ತಾಯಿ ಮರಿಗಳಿಗೆ ಮೊಲೆ ಕೊಡುವದನ್ನು ನಿಲ್ಲಿಸಿ ಅವನ್ನು ಬಾಹ್ಯ ಜಗತ್ತಿಗೆ ದೂಡುತ್ತದೆ. ಅವು ತೋಟಗಳಲ್ಲಿ, ಗಿಡಗಳ ಬುಡದಲ್ಲಿ, ಹುಲ್ಲುಗಾವಲುಗಳಲ್ಲಿ ಆಹಾರ ಶೋಧಕ್ಕಾಗಿ ಅಲೆಯತೊಡಗುತ್ತವೆ.

ವಾಸ ಸ್ಥಾನವನ್ನು ಬದಲಿಸಬೇಕಾದ ಅಗತ್ಯ ಬಂದಾಗ ಹೆಣ್ಣು ತನ್ನ ಮರಿಗಳೊಂದಿಗೆ ಎರಡನೆಯ ಕಡೆಗೆ ಹೋಗುವಾಗಿನ ದೃಶ್ಯ ನೋಡುವಂಥದಿರುತ್ತದೆ. ಮಂಗ, ಬೆಕ್ಕು ಮುಂತಾದವುಗಳು ತಮ್ಮ ಮರಿಗಳನ್ನು ಒಂದೆಡೆಯಿಂದ

ಪ್ರೊ. ರಾಜನಾಥ ಪಾಂಡೆಯವರ ಲೇಖದ ಆಧಾರದಿಂದ

ಇನ್ನೊಂದೆಡೆಗೆ ಸಾಗಿಸುವದನ್ನು ಸಾಮಾನ್ಯವಾಗಿ ಎಲ್ಲರೂ ನೋಡಿರುತ್ತಾರೆ. ಆದರೆ ಈ ಕ್ರೂರ ಪ್ರಾಣಿ ತನ್ನ ಮರಿಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವ ರೀತಿ ವಿಚಿತ್ರ. ಸಂಜೆಯ ಮಬ್ಬುಗತ್ತಲಲ್ಲಿ ತಾಯಿ ಮುಂದೆ ಹೋಗುತ್ತಿರುವಾಗ ಒಂದು ಮರಿ ಅದರ ಬಾಲವನ್ನು ಕಚ್ಚಿಕೊಂಡು ಹಿಂದಿನಿಂದ ನಡೆಯುತ್ತದೆ. ಆ ಮರಿಯ ಬಾಲವನ್ನು ಇನ್ನೊಂದು ಮರಿ ಕಚ್ಚಿಕೊಂಡಿರುತ್ತದೆ. ಹೀಗೆ ಎಲ್ಲ ಮರಿಗಳೂ ಒಂದರೊಂದರ ಬಾಲವನ್ನು ಕಚ್ಚಿಕೊಂಡು ಕವಾಯತು ಮಾಡುವ ಸೈನಿಕರಂತೆ ಸಾಲುಗಟ್ಟಿ ಹೋಗುವವು.

ಈ ಪ್ರಾಣಿಯ ತಲೆ ಇದರ ದೇಹದ ಒಂದು ಮೂರಾಂಶದಷ್ಟಿರುತ್ತದೆ. ಹಂದಿಯ ಮುಖದಂತೆ ಇದರ ಮುಖವೂ ಮುಂದಕ್ಕೆ ಚಾಚಿರುತ್ತದೆ. ಕಣ್ಣುಗಳು ತೀರ ಚಿಕ್ಕವು. ಹುಲ್ಲಿನ ರಾಶಿಯಲ್ಲಿ ಓಡಾಡುವಾಗ ಇದು ಪ್ರತಿ ನಿಮಿಷಕ್ಕೂ ವಾಸನೆ ತೆಗೆದುಕೊಳ್ಳುತ್ತಿರುತ್ತದೆ. ಬೇಟೆ ಹುಡುಕುವದರಲ್ಲಿ ಇದು ದೃಷ್ಟಿಗಿಂತಲೂ ವಾಸನೆಯನ್ನೇ ಹೆಚ್ಚಾಗಿ ಅವಲಂಬಿಸುತ್ತದೆ. ಬೇಟೆಯ ಇರವು ಗೊತ್ತಾದೊಡನೆ ನಡುವಿನ ಹುಲ್ಲನ್ನು ಭೇದಿಸಿಕೊಂಡು ಮಿಂಚಿನಂತೆ ಅದರ ಮೇಲೆ ಎರಗಿ ಭಯದಿಂದ ಕಂಪಿಸುವ ಅದನ್ನು ಕ್ಷಣಾರ್ಧದಲ್ಲಿ ಕೊಲ್ಲುತ್ತದೆ.

ಅನಿವಾರ್ಯವೂ ಸ್ವಾಭಾವಿಕವೂ ಆದ ಸಂತಾನೋತ್ಪತ್ತಿಯ ಉತ್ತೇಜನ ಬಂದಾಗ ಹೊರತು ಅಥವಾ ಪರಿವಾರ ಸಂರಕ್ಷಣೆಯ ಪ್ರೇರಣೆಯ ಕಾಲವನ್ನು ಬಿಟ್ಟರೆ ಈ ಜಾತಿಯ ಎರಡು ಪ್ರಾಣಿಗಳು ಒಂದೆಡೆ ಕೂಡಿ ಇರುವದು ಸಾಧ್ಯವೇ ಇಲ್ಲ. ಏಕೆಂದರೆ ತಿನ್ನಲು ಮತ್ತಾವ ಪ್ರಾಣಿಯೂ ಸಿಗದಿದ್ದರೆ ಹಸಿವೆಯ ಬಾಧೆಯನ್ನು ನಿವಾರಿಸಲು ಕೂಡಿ ಇರುವ ಎರಡರಲ್ಲಿ ಯಾವದಾದರೊಂದು ಇನ್ನೊಂದರ ಭಕ್ಷ್ಯವಾಗಲೇ ಬೇಕಾಗುತ್ತದೆ. ಈ ಜಾತಿಯ ಎರಡು ಪ್ರಾಣಿಗಳನ್ನು ಒಂದೇ ಪಂಜರದಲ್ಲಿಟ್ಟು ಜೀವವಿಜ್ಞಾನಿಗಳು ಈ ಮಾತಿನ ನಿದರ್ಶನವನ್ನು ಅನೇಕ ಸಲ ಹೊಂದಿದ್ದಾರೆ.

ಇಷ್ಟೊಂದು ಕ್ರೂರವಾದ ಈ ಪ್ರಾಣಿ ಮತ್ತಾವದೂ ಆಗಿರದೆ ನಾವು 'ಸೊಂಡಿಲಿ' ಎಂದು ಕರೆಯುವ ಇಲಿಯೇ ಆಗಿದೆ. ಇದಕ್ಕೆ ಚುಚುಂದ್ರಿ ಎಂದೂ ಅನ್ನುತ್ತಾರೆ.

ಶಹರಗಳಲ್ಲಿರುವವರಿಗೆ ಸೊಂಡಿಲಿಯ ಪರಿಚಯವಿರದಿದ್ದರೂ ಹಳ್ಳಿಗರು ಅದನ್ನು ಚೆನ್ನಾಗಿ ಬಲ್ಲರು. ಸಂಜೆಯಾದೊಡನೆ ಸಾಮಾನ್ಯವಾಗಿ ಹಳ್ಳಿಯ ಪ್ರತಿಯೊಂದು ಮನೆಯಲ್ಲಿ ಚ್ಚು ಚ್ಚು ಎಂದು ಕೂಗುತ್ತ ಹೆಣ್ಣು ಸೊಂಡಿಲಿ ತನ್ನ ಓಡಾಟವನ್ನಾರಂಭಿಸುತ್ತದೆ. ಅತ್ಯಂತ ಶೀತ ಪ್ರದೇಶಗಳನ್ನು ಬಿಟ್ಟರೆ ಈ ಪ್ರಾಣಿ ಜಗತ್ತಿನ ಎಲ್ಲ ದೇಶಗಳಲ್ಲಿಯೂ ಇರುತ್ತದೆ. ಮತ್ತೆ ಬೇರೆ ಬೇರೆ ದೇಶಗಳಲ್ಲಿರುವ ಈ ಇಲಿಗಳ ಗುಣ-ಸ್ವಭಾವಗಳಲ್ಲಿ ಅಂಥ ಹೇಳಿಕೊಳ್ಳುವಂಥ ವ್ಯತ್ಯಾಸವೇನೂ ಇರುವದಿಲ್ಲ. ಶೀತ ಪ್ರದೇಶಗಳ ಇಲಿಗಳಿಗೆ ಬಾಲವೇ ಇರುವದಿಲ್ಲ, ಇದ್ದರೂ ಬಹು ಚಿಕ್ಕದಾಗಿರುತ್ತದೆ. ತಿಬೇಟದ ರಾಜಧಾನಿ ಲ್ಹಾಸಾದ ದೇವಾಲಯಗಳಲ್ಲಿ ಬಾಲವಿಲ್ಲದ ಸಾವಿರಾರು ಇಲಿಗಳು ನಿರ್ಭಯದಿಂದ ಸಂಚರಿಸುತ್ತಿರುವದು ನಿತ್ಯ ದೃಶ್ಯವಾಗಿದೆ. ತಿಬೇಟದಲ್ಲಿ ಇಲಿಗಳು "ಅಜಿಮಾ" ಎಂಬ ದೇವತೆಯ ವಂಶದವು ಎಂಬ ನಂಬಿಕೆ ಇರುವದರಿಂದ ಅಲ್ಲಿಯ ಜನರು ಎಂದೂ ಅವುಗಳನ್ನು ಹಿಂಸಿಸುವದಿಲ್ಲ.

ಕಾರ್ತಿಕ ಅಮಾವಾಸ್ಯೆಯ ರಾತ್ರಿಯಲ್ಲಿ ಬತ್ತಲೆಯಾಗಿ ಸೊಂಡಿಲಿಯನ್ನು ಕೊಂದು ಅದರ ಚರ್ಮವನ್ನು ಸುಲಿದು ಆ ಚರ್ಮವನ್ನು ಕೈಯಲ್ಲಿಟ್ಟುಕೊಂಡು ನಡೆಯುವವನು ಇತರರಿಗೆ ಅದೃಶ್ಯನಾಗುತ್ತಾನೆಂದು ನಮ್ಮ ದೇಶದ ತಾಂತ್ರಿಕರ ಹೇಳಿಕೆಯಿದೆ. ಹಿಂದಿನ ಕಾಲದಲ್ಲಿ ಕನ್ನಗಳ್ಳರು ಈ ಪ್ರಯೋಗದ ಬಲದಿಂದ ಕಣ್ಣಿಗೆ ಕಾಣಿಸದೆ ಕದಿಯುತ್ತಿದ್ದರೆಂದೂ ಮಂತ್ರವಾದಿಗಳು ಕೂಡ ಇದನ್ನುಪಯೋಗಿಸುತ್ತಿದ್ದರೆಂದೂ ನಂಬುವವರಿದ್ದಾರೆ.

ನಮ್ಮ ದೇಶದ ಚುಚುಂದ್ರಿಗಳು ಇತರ ದೇಶದ ಚುಚುಂದ್ರಿಗಳಿಗಿಂತ ಕಡಿಮೆ ಕ್ರೂರವೂ ಅಪಾಯಕಾರಿಯೂ ಆಗಿದ್ದರೂ ಇವು ತುಂಬ ಅಸಹ್ಯ ಪ್ರಾಣಿಗಳಾಗಿವೆ. ಇವು ಮುಟ್ಟಿದ ಅರಿವೆ ಪಾತ್ರೆ ಮುಂತಾದವುಗಳಿಗೆ ಬಹಳ ಹೊತ್ತಿನವರೆ

ದುರ್ಗಂಧ ಬರುತ್ತದೆ. ಬಹುಶಃ ಈ ಕಾರಣಕ್ಕಾಗಿಯೆ ಬೂಚು ಹಾಕಿಟ್ಟ ಬಾಟ್ಲಿಯ ಮೇಲೆ ಚುಚುಂದ್ರಿ ನಡೆದು ಹೋದರೆ ಕೂಡ ಒಳಗಿನ ಎಣ್ಣೆ ಅಥವಾ ಬೇರಾವದೇ ವಸ್ತು ದೂಷಿತವಾಗುತ್ತದೆ ಎಂದು ಹೇಳುತ್ತಿರಬೇಕು.

ಈ ಇಲಿಗಳ ಚಾತುರ್ಯವೂ ವರ್ಣಿಸುವಂತಿರುತ್ತದೆ. ಬಾಟ್ಲಿಯ ಬೂಚನ್ನು ತೆಗೆದು ಒಳಗಿನ ಎಣ್ಣೆಯಲ್ಲಿ ಬಹಳಷ್ಟನ್ನು ಇವು ಕುಡಿದು ಬಿಡುತ್ತವೆ. ಪರಮಾಶ್ಚರ್ಯವೆಂದರೆ ಬಾಟ್ಲಿಯ ಹೊರಗೆ ಒಂದೇ ಒಂದು ಹನಿ ಎಣ್ಣೆ ಕೂಡ ಬಿದ್ದಿರುವದಿಲ್ಲ. ಬಾಟ್ಲಿ ಕೂಡ ಇದ್ದಕ್ಕಿದ್ದಂತೆಯೇ ಇರುತ್ತದೆ. ಬೂಚು ಮಾತ್ರ ಕಳಚಿ ಬಿದ್ದಿದ್ದು ಎಣ್ಣೆ ಅರ್ಧಕ್ಕರ್ಧ ಕಡಿಮೆಯಾಗಿರುವದು ಕಾಣಿಸುತ್ತದೆ. ಇಲಿಗಳು ಈ ರೀತಿ ಎಣ್ಣೆಯನ್ನು ಕುಡಿಯುವ ರೀತಿ ತುಂಬ ಮನೋರಂಜಕವಾಗಿದೆ.

ಬೂಚು ತೆಗೆದ ಬಳಿಕ ಒಂದು ಇಲಿ ತನ್ನ ಬಾಲವನ್ನು ಬಾಟ್ಲಿಯೊಳಗೆ ಇಳಿಬಿಟ್ಟು ಮೇಲಕ್ಕೆ ಎತ್ತುತ್ತದೆ. ಎರಡನೆ ಇಲಿ ಆ ಬಾಲವನ್ನು ನೆಕ್ಕುತ್ತದೆ. ಸ್ವಲ್ಪ ಹೊತ್ತಿನ ಬಳಿಕ ಇನ್ನೊಂದು ಇಲಿ ತನ್ನ ಬಾಲವನ್ನು ಇಳಿಬಿಟ್ಟು ಎತ್ತತೊಡಗುತ್ತದೆ. ಮತ್ತೊಂದು ಇಲಿ ಆ ಬಾಲವನ್ನು ನೆಕ್ಕುತ್ತದೆ. ಹೀಗೆ ಸರತಿಯ ಪ್ರಕಾರ ಇಲಿಗಳು ಎಣ್ಣೆ ಕುಡಿಯುತ್ತವೆ. ಬಾಲಕ್ಕೆ ಎಣ್ಣೆ ಹತ್ತುತ್ತಿರುವ ವರೆಗೂ ಈ ಕ್ರಮ ನಿಲ್ಲುವದಿಲ್ಲ.

ಕೆಲ ದೇಶಗಳಲ್ಲಿ ಚುಚುಂದ್ರಿಯ ಒಂದು ಭೀಕರ ಜಾತಿ ಇದೆ. ಆಕಾರದಲ್ಲಿ ಇದು ಉಳಿದ ಸ್ವಜಾತೀಯ ಇಲಿಗಳಿಗಿಂತ ಸಣ್ಣದಾದರೂ ಇದರ ಹಲ್ಲುಗಳಲ್ಲಿ ವಿಷವಿರುತ್ತದೆ. ಇದು ಕಡಿದ ಪ್ರಾಣಿ ವಿಷಪ್ರಭಾವದಿಂದ ತುಸು ಹೊತ್ತಿನಲ್ಲಿಯೆ ಎಚ್ಚರತಪ್ಪಿ ಬೀಳುತ್ತದೆ. ಆಗ ಈ ಸೊಂಡಿಲಿ ಅದನ್ನು ತಿಂದು ಹಾಕುತ್ತದೆ. ಇಂಥ ಚುಚುಂದ್ರಿಗಳು ಬಾಲವನ್ನದ್ದಿ ಎಣ್ಣೆ ಕುಡಿದರೆ ಉಳಿದುಕೊಂಡ ಎಣ್ಣೆ ವಿಷಾರಿಯಾಗುವ ಸಂಭವವಿರುತ್ತದೆ. ಈ ಕಾರಣದಿಂದಲೂ ಮೇಲೆ ಹೇಳಿದಂತೆ ಚುಚುಂದ್ರಿ ಮುಚ್ಚಿದ ಪಾತ್ರೆಗಳ ಮೇಲೆ ನಡೆದು ಹೋದರೂ ಒಳಗಿನ ವಸ್ತು ದೂಷಿತವಾಗುತ್ತದೆ ಎಂಬ ನಂಬಿಕೆ ಪ್ರಚಾರಕ್ಕೆ ಬಂದಿರಬೇಕು.

ಹೀಗಿದ್ದರೂ ಇದರ ಆಕೃತಿ ಮತ್ತು ತೂಕ ತೀರ ಅಲ್ಪ. ಸೊಂಡಿಯ ತುದಿಯಿಂದ ಬಾಲದ ತುದಿಯ ವರೆಗೆ ಮೂರಿಂಚು ಉದ್ದವಾಗಬಹುದು. ಅತಿ ದೊಡ್ಡ ಜಾತಿಯ ಸೊಂಡಿಲಿ ೬॥ ಇಂಚಿಗಿಂತ ಉದ್ದವಿರುವುದಿಲ್ಲ. ತೂಕ ೧/೬ ತೊಲೆಯಿಂದ ಎರಡು ತೊಲೆಯವರೆಗಿರಬಹುದು. ಅದು ಕೀಟಗಳಿಂದ ಹಿಡಿದು ಇಲಿಗಳ ವರೆಗೆ ಸಿಕ್ಕಿದ್ದನ್ನೆಲ್ಲ ಚರ್ಮ, ಮಾಂಸ, ಎಲುಬು ಸಹಿತವಾಗಿ ಕಬಳಿಸುತ್ತದೆ. ಇದರಲ್ಲಿ ಅದರ ಸೂಜಿಯಂಥ ೩೨ ಹಲ್ಲುಗಳು ಅನುಕೂಲ ಆಯುಧವಾಗುತ್ತವೆ.

ಅದರ ಸಂತಾನೋತ್ಪಾದನ ಶಕ್ತಿಯೂ ಅದರ ಜೀರ್ಣಶಕ್ತಿಯಷ್ಟೇ ಪ್ರಚಂಡವಾಗಿದೆ. ಅಮೇರಿಕದ ಪ್ರಾಣಿಶಾಸ್ತ್ರ ಉದ್ಯಾನದಲ್ಲಿ ಒಂದು ಜತೆ ಸೊಂಡಿಲಿ ಒಂದು ವರ್ಷದಲ್ಲಿ ೬೬ ಮರಿಗಳನ್ನು ಹಾಕಿದ್ದ ಲೆಕ್ಕ ಸಿಕ್ಕಿತು. ಗರ್ಭ ನಿಂತ ೧೨ ರಿಂದ ೧೬ ದಿನಗಳಲ್ಲಿ ಅದು ಮರಿ ಹಾಕುತ್ತದೆ. ಮೂರು ತಿಂಗಳು ಪ್ರಾಯದ್ದಾಗಿರುವಾಗಲೇ ಹೆಣ್ಣು ಸಂತಾನೋತ್ಪಾದನೆ ಮಾಡತೊಡಗುತ್ತದೆ.

ದೀಪಾವಳಿಯ ದಿನ ಜುಗಾರಿ ಆಡದವರು ಮುಂದಿನ ಜನ್ಮದಲ್ಲಿ ಸೊಂಡಿಲಿಯಾಗಿ ಹುಟ್ಟುತ್ತಾರೆ ಎಂಬ ನಂಬಿಗೆಯೂ ನಮ್ಮ ದೇಶದ ಕೆಲ ಭಾಗಗಳಲ್ಲಿ ಇದೆ. ಪ್ರತಿಯೊಂದು ದೇಶದಲ್ಲಿಯೂ ಸೊಂಡಿಲಿಯ ಬಗ್ಗೆ ಒಂದಿಲ್ಲೊಂದು ಅಂಧ ಶ್ರದ್ಧೆ ಇದ್ದೇ ಇರುತ್ತದೆ.






ಲಲ್ಲಿ ಅತ್ತದ್ದೇಕೆ ?

ಅಪರಾಹ್ನ ಸುಮಾರು 2 ಘಂಟೆಯ ಹೊತ್ತು. ನಾನು ನನ್ನ ಯಜಮಾನರ ಷರ್ಟಿಗೆ ಬಟನ್ ಹೊಲಿದು ಹರಿದ ಕಾಲರ್ ಮತ್ತು ಕಫ್ ಸರಿ ಮಾಡುತ್ತಿದ್ದೆ. ಅಷ್ಟರಲ್ಲಿ ಇದ್ದಕ್ಕಿದ್ದ ಹಾಗೆ, ನೆರೆಮನೆಯ ಪಮ್ಮಿಯೊಡನೆ ಆಡುತ್ತಿದ್ದ ನನ್ನ ಮಗಳು ಲಲ್ಲಿ ಗಟ್ಟಿಯಾಗಿ ಅಳುವ ಶಬ್ದ ಕೇಳಿಸಿತು. ನನಗೆ ಒಮ್ಮೆಲೇ ಗಾಬರಿಯಾಗಿ ಸೂಜಿ ಬೆರಳಿಗೆ ಚುಚ್ಚಿತು. ನಾನು ಎದ್ದು ಕೋಪದಿಂದಲೇ ಹೊರಗೆ ಓಡಿದೆ. ಆಗಲೇ ಪಮ್ಮಿಯ ಅಮ್ಮ ಸುಶೀಲಮ್ಮನೂ ಓಡಿಬಂದು ಲಲ್ಲಿಯನ್ನು ಎತ್ತಿಕೊಂಡರು. ಅವಳ ಕಣ್ಣೀರನ್ನು ಒರಸಿ "ನನ್ನ ಮುದ್ದು ಮಗುವಿಗೆ ಯಾರು ಹೊಡೆದರು ?" ಎಂದು ಕೇಳಿದರು,

ಲಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಾ "ಅತ್ತೆ, ಅತ್ತೆ, ಪ... ಪ... ಪಮ್ಮಿ ನನ್ನ ಗೊಂಬೆಯ ಫ್ರಾಕನ್ನು ಕೊಳೆ ಮಾಡಿದಳು !" ಎಂದಳು. "ಓಹೋ, ಹಾಗೋ ? ಪಮ್ಮಿಗೆ ಚೆನ್ನಾಗಿ ಹೊಡೆಯೋಣ. ನಿನ್ನ ಗೊಂಬೆಗೆ ಹೊಸ ಫ್ರಾಕ್ ತರುತ್ತೇನೆ" ಎಂಬ ಹೇಳಿ ಸುಶೀಲಮ್ಮ ಲಲ್ಲಿಯನ್ನೂ ಪಮ್ಮಿಯನ್ನೂ ತಮ್ಮ ಮನೆಗೆ ಕರೆದುಕೊಂಡು ಹೋದರು. ಸುಶೀಲಮ್ಮ ಬಹಳ ಸದ್ಗುಣಿ. ಅವರಿಗೆ ಮಕ್ಕಳೆಂದರೆ ಜೀವ. ತನ್ನ ಮಕ್ಕಳು, ಬೇರೆಯವರ ಮಕ್ಕಳು ಎಂಬ ಭೇದ ಭಾವ ಅವರಿಗಿರಲಿಲ್ಲ. ಅವರ ಅಪ್ಪ ಬಹಳ ಶ್ರೀಮಂತರು. ಆದರೆ ಸುಶೀಲಮ್ಮನಿಗೆ ಸ್ವಲ್ಪವೂ ಡಂಭವಿರಲಿಲ್ಲ. ಇದನ್ನೆಲ್ಲಾ ನೆನಸುತ್ತ ಕುಳಿತಿದ್ದ ನನಗೆ ಅಲ್ಲಿಯೆ ಸ್ವಲ್ಪ ಕಣ್ಣು ಕೂರಿತು. ಸ್ವಲ್ಪ ಹೊತ್ತಿನ ಮೇಲೆ ಲಲ್ಲಿ ನನ್ನನ್ನು ಎಚ್ಚರಿಸಿದಳು. ಕಣ್ಣು ತೆರೆದಾಗ ಮೊದಲು ನನಗೆ ಕಾಣಿಸಿದ್ದು ಲಲ್ಲಿಯ ಗೊಂಬೆಗೆ ತೊಡಿಸಿದ್ದ ಹೊಸ ಫ್ರಾಕ್. ಅದು ಮುಂಚಿನ ಫ್ರಾಕ್‌ನ ಹಾಗೆಯೇ ಇತ್ತು. ಸುಶೀಲಮ್ಮ ಹೊಸ ಫ್ರಾಕ್ ಕೊಟ್ಟದ್ದು ನನಗೆ ಸರಿ ಕಾಣಲಿಲ್ಲ. ಕೂಡಲೇ ಅವರಲ್ಲಿಗೆ ಹೋಗಿ ಈ ವಿಷಯ ಅವರಿಗೆ ಹೇಳಿದೆ. ಆಗ ಸುಶೀಲಮ್ಮ "ಇಲ್ಲಮ್ಮ, ನಾನು ಹೊಸ ಫ್ರಾಕ್ ಕೊಂಡುಕೊಳ್ಳಲಿಲ್ಲ. ಕೆಲವು ಬಟ್ಟೆಗಳನ್ನು ಒಗೆಯಲಿಕ್ಕಿತ್ತು.




ಅವುಗಳೊಡನೆ ಈ ಫ್ರಾಕನ್ನೂ ಒಗೆದೆ. ಅಷ್ಟೆ." ಅಂದರು. ಅವರ ಮಾತನ್ನು ನಾನು ನಂಬಲಿಲ್ಲ. ಸುಶೀಲಮ್ಮನಂಥವರು ತಮ್ಮ ಬಟ್ಟೆಗಳನ್ನು ತಾವೇ ಒಗೆದು ಕೊಳ್ಳುವುದೆಂದರೇನು ? ಬಹಳ ವಿಚಿತ್ರ. ನಮ್ಮ ಬಟ್ಟೆಗಳನ್ನು ನಾನು ಮನೆಯಲ್ಲಿ ಒಗೆಯುವುದಿಲ್ಲ. ಒಗೆಯಲು ಅವನ್ನು ಹೊರಗೆ ಕಳುಹಿಸುತ್ತೇನೆ. ನಾನು ಹೇಳಿದೆ. "ಸುಶೀಲಮ್ಮ, ನೀವು ಹೇಳಿದ್ದನ್ನು ನಾನು ಹೇಗೆ ನಂಬಲಿ ? ನೀವು ಬಟ್ಟೆಗಳನ್ನು ಬಡಿಯುವ ಶಬ್ದ ನನಗೇಕೆ ಕೇಳಿಸಲಿಲ್ಲ?" "ನಿನಗೆ ನನ್ನ ಮಾತಿನಲ್ಲಿ ವಿಶ್ವಾಸವಾಗದಿದ್ದರೆ ಈ ಬಟ್ಟೆಗಳನ್ನು ನೋಡು. ಅವುಗಳಿಗೆ ಈಗ ತಾನೆ ಇಸ್ತ್ರಿ ಮಾಡಿ ಮುಗಿಸಿದೆ. ಇನ್ನು ಬಟ್ಟೆಗಳನ್ನು ಬಡಿಯುವ ವಿಷಯ ಹೇಳುವುದಾದರೆ...". ನಾನು ಅವರ ಮಾತಿನ ಕಡೆಗೆ ಲಕ್ಷ್ಯ ಕೊಡುತ್ತಿರಲಿಲ್ಲ. ಆ ಬಟ್ಟೆಗಳನ್ನೆ ಎವೆಯಿಕ್ಕದೆ ನೋಡುತ್ತಿದ್ದೆ. ಅವು ಎಷ್ಟು ನಿರ್ಮಲ ಹಾಗೂ ಪ್ರಕಾಶಮಾನವಾಗಿದ್ದುವು ! ಅವರನ್ನು ಹೊಗಳುತ್ತಿದ್ದೆ, ಆದರೆ ನನಗೆ ಒಂದು ವಿಷಯವನ್ನು ಅವರಿಂದ ತಿಳಿದುಕೊಳ್ಳಬೇಕಾಗಿತ್ತು. ತಾನು ಬಟ್ಟೆ ಒಗೆಯುವ ವಿಷಯದಲ್ಲಿ ಜನರು ಏನಾದರೂ ಅಂದುಕೊಂಡಾರೆಂಬ ಅಂಜಿಕೆ ಅವರಿಗಿಲ್ಲವೆ ? ನಾನು ಇದನ್ನು ಕೇಳಿದಾಗ ಅವರು ನಗುತ್ತಾ ಹೇಳಿದರು. "ಚೆನ್ನಾಗಿ ಹೇಳಿದೆ !...ನನ್ನ ಕೆಲಸವನ್ನು ಮಾಡಿಕೊಳ್ಳುವುದಕ್ಕೆ ನಾನೇಕೆ ನಾಚಬೇಕು ? ನನಗೆ ಅಂತಹ ಒಣ ಜಂಭವಿಲ್ಲವಮ್ಮ.



ಬಟ್ಟೆಗಳನ್ನು ನಾನೇ ಒಗೆಯುವುದರಿಂದ ಬಹಳ ಮಿತವ್ಯಯವಾಗುತ್ತದೆ. ಪ್ರತಿದಿನವೂ ಉಡಲು ಸ್ವಚ್ಛವಾದ ಬಟ್ಟೆಗಳು ಸಿಗುವುದು ಮಾತ್ರವಲ್ಲ, ಅವು ಹೆಚ್ಚು ಬಾಳಿಕೆ ಕೂಡ ಬರುತ್ತವೆ." "ಹೆಚ್ಚು ಬಾಳಿಕೆ ಬರುತ್ತವೆಯೆ ? ಅದು ಹೇಗಮ್ಮ ? ನಮ್ಮ ಬಟ್ಟೆಗಳು ಬಹಳ ಬೇಗ ಹರಿದು ಹೋಗುತ್ತವೆ." "ಅದಕ್ಕೆ ಕಾರಣ ನಿಮ್ಮ ಬಟ್ಟೆಗಳು ಬಡಿದು ಒಗೆಯಲ್ಪಡುತ್ತವೆ. ನಾನು ನನ್ನ ಬಟ್ಟೆಗಳನ್ನು ಬಡಿಯದೆಯೆ ಸನ್‌ಲೈಟ್ ಸೋಪಿನಿಂದ ಒಗೆಯುತ್ತೇನೆ." ಆಗ ನಾನು ಅಂದೆ "ಇದು ನನಗೆ ಹೊಸ ವಿಷಯ." "ಇದರಲ್ಲಿ ಹೊಸತೇನೂ ಇಲ್ಲ. ನೀನೂ ನಾನೂ ಹುಟ್ಟುವ ಮೊದಲೇ ಸನ್‌ಲೈಟ್ ಸೋಪು ಪ್ರಸಿದ್ಧವಾಗಿತ್ತು !" ಈ ಶುದ್ಧವಾದ, ಉತ್ತಮವಾದ ಸೋಪು ಸಮೃದ್ಧ ನೊರೆಯನ್ನು ಕೊಡುತ್ತದೆಂದೂ; ಆ ನೊರೆ ಎಲ್ಲಾ ಕೊಳೆಯನ್ನು–ಕಣ್ಣಿಗೆ ಕಾಣಿಸುವ ಮತ್ತು ಕಾಣಿಸದ ಕೊಳೆಯನ್ನು–ಕೆಲವೇ ಕ್ಷಣಗಳಲ್ಲಿ ತೆಗೆದು ಬಿಡುತ್ತದೆಂದೂ ಸುಶೀಲಮ್ಮ ವಿವರಿಸಿ ಹೇಳಿದರು. ಈಗ ನನಗೆ ಕೂಡ ಜನರು ಏನು ಅಂದುಕೊಳ್ಳುತ್ತಾರೋ ಎಂಬ ಭಯ ಇಲ್ಲ. ನಮ್ಮ ಎಲ್ಲ ಬಟ್ಟೆಗಳನ್ನು ಸನ್‌ಲೈಟ್ ಸೋಪಿನಿಂದ ನಾನೇ ಮನೆಯಲ್ಲಿಯೇ ಒಗೆದುಕೊಳ್ಳುತ್ತೇನೆ. ಅದರಿಂದ ಮಿತವ್ಯಯವಾಗುತ್ತದೆ. ಕೇವಲ ಒಂದು ಸನ್‌ಲೈಟ್ ಸೋಪು 40–50 ಸಣ್ಣ ದೊಡ್ಡ ಬಟ್ಟೆಗಳನ್ನು ನಿರ್ಮಲವಾಗಿ ಮತ್ತು ಪ್ರಕಾಶಮಾನವಾಗಿ ಒಗೆಯುತ್ತದೆಂದು ನನಗೆ ಗೊತ್ತಾಗಿದೆ. ಹರಿದದ್ದನ್ನು ಸರಿಮಾಡಿದ ಬಟ್ಟೆಗಳನ್ನು ಈಗ ನನ್ನ ಯಜಮಾನರು ಧರಿಸಬೇಕಾಗಿಲ್ಲ. ಕಫ್‌ಗಳನ್ನೂ ಕಾಲರ್‌ಗಳನ್ನೂ ಕೋಟಿನಿಂದ ಅಡಗಿಸುವ ಆವಶ್ಯಕತೆ ಈಗ ಅವರಿಗಿರುವುದಿಲ್ಲ. ಈಗ ನಮಗೆಲ್ಲರಿಗೂ ಚೆನ್ನಾಗಿ ಒಗೆದ ಬಟ್ಟೆಗಳು ನಿತ್ಯದ ಉಪಯೋಗಕ್ಕೆ ಸಿಗುತ್ತವೆ. ಎಲ್ಲ ವಿಧಗಳಲ್ಲಿಯೂ ಉಳಿತಾಯವಾಗುತ್ತದೆ. ಗೃಹಿಣಿಗೆ ಇನ್ನೇನು ಬೇಕು ?





ನಿಮ್ಮ ಎಲುಬಿನಲ್ಲಿ ಏನೇನು ನಡೆಯುತ್ತಿದೆ?

ಜಿ. ಜಿ. ಹೆಗಡೆ

ಒಣಾ ಎಲುಬು! ಎಂದು ಹೇಳುವಾಗ ನಮ್ಮ ದೇಹದ ಎಲುಬುಗಳು ಉಕ್ಕಿನಂತೆಯೋ ಸತ್ತ ಮರದ ಕೊರಡಿನಂತೆಯೋ ನಿರ್ಜೀವ, ನಿಷ್ಕ್ರಿಯ ಪದಾರ್ಥಗಳೆಂದೂ ನಮ್ಮ ಶರೀರದ ಮಾಂಸವು ಮಣ್ಣುಮುದ್ದೆಯಂತೆ ಉರುಳದ ಹಾಗೆ ಅದಕ್ಕೆ ಆಧಾರವಾಗಿರುವುದೊಂದೇ ಎಲುಬಿನ ಉಪಯೋಗವೆಂದೂ ನಾವು ತಿಳಿಯುವಂತಿದೆ. ಆದರೆ ನಿಜವಾಗಿ ನಮ್ಮ ಎಲುಬುಗಳೇ ನಮ್ಮ ದೇಹದಲ್ಲಿಯ ಅತಿ ಉದ್ಯೋಗಿ ಅವಯವಗಳು.



ಈ ಎಲುಬುಗಳೆಂದರೆ ಒಂದು ಕಾರಖಾನೆಯೇ. ಅಲ್ಲಿ ದಿನದ ಇಪ್ಪತ್ತುನಾಲ್ಕು ತಾಸೂ ಅವಿರತ ಕೆಲಸ ನಡೆದಿರುತ್ತದೆ. ಈ ಕಾರಖಾನೆ ಕೆಂಪುರಕ್ತ ಗೋಲಕಗಳನ್ನು ತಯಾರಿಸುತ್ತದೆ. ನೂರು ದಿನ ಆಯುಷ್ಯದ ಈ ಕೆಂಪು ಗೋಲಕಗಳು ನಿಧಾನವಾಗಿ ಮುಪ್ಪಾಗುತ್ತ ಹೋಗುತ್ತವೆ. ಪ್ರತಿ ಮಿನಿಟಿಗೆ ಸುಮಾರು ೧೮ ಕೋಟಿ ಗೋಲಕಗಳು ಸಾಯುತ್ತವೆ. ಅವುಗಳ ಸ್ಥಳದಲ್ಲಿ ಅಷ್ಟೇ ಸಂಖ್ಯೆಯಲ್ಲಿ ಹೊಸ ತರುಣ ಗೋಲಕಗಳು ಹುಟ್ಟಿಕೊಳ್ಳಬೇಕು. ನಮ್ಮ ಎಲುಬುಗಳು ಈ ಉತ್ಪಾದನೆಯ ಪ್ರಮಾಣವನ್ನು ಕಾಪಾಡಿಕೊಳ್ಳಲಾರದೆ ಹೋದರೆ ನಮ್ಮ ರಕ್ತ ನೀರಾಗಿ ನಾವು ಪಾಂಡುರೋಗಕ್ಕೆ ತುತ್ತಾಗಿ ಸಾಯಬೇಕಾಗುವುದು. ಯಾವನಾದರೂ ದೃಢಕಾಯನ ಶರೀರದಿಂದ ಒಂದು ಪೈಂಟ್ ರಕ್ತ ತೆಗೆದರೆ ದೇಹವು ಕಳೆದುಕೊಳ್ಳುವಷ್ಟು ಕೆಂಪು ರಕ್ತ ಗೋಲಕಗಳನ್ನು ತಯಾರಿಸಲು ಎಲುಬಿನ ನೆಣಕ್ಕೆ (ಮ್ಯಾರೊ) ಸುಮಾರು ಆರರಿಂದ ಎಂಟು ವಾರಗಳು ಹಿಡಿಯುತ್ತವೆ. ಇದರಂತೆ ರೋಗಾಣುಗಳನ್ನು ಪ್ರತಿಭಟಿಸಿ ಅವುಗಳೊಡನೆ ಹೋರಾಡುವ ಬಿಳಿ ರಕ್ತಗೋಲಕಗಳ ಉತ್ಪಾದನೆಯಲ್ಲೂ ಮುಖ್ಯ ಹೊಣೆ ಎಲುವುಗಳದೇ ಆಗಿದೆ.

ಎಲುಬುಗಳು ದೇಹದಲ್ಲಿ ಕಾಯ್ದಿಟ್ಟ ಪೌಷ್ಟಿಕ ಆಹಾರ ಸಂಗ್ರಹದ ಉಗ್ರಾಣಗಳಂತಿವೆ. ಎಲುಬಿನೊಳಗಿನ ಟೊಳ್ಳಿನಲ್ಲಿರುವ ನೆಣದಲ್ಲಿ ಅವು ಕೊಬ್ಬನ್ನೂ ಪ್ರೋಟೀನುಗಳನ್ನೂ ಶೇಖರಿಸಿಟ್ಟುಕೊಂಡು ಅಗತ್ಯ ಬಿದ್ದೊಡನೆ ದೇಹಕ್ಕೆ ಪೂರೈಸುತ್ತವೆ. ದೇಹವ್ಯಾಪಾರದಲ್ಲಿ ಅಗತ್ಯವಾದ ಎಲ್ಲ ಖನಿಜದ್ರವ್ಯಗಳ ಬ್ಯಾಂಕು ಎಲುಬು. ಅತ್ಯವಶ್ಯ

"ಹೆರಾಲ್ಡ್ ಆಫ್ ಹೆಲ್ತ್" ಆಧಾರದಿಂದ

ವಾದ ಕ್ಯಾಲ್ಸಿಯಂ (ಸುಣ್ಣ) ಹಾಗು ಫಾಸ್ಫರಸ್ (ರಂಜಕ) ಪೂರ್ತಿಯಾಗಿ ಎಲುಬಿನಲ್ಲಿಯೇ ಇದ್ದಂತಿದೆ. ರಕ್ತ ಹೆಪ್ಪುಗಟ್ಟಲು, ಹೃದಯ ಬಡಿಯಲು, ಅಸ್ಥಿಪಂಜರದ ಸ್ನಾಯುಗಳ ಆಕುಂಚನಕ್ಕೆ ಮತ್ತು ನರಮಂಡಲದ ನಿತ್ಯದ ಕಾರ್ಯಕ್ಕೆ ಕ್ಯಾಲ್ಸಿಯಂ ಅಗತ್ಯವಾಗಿದೆ. ಒಂದು ಬಗೆಯ ಸೂಕ್ಷ್ಮ ಉಂಡು ತಿರುಗುಣ್ಣಿಸುವ ಪದ್ಧತಿಯಿಂದ ದೇಹದಲ್ಲಿ ಕ್ಯಾಲ್ಸಿಯಂದ ಸಮತೋಲ ಕಾಯ್ದುಕೊಳ್ಳಲ್ಪಡುತ್ತದೆ. ಉದಾಹರಣೆಗೆ, ಇಂದು ಕುಡಿದ ಒಂದು ಬಟ್ಟಲ ಹಾಲಿನಲ್ಲಿರುವ ಕ್ಯಾಲ್ಸಿಯಂ ಎಲುಬಿನಲ್ಲಿ ಸಂಗ್ರಹವಾಗುತ್ತದೆ. ಇಂದಿನ ಉಪಯೋಗಕ್ಕೆ ಬೇಕಾದ ಕ್ಯಾಲ್ಸಿಯಮನ್ನು ಕಳೆದ ವಾರವೋ ತಿಂಗಳೋ ವರ್ಷವೋ ಕುಡಿದ ಹಾಲಿನಿಂದ ತೆಗೆದು ಎಲುಬಿನಲ್ಲಿ ಠೇವಾಗಿಟ್ಟಿದ್ದ ಸಂಗ್ರಹದಿಂದ ರಕ್ತವು ಇಸಿದುಕೊಳ್ಳುತ್ತದೆ.

ಈಚೆಗೆ ರೇಡಿಯೋ-ಆಕ್ಟಿವ್ ಆಯ್ಸೋಟೋಪುಗಳ ಸಹಾಯದಿಂದ ನಡೆಸಿದ ಪರಿಶೀಲನೆಗಳು ಎಲುಬುಗಳೊಳಗೆ ನಡೆಯುವ ನಿರಂತರ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಜ್ಞಾನವನ್ನು ಒದಗಿಸಿವೆ. ಅದರಂತೆ ಎಲುಬುಗಳ ದುರಸ್ತಿ ವಿಚಾರದಲ್ಲಿ ಹೊಸ ಬಗೆಯ ತಂತ್ರಗಳೂ ಕಂಡುಹಿಡಿಯಲ್ಪಟ್ಟಿವೆ.

ಮನುಷ್ಯನ ದೇಹದಲ್ಲಿ ಸುಮಾರು ೨೦೬ ಎಲುಬುಗಳಿರುತ್ತವೆ. ಬೇರೆಬೇರೆ ಜನರಲ್ಲಿ ಈ ಸಂಖ್ಯೆ ತುಸು ಹೆಚ್ಚುಕಡಿಮೆ ಇರುವುದು. ಮಗುವಿನ ಬೆನ್ನುಮೂಳೆಯಲ್ಲಿ ೩೩ ಎಲುಬಿನ ಗೋಣಸುಗಳಿರುತ್ತವೆ. ಮುಂದೆ ಪ್ರಾಯ ಬಂದಾಗ ಕೆಳಭಾಗದ ಗೋಣಸುಗಳು ಒಂದರಲ್ಲೊಂದು ಬೆರೆತು ಹೋಗಿ ಬೆನ್ನುಮೂಳೆಯಲ್ಲಿ ೨೬ ಗೋಣಸುಗಳು ಮಾತ್ರ ಉಳಿಯುವವು. ಇದರಂತೆ ಪಕ್ಕೆಲುಬುಗಳ ಸಂಖ್ಯೆಯೂ ಹೆಚ್ಚು ಕಡಿಮೆಯಿರುವುದುಂಟು. ಸಾಮಾನ್ಯವಾಗಿ ೧೨ ಜೊತೆ ಪಕ್ಕೆಲುಬುಗಳು ಇರುವವು. ಆದರೆ ಈ ಸಂಖ್ಯೆ ಕೆಲವರಲ್ಲಿ ೧೧, ಕೆಲವರಲ್ಲಿ ೧೩ ಇರುವುದೂ ಉಂಟು.

ಅಸ್ಥಿಪಂಜರವು ಒಂದು ಅದ್ಭುತ ಇಂಜನಿಯರಿಂಗ ಕೌಶಲ್ಯದ ರಚನೆ. ಇದರಲ್ಲಿಯ ಪ್ರತಿಯೊಂದು ಭಾಗಕ್ಕೂ ಒಂದೊಂದು ವಿಶಿಷ್ಟ ಕಾರ್ಯವಿದೆ. ತಲೆಬುರುಡೆ ಮಿದುಳನ್ನು ರಕ್ಷಿಸಿದರೆ ಮಹತ್ವದ ಜ್ಞಾನತಂತುಗಳನ್ನೊಳಗೊಂಡ ಬೆನ್ನುಹುರಿಯನ್ನು ಬೆನ್ನುಮೂಳೆ ರಕ್ಷಿಸುತ್ತದೆ. ತಲೆಯ ಮೇಲೆ ಎಲ್ಲಿ ಹೊಡೆತ ಬೀಳುವ ಸಂಭವ ಹೆಚ್ಚೋ (ಉದಾ: ಮೇಲ್ಭಾಗ) ಅಲ್ಲಿ ಬುರುಡೆ ದಪ್ಪವಾಗಿರುತ್ತದೆ. ಬೆನ್ನುಹುರಿಗೆ ಆಘಾತವಾಗದಂತೆ ಅದರ ಎಲುಬು-ತುಂಡುಗಳ ನಡುವೆ ಮೃದ್ವಸ್ಥಿಗಳ ಮೆತ್ತನ್ನ ಪ್ಯಾಡುಗಳಿವೆ. ಇವು ಇದ್ದಿಲ್ಲವಾದರೆ ಕಾಲು ಜಾರಿದರೆ ಅಥವಾ ಕುರ್ಚಿಯಿಂದ ಬಿದ್ದರೆ ಸಾಕು, ಬೆನ್ನುಹುರಿಗೆ ಅಪರಿಮಿತ ಅಪಾಯವಾಗಬಹುದಿತ್ತು.

ಕಾಲಿನ ಎಲುವುಗಳೂ ಅದ್ಭುತವಾಗಿವೆ. ಅವು ಪೊಳ್ಳಾಗಿರುವುದರಿಂದಲೆ ಅವು ಅಷ್ಟೊಂದು ಭಾರವನ್ನು ಹೊರಲು ಸಮರ್ಥವಾಗಿರುತ್ತದೆ. ಅಷ್ಟೇ ತೂಕದ ಗಟ್ಟಿ ಕಂಬಕ್ಕಿಂತಲೂ ಪೊಳ್ಳು ಕಂಬವು ಹೆಚ್ಚು ಬಲಿಷ್ಠವಾಗಿರುತ್ತದೆ ಎಂಬ ಇಂಜಿನಿಯರಿಂಗ ತತ್ತ್ವವನ್ನು ಕಾಲೆಲುಬುಗಳು ಸಾರುತ್ತವೆ. ತೂಕದ ಮಾನದಿಂದ ನೋಡಿದರೆ ಎಲುಬುಗಳು ಉಕ್ಕಿಗಿಂತ ಗಟ್ಟಿಮುಟ್ಟಾದವು. ಸಂಪೂರ್ಣವಾಗಿ ಬೆಳವಣಿಗೆ ಹೊಂದಿದ ಮನುಷ್ಯನ ಕಾಲೆಲುಬಿನ ಅತಿ ಗಟ್ಟಿಯಾದ ಭಾಗವು ಒಂದು ಹಗುರಾದ ಮೋಟರ ಕಾರನ್ನು ಎತ್ತಿ ಹಿಡಿಯುವ ಶಕ್ತಿಯನ್ನು ಹೊಂದಿರುತ್ತದೆ.

ಎಲುಬಿನ ದ್ರವ್ಯಗಳು ಎರಡು ವಿಧವಾಗಿವೆ. ಒಂದು ಸ್ಪಂಜಿನಂತೆ ಮೆತ್ತಗಿದ್ದು ಇನ್ನೊಂದು ಸಾಂದ್ರವಾಗಿದೆ. ಎಲ್ಲ ಎಲುಬೂ ಇವೆರಡರ ಸಂಯೋಗದಿಂದ ಆಗಿರುತ್ತದೆ. ಸಾಂದ್ರ ದ್ರವ ಹೊರಭಾಗದಲ್ಲಿದ್ದು ಗಟ್ಟಿಯಾದ ದಪ್ಪನ್ನ ಕವಚವನ್ನು ತಯಾರಿಸುತ್ತದೆ ಇದರೊಳಗೆ ಸ್ಪಂಜಿನಂಥ ದ್ರವ್ಯವಿದ್ದು ಸೂಕ್ಷ್ಮ ವಿಭಾಗಗಳನ್ನು ಹೊಂದಿ ಛರ್ಚಿಯಾಕಾರದಲ್ಲಿ ಒಂದಕ್ಕೊಂದು ಹೆಣೆದುಕೊಂಡಿರುತ್ತದೆ. ಎಲುಬಿನೊಳಗಿನ ಸ್ಪಂಜಿನಂಥ ಭಾಗ ಮಹತ್ವದ್ದಿದೆ. ಏಕೆಂದರೆ

ಎಲುಬಿನ ನೆಣ ಇರುವುದು ಅಲ್ಲಿಯೆ. ಇದು ದುರ್ಬಲ ವಸ್ತುವಾಗಿದ್ದು ಇದಕ್ಕೆ ಬಲವಾದ ಆಧಾರ ಬೇಕಾಗುತ್ತವೆ. ಇದನ್ನಾವರಿಸಿರುವ ಸಾಂದ್ರ ಭಾಗವು ಎಲುವಿಗೆ ಅದರ ಶಕ್ತಿಯನ್ನು ಕೊಡುತ್ತದೆ. ತೊಡೆಯ ಎಲುಬಿನಂಥ ಉದ್ದನ್ನ ಎಲುಬಿನಲ್ಲಿ ನೆಣದಿಂದ ತುಂಬಿದ ದೊಡ್ಡ ಪೊಳ್ಳು ಇರುತ್ತದೆ. ಎಲುಬಿನ ನೆಣ ತುಂಬ ಚಟುವಟಿಕೆ ಯದಾಗಿದ್ದು ಅದಕ್ಕೆ ಸಂತತವಾದ ಸಮೃದ್ಧ ವಾದ ರಕ್ತದ ಪೂರೈಕೆ ಬೇಕಾಗುತ್ತದೆ. ಎಲುಬಿನ ಹೊರಗಿನ ಕಠಿನ ಭಾಗದಲ್ಲಿರುವ ದ್ವಾರವೊಂದ ರಿಂದ ರಕ್ತನಾಳವೊಂದು ಒಳಗೆ ಹೋಗಿ ರಕ್ತ ಪೂರೈಕೆಯ ಕಾರ್ಯವನ್ನು ಮಾಡುತ್ತದೆ.

ಮುರಿದ ಎಲುಬು ದುರಸ್ತಿಯಾಗುವಾಗ ಏನೇನು ಸಂಭವಿಸುತ್ತದೆ ಎಂದು ಸ್ವಲ್ಪದರಲ್ಲಿ ಹೇಳುವುದು ಕಷ್ಟ. ಆದರೆ ಅದು ಅತ್ಯಂತ ಮಹ ತ್ವದ ಕ್ರಿಯೆಯಾಗಿದೆ. ಎಲುಬು ಮುರಿದು ಬೇರೆ ಬೇರೆಯಾದ ಭಾಗಗಳನ್ನು ಸರಿಯಾಗಿ ಜೋಡಿಸಿ ಟ್ಟಾಗ ಕೆಲವೇ ದಿನಗಳಲ್ಲಿ ಆ ಜೋಡಣೆಯ ಎರಡೂ ಪಕ್ಕಗಳ ಮೇಲ್ಭಾಗದಲ್ಲಿ ಒಂದು ಮೆತ್ತನ್ನ ತೆಳುವಾದ ಸ್ಥಿತಿಸ್ಥಾಪಕ ಗುಣದ ಪರೆ ಬೆಳೆದು ಒಂದಕ್ಕೊಂದು ಕೂಡಿಕೊಳ್ಳುತ್ತದೆ. "ಪ್ರಪಾತದ ಎರಡು ದಂಡೆಗಳ ನಡುವೆ ಹಗ್ಗದ ಸೇತುವೆ ಕಟ್ಟಿದಂತೆ" ಇದಾಗುತ್ತದೆಂದು ಒಬ್ಬ ತಜ್ಞರು ಹೇಳಿದ್ದಾರೆ. ಇದು ಮುಂದೆ ಬಿರುಸಾಗಿ ಮುರಿದ ಭಾಗಗಳು ಸರಿದಾಡದಂತೆ ನೋಡಿ ಕೊಳ್ಳುತ್ತದೆ. ಆದರೆ ಎಲುಬು ಬಾಗುವದನ್ನು ಮಾತ್ರ ಇದು ತಡೆಯಲಾರದು. ಮುಂದೆ ಕ್ರಮೇಣ ಈ ಪರೆ ಇನ್ನಿಷ್ಟು ಬಿರುಸಾಗಿ ಕೊನೆಗೆ ನಿಜವಾದ ಎಲುಬೇ ಆಗಿ ಬಾಗದೆ ಒಜ್ಜೆಯನ್ನು ಹೊತ್ತುಕೊಳ್ಳುವಷ್ಟು ಗಟ್ಟಿಯಾಗುತ್ತದೆ. ಈ ಕ್ರಿಯೆ ಮುಗಿಯುವವರೆಗೆ ಜೋಡಿಸಿದ ಎಲವು ಗಳು ಸರಿದಾಡಲು ಅವಕಾಶವಿರದಂತೆ ನೋಡಿ ಕೊಳ್ಳುವುದಕ್ಕಾಗಿ ಕಟ್ಟಿಗೆ ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸಿನ ಕಟ್ಟುಗಳನ್ನು ಡಾಕ್ಟರರು ಹಾಕು ತ್ತಾರೆ.

ಎಕ್ಸರೇ ಮುಂತಾದ ಇತ್ತೀಚಿನ ಹೊಸ ಶೋಧ ಗಳಿಂದ ಮುರಿದ ಎಲುಬುಗಳ ದುರಸ್ತಿ ಹೆಚ್ಚು ಸುಲಭವೂ ಯಶಸ್ವಿಯೂ ಆಗಿದೆ. ಈ ಮೊದಲು ವಯಸ್ಸಾದವರ ಎಲುಬು ಮುರಿದರೆ ಅವತಾರ ಸಮಾಪ್ತಿಯೇ ಎಂಬಂತಿತ್ತು. ಚಿಕ್ಕ ಮಕ್ಕಳ ಎಲುಬು ಮುರಿದರೆ ಅದು ಮತ್ತೆ ಸರಿಯಾದರೂ ಬಹು ದಿನಗಳವರೆಗೆ ನಿಷ್ಕ್ರಿಯವಾಗಿ ಮಲಗಿ ಮಕ್ಕಳ ವ್ಯಕ್ತಿತ್ವಕ್ಕೇ ಶಾಶ್ವತ ಧಕ್ಕೆ ತಗಲು ತ್ತಿತ್ತು. ಈಗ ಆ ಪರಿಸ್ಥಿತಿ ಉಳಿದಿಲ್ಲ. ಎಕ್ಸ್-ರೇಯ ಸಹಾಯದಿಂದ ಮುರಿದ ಎಲುಬುಗಳನ್ನು ಮೊದಲಿಗಿಂತ ಚೆನ್ನಾಗಿ ಜೋಡಿಸುವುದು ಸಾಧ್ಯವಾಗಿದೆ. ಪ್ರಜ್ಞೆ ತಪ್ಪಿಸುವ ಔಷಧಗಳು ಎಲುಬು ಜೋಡಿಸುವಾಗ ಆಗುತ್ತಿದ್ದ ಯಮ ಯಾತನೆಯನ್ನು ಇಲ್ಲದಂತೆ ಮಾಡಿವೆ. ಪೆನಿಸಿ-ಲಿನ್ ಮೊದಲಾದ ಆಂಟಿ-ಬಾಯಾಟಿಕ್ ಔಷಧ ಗಳು ನಂಜಿನ ಗಂಡಾಂತರವನ್ನು ಕಡಿಮೆ ಮಾಡಿವೆ.

ಮುರಿದ ಎಲುಬಿನ ಶೀಘ್ರ ದುರಸ್ತಿಯಲ್ಲಿ ಸರ್ಜನ್ನರು ಇಂದು ಬಹಳ ಮುಂದೆ ಹೋಗಿ ದ್ದಾರೆ. ಮುರಿದ ಎಲುಬು ಜೋಡಿಸಿ ದನದ ಎಲುಬಿನ ಸಹಾಯದಿಂದ ಸಂದು ಹಾಕು ವುದು ಅವರು ಮಾಡಿದ ಪ್ರಥಮ ಪ್ರಯತ್ನವಾ ಗಿತ್ತು. ದನದ ಎಲುಬಿನ ಪಟ್ಟಿಯನ್ನು ಮುರಿದ ಎಲುಬಿನ ಮೇಲೆ ಸ್ಕ್ರೂಗಳಿಂದ ಕೂಡಿಸಿದರೆ ಕಾಲಾಂತರದಲ್ಲಿ ದನದ ಎಲುಬಿನ ಪಟ್ಟಿ ಮಾನವ ದೇಹದಲ್ಲಿ ಸೇರಿ ಹೋಗುತ್ತಿತ್ತು. ಆದರೆ ಈ ಪಟ್ಟಿ ಸಾಕಷ್ಟು ಗಟ್ಟಿಯಾಗಿರದ್ದರಿಂದ ಗಾಯಾಳು ಗಳು ಕೂಡಲೇ ಎದ್ದು ಓಡಾಡುವಂತಿರಲಿಲ್ಲ.

ಅನಂತರ ಸ್ಟೇನ್‌ಲೆಸ್ ಸ್ಟೀಲಿನಂಥ ಕೆಲ ಎರ ಕದ ಲೋಹಗಳ ಪಟ್ಟಿಗಳಿಂದ ಮುರಿದ ಎಲು ಬಿಗೆ ಸಂದುಹಾಕಲು ಪ್ರಾರಂಭವಾಯಿತು. ಈ ಲೋಹಗಳು ಗಟ್ಟಿಮುಟ್ಟಾಗಿರುವುದರಿಂದ ಎಲುಬು ಮುರಿದುಕೊಂಡವನು ಕೂಡಲೆ ಎದ್ದು ತಿರುಗಲು ಸಾಧ್ಯವಾಗುತ್ತದೆ. ಈ ಲೋಹದ ಪಟ್ಟಿ ನಯವಾಗಿರುವುದರಿಂದ ದೇಹದಲ್ಲಿ ಹಾಗೆ-ಯೇ ಉಳಿದರೂ ತೊಂದರೆ ಇಲ್ಲ. ಎಲುಬು

ಕೂಡಿಕೊಂಡ ಮೇಲೆ ಈ ಸಂದು ಪಟ್ಟಿಯನ್ನು ಹೊರತೆಗೆಯಲು ಮತ್ತೊಂದು ಶಸ್ತ್ರಕ್ರಿಯೆ ಮಾಡುವ ಅಗತ್ಯ ಬೀಳುವುದಿಲ್ಲ.

ಎಲುಬಿನ ಆಂತರಿಕ ದುರಸ್ತಿಯಲ್ಲಿ ಕಳೆದ ಮಹಾ ಯುದ್ಧದಲ್ಲಿ ಆಶ್ಚರ್ಯಕರ ಸುಧಾರಣೆಗಳ ನಾಂದಿಯಾಯಿತು. ಜರ್ಮನಿಯ ಡಾ. ಜಿರಾರ್ಡ್ ಕಂಟ್ಷರರು ಮುರಿದ ಎಲುಬಿನ ಒಳ ಟೊಳ್ಳಿನ ಮೂಲಕವಾಗಿ ಮೇಲಿನ ಗಂಟಿನಿಂದ ಕೆಳಗಿನ ಗಂಟಿನ ವರೆಗೆ ಉಕ್ಕಿನ ಸರಳನ್ನು ಜಡಿದು ಮುರಿದ ಎಲುಬಿಗೆ ಆಧಾರ ಕೊಡುವ ಪದ್ಧತಿಯನ್ನು ಪ್ರಾರಂಭಿಸಿದರು. ಈ ಕ್ರಮ ಈಗ ಎಲ್ಲ ಕಡೆ ಪ್ರಚಾರಕ್ಕೆ ಬರುತ್ತಿದೆ. ತೊಡೆಯ ಎಲುಬು ಮುರಿದುಕೊಂಡವರಿಗೆ ಇದು ರಾಮಬಾಣೋಪಾಯವೆನಿಸಿದೆ. ಹಿಂದಿನ ಕಾಲದಲ್ಲಿ ಇಂಥ ಅಪಘಾತಕ್ಕೊಳಗಾದವರು ಆರು ತಿಂಗಳು ಹಾಸಿಗೆ ಹಿಡಿಯಬೇಕಾಗುತ್ತಿತ್ತು. ಕೆಲವೊಮ್ಮೆ ಶಾಶ್ವತ ಅಂಗಹೀನರಾಗುವ ಸರದಿಯೂ ಬರುತ್ತಿತ್ತು. ಹೊಸ ಪದ್ಧತಿಯಲ್ಲಿ ಕೆಲ ವಾರಗಳಲ್ಲೇ ರೋಗಿ ಎದ್ದು ತಿರುಗಾಡುವಂತಾಗಿದೆ. ತೊಡೆಯ ಎಲುಬಿನ ದುರಸ್ತಿಯಲ್ಲಿ ಅತ್ಯಂತ ಯಶಸ್ವಿಯಾದ ಈ ಪದ್ಧತಿಯನ್ನು ಈಗ ಕಾಲಿನ ಕೆಳಭಾಗದ, ಮತ್ತು ಕೈಯ ಎಲುಬುಗಳಿಗೂ ಅಂಗೈ ಮತ್ತು ಬೆರಳುಗಳ ಎಲುಬುಗಳಿಗೂ ಅನ್ವಯಿಸುತ್ತಿದ್ದಾರೆ.

ಟೊಂಕ ಮುರಿದೇನು ಎಂಬ ಬೆದರಿಕೆ ಮಾತಿದೆಯಲ್ಲ, ಅದು ಬಹಳ ಅರ್ಥವತ್ತಾದದ್ದು. ಟೊಂಕದ ಎಲುಬು ಮುರಿದರೆ, ವಿಶೇಷವಾಗಿ ವಯಸ್ಸಾದವರಿಗೆ, ಅದೊಂದು ಮರಣ ದಂಡನೆಯೇ ಎಂದು ವೈದ್ಯರು ಹತ್ತು ವರ್ಷಗಳ ಕೆಳಗೆ ಭಾವಿಸಿದ್ದರು.

ಆದರೆ ಅಮೇರಿಕದ ಡಾ. ಸ್ಮಿತ್-ಪೀಟರ್ಸನ್ನರು ಇದಕ್ಕೆ ಧೈರ್ಯದ ಒಂದುಪಾಯವನ್ನು ಪ್ರಯೋಗಿಸಿದರು ಟೊಂಕದ ಎಲುಬು ಮುರಿಯುವುದು ಹೆಚ್ಚಾಗಿ ತೊಡೆಯ ಎಲುಬು ಟೊಂಕಕ್ಕೆ ಸೇರುವಲ್ಲಿ. ಹೀಗಾದಾಗ ತೊಡೆಯ ಎಲುಬಿನ ತಲೆಯು ಟೊಂಕದಲ್ಲಿರುವ ತನ್ನ ಗುಳಿಯಿಂದ ತಪ್ಪಿಹೋಗುತ್ತದೆ. ಡಾ. ಸ್ಮಿತ್-ಪೀಟರ್ಸನ್ನರು ಉದ್ದನ್ನ ಸ್ಟೇನ್‌ಲೆಸ್ ಸ್ಟೀಲಿನ ಮೊಳೆಯಿಂದ ಮುರಿದ ಭಾಗಗಳನ್ನು ಜೋಡಿಸಿ ತೊಡೆಯ ಎಲುಬಿನ ತಲೆಯನ್ನು ಸ್ವಸ್ಥಾನದಲ್ಲಿ ಕೂಡ್ರಿಸಿದರು. ಈ ರೀತಿಯಿಂದ ಕೆಲ ವಾರಗಳಲ್ಲೇ ಬಡಿಗೆಯ ನೆರವಿನಿಂದ ರೋಗಿ ನಡೆಯುವಂತಾಯಿತು; ಅನೇಕ ಜೀವಗಳು ಉಳಿದವು.

ಒಬ್ಬರ ಸದೃಢ ಎಲುಬನ್ನು ಇನ್ನೊಬ್ಬರಿಗೆ "ಕಸಿ" ಮಾಡುವ ಶಸ್ತ್ರಚಿಕಿತ್ಸೆಯ ಪವಾಡ ಈಗ ಎಲ್ಲರೂ ಕೇಳಿದ ಮಾತು. ವಿವಿಧ ಶಸ್ತ್ರಕ್ರಿಯೆಗಳಲ್ಲಿ ತೆಗೆಯಲ್ಪಟ್ಟ ಸದೃಢ ಎಲುಬುಗಳನ್ನು ಕೂಡಲೇ ಹೆಪ್ಪುಗಟ್ಟಿಸಿ "ಎಲುಬಿನ ಬ್ಯಾಂಕು"ಗಳಲ್ಲಿ ಸಂಗ್ರಹಿಸಿಟ್ಟು ತತ್ಸಮಾನ ಎಲುಬನ್ನು ಕಳೆದುಕೊಂಡ ದುರ್ದೈವಿಗಳಿಗೆ ಕಾಲಾಂತರದಲ್ಲಿ ಅದನ್ನು ಜೋಡಿಸಲಾಗುತ್ತಿದೆ.

ಒಂದು ಅದ್ಭುತ ಎಲುಬಿನ ಶಸ್ತ್ರಕ್ರಿಯೆಯ ವಾರ್ತೆ ಈಚೆಗೆ ಅಮೇರಿಕದಿಂದ ಬಂದಿದೆ. ಒಬ್ಬ ಹೆಣ್ಣು ಮಗಳಿಗೆ ಟೊಂಕದ ಎಲುಬಿನ ಕ್ಯಾನ್ಸರ್ ಆಗಿತ್ತು. ಸರ್ಜನ್ನರು ಆ ಎಲುಬಿನ ಅಷ್ಟು ಭಾಗವನ್ನು ಕತ್ತರಿಸಿದರು. ಅದನ್ನು ಉಗಿಯಲ್ಲಿ ಬಿಸಿ ಮಾಡಿ ಅದರಲ್ಲಿದ್ದ ರೋಗವನ್ನು ಕೊಂದರು. ಆ ಮೇಲೆ ಅದನ್ನು ಮೊದಲಿದ್ದಲ್ಲಿ ಜೋಡಿಸಿದರು. ಈಗ ಈ ಮಹಿಳೆ ರೋಗ ಮುಕ್ತಳಾಗಿರುವಂತೆ ಕಾಣುತ್ತದೆ. ಅವಳು ಸಾವಕಾಶವಾಗಿ ನಡೆಯಲು ಸಮರ್ಥಳಾಗಿದ್ದಾಳೆ.

ಎಲುಬಿನ ರಚನೆಯ ರಹಸ್ಯವನ್ನು ವಿಜ್ಞಾನ ಶೋಧಿಸಿ ಹೊಸ ಸಂಗತಿಗಳನ್ನು ಕಂಡಂತೆಲ್ಲ ಅನೇಕ ಅಂಗವಿಕಾರಗಳನ್ನು ಸುಧಾರಿಸಲು ಹೊಸ ತಂತ್ರಗಳ ಆವಿಷ್ಕಾರವಾಗುತ್ತಿದೆ. ಡೊಂಕು ಪಾದದಂಥ ಕೆಲ ವಿಕಾರಗಳನ್ನು ಶಸ್ತ್ರಕ್ರಿಯೆಯಿಲ್ಲದೆ ಗುಣಪಡಿಸುತ್ತಿದ್ದಾರೆ. ಬೆನ್ನು ಹುರಿ ಬಗ್ಗಿರುವುದು, ಎಲುಬಿನ ಹುಣ್ಣು ಮೊದಲಾದ ರೋಗಗಳಿಗೆ ಪ್ರತೀಕಾರ ಸಾಧ್ಯವಾಗುತ್ತಿದೆ.

ಮಾನವನು 'ಕಾಣುವ' ಪ್ರಪಂಚದಾಚೆಗೆ
ಅವನು 'ಕಾಣಲಾರದ' ಪ್ರಪಂಚ
ಇರಬಲ್ಲುದೆಂದು ವಿಜ್ಞಾನ ಒಪ್ಪುತ್ತದೆ

ನಮ್ಮ ಇಂದ್ರಿಯಗಳು ಎಷ್ಟು ಸತ್ಯ ಹೇಳುತ್ತವೆ?

ಶ್ರೀ ಭಂಡಾರಿ

ಮಾನವನ ಜ್ಞಾನೇಂದ್ರಿಯಗಳು ಎಷ್ಟರ ಮಟ್ಟಿಗೆ ನಂಬಲರ್ಹವಾಗಿವೆ? ಅವುಗಳ ಗ್ರಹಣ ಶಕ್ತಿಯ ಇತಿಮಿತಿಗಳೇನು? ಶತಮಾನ ಶತಮಾನಗಳಿಂದ ಈ ಕುರಿತು ಜಿಜ್ಞಾಸೆ ನಡೆದು ಬಂದಿದೆ. ಜಗತ್ತಿನ ಎಲ್ಲೆಡೆಯ ತತ್ವಜ್ಞರು ಸಹಸ್ರಾರು ವರ್ಷಗಳಿಂದ ಎಡೆಬಿಡದೆ ಈ ಬಗ್ಗೆ ವಿಚಾರ ವಿಮರ್ಶೆ ಮಾಡಿದ್ದಾರೆ. ಅಂದಿನಿಂದ ಇಂದಿನವರೆಗೂ ಇಂದ್ರಿಯಗಳು ತಿಳಿಸುವ ಜ್ಞಾನದ ನಿರುಪಾಧಿಕ ಸತ್ಯತೆಯ ಬಗ್ಗೆ ಅಪನಂಬಿಕೆ ಅವಿಶ್ವಾಸಗಳೇ ಕಂಡುಬರುತ್ತಿವೆಯಲ್ಲದೆ ವಿಶ್ವಾಸ ಕಂಡುಬಂದಿಲ್ಲ. ರುಚಿಯ ಕಹಿಸಿಹಿಗಳು, ಉಪ್ಪು ಖಾರಗಳು, ಮೂಗಿನ ಸುಗಂಧ ದುರ್ಗಂಧಗಳು, ಕಣ್ಣಿನ ಬಣ್ಣ ಬೆಡಗುಗಳು, ರೂಪಗಾತ್ರಗಳು, ಕಿವಿಯ ಇಂಪು ಕರ್ಕಶಗಳು ತಾರಮಂದ್ರಗಳು, ಸ್ಪರ್ಶದ ಬಿಸಿ ತಂಪುಗಳು, ದೊರಗು ನಯಗಳು ಇವೆಲ್ಲ ಮಾನವೇಂದ್ರಿಯಗಳ ಸಂಕುಚಿತ ಕ್ಷೇತ್ರದಲ್ಲಿ ಪರಿಮಿತ ಸತ್ಯಗಳಾಗಿರುವುವಲ್ಲದೆ ಆತ್ಯಂತಿಕ ಸತ್ಯಸಂಗತಿಗಳಲ್ಲವೆಂದು ಅಂದಿನಿಂದ ಇಂದಿನವರೆಗಿನ ತತ್ವಜ್ಞರ ಅಭಿಪ್ರಾಯವಾಗಿದೆ. ಈಗ ವಿಜ್ಞಾನಿಗಳ ಸಂಶೋಧನೆಗಳು ಇದನ್ನೇ ಅನುಮೋದಿಸುತ್ತಿವೆ.

ಸಕ್ಕರೆ ಸಿಹಿಯಾಗಿದೆ, ಮೆಣಸು ಖಾರವಾಗಿದೆ ಎಂದು ನಾವು ಹೇಳುತ್ತೇವೆ. ಪದಾರ್ಥಗಳು ನಾಲಿಗೆಗೆ ತಗಲಿದಾಗ ಆಗುವ ಅನುಭವವೇ ರುಚಿ ಅಥವಾ ರಸ ಎನಿಸುತ್ತದೆ. ಈ ಅನುಭವ ನಿಜವಾಗಿ ಎಷ್ಟು ಸತ್ಯ? ಬೇರೆ ಬೇರೆ ಪ್ರಾಣಿಗಳಲ್ಲಿ ರುಚಿಪ್ರಜ್ಞೆ ಬೇರೆ ಬೇರೆ ಬಗೆಯಾಗಿರುತ್ತದೆಂದು ಎಲ್ಲರೂ ಬಲ್ಲರು. ಮಾನವ ಪ್ರಾಣಿಯ ನಾಲಗೆಗೆ ಅಹಿತಕರವಾದುದು ಇನ್ನೊಂದು ಪ್ರಾಣಿಯ ನಾಲಗೆಗೆ ಅತ್ಯಂತ ಹಿತವಾಗಿರಬಹುದು. ಎರಡು ಕಾಲಿನ ಪ್ರಾಣಿಗೆ ಅತಿ ಹೇಯವೆನಿಸಿದ್ದು ನಾಲ್ಕು ಕಾಲಿನದಲ್ಲಿ ಅತಿ ರುಚಿಕರವೆನಿಸುವುದುಂಟು. ಮಾನವನಿಗೆ ಅತ್ಯವಶ್ಯವೆನಿಸಿದ ಉಪ್ಪು ಗಿಳಿಗೆ ವಿಷಮ ವಿಷವಾಗುತ್ತದೆ. ಕೊಳಕು ಕೆಸರೇ ಸಮೃದ್ಧಿಯ ಸ್ವರ್ಗವಾಗಿ ಆನಂದದಲ್ಲಿ ಮುಳುಗೇಳುತ್ತಿರುವ ಜೀವಿಗಳಿಗೆ ಮೊಸರು ನಿರರ್ಥಕವಾಗಿ ಕಾಣುತ್ತದೆ. ಹೀಗೆ ಒಂದು ಜೀವಿಯ ಒಂದು ಇಂದ್ರಿಯಕ್ಕೆ ಹಿತಕಾರಿಯಾದ ವಸ್ತು ಇನ್ನೊಂದು ಜೀವಿಯ ತತ್ಸಮಾನ ಇಂದ್ರಿಯಕ್ಕೆ ಅಹಿತಕರವಾಗಿರುತ್ತದೆ. ಈ ಎರಡು ಅನುಭವಗಳಲ್ಲಿ ಯಾವುದು ಸತ್ಯ?

ಇಂದ್ರಿಯಗಳ ಸಂಖ್ಯೆಯೂ ಪ್ರಾಣಿಯಿಂದ ಪ್ರಾಣಿಗೆ ಬದಲಾಗುತ್ತದೆ. ಪಂಚೇಂದ್ರಿಯದ ಮಾನವ ಪ್ರಾಣಿಗೆ ಸಂವೇದ್ಯವೆನಿಸಿದ ಪ್ರಪಂಚದ ಅನೇಕ ಚೋದ್ಯ ಸಂಗತಿಗಳು ರಸನೇಂದ್ರಿಯ ಮಾತ್ರವಿರುವ ಅನೇಕ ಕೀಟಗಳ ಅನುಭವಕ್ಕೆ ಬರುವುದೇ ಇಲ್ಲ. ಮಳೆಗಾಲದಲ್ಲಿ ಕಾಣಿಸಿಕೊಳ್ಳುವ ಎರೆ ಹುಳ (ಮಣ್ಣು ಹುಳ)ವನ್ನು ನೀವು ನೋಡಿಲ್ಲವೆ? ಅದಕ್ಕಿರುವುದು ಎರಡೇ ಇಂದ್ರಿಯಗಳು—ರುಚಿ ಮತ್ತು ಸ್ಪರ್ಶ. ಮಾ

> ಬಂಗಾರದ ಪಾತ್ರದಿಂದ
> ಸತ್ಯದ ಮುಖ ಮುಚ್ಚಿದೆ.
> —ಈಶೋಪನಿಷತ್ತು
>
> ನಿಜವ ಕಂಡವರಿಲ್ಲ,
> ನಿಜ ಕಾಣುವಂತಿಲ್ಲ,
> ನಿಜವೇನು ಮಳಲ ಹುಡಿಗಿಂತ ಕೀಳೆ?
> —ಬೇಂದ್ರೆ

ವನ ದೃಶ್ಯ, ಘ್ರಾಣ, ಶಬ್ದಪ್ರಪಂಚಗಳು ಅದರ ಪಾಲಿಗೆ ಶೂನ್ಯ. ಐದು ಜ್ಞಾನೇಂದ್ರಿಯಗಳಲ್ಲಿ ಒಂದನ್ನು ಕಳಕೊಂಡರೆ ಮನುಷ್ಯ ಎಷ್ಟು ವಿವಂಚನೆಗೊಳ್ಳುತ್ತಾನೆ! ಹುಟ್ಟು ಕುರುಡನೊಬ್ಬನ ಅನುಭವ ಎಷ್ಟು ಕಡಿಮೆಯಾಗಿರುತ್ತದೆ! ಆತನಿಗೆ ರಾತ್ರಿ ಹಗಲುಗಳು ಸುಳ್ಳು; ಗುಲಾಬಿ ಹೂವಿನ ಅಸದೃಶವಾದ ಸೌಂದರ್ಯ ಸುಳ್ಳು; ಕಾಮನ ಬಿಲ್ಲಿನ ಸಪ್ತವರ್ಣದ ವಿಲಾಸ ಸುಳ್ಳು; ಬೃಹದಾಕಾಶದಲ್ಲಿ ಲಕ್ಷ ಲೆಕ್ಕದಲ್ಲಿ ಮಿನುಗುವ ಇರುಳಿನ ನಕ್ಷತ್ರರಾಶಿಯ ಭವ್ಯ ಸೌಂದರ್ಯ ಸುಳ್ಳು; ಮನಮೋಹಿನಿಯಾದ ಸ್ತ್ರೀಯ ಸೌಂದರ್ಯದ ಆಕರ್ಷಣೆ ಸುಳ್ಳು! ಹೀಗೆ ಐದರಲ್ಲಿ ಒಂದಿಲ್ಲದಿದ್ದರೇನೇ ಮಾನವನಿಗೆ ಪ್ರಪಂಚಾನು-ಭವದ ಬಹು ದೊಡ್ಡ ಭಾಗ ನಷ್ಟವಾಗುವಾಗ ಒಂದೇ ಅಥವಾ ಎರಡೇ ಜ್ಞಾನೇಂದ್ರಿಯಗಳಿರುವ ಜೀವರಾಶಿಗಳ ಪ್ರಪಂಚಾನುಭವವೆಷ್ಟಿದ್ದೀತು? ಇಷ್ಟರವರೆಗೆ ನಡೆದಿರುವ ಜೀವವಿಕಾಸದಲ್ಲಿ ಮಾನವ ಪ್ರಾಣಿ ಕೊನೆಯ ಹಂತದಲ್ಲಿದೆ. ಆ ಮಾನವನಿಗೆ ಐದಿಂದ್ರಿಯಗಳ ವಿಕಾಸವಾಗಿದೆ. ಆದರೆ ಆತನದೇ ಪರಿಪೂರ್ಣ ಪ್ರಕೃತಿ ಎನ್ನುವುದು ಹೇಗೆ? ಇನ್ನೂ ವಿಕಾಸ ಕಾರ್ಯ ನಡೆದು ಆರು ಜ್ಞಾನೇಂದ್ರಿಯಗಳ ಪ್ರಾಣಿಯೊಂದರ ನಿರ್ಮಾಣವಾದರೆ ಆ ಪ್ರಾಣಿಯ ಪ್ರಪಂಚಾನುಭವ ಹೇಗಿದ್ದೀತು? ಮನುಷ್ಯ ಕಾಣದ ಎಷ್ಟೋ ಹೊಸ ಹೊಸ ಲೋಕಗಳನ್ನು ಅವನು ಕಂಡಾನು. ಮನುಷ್ಯರಲ್ಲಿ ಕುರುಡನು ಎಷ್ಟು ದುರದೃಷ್ಟವಂತನೋ ಅಷ್ಟೇ ಆ ಹೊಸ ಪ್ರಾಣಿಯ ಮುಂದೆ ಮನುಷ್ಯ ದುರದೃಷ್ಟಶಾಲಿಯಾದಾನು.


ಪ್ರತಿಯೊಂದು ಜ್ಞಾನೇಂದ್ರಿಯದ ಮಿತಿಮೇರೆಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಅವುಗಳ ಕಾರ್ಯಗಳನ್ನು ವೈಜ್ಞಾನಿಕವಾಗಿ ವಿವೇಚಿಸುವುದು ಯೋಗ್ಯ. ಮೊದಲು ಕಿವಿಯ ಕಾರ್ಯವನ್ನು ವಿವೇಚಿಸುವಾ. ವಸ್ತುಗಳ ಕಂಪನವು ಗಾಳಿಯಲ್ಲಿ ತರಂಗಗಳನ್ನು ಹುಟ್ಟಿಸುತ್ತದೆ. ಆ ತರಂಗಗಳು ಚಲಿಸಿ ನಮ್ಮ ಕಿವಿಯನ್ನು ಸೇರಿದಾಗ ಅಲ್ಲಿರುವ ಗ್ರಾಹಕಪಟಲವೂ ಅದೇ ರೀತಿಯಾಗಿ ಕಂಪಿಸುತ್ತದೆ. ಆಗ ನಮಗೆ ಶಬ್ದಜ್ಞಾನವಾಗುತ್ತದೆ. ಇದು ಸಂಕ್ಷೇಪವಾಗಿ ಶ್ರವಣೇಂದ್ರಿಯದ ಕಾರ್ಯವಿವರಣೆಯಾಯಿತು. ಪ್ರಪಂಚದಲ್ಲಿ ಎಷ್ಟು ವಿಧದ ಕಂಪನಗಳಾಗಬಲ್ಲುವು? ಅದರಲ್ಲಿ ಕಿವಿಯು ಎಷ್ಟನ್ನು ಗ್ರಹಿಸಬಲ್ಲುದು? ಎಂಬುದನ್ನು ಈಗ ವಿಚಾರಿಸೋಣ.

ಮನೆಯ ಅಂಗಳದಲ್ಲಿ ಬಟ್ಟೆ ಒಣಗಿಸಲು ಲೋಹದ ತಂತಿಗಳನ್ನು ಕಟ್ಟಿರುತ್ತೇವೆ. ಹಾಗೆಯೇ ವೀಣೆಯಲ್ಲಿ ತಂತಿಗಳನ್ನು ಬಿಗಿದಿರುತ್ತೇವೆ. ಅಂಗಳದ ತಂತಿಯಲ್ಲಿ ಒಣಗಹಾಕಿರುವ ಬಟ್ಟೆಯನ್ನು ಬಿರುಸಾಗಿ ಎಳೆದು ತೆಗೆದರೆ ಆ ತಂತಿ ಮೇಲೆ ಕೆಳಗೆ ಚಲಿಸುತ್ತದೆ, ಅಥವಾ ಕಂಪಿಸುತ್ತದೆ. ಇದು ಕಣ್ಣಿಗೆ ಕಾಣಿಸುತ್ತದೆ. ಹಾಗೆಯೇ ವೀಣೆಯ ತಂತಿಯನ್ನು ಬೆರಳಿನಿಂದ ಮಿಡಿದರೆ ಅದು ಕಂಪಿಸುತ್ತದೆ. ಆದರೆ ಮೊದಲ ಕಂಪನದಿಂದ ನಮ್ಮ ಕಿವಿ ಯಾವ ಶಬ್ದವನ್ನೂ ಗ್ರಹಿಸುವುದಿಲ್ಲ; ಎರಡನೆಯ ಕಂಪನದಿಂದ ಕಿವಿಯು ಶಬ್ದವನ್ನು ಗ್ರಹಿಸುತ್ತದೆ. ಇದರಿಂದ ಕಿವಿಯ ಶಬ್ದಗ್ರಹಣದ ಮಿತಿಯನ್ನು ಊಹಿಸಬಹುದು. ಮೇಲಿನ ಎರಡು ಕಂಪನಗಳೂ ವಾಸ್ತವಿಕವಾಗಿ ಶಬ್ದಗಳೇ. ಆದರೆ ಒಂದು ಶಬ್ದ ನಮಗೆ ಕೇಳಿಸಬೇಕಾದರೆ ಕಡಿಮೆ ಎಂದರೆ ಒಂದು ಸೆಕಂಡಿಗೆ ಒಂದು ವಸ್ತು ಮೂವತ್ತು ಬಾರಿಯಾದರೂ ಕಂಪಿಸಬೇಕು. ಇದಕ್ಕಿಂತ ಕಡಿಮೆ ಕಂಪನವಾದರೆ ಆ ಅತಿಮಂದ್ರ ಸ್ವರವನ್ನು ಮನುಷ್ಯನ ಕಿವಿ ಗ್ರಹಿಸಲಾರದು. ಹಾಗೆಯೇ ಪರಮಾವ

ಧಿಯ ಮಿತಿಯೂ ಇದೆ. ಸೆಕೆಂಡಿಗೆ ಮೂವತ್ತು ಸಾವಿರ ಬಾರಿಗಿಂತ ಹೆಚ್ಚು ಕಂಪಿಸಿದರೆ ಆ ಅತಿತಾರ ಶಬ್ದವನ್ನು ನಮ್ಮ ಕಿವಿಯು ಗ್ರಹಿಸಲಾರದು. ಮನುಷ್ಯ ಕಂಠದಿಂದ ಹೊರಡುವ ಶಬ್ದಗಳು ಈ ಎರಡು ಮಿತಿಗಳ ನಡುವೆಯೇ ಇರುತ್ತವೆ. ಆದುದರಿಂದ ಒಬ್ಬ ಮನುಷ್ಯ ಮಾತಾಡುವುದನ್ನು ಇನ್ನೊಬ್ಬ ಕೇಳಬಲ್ಲ. ಆದರೆ ಹೆಚ್ಚು ಕಂಪನ ಸಂಖ್ಯೆಯ ಸ್ವರದಿಂದ ಕೂಗುವ ಮತ್ತು ಆ ಸ್ವರವನ್ನು ಕೇಳಬಲ್ಲ ಅನೇಕ ಚಿಕ್ಕ ಪುಟ್ಟ ಪ್ರಾಣಿಗಳಿವೆ. ಅವು ತಮ್ಮತಮ್ಮೊಳಗೆ ಅನೇಕ ಬಾರಿ "ವಿಚಾರವಿನಿಮಯ" ಮಾಡಿಕೊಳ್ಳುತ್ತವೆ. ಅವುಗಳಿಗೆಲ್ಲಾ ತನ್ನ ಕಿವಿ ಕಿವುಡಾದುದರಿಂದ ಆ ಪ್ರಾಣಿಗಳು ಶಬ್ದ ಮಾಡುವುದೇ ಇಲ್ಲವೆಂದು ಮನುಷ್ಯ ತಿಳಿದುಕೊಳ್ಳುತ್ತಾನೆ ಎಷ್ಟೋ ಸಾರಿ "ವಾತಾವರಣವು ನೀರವ, ನಿಶ್ಶಬ್ದವಾಗಿದೆ" ಎಂದು ನಾವು ಹೇಳುವುದುಂಟು. ಆದರೆ ಬೇರೊಂದು ಕಂಪನಶಕ್ತಿಯ ಗ್ರಾಹಕಪಟಲದ ಕಿವಿಯುಳ್ಳ ಪ್ರಾಣಿಗೆ ಆ ನಿಶ್ಶಬ್ದ ವಾತಾವರಣವೂ ಗದ್ದಲಗಳ ಸಂತೆಯಾಗಿರಬಲ್ಲುದು.

ಮಾನವನ ಇಂದ್ರಿಯಗಳಲ್ಲೆಲ್ಲಾ ಕಣ್ಣು ಅತಿ ಪ್ರಮುಖವಾದದು. ಕಣ್ಣಿಲ್ಲದ ಕುರುಡನ ಬಗ್ಗೆ ನಾವು ಬಹಳ ಅನುಕಂಪಪಡುತ್ತೇವೆ. ಆದರೆ ಕಣ್ಣಿನ ನಿಜವಾದ ಕಾರ್ಯವೇನೆಂದು ನಮಗೆ ಅರಿವಾದರೆ ಕುರುಡನಿಗಿಂತ ಕಣ್ಣಿದ್ದ ನಾವೇನೂ ಹೆಚ್ಚಿನ ಭಾಗ್ಯಶಾಲಿಗಳಲ್ಲವೆಂಬುದು ಮನವರಿಕೆಯಾಗದಿರದು.

ಸೂರ್ಯಮಂಡಲವು ಅನಂತ ವಿಕಿರಣಕ್ರಿಯೆಯ ಒಂದು ಬೃಹದ್ರಂಗಭೂಮಿ. ಅದರಲ್ಲಿರುವ ಜಲಜನಕವು ಹೀಲಿಯಂ ಎಂಬ ಅನಿಲವಾಗಿ ಮಾರ್ಪಡುವುದೇ ಅಲ್ಲಿ ನಡೆಯುವ ಕಾರ್ಯ. ಇದರ ಪರಿಣಾಮವಾಗಿ ಅಲ್ಲಿ ಪದಾರ್ಥವು ನಷ್ಟವಾಗುವುದಂತೆ. ಈ ನಷ್ಟವಾದ ಪದಾರ್ಥ ವಿದ್ಯುತ್ಕಾಂತ ತರಂಗಗಳಾಗಿ ಎಲ್ಲೆಡೆಗೆ ಪ್ರಸಾರವಾಗುತ್ತವೆ. ಇದಕ್ಕೆ ವಿಕಿರಣಕ್ರಿಯೆಯೆನ್ನುತ್ತಾರೆ. ವಿಸ್ತಾರವಾದ ಶೂನ್ಯಪ್ರದೇಶದಲ್ಲಿ ಅದ್ಭುತವೇಗದಿಂದ ಈ ತರಂಗಗಳು ಪ್ರಸಾರವಾಗುತ್ತವೆ. ಈ ತರಂಗಗಳಲ್ಲಿ ಹಲವಾರು ವಿಧಗಳಿವೆ ಕೆಲವು ತರಂಗಗಳ ತರಂಗದೂರ (Wave length) ಬಹಳ ಕಡಿಮೆ ; ಇನ್ನು ಕೆಲವು ತರಂಗಗಳ ತರಂಗದೂರ ಅತಿ ಹೆಚ್ಚು. ಕೆಲವು ತರಂಗಗಳು ಭೂಮಿಯ ಮೇಲಿನ ಪದರುಗಳನ್ನು ದಾಟಿ ಮುಂದುವರಿದರೆ ಕೆಲವು ಪ್ರತಿಫಲಿಸುತ್ತವೆ.





ಇಲ್ಲಿ ಮೇಲೆ ತೋರಿಸಿದಂತೆ ಸಣ್ಣದೊಡ್ಡ ತರಂಗದೂರಗಳುಳ್ಳ ಅನೇಕ ವಿಧದ ತರಂಗಗಳು ಸೂರ್ಯಮಂಡಲದಿಂದ ಎಲ್ಲೆಡೆಗೆ ಚಲಿಸುತ್ತವೆ, ಭೂಮಿಯನ್ನು ಸೇರುತ್ತವೆ. ಹಗಲು ಹೊತ್ತಿನಲ್ಲಿ .೦೦೦೦೦೦೦೦೦೦೦೦೧ ಸೆಂಟಿಮೀಟರು ತರಂಗದೂರವುಳ್ಳ ಕಾಸ್ಮಿಕ್ ಕಿರಣಗಳೆಂಬ ತರಂಗಗಳಿಂದ ಹಿಡಿದು ಹಲವಾರು ಮೈಲುಗಳ ತರಂಗದೂರವುಳ್ಳ ರೇಡಿಯೋ ಪ್ರಸಾರ ಅಲೆಗಳಂತಹ ಸಾವಿರಾರು ವಿಧದ ತರಂಗಗಳ ಮಳೆಯಾಗುತ್ತದೆ, ನಮ್ಮ ಭೂಮಿಯ ಮೇಲೆ ಇವೆಲ್ಲವೂ ವಾಸ್ತವಿಕವಾಗಿ "ಕಿರಣ"ಗಳೇ. ಇಷ್ಟು ವೈವಿಧ್ಯವನ್ನೊಳಗೊಂಡ ವಿಕಿರಣ ತರಂಗಗಳಲ್ಲಿ

·೦೦೦೦೪ ಸೆಂಟಿಮೀಟರುಗಳಿಂದ ·೦೦೦೦೭ ಸೆಂಟಿಮೀಟರುಗಳ ವರೆಗೆ ತರಂಗ ದೂರವಿರುವ ಅಲೆಗಳು "ಬೆಳಕು" ಎನಿಸುತ್ತವೆ. ಈ ಕಿರಣಗಳನ್ನು ಮಾತ್ರ ನಮ್ಮ ಕಣ್ಣು ಗ್ರಹಿಸಬಲ್ಲದು. ಅನಂತ ವೈವಿಧ್ಯಗಳ "ಕಿರಣ" ಜಾಲದಲ್ಲಿ ಕೆಲವು ಕಿರಣಗಳನ್ನು ಮಾತ್ರ ಪರಿಗ್ರಹಿಸಬಲ್ಲುದು. ಈ ತರಂಗಗಳು ವಸ್ತುಗಳ ಮೇಲೆ ಬಿದ್ದು ಪ್ರತಿಫಲಗೊಳ್ಳುತ್ತವೆ. ಪ್ರತಿಫಲಿತವಾದ ತರಂಗಗಳು ನಮ್ಮ ಕಣ್ಣಿನ ಗ್ರಾಹಕ ಪಟಲದ ಮೇಲೆ ಬಿದ್ದಾಗ ಆ ವಸ್ತುಗಳು ನಮಗೆ ಗೋಚರವಾದಂತಾಗುವುದು. ಗಾಳಿಯನ್ನು ಈ ಬೆಳಕಿನ ಕಿರಣಗಳು ದಾಟಿ ಹೋಗುವುದರಿಂದ ಪ್ರತಿಫಲನ ಕ್ರಿಯೆ ನಡೆಯುವುದಿಲ್ಲ. ಆದುದರಿಂದ ಗಾಳಿಯು ನಮಗೆ ಸ್ಪರ್ಶಗೋಚರವಾದರೂ ದೃಗ್ಗೋಚರವಾಗಲಾರದು. ರಕ್ತಾತೀತ ಉಷ್ಣಕಿರಣಗಳ (infra-red and heat waves) ತರಂಗದೂರ ಬೆಳಕಿನ ಕಿರಣಗಳ ತರಂಗ ದೂರಕ್ಕಿಂತ ತುಸು ಹೆಚ್ಚಾಗಿರುವುದರಿಂದ (.೦೦೦೦೮ ರಿಂದ.೦೩೨ ಸೆ. ಮೀ.) ಅವುಗಳೂ ಬೆಳಕಿನಂತೆ ನಮ್ಮ ದೃಷ್ಟಿಯನ್ನು ಪ್ರಚೋದಿಸಲಾರವು. ಆದರೆ ಅವು ಬೆಳಕಿನೊಡನೆಯೇ ಸಂಚರಿಸುತ್ತಿದ್ದು ನಮ್ಮ ಮೈಮೇಲೆ ಬೀಳುವಾಗ ನಮಗೆ ಉಷ್ಣಾನುಭವವಾಗುತ್ತದೆ. ಹಾಗೆಯೇ ನೀಲಾತೀತ ಕಿರಣಗಳು (ultra violet rays) ಬೆಳಕಿನ ಕನಿಷ್ಠತಮ ತರಂಗ ದೂರಕ್ಕಿಂತ ಕಡಿಮೆಯಾಗಿರುವುದರಿಂದ (.೦೦೦೦೩ ರಿಂದ .೦೦೦೦೦೧ ಸೆ. ಮೀ.) ಅವುಗಳೂ ನಮ್ಮ ಕಣ್ಣಿನ ಗ್ರಾಹಕ ಪಟಲದ ಮೇಲೆ ಯಾವ ಪರಿಣಾಮವನ್ನೂ ಮಾಡಲಾರವು. ಇದಕ್ಕಿಂತಲೂ ಕಡಿಮೆ ತರಂಗದೂರದ ಕ್ಷ-ಕಿರಣ, ಗಾಮಕಿರಣ ಮುಂತಾದವುಗಳ ಮಾತಂತೂ ದೂರವೇ ಉಳಿಯಿತು. ಹೀಗೆ ವಿಶ್ವದ ಅನಂತ ವಿಧದ "ಕಿರಣ"ಗಳಿಗೆ ನಮ್ಮ ಕಣ್ಣು ಕುರುಡಾಗಿದ್ದುದು ತಿಳಿದುಬರುತ್ತದೆ. ಒಂದೊಮ್ಮೆಗೆ ನಿಮ್ಮ ಕಣ್ಣು ಈ ಬೆಳಕಿನ ಕಿರಣಗಳನ್ನು ಪರಿಗ್ರಹಿಸುವ ಶಕ್ತಿಯನ್ನು ಕಳಕೊಂಡು ಕ್ಷ ಕಿರಣಗಳು (x-Rays) ಎಂದು ಕರೆಯಲ್ಪಡುವ ಕಿರಣಗಳನ್ನು ಮಾತ್ರ ಸ್ವೀಕರಿಸಲು ಆರಂಭಿಸಿದವೆಂದು ಭಾವಿಸೋಣ. ಆಗ ಈ ಪ್ರಪಂಚ ನಿಮಗೆ ವಿಚಿತ್ರವಾಗಿ ಕಾಣಿಸುತ್ತದೆ. ಎಲೆ ಬಳ್ಳಿ ಗಿಡ ಮರಗಳಿಂದ ಶೋಭಿಸುವ ಈ ಪ್ರಕೃತಿ ಶೂನ್ಯವಾಗಿ ಕಂಡೀತು. ಬಣ್ಣ ಬೆಡಗುಗಳಿಂದ ರಂಜಿಸುವ ಮೃಗಪಕ್ಷಿಗಳೆಲ್ಲ ಎಲುಬಿನ ಗೂಡುಗಳಾಗಿ ಕಾಣುತ್ತವೆ. ಬಣ್ಣಬಣ್ಣದ ಸೀರೆಯುಟ್ಟು, ಚಿನ್ನದ ಹೊಳಪುಳ್ಳ ಮೈಯ ನಿಮ್ಮ ಮೋಹದ ಮಡದಿಯನ್ನು ಕಂಡಾಗಲಂತೂ ನೀವು ಭಯಪಡುವಿರಿ. ಆಕೆ ಬರೇ ಅಸ್ಥಿಪಂಜರವಾಗಿ ಕಾಣುತ್ತಾಳೆ. ಗಾಳಿ ಸ್ಪರ್ಶಕ್ಕೆ ಸಿಕ್ಕಿದರೂ ಕಣ್ಣಿಗೆ ಕಾಣದಿರುವಂತೆ ಈಗಿರುವ ದೃಶ್ಯ ಪ್ರಪಂಚದ ಬಹುಪಾಲು ಕೈಗೆ ಸಿಕ್ಕಿದರೂ ಕಣ್ಣಿಗೆ ಕಾಣದ ಮಾಯಕವಾಗುತ್ತದೆ. ಹೀಗೆ ನಮ್ಮ ಕಣ್ಣಿನ ಗ್ರಹಣ ಶಕ್ತಿಯಲ್ಲಿ ಅಲ್ಪ ವ್ಯತ್ಯಾಸವಾಗಿಬಿಟ್ಟರೆ ಇಂದಿನ ದೃಶ್ಯ ಪ್ರಪಂಚವೆಲ್ಲಾ ಮಾಯೆಯಾಗಿ ಬೇರೊಂದು ಜಗತ್ತೇ ಗೋಚರವಾಗಬಹುದು.

ಮಾನವನ ಎಲ್ಲಾ ಜ್ಞಾನೇಂದ್ರಿಯಗಳೂ ಹೀಗೆ ಪರಿಮಿತ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತವಾಗಿದ್ದು ಜಗತ್ತಿನ ವಸ್ತು ವಿಚಾರಗಳ ಬಗ್ಗೆ ಏನೋ ಒಂದು ವಿಧದ ಅನುಭವವನ್ನು ಒದಗಿಸುತ್ತವೆ. ಅವುಗಳ ಹೇಳಿಕೆಯ ಮೇರೆಗೆ ಈ ವಿಶ್ವದ ಬಗ್ಗೆ ಏನೇನೋ ಕಲ್ಪನೆಗಳನ್ನು ಕಟ್ಟಿಕೊಂಡಿದ್ದೇವೆ. ಪಂಚೇಂದ್ರಿಯಗಳೆಂಬ ಈ ಐವರು ಕುರುಡರು ವಿಶ್ವವೆಂಬ ಈ ಆನೆಯನ್ನು ಪಾರ್ಶ್ವಮಾತ್ರ ಸ್ಪರ್ಶಿಸಿ ತಾನು ತಾನು ಸರಿಯೆನ್ನುತ್ತಾರೆ. ಎಲ್ಲರೂ ಸರಿ—ಎಲ್ಲರೂ ತಪ್ಪು.

ಇವು ಮೂರು ಮಿತವಾಗಿದ್ದಾಗ ಹಿತ, ಮಿತಿ ಮೀರಿದಾಗ ಅಹಿತವಾಗಿವೆ— ಮದ್ಯ, ಉಪ್ಪು ಮತ್ತು ಅನುಮಾನ.

—ತಾಲ್ಮುದ್


ಹೂವಿನಂತೆ . . .
ನಿಮ್ಮ ಸೌಂದರ್ಯ ರೆಕ್ಸೋನದ
ಉಪಯೋಗದಿಂದ
ಅರಳುತ್ತದೆ
Rexona
BLENDED WITH CADYL
ರೆಕ್ಸೋನ ಸೋಪಿನಲ್ಲಿರುವ ಕ್ಯಾಡಿಲ್ — ಎಣ್ಣೆಗಳ ಒಂದು ವಿಶಿಷ್ಟ ಮಿಶ್ರಣ — ಚರ್ಮಕ್ಕೆ ಪೋಷಣೆಯನ್ನು ಕೊಟ್ಟು ನಿಮ್ಮ ಸ್ವಾಭಾವಿಕ ಸೌಂದರ್ಯವನ್ನು ಹೊರಗೆಡಹುವುದಕ್ಕೆ ಸಹಾಯಮಾಡುತ್ತದೆ.
ಕ್ಯಾಡಿಲ್ ಇರುವ ಒಂದೇ ಟಾಯಿಲೆಟ್ ಸೋಪು
RP. 152-50 KN
ಹಿಂದೂಸ್ಥಾನ್ ಲೀವರ್ ಲಿಮಿಟೆಡ್ ಅವರಿಂದ ರೆಕ್ಸೋನ ಪ್ರೊಪ್ರೈಟರಿ ಲಿಮಿಟೆಡ್ ಅವರಿಗಾಗಿ ಭಾರತದಲ್ಲಿ ತಯಾರಿಸಲ್ಪಟ್ಟಿದೆ

ಎಲ್ಲಕ್ಕೂ ಮಿಗಿಲಾದ ಅಸ್ತ್ರ

ಮೂಲ ಕಥೆ:
ಶ್ರೀ ದಾ. ವೀಳಿನಾಥನ್

ಅನುವಾದ:
"ರಾವೆಂತೀ"

ಆ ದಿನ ನಿಲ್ದಾಣದಲ್ಲಿ ಜನದಟ್ಟಣೆ ವಿಪರೀತವಾಗಿತ್ತು. ತಮ್ಮತಮ್ಮ ಸ್ಥಾನದ ಭದ್ರತೆಗಾಗಿ ಜನರು ಒಂದೇ ಸವನೆ ಅತ್ತಿಂದಿತ್ತ ಓಡಾಡುತ್ತಿದ್ದರು. ಈ ಗದ್ದಲದಲ್ಲಿ ತನ್ನ ಸ್ಥಾನದ ಭದ್ರತೆಯ ಯೋಚನೆಯೇ ಇಲ್ಲದೆ ರಮೇಶ ಸಾವಧಾನವಾಗಿ ಸಾಗಿದ್ದ. ಎರಡನೆಯ ವರ್ಗದ ಟಿಕೇಟನ್ನು ಕೊಂಡುಕೊಂಡಿದ್ದರಿಂದ ಅವನು ನಿರಾಯಾಸವಾಗಿ ಗಾಡಿಯನ್ನು ಪ್ರವೇಶಿಸಿ ಪತ್ರಿಕೆ ಓದತೊಡಗಿದ.

ಸ್ವಲ್ಪ ಹೊತ್ತಿನಲ್ಲಿಯೇ ಮೊದಲಗಂಟೆ ಹೊಡೆಯಿತು. ಅಷ್ಟರಲ್ಲಿ ವೃದ್ಧಮಹಾಶಯರೊಬ್ಬರು ಕಾಲೆಳೆಯುತ್ತಾ ಬಂದು ರಮೇಶ ಕುಳಿತಿದ್ದ ಡಬ್ಬಿಯನ್ನೇ ಹತ್ತಿದರು ಮತ್ತು ತಮ್ಮ ಹಿಂದೆಯೆ ಸಾಮಾನುಗಳನ್ನು ಹೊತ್ತು ತಂದ ಕೂಲಿಯವನಿಗೆ ಮಜೂರಿಯನ್ನು ಕೊಟ್ಟು ಕಳಿಸಿದರು.

ಡಬ್ಬಿಯಲ್ಲಿ ತಮ್ಮ ಸಾಮಾನು ಸರಂಜಾಮುಗಳನ್ನು ವ್ಯವಸ್ಥಿತ ರೀತಿಯಲ್ಲಿಟ್ಟು ವೃದ್ಧಮಹಾಶಯರು ತಲೆಎತ್ತಿದಾಗ ಪತ್ರಿಕೆ ಓದುವುದರಲ್ಲಿ ಮಗ್ನನಾಗಿದ್ದ ರಮೇಶನನ್ನು ಕಂಡರು. ಅಲ್ಲದೆ ರಮೇಶ ತಮಗೆ ಸಹಪ್ರಯಾಣಿಕನಾಗಿ ಎಲ್ಲಿಯವರೆಗೆ ಉಳಿಯುವನೆಂದು ತಿಳಿಯಲು ಇಚ್ಛಿಸಿದರು.

ರಮೇಶ ಉತ್ತರಿಸಿದ: "ನಾನು ನಾಗಪುರದವರೆಗೆ ಉಳಿಯುತ್ತೇನೆ."

"ಹೋ, ಒಳ್ಳೆಯದೇ ಆಯಿತು. ನಾನೂ ನಾಗಪುರಕ್ಕೆ ಹೊರಟಿದ್ದೇನೆ.''

"ಹಾಗಾದರೆ ನೀವು ನಾಗಪುರನಿವಾಸಿಗಳೇ?"

"ಹೌದು."

"ಏನಾದರೂ ಕೆಲಸದ ನಿಮಿತ್ತ ಇಲ್ಲಿಗೆ ಬಂದಿದ್ದೀರೇನು?"



"ಅಲ್ಲ, ನಾನು ಅಮೇರಿಕದಿಂದ ಬರುತ್ತಿದ್ದೇನೆ. ನಾಗಪುರ ನನ್ನ ಜನ್ಮಸ್ಥಳ. ರಜಾ ಪಡೆದು ಊರಿಗೆ ಬಂದಿದ್ದೇನೆ."

"ತಾವು ಅಮೇರಿಕದಲ್ಲಿ ಏನು ಮಾಡುತ್ತಿ

ದ್ದೀರಿ?"

"ನಾನು ಒಬ್ಬ ವಿಜ್ಞಾನಿ. ಅಲ್ಲಿಯ ಪ್ರಯೋಗ ಶಾಲೆಯೊಂದರಲ್ಲಿ ಕೆಲಸದ ಮೇಲೆ ನೆಲಸಿದ್ದೇನೆ. ಈಗ ರಜಾ ಪಡೆದು ಸ್ವದೇಶಕ್ಕೆ ಮರಳಿದ್ದೇನೆ"

"ಎಷ್ಟು ದಿನಗಳ ರಜೆ ಪಡೆದಿರುವಿರಿ?'' ರಮೇಶ ಕೇಳಿದ.

''ರಜಾ ಏನೋ ಆರು ತಿಂಗಳಿಗ ದೊರೆತಿದೆ ಆದರೆ ಒಂದು ಶರತ್ತಿನ ಮೇಲೆ. ಅಲ್ಲಿಂದ ಕರೆಬಂದ ಕ್ಷಣದಲ್ಲೇ ಹೊರಡಬೇಕು. ಅಷ್ಟೇ.''

ಇಬ್ಬರಲ್ಲೂ ಮೈತ್ರಿ ಬೆಳೆಯಿತು. ರೈಲು ತನ್ನ ವೇಗದಲ್ಲಿ ಮುಂದುವರೆದಿತ್ತು. ವೃದ್ಧಮಹಾಶಯರು ತಮ್ಮ ಪೆಟ್ಟಿಗೆಯಿಂದ ಯಾವುದೋ ವಸ್ತುವೊಂದನ್ನು ತೆಗೆಯಲು ತೆರೆದರು. ಅದರಲ್ಲಿ ಮೂರನೆ ವರ್ಗದ ಪ್ರಯಾಣಿಕರಂತೆ ಸಾಮಾನು ತುರುಕಿದ್ದು ಕಂಡುಬಂತು. ತಮ್ಮ ಅವಶ್ಯಕತೆಯ ವಸ್ತುವನ್ನು ತೆಗೆದಾದ ಬಳಿಕ ಪೆಟ್ಟಿಗೆಯನ್ನು ಮುಚ್ಚಲು ಪ್ರಯತ್ನಿಸಿದರು. ವ್ಯವಸ್ಥಿತ ರೀತಿಯಲ್ಲಿ ಸಾಮಾನು ಜೋಡಿಸಿರಲಿಲ್ಲವಾದ್ದರಿಂದ ಪೆಟ್ಟಿಗೆ ಮುಚ್ಚುವುದಾಗಲಿಲ್ಲ. ಅಲ್ಲದೆ ಅದರಲ್ಲಿದ್ದ ರಟ್ಟಿನ ಪೆಟ್ಟಿಗೆ ಒಂದು ಅವರಿಗೆ ತೊಂದರೆ ಕೊಡುತ್ತಿತ್ತು ಅದನ್ನು ಹೊರಗೆ ತೆಗೆದಿಟ್ಟು ಪೆಟ್ಟಿಗೆಯನ್ನು ಮುಚ್ಚಿದರು.

ಇದೇ ಸಮಯದಲ್ಲಿ ತನ್ನ ಪೆಟ್ಟಿಗೆಯಲ್ಲಿದ್ದ ಕರವಸ್ತ್ರವನ್ನು ತೆಗೆಯಲು ರಮೇಶ ಅದನ್ನು ತೆರೆದ. ಅದು ವ್ಯವಸ್ಥಿತ ರೀತಿಯಲ್ಲಿ ಸ್ವಲ್ಪವೇ ಸಾಮಾನುಗಳನ್ನು ಹೊಂದಿದ್ದರಿಂದ ಆ ವೃದ್ಧ ಮಹಾಶಯರು ಕೇಳಿದರು:

"ಏನು ಸ್ವಾಮೀ, ನಿಮ್ಮ ಪೆಟ್ಟಿಗೆಯಲ್ಲಿ ನನ್ನ ಈ ರಟ್ಟಿನ ಪೆಟ್ಟಿಗೆಗೆ ಸ್ವಲ್ಪ ಸ್ಥಳ ಕೊಡುವಿರಾ? ಹೊರಡುವಾಗ ತೆಗೆದುಕೊಳ್ಳುತ್ತೇನೆ."

ರಮೇಶ ಅದನ್ನು ಇಸಕೊಂಡು ತನ್ನ ಪೆಟ್ಟಿಗೆಯಲ್ಲಿ ಇರಿಸಿದ.

ಸ್ವಲ್ಪ ಹೊತ್ತಿನನಂತರ ಲೋಕಾಭಿರಾಮವಾಗಿ ಮಾತನಾಡುತ್ತಾ ರಮೇಶ ಕೇಳಿದ,

"ನಿಮ್ಮ ಆ ರಟ್ಟಿನ ಪೆಟ್ಟಿಗೆಯಲ್ಲೇನಿದೆ?"

ವಿಜ್ಞಾನಿ ಉತ್ತರಿಸಿದ: "ಅದರಲ್ಲಿ ಭಾರೀ ಆಧುನಿಕ ಅಸ್ತ್ರ ಒಂದಿದೆ. ಅದರ ರಹಸ್ಯ ಮಾತ್ರ ಹೇಳಲಾರೆ."

ಯಾವುದನ್ನು ಕುರಿತು ಕೇಳಬಾರದೆನ್ನುವರೋ ಆ ಕುರಿತು ಕುತೂಹಲ ಕೆರಳುವುದು ಸಹಜ ತಾನೇ. ರಮೇಶ ಆಶ್ಚರ್ಯದಿಂದ "ಹೌದೇ?" ಎಂದ.

"ಹೌದು, ಆ ಅಸ್ತ್ರದಿಂದ ಭಾರೀ ಭಾರೀ ಯುದ್ಧಗಳನ್ನೇ ನಿಲ್ಲಿಸಬಹುದು. ಅಣುಬಾಂಬು ಮುಂತಾದ ಮಾರಕಾಸ್ತ್ರಗಳು ಈ ಅಸ್ತ್ರದ ಮುಂದೆ ನಿಲ್ಲಲಾರವು."

ವೃದ್ಧ ವಿಜ್ಞಾನಿಯ ಮಾತು ಕೇಳಿ ರಮೇಶ ಕಕ್ಕಾವಿಕ್ಕಿಯಾದನು. ಈ ಅಸ್ತ್ರದಿಂದ ಏನಾದರೂ ಅನಾಹುತ ಆದಲ್ಲಿ...ಎಂದು ಯೋಚನೆ ಕೂಡ ಬಂತು. ಒಟ್ಟಿನಲ್ಲಿ ಈ ಘಟನೆ ರಮೇಶನಿಗೆ ನುಂಗಲಾರದ ತುತ್ತಾಗಿತ್ತು.

ರೈಲು ನಾಗಪುರ ತಲುಪಿತು. ಪರಸ್ಪರರು ಬೀಳ್ಕೊಂಡದ್ದೂ ಆಯಿತು. ಆದರೆ ರಟ್ಟಿನ ಪೆಟ್ಟಿಗೆ ಕೊಡುವ ನೆನಪು ರಮೇಶನಿಗಾಗಲೀ, ಇಸಕೊಳ್ಳುವ ನೆನಪು ವಿಜ್ಞಾನಿಗಾಗಲೀ ಉಳಿದಿರಲಿಲ್ಲ.

ರಮೇಶ ಮನೆಗೆ ತಲುಪಿದ ಬಳಿಕ, ಸ್ನಾನಾದಿಗಳನ್ನು ಮುಗಿಸಿ, ಕೋಣೆಯಲ್ಲಿ ಪ್ರವೇಶಿಸಿದಾಗ ಅವನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಮನೆಯ ಹುಡುಗರು ಮಕ್ಕಳೆಲ್ಲಾ ಸೇರಿ ಆ ರಟ್ಟಿನ ಪೆಟ್ಟಿಗೆಯನ್ನು ಬಿಚ್ಚುತ್ತಿದ್ದರು. ವಿಜ್ಞಾನಿಯ ಈ ಹೊಸ ಅಸ್ತ್ರ ಎಲ್ಲಾದರೂ ಸ್ಫೋಟಗೊಂಡಿದ್ದೇ ಆದರೆ ಪ್ರಳಯ ನಿಶ್ಚಿತ ಎಂದು ರಮೇಶ ಭಾವಿಸಿದ ಹುಡುಗರ ಕೈಯಿಂದ ಪೆಟ್ಟಿಗೆ ಕಸಿದು ನೋಡಿದ. ನೋಡುವುದೇನು? ಅದರಲ್ಲಿ ದಂತದಿಂದ ಕೆತ್ತಲ್ಪಟ್ಟ ಬೊಚ್ಚು ಬಾಯಾದರೂ ತಿಳಿನಗೆಯನ್ನು ಸೂಸುತ್ತಿರುವ, ಅಹಿಂಸಾಮೂರ್ತಿ ಬಾಪೂಜಿಯ ಸುಂದರ ವಿಗ್ರಹ ಒಂದು ಕುಳಿತಿತ್ತು.

ಭಾರತದ ಸಮಸ್ಯಾಜನಾಂಗವೊಂದರ ಪರಿಚಯ



ನಾಗಾ ನಾಡು ಮತ್ತು ನಾಗಾ ಜನ

ಅಸಾಮು ಮತ್ತು ಬ್ರಹ್ಮದೇಶಗಳ ನಡುವಿನ ಪ್ರದೇಶವನ್ನೇ ನಾಗಾ ಪ್ರದೇಶವೆಂದು ಕರೆಯುತ್ತಾರೆ. ಇದು ನದಿ ಮತ್ತು ಅರಣ್ಯಗಳಿಂದ ತುಂಬಿದ ಪ್ರದೇಶ.

ನಾಗಾಜನರು ಎಂದು ಸಾಮಾನ್ಯವಾಗಿ ನಿರ್ದೇಶಿಸಲ್ಪಡುವ ಈ ಜನರೆಲ್ಲ ಒಂದೇ ಜಾತಿಯವರಲ್ಲ. ಪರಸ್ಪರ ರೀತಿ-ನೀತಿ, ಸಂಸ್ಕೃತಿ ಭಾಷೆಗಳಲ್ಲಿ ಬಹಳಷ್ಟು ಭೇದವಿರುವ ಅನೇಕ ಜಾತಿಗಳ ಸಮುದಾಯವೊಂದು ಅನೇಕ ಶತಮಾನಗಳಿಂದ ಈ ರಹಸ್ಯಮಯ ಪ್ರಾಂತದಲ್ಲಿ ವಾಸಿಸುತ್ತ ಬಂದಿದೆ. ಇವರ ರೂಪರೇಖೆಗಳಿಂದ ಇವರು ಮಂಗೋಲ ಕುಲದವರು ಎಂದು ಸ್ಪಷ್ಟವಾಗುತ್ತದೆ. ಇವರ ಭಾಷೆ ತೀಬೇಟಿ ಮತ್ತು ಬ್ರಹ್ಮೀ ಭಾಷೆಗಳ ಸಂಕರ. ಆದರೂ ಈ ಜನರ ಬೇರೆ-ಬೇರೆ ಜಾತಿಗಳ ಭಾಷೆಗಳಲ್ಲಿ ಎಷ್ಟು ಭೇದವಿದೆಯೆಂದರೆ ಒಂದು ಜಾತಿಯ ನಾಗಾ ಇನ್ನೊಬ್ಬನನ್ನು ಭೆಟ್ಟಿಯಾದಾಗ ಸಂಭಾಷಣೆಗಾಗಿ ಹಿಂದೀ ಅಥವಾ ಆಸಾಮಿ ಭಾಷೆಗೆ ಶರಣು ಹೋಗುತ್ತಾನೆ.

ನಾಗಾ ಜನರ ಈ ಪ್ರದೇಶದಲ್ಲಿ ೩೨ ವರ್ಷಗಳಿಂದ ವಾಸವಾಗಿರುವ ಮೇಜರ ಬಲಬಹಾದೂರ ಗೋರಂಗರು ಹೇಳುತ್ತಾರೆ: " ಈ ಜಾತಿಗಳ ಜನರು ಪರಸ್ಪರ ಸದಾ ಕಾದಾಡುತ್ತಿರುತ್ತಾರೆ. ಇಷ್ಟೇ ಅಲ್ಲ, ಎಷ್ಟೋ ಸಲ ಒಂದೂರಿನ ಜನರು ತಮ್ಮದೇ ಜಾತಿಯ ಇನ್ನೊಂದೂರಿನ ಜನರ ಸಂಗಡ ಕಾದಾಡುತ್ತಾರೆ. ವೈರ ಭಾವನೆ ವಂಶಪರಂಪರಾಗತವಾಗಿ ನಡೆದುಬರುತ್ತದೆ.

" ತಾವು ಹುಟ್ಟಿದ ಊರನ್ನು ಬಿಟ್ಟು ಎರಡನೆಯ ಊರನ್ನೇ ನೋಡದ ಜನರೂ ಇವರಲ್ಲಿರುತ್ತಾರೆ. ಇವರ ಊರಿನ ಗಡಿ ನಿಶ್ಚಯಿಸಲ್ಪಟ್ಟಿರುತ್ತದೆ. ಒಂದು ಊರಿನ ತರುಣರು ಎರಡನೆಯವರ ಮೇಲೆ ಸೇಡು ತೀರಿಸಿಕೊಳ್ಳಲು ಅಥವಾ ಅವರನ್ನು ಗೆಲ್ಲಲು ಮತ್ತೊಂದು ಊರಿನ ಮೇಲೆ ದಾಳಿ ಮಾಡುವದು ಆಗಾಗ ನಡೆಯುವ ಘಟನೆ. ಹೀಗೆ ಮತ್ತೊಬ್ಬರನ್ನು ಸೋಲಿಸುವದರಿಂದ ಸಮಾಜದಲ್ಲಿ ಅವರ ಗೌರವ ಪ್ರತಿಷ್ಠೆ ಬೆಳೆಯುತ್ತದೆ. ಮತ್ತೆ ಹೀಗೆ ವಿಜಯಿಗಳಾದವರಿಗೇ ವಿಶಿಷ್ಟ ಬಗೆಯಿಂದ ಅಲಂಕರಿಸಿಕೊಳ್ಳುವ ಅಧಿಕಾರ ಪ್ರಾಪ್ತವಾಗುತ್ತದೆ. ಸೇಮಾ ಮತ್ತು ಕೋನಯಾ ಜಾತಿಯ ನಾಗಾಜನರು ಇಂದಿಗೂ 'ರುಂಡಬೇಟೆ' ಯಾಡುವವರಾಗಿದ್ದಾರೆ. "

ಅಂಗಾಮಿ, ಆವ, ಕುಬಯಿ, ಕಚಾ, ಲೋಟಾ, ಲೇಂಗಮಿ, ರೇಂಗಮಾ, ಸೇಮಾ, ಕೋನಯಾ, ತಂಗಖುಲ, ಜೇಮಿ ಮುಂತಾದ ಅನೇಕ ಜಾತಿ

ಅರ್. ಪಿ. ನಾರಾಯಣ ಸಿಂಹರ ಲೇಖದ ಆಧಾರದಿಂದ

ಗಳು ನಾಗಾ ಜನರಲ್ಲಿವೆ. ಇವರಲ್ಲಿ ಅಂಗಾಮಿ ನಾಗಾರೇ ಸಂಖ್ಯೆಯಲ್ಲಿ ಹೆಚ್ಚಿಗೆ. ಇವರೇ ಎಲ್ಲರಿಗಿಂತಲೂ ಕ್ರೂರ ಸ್ವಭಾವದವರೂ ಆಗಿದ್ದಾರೆ. ಕೋಹಿಮಾದ ಸುತ್ತಮುತ್ತಲೆಲ್ಲ ಇವರು ಹಬ್ಬಿದ್ದಾರೆ. ನಾಗಾ ಜನರಲ್ಲೆಲ್ಲ ಇವರು ಅತಿ ಯುದ್ಧಪ್ರಿಯರು. ಕ್ರಿಶ್ಚನ್ ಪಾದ್ರಿಗಳ ಪ್ರಭಾವದಿಂದ ಇವರಲ್ಲಿ ಶಿಕ್ಷಣ ಪ್ರಸಾರವೂ ಅಧಿಕವಾಗಿದೆ. ಇಂದಿನ ಬಂಡುಗಾರ ನಾಗಾ ಜನರ ಪ್ರಮುಖ ಫಿಜೋ ಅಂಗಾಮಿ ಜಾತಿಯವನೇ.

೧೯೪೭ರಲ್ಲಿ ಅಂಗಾಮಿ ನಾಗಾ ಜನರು ಒಂದು ನಾಗಾ ರಾಷ್ಟ್ರೀಯ ಸಭೆಯನ್ನು ಸ್ಥಾಪಿಸಿಕೊಂಡು "ನಾವು ಭಾರತೀಯರಲ್ಲ. ನಮಗೆ ಬೇರೆ ಸರಕಾರ ಇರಬೇಕು" ಎಂದು ಕೂಗೆಬ್ಬಿಸಿದರು. ಈ ಸಭೆಯು ಬ್ರಿಟಿಶ ಸರಕಾರ ಮತ್ತು ಭಾರತ ಸರಕಾರಗಳಿಗೆ ಒಂದು ಪತ್ರ ಕಳಿಸಿತು. "ಆಸಾಮುದಲ್ಲಿ ಏಳು ನೂರು ವರ್ಷಗಳ ವರೆಗೆ ರಾಜ್ಯವನ್ನಾಳಿದ ಆಹೋಮ ರಾಜರಿಗೆ ನಾಗಾ ಪ್ರದೇಶವು ಎಂದಿಗೂ ಅಧೀನವಾಗಿದ್ದಿಲ್ಲ. ೧೮೮೬ರಲ್ಲಿ ಮಾತ್ರ, ೫೦ ವರ್ಷಗಳ ಯುದ್ಧದ ನಂತರ, ಆವಾ ನಾಗಾ ಜನರ ಪ್ರದೇಶ ಬ್ರಿಟಿಶರ ವಶಕ್ಕೆ ಬಂದಿತು. ಜಾತಿ, ಸಂಸ್ಕೃತಿಗಳ ದೃಷ್ಟಿಯಿಂದ ನಾಗಾ ಜನರಿಗೂ ಭಾರತೀಯರಿಗೂ ಯಾವ ಸಾದೃಶ್ಯವೂ ಇಲ್ಲ. ಆದ್ದರಿಂದ ಬ್ರಿಟಿಶರು ಭಾರತವನ್ನು ಬಿಟ್ಟು ಹೋಗುವ ಮೊದಲು ನಾಗಾ ಜನರ ಒಂದು ಸರಕಾರವನ್ನು ರಚಿಸಿ ಹತ್ತು ವರ್ಷಗಳ ವರೆಗೆ ಅದರ ವೆಚ್ಚದ ವ್ಯವಸ್ಥೆ ಮಾಡಿಟ್ಟು ಹೋಗಬೇಕು. ಹತ್ತು ವರ್ಷಗಳ ನಂತರ ನಾಗಾ ಜನರಿಗೆ ತಮ್ಮ ಇಷ್ಟದಂತೆ ಸರಕಾರ ರಚಿಸಿಕೊಳ್ಳುವ ಅಧಿಕಾರ ಇರಬೇಕು" ಎಂದು ಆ ಪತ್ರದಲ್ಲಿ ಬರೆದಿತ್ತು.

ಆದರೆ ಬ್ರಿಟಿಶರು ಅವರ ಈ ಬೇಡಿಕೆಯನ್ನು ಮನ್ನಿಸದೆ ಹಾಗೆಯೆ ಹೊರಟುಹೋದರು. ನಾಗಾ ಪ್ರದೇಶದ ಭಾವೀ ಆಡಳಿತದೇರ್ಪಾಡನ್ನು ಮಾಡುವ ಹೊಣೆ ನೆಹರೂ ಸರಕಾರದ ಮೇಲೆ ಬಿತ್ತು. ಘಟನಾಸಮಿತಿಯು ಆಸಾಮುದ ಹಿಂದಿನ ಮುಖ್ಯ ಮಂತ್ರಿ ಬಾರದೋಲಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ ನಾಗಾ ಪ್ರದೇಶದ ಆಡಳಿತದ ಬಗ್ಗೆ ಸಲಹೆ ಸೂಚನೆಗಳನ್ನು ಕೊಡಲು ಕೇಳಿಕೊಂಡಿತು. ಸಮಿತಿಯು ನಾಗಾ ಪ್ರದೇಶದಲ್ಲಿ ಸಂಚರಿಸಿದಾಗ ಮೊದಲಿಗೆ ಅದರೊಡನೆ ಸಹಕರಿಸಲು ನಾಗಾ ಜನರು ಸಂಪೂರ್ಣವಾಗಿ ನಿರಾಕರಿಸಿದರು. ಆದರೆ ನಂತರ ಅವರಲ್ಲಿ ಕೆಲವರ ಸಹಕಾರ ದೊರೆಯಿತು. ಆಗಲೂ ಸಾಕಷ್ಟು ಸಹಕಾರ ದೊರೆಯಲಿಲ್ಲ. ನಾಗಾ ಜನರು ಪ್ರತ್ಯೇಕ ಪ್ರತ್ಯೇಕವಾಗಿದ್ದುದು, ಬೇರೆ ಬೇರೆ ಜಾತಿಯವರಾಗಿದ್ದುದು, ಎಲ್ಲ ನಾಗಾ ಜನರ ಪ್ರತಿನಿಧಿಯಾಗಬಲ್ಲ ಒಂದೂ ಸಂಸ್ಥೆಯಿಲ್ಲದಿರುವದು ಸಮಿತಿಯ ಕಾರ್ಯಕ್ಕೆ ದೊಡ್ಡ ವಿಘ್ನವಾಗಿತ್ತು. ನಾಗಾ ಜನರ ಪ್ರತಿಯೊಂದ. ಜಾತಿಗೂ ಪ್ರತ್ಯೇಕವಾದೊಂದು ಸಭೆ ಇತ್ತು. ಆದರೂ ಸಮಿತಿ ಎಲ್ಲವನ್ನೂ ವಿಚಾರಿಸಿ ಒಂದು ವರದಿಯನ್ನು ಒಪ್ಪಿಸಿತು. ಅದರ ಆಧಾರದಿಂದ ಘಟನಾ ಸಮಿತಿ ಕೈಕೊಂಡ ನಿರ್ಣಯವು ಭಾರತ ಸಂವಿಧಾನದ ಆರನೆಯ ಪರಿಶಿಷ್ಟದಲ್ಲಿ ಅಡಕವಾಗಿದೆ. ಅದರನ್ವಯ ನಾಗಾ ಜನರ ಈ ಗುಡ್ಡಗಾಡು ಪ್ರದೇಶವು ಸ್ವಾಯತ್ತವೆಂದು ಮನ್ನಿಸಲ್ಪಟ್ಟಿತು. ನಾಗಾ ಜನರು ಅಪೇಕ್ಷಿಸಿದಲ್ಲಿ ಅವರ ಒಂದು ಜಿಲ್ಲಾ ಕೌನ್ಸಿಲ್ ರಚಿಸಬಹುದು ; ಅದು ಜಿಲ್ಲೆಯ ಆಡಳಿತದ ಏರ್ಪಾಡು ಮಾಡಬಹುದು ; ಭೂಮಿ, ಒಕ್ಕಲತನ, ಅರಣ್ಯ, ಊರು, ಸಾಮಾಜಿಕ ರೂಢಿ, ವಿವಾಹ, ಉತ್ತರಾಧಿಕಾರ ಮೊದಲಾದವುಗಳ ಸಂಬಂಧದಲ್ಲಿ ಕಾಯದೆಗಳನ್ನು ಮಾಡಬಹುದು; ಶಾಲೆ, ಆಸ್ಪತ್ರೆ, ಮುಂತಾದವುಗಳ ಯೋಗಕ್ಷೇಮಕ್ಕಾಗಿ, ಪೇಟೆಗೆ ಬರುವ ವಸ್ತುಗಳ ಮೇಲೆ ಕರ ಹೇರಬಹುದು. ಅದೂ ಅಲ್ಲದೆ ನಾಗಾ ಕುಲದವರಲ್ಲದ ವ್ಯಾಪಾರಿಗಳು, ಸಾಹುಕಾರರು ಮೊದಲಾದವರ ಮೇಲೆ ಅವಶ್ಯಕ ನಿಯಂತ್ರಣವಿಟ್ಟು, ನಾಗಾ ಜನರನ್ನು ಅವರ ಶೋಷಣೆಯಿಂದ ಉಳಿಸಬಹುದು. ನಾಗಾ ಪ್ರದೇಶದಿಂದ ಹೊರಗಿರುವ ನಾಗಾ ವಸತಿಗಳಲ್ಲಿ ಕೂಡ ರಾಷ್ಟ್ರಪತಿಗಳ ಅನುಮತಿಯಿಂದ ಈ ಅಧಿಕಾರಗಳನ್ನು ವಿಸ್ತರಿಸುವ ಅಧಿಕಾರ ನಾಗಾ ಪ್ರದೇಶದ ಗವರ್ನರರಿಗಿರುವದು ಎಂದು ಸಂವಿಧಾನದ ನಿರ್ಣಯದಲ್ಲಿ ಹೇಳಲಾಗಿತ್ತು.

ಆದರೆ ಫಿಜೋನ ಪ್ರಭಾವಕ್ಕೊಳಗಾದ ನಾಗಾ ಜನರಿಗೆ ಇದರಿಂದ ಸಮಾಧಾನವಾಗಲಿಲ್ಲ. ಜಿಲ್ಹಾ ಕೌನ್ಸಿಲಿನ ಮಾತು ಕಾಗದದಲ್ಲಿಯೇ ಉಳಿಯಿತು. ನಾಗಾ ಪ್ರದೇಶದಲ್ಲಿ ಅಶಾಂತಿಯ ತೆರೆಗಳು ಏಳುತ್ತಲೇ ಉಳಿದವು. ಆಗಾಗ ನಮ್ಮ ಸೈನ್ಯದಲದ ಅನೇಕ ಅಧಿಕಾರಿಗಳು ಮತ್ತು ಸೈನಿಕರು ನಾಗಾ ಜನರ ಹಲ್ಲೆಗಳಿಂದ ಪ್ರಾಣಕ್ಕೆರವಾಗಬೇಕಾಯಿತು. ಆದರೂ ಸರಕಾರವು ಬಹು ಸಂಯಮದಿಂದ ವರ್ತಿಸಿತು. ನಿರ್ದೋಷ ನಾಗಾ ಜನರ ಮೇಲೆ ಎಂದೂ ಗೋಳೀಬಾರು ಮಾಡಲಿಲ್ಲ. ಅದರಿಂದಲೇ ನಾಗಾ ಪ್ರದೇಶದಲ್ಲಿಯ ವಿಚಾರವಂತರು ಇಂದು ಭಾರತ ಸರಕಾರದ ಬೆಂಬಲಕ್ಕೆ ನಿಂತಿದ್ದಾರೆ.

ಫಿಜೋನ ರಾಜಕೀಯ ಪಿಪಾಸೆ ಇನ್ನೂ ತಣಿದಿಲ್ಲ. ನಾಗಾಪ್ರದೇಶದ ರಾಜನಾಗುವ ಕನಸನ್ನು ಅವನು ಕಾಣುತ್ತಿದ್ದಾನೆ ಆದರೆ ಅವನ ಸಹಕಾರಿಗಳಲ್ಲಿ ಹೆಚ್ಚಿನವರು ಇಂದು ಶಸ್ತ್ರತ್ಯಾಗ ಮಾಡಿದ್ದಾರೆ. ಅವರೆಲ್ಲ ವಿದ್ಯಾವಂತರು.

ಕಳೆದ ಮಹಾಯುದ್ಧ ಮುಗಿದ ನಂತರ ಅಮೇರಿಕನ್ ಸೈನ್ಯವು ನಾಗಾಪ್ರದೇಶ ಮತ್ತು ಕೊಹಿಮಾ ಮೊದಲಾದೆಡೆಗಳಿಂದ ಹೊರಟು ಹೋಗತೊಡಗಿದ ಬಳಿಕ ಅನೇಕ ಶಸ್ತ್ರಾಸ್ತ್ರಗಳನ್ನು ನಾಗಾ ಜನರಿಗೆ ಕೊಟ್ಟುಹೋಯಿತು. ಅಂದಿನಿಂದ ನಾಗಾ ಜನರು ಭಾರತ ಸರಕಾರದೊಂದಿಗೆ ಕೂಟಯುದ್ಧವನ್ನು ನಡೆಸುತ್ತ ಬಂದಿದ್ದಾರೆ. ಅವರನ್ನು ಪ್ರೋತ್ಸಾಹಿಸಿ ಬೆಂಬಲವೀಯುವ ಕೆಲ ವಿದೇಶೀ ಕ್ರಿಶ್ಚನ್ ಪಾದ್ರಿಗಳಿದ್ದಾರೆ. ಅಲ್ಲಿ ಅನೇಕ ವರ್ಷಗಳಿಂದ ಕ್ರಿಶ್ಚನ್ ಧರ್ಮದ ಪ್ರಸಾರ ಮಾಡುತ್ತ ಬಂದ ಇವರು ಅನೇಕಾನೇಕ ಶಾಲೆ ಆಸ್ಪತ್ರೆಗಳನ್ನು ತೆರೆದಿದ್ದಾರೆ.

ಪಾಕಿಸ್ತಾನ ಸೃಷ್ಟಿಯಾದ ಬಳಿಕ ಉಗ್ರಮತಾವಲಂಬಿ ನಾಗಾ ಜನರಿಗೆ ವಿಶೇಷ ಬಲ ಬಂದು ಅವರು ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ ಮಾಡತೊಡಗಿದರು. ಪಾಕಿಸ್ತಾನ ನಿರ್ಮಾಣ ಕಾರ್ಯದಲ್ಲಿ ಮುಸಲ್ಮಾನರಿಗೆ ಉತ್ತೇಜನವಿತ್ತ ವಿದೇಶೀಯರೇ ಇವರಿಗೂ ಉತ್ತೇಜನವೀಯತೊಡಗಿದರು. ಫಿಜೋನ ಮೇಲೆ ಇವರ ಪ್ರಭಾವವಿತ್ತು, ಇದೆ, ಎನ್ನುವದರಲ್ಲಿ ತಿಲಮಾತ್ರವೂ ಸಂದೇಹವಿಲ್ಲ. ೧೯೪೭ ಅಗಷ್ಟ ೧೪ ರಂದು "ಸ್ವಾತಂತ್ರ್ಯ"ವನ್ನು ಸಾರಿದ ಖೊನೋಮಾ ಎಂಬ ಊರು ಫಿಜೋನ ಊರೇ. ೧೯೫೫ ರಲ್ಲಿ ಹಾಂಗಕಾಂಗದಲ್ಲಿ ಸ್ಥಾಪಿತವಾದ "ನಾಗಾ ಸರಕಾರ"ಕ್ಕೂ ತನಗೂ ಯಾವ ಸಂಬಂಧವಿಲ್ಲವೆಂದು ಫಿಜೊ ಹೇಳಿದರೂ ಮುಂದೆ ನಡೆದ ಘಟನೆಗಳಿಂದ ಅವನ ಈ ಹೇಳಿಕೆ ಕೇವಲ ಗತ್ತುಗಾರಿಕೆಯೆಂದು ಸಿದ್ಧವಾಯಿತು.

ನಾಗಾ ಜನರ ಈ ಪ್ರದೇಶವು ದುರ್ಗಮ ಗುಡ್ಡ ಹಾಗು ಅರಣ್ಯಗಳ ನಾಡಾಗಿರುವದರಿಂದ ಜಗತ್ತಿನ ಇತರ ಭಾಗಗಳೊಂದಿಗೆ ಅವರ ಸಂಪರ್ಕವು ವಿಶೇಷವಾಗಿ ಆಗಿರುವದಿಲ್ಲ. ಅವರು ಇದುವರೆಗೂ ಅಜ್ಞಾನಾಂಧಕಾರದಲ್ಲಿಯೇ ಇದ್ದಾರೆ. ಅವರ ಭಾಷೆ ಕೂಡ ಇದುವರೆಗೂ ಮಾತಾಡುವ ಭಾಷೆ ಮಾತ್ರ ಆಗಿರುವದಲ್ಲದೆ ಅದಕ್ಕೆ ಲಿಪಿಯಿಲ್ಲ.

ಇಂಗ್ಲೀಷರ ಪ್ರಭುತ್ವ ಭಾರತದಲ್ಲಿ ಸ್ಥಾಪಿತವಾದ ನಂತರ ಅವರಿಗೂ ನಾಗಾ ಜನರಿಗೂ ಘರ್ಷಣೆಯಾಯಿತು. ಅವರು ನಾಗಾ ಜನರ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದರು. ಆದರೆ ನಾಗಾ ಜನರು ಸಂಪೂರ್ಣವಾಗಿ ಅವರಿಗೆಂದೂ ಅಧೀನರಾಗಲಿಲ್ಲ. ಆಗಾಗ ಅವರು ಇಂಗ್ಲೀಷರ ವಿರುದ್ಧ ಬಂಡೇಳುತ್ತಲೇ ಉಳಿದರು. ಕಾಚಾ ನಾಗಾ ಜನರ ಬಂಡಾಯದ ಕಥೆ ಉಲ್ಲೇಖನೀಯವೂ ರೋಮಾಂಚಕಾರಿಯೂ ಆಗಿದೆ.

ನಾಗಾ ಜನರಲ್ಲಿ ಬಹು ದಿನಗಳಿಂದ ಒಂದು ನಂಬಿಗೆ ಬೆಳೆದು ಬಂದಿತ್ತು. ಒಂದು ದಿನ ನಾಗಾ ಜನರ ರಾಜನೊಬ್ಬ ಹುಟ್ಟಿ, ಅವನು ಇಂಗ್ಲೀಷರನ್ನು ಹೊಡೆದೋಡಿಸಿ ಇಡೀ ನಾಗಾ ಪ್ರದೇಶವನ್ನಾಳುವನೆಂದು ಅವರು ನಂಬಿದ್ದರು. ೧೯೨೮ ರಲ್ಲಿ ಜಾದೋನಂಗ ಎಂಬ ಹೆಸರಿನ ವ್ಯಕ್ತಿಯೊಬ್ಬ ತಾನು ದೇವದೂತನೆಂದು ಸಾರಿ ಇಂಗ್ಲೀಷರನ್ನು ಹೊಡೆದೋಡಿಸುವ ವ್ಯಕ್ತಿ ಆಗಲೆ ಹುಟ್ಟಿದ್ದಾಗಿ ಘೋಷಿಸಿದನು. ಅವನು ತನ್ನದೇ ಒಂದು ಹೊಸ ಧರ್ಮವನ್ನು ಸ್ಥಾಪಿಸಿದನು ಕೂಡ. ಆ

ಹೇಳಿದ್ದ ವ್ಯಕ್ತಿ ಕಬೂಯಿ ನಾಗಾ ಜಾತಿಯ ೧೬ ವರ್ಷದ ಓರ್ವ ಬಾಲಿಕೆಯಾಗಿದ್ದಳು. ಅವಳ ಹೆಸರು ಗಾಯಿದಿಲು ಎಂದಿತ್ತು. ಅವಳನ್ನು ನಾಗಾ ಜನರು "ರಾಣಿ ಗಾಯಿದಿಲು" ಎಂದು ಸಂಬೋಧಿಸತೊಡಗಿದರು.

ರಾಣಿ ಗಾಯಿದಿಲುಳ ಹಿಂದೆ ಸಮಸ್ತ ನಾಗಾ ಕುಲವೇ ಒಟ್ಟುಗೂಡಿತು. ಅವಳ ಹೆಸರಿನ ಉಚ್ಚಾರ ಮಾತ್ರದಿಂದ ನಾಗಾ ಜನರು ಹುಚ್ಚೇಳುತ್ತಿದ್ದರು. ಅವಳು ಕೆಲ ದಿನಗಳ ವರೆಗೆ ನಾಗಾ ದೇಶದ ರಾಣಿಯಾದಳು.

ಇಂಗ್ಲೀಷರು ಗಾಬರಿಯಾಗಿ ಸೈನ್ಯ ಕಳಿಸಿದರು. ನಾಲ್ಕೂ ದಿಕ್ಕುಗಳಲ್ಲಿ-ಮಣಿಪುರ, ನಾಗಾ ಗುಡ್ಡಗಳು, ಮತ್ತು ಉತ್ತರ ಕಾಚಾರದಲ್ಲಿ ಈ ರಾಣಿಗಾಗಿ ಶೋಧ ನಡೆಯಿತು. ಒಂದೂರಿಂದ ಇನ್ನೊಂದೂರಿಗೆ ಹೋಗಲು ಜನರಿಗೆ ಪ್ರತಿಬಂಧ ಹಾಕಲಾಯಿತು. ಗಾಯಿದಿಲು ನಾಗಾ ಪ್ರದೇಶದಲ್ಲಿ ಸಂಚರಿಸುವದು ನಿಲ್ಲದಿದ್ದರೂ ಅದು ಕಠಿಣವಾಯಿತು. ಅವಳನ್ನು ದೇವಿಯೆಂದು ಭಾವಿಸುತ್ತಿದ್ದ ನಾಗಾ ಜನರು ಅವಳು ಹೋದಲ್ಲೆಲ್ಲ ಅವಳಿಗಾಗಿ ಪ್ರಾಣ ತೆರಲು ಸಿದ್ಧವಾಗುತ್ತಿದ್ದರು. ಇಂಗ್ಲೀಷರು ತೋರಿದ ಯಾವ ಪ್ರಲೋಭನಕ್ಕೂ ಅವರು ಅವಳ ಸುಳಿವನ್ನು ತಿಳಿಸಲೊಪ್ಪಲಿಲ್ಲ.

ಹಾಗಿದ್ದರೂ ಕೊನೆಗೆ ಅವಳು ಆಮಿಷದ ಬೇಟೆಯಾಗಬೇಕಾಯಿತು. ಅಂಗಾಮಿ ನಾಗಾ ಜನರ ಪ್ರದೇಶದ ಗಡಿಯಲ್ಲಿ ಅವಳಿದ್ದಳು. ಲೇಖಮಾ ವಿಶ್ರಾಂತಿಗೃಹದ ಚೌಕೀದಾರ ಕೂಕಿ ನಾಗಾನಿಗೆ ಅವಳ ಇರವಿನ ಸುದ್ದಿ ತಿಳಿಯಿತು. ಅವನು ಹಣದಾಶೆಯಿಂದ ಆ ಸುದ್ದಿಯನ್ನು ಕೋಹಿಮಾದ ಸರಕಾರಿ ಅಧಿಕಾರಿ ಮಿಲ್ಸರಿಗೆ ತಿಳಿಸಿದ. ಇಂಗ್ಲಿಷ ಸೈನಿಕರು ಕೂಡಲೆ ರಾಣಿಯಿರುವಲ್ಲಿಗೆ ಧಾವಿಸಿದರು. ರಾಣಿ ಗಾಯಿದಿಲುಳ ಅಂಗರಕ್ಷಕರು ಮದ್ಯಪಾನದಿಂದ ಎಚ್ಚರ ತಪ್ಪಿ ಬಿದ್ದಿದ್ದರಿಂದ ಇಂಗ್ಲಿಷ ಸೈನಿಕರು ಯಾವ ಆತಂಕವೂ ಇಲ್ಲದೆ ರಾಣಿಯ ಮನೆಯನ್ನು ಮುತ್ತಿ ಅವಳನ್ನು ಬಂಧಿಸಿದರು. ಮಣಿಪುರದಲ್ಲಿ ಅವಳ ಮೇಲಿನ ಖಟ್ಲೆಯ ವಿಚಾರಣೆಯಾಗಿ ಅವಳಿಗೆ ೧೪ ವರ್ಷ ಶಿಕ್ಷೆ ವಿಧಿಸಲ್ಪಟ್ಟಿತು. ಇದರ ಬಳಿಕ ಒಂದು ದಿನ ಮಧ್ಯ ರಾತ್ರಿಯಲ್ಲಿ ಕೆಲ ಜನರು ಗಾಯಿದಿಲುವನ್ನು ಹಿಡಿಸಿದ ಚೌಕಿದಾರನ ಮನೆಗೆ ಬಂದರು. ಅವನು ಕೋಹಿಮಾಕ್ಕೆ ಹೋಗಿದ್ದ. ಮನೆಯಲ್ಲಿ ಅವನ ಹೆಂಡತಿ ಮಕ್ಕಳು ಇದ್ದರು. ಬಂದ ಜನರು ಅವರನ್ನೆಲ್ಲ ಕೊಚ್ಚಿ ಹಾಕಿ ಮನೆಗೆ ಬೆಂಕಿ ಹಚ್ಚಿದರು.

ಜೇಲುವಾಸ ಮುಗಿದ ಬಳಿಕ ರಾಣಿ ಗಾಯಿದಿಲು ಹೊರಗೆ ಬಂದಳು. ಅವಳು ಈಗ ಇಂಫಾಲದ ಸಮೀಪದ ತಾಂಬೇಲೋ ಎಂಬ ಊರಿನಲ್ಲಿ ವಾಸಿಸುತ್ತಿದ್ದಾಳೆ.

ನಾಗಾ ಜನರಲ್ಲಿ ಅಂಗಾಮಿ ನಾಗಾರಂಥ ಯುದ್ಧ ಪ್ರಿಯರೂ ಕ್ರೂರರೂ ಇರುವಂತೆ ನಮ್ರ ಸ್ವಭಾವದವರೂ ವ್ಯಾಪಾರ ಉದ್ದಿಮೆಗಳಲ್ಲಿ ತೊಡಗಿದವರೂ ಇದ್ದಾರೆ. ಆದರೆ ಶತ್ರುಗಳ ಮೇಲೆ ಸೇಡು ತೀರಿಸಿಕೊಳ್ಳುವ ವಿಷಯದಲ್ಲಿ ಮಾತ್ರ ಎಲ್ಲರೂ ಒಂದೇ ಪ್ರಕೃತಿಯವರು. ಯಾವನಾದರೂ ಪರಕೀಯನು ನಾಗಾ ಕ್ಷೇತ್ರದಲ್ಲಿ ಕಾಲಿಡುವದೆಂದರೆ ಗಂಡಾಂತರಕ್ಕೆ ಆಮಂತ್ರಣವಿತ್ತಂತೆಯೇ ಸರಿ. ಸಾಮಾನ್ಯವಾಗಿ ಊರ ಹೊರಗೆ ಒಬ್ಬಿಬ್ಬರು ನಾಗಾ ಜನರು ಸಿಕ್ಕೇ ಸಿಗುತ್ತಾರೆ. ನೀವು ಅಲ್ಲಿ ಹೋದೊಡನೆ ಅವರು ವಿಶಿಷ್ಟ ರೀತಿಯಲ್ಲಿ ಧ್ವನಿ ಹೊರಡಿಸುತ್ತಾರೆ. ಆ ನಂತರ ನಿಮಗೆ ದೇವರೇ ಗತಿ. ಕ್ಷಣಗಳಲ್ಲಿ ಶಸ್ತ್ರಾಸ್ತ್ರ ಸಜ್ಜಿತ ನಾಗಾರ ತಂಡವು ಅಲ್ಲಿಗೆ ಬಂದು ನಿಮ್ಮ ಸುತ್ತಲೂ ಕವಿಯತೊಡಗುವದು. ಇದು ಅತ್ಯಂತ ಅವಲಕ್ಷಣ; ಪರಿಣಾಮ ಏನು ಬೇಕಾದರೂ ಆಗಬಹುದು.

ನಾಗಾಜನರ ವಿಧಿನಿಯಮಗಳು ಬಹು ಕಠಿಣವಾದವು. ಇವರು ದರೋಡೆಮಾಡುವರಾದರೂ ಕದಿಯುವದಿಲ್ಲ. ಕಳ್ಳತನವನ್ನು ಇವರು ಬಹು ಹೀನವೆಂದು ಬಗೆಯುತ್ತಾರೆ.

ಯಾವಳೇ ವಿವಾಹಿತ ನಾಗಾ ಸ್ತ್ರೀಯ ಮೇಲೆ ಆಗಲಿ ಕಾಮದೃಷ್ಟಿಯಿಟ್ಟವನಿಗೆ ಉಗ್ರ ದಂಡನೆ ವಿಧಿಸಲ್ಪಡುವದು. ಬಹಳ ವರ್ಷಗಳ ಕಾಲ ಕೋಹಿಮಾದ ಹತ್ತರ ಇದ್ದ ಒಂದು ಸೈನ್ಯಪಡೆಯಲ್ಲಿನ ಕೆಲವರು ಓರ್ವ ನಾಗಾ ಸ್ತ್ರೀಯನ್ನು

ಕಾಮುಕ ದೃಷ್ಟಿಯಿಂದ ನೋಡಿ ಅವಳೊಂದಿಗೆ ಅಶ್ಲೀಲ ಮಾತುಗಳನ್ನಾಡಿದ್ದರಿಂದ ನಾಗಾಜನರು ಆ ಸೈನ್ಯತಂಡಕ್ಕೆ ತಂಡವನ್ನೇ ಸವರಿಹಾಕಿದರು. ತಮ್ಮ ಸಂತಾನದ ಎದುರಿನಲ್ಲಿ ತಂದೆ—ತಾಯಿಗಳು ಒಂದೇ ಹಾಸಿಗೆಯಲ್ಲಿ ಕೂಡ ಮಲಗುವದಿಲ್ಲ.

ವಿವಾಹ ಪೂರ್ವದಲ್ಲಿ ತರುಣ-ತರುಣಿಯರಲ್ಲಿ ಒಂದು ವಿಧದ ಪ್ರಣಯಾರಾಧನೆ ನಡೆಯುತ್ತದೆ. ಆದರೆ ವಿವಾಹಾನಂತರದಲ್ಲಿ ಯಾವ ತರುಣಿಯೂ ಪರಪುರುಷನನ್ನು ಏಕಾಂತದಲ್ಲಿ ಭೆಟ್ಟಿಯಾಗುವಂತಿಲ್ಲ. ಪ್ರೇಮಾಲಾಪದ ಮಾತಂತೂ ದೂರ ಉಳಿಯಿತು. ನಾಗಾ ಜನರಲ್ಲಿ ಒಂದು ಸಾಮಾಜಿಕ ಮಿಲನದ ಗೃಹವಿರುತ್ತದೆ. ಅದಕ್ಕೆ ಮೋರಂಗ ಎನ್ನುತ್ತಾರೆ. ಅಲ್ಲಿ ಆಗಾಗ ಸಭೆ, ಉತ್ಸವಾದಿಗಳು ಜರುಗುತ್ತವೆ. ಕೂಡಿದವರಿಗೆ ಮದ್ಯ ಹಂಚುವ ಕಾರ್ಯವನ್ನು ತರುಣಿಯರು ಮಾಡುತ್ತಾರೆ. ನರ್ತನವನ್ನು ಮಾಡುತ್ತಾರೆ. ಆದರೆ ಇಂಥಲ್ಲಿಗೆ ವಿವಾಹಿತ ಸ್ತ್ರೀಯರು ಬರುವದನ್ನು ಅವರು ಸೇರುವದಿಲ್ಲ. ಕೋರ್ಟಿನಲ್ಲಿ ಕೂಡ ಸ್ತ್ರೀಯರ ಪ್ರತಿನಿಧಿಯಾಗಿ ಗಂಡನೇ ವ್ಯವಹರಿಸುತ್ತಾನಲ್ಲದೆ ಸ್ತ್ರೀಯರೆಂದೂ ಕೋರ್ಟಿಗೆ ಬರುವದಿಲ್ಲ. ಬೇಟೆಯಾಡುವದು ಪುರುಷರ ಕಾರ್ಯ. ಸ್ತ್ರೀಯರು ಕೊಂದ ಪಶುವಿನ ಮಾಂಸ ಅಶುದ್ಧವೆಂದು ತಿಳಿಯುವ ಇವರು ಅದನ್ನು ತಪ್ಪಿಯಾದರೂ ತಿನ್ನುವದಿಲ್ಲ!

ಆದರೆ ಈ ರೀತಿಯಿದ್ದೂ ಇವರು ಸ್ತ್ರೀಯರನ್ನು ತುಂಬ ಆದರದಿಂದ ಕಾಣುತ್ತಾರೆ. ಸಮಾಜದಲ್ಲಿ ಸ್ತ್ರೀಯರ ಪ್ರಭಾವ ಬಹಳವಿದೆ. ಪರ್ಯಾಯವಾಗಿ ಸಮಾಜದ ಸಂಚಾಲನೆಯನ್ನು ಸ್ತ್ರೀಯರೇ ಮಾಡುತ್ತಾರೆ. ಹೆಂಡತಿ ಅಥವಾ ತಾಯಿಯ ಮರಣವು ಎಲ್ಲಕ್ಕೂ ದೊಡ್ಡ ವಿಪತ್ತೆಂದು ಭಾವಿಸುತ್ತಾರೆ. ಹೆಂಡತಿಯ ಅನುಮತಿಯಿಲ್ಲದೆ ಯಾವ ಗಂಡಸೂ ಎಂಥ ಕೆಲಸಕ್ಕೂ ಕೈ ಹಾಕುವದಿಲ್ಲ. ಬೇಟೆಯಾಡುವದು, ಹೊಲದ ಕೆಲಸಗಳೇ ಮುಂತಾದ್ದನ್ನು ಗಂಡಸರು ಮಾಡಿದರೂ ಗೃಹಸ್ಥ ಜೀವನದ ನಿಜ ಸೂತ್ರ ಹೆಂಡತಿಯ ಕೈಯಲ್ಲೇ ಇರುತ್ತದೆ.

ಜೇಮಿ ನಾಗಾ ಜನರು ಸಂಚಾರಿ ಜನಾಂಗ. ಅವರು ಒಂದೇ ಸ್ಥಳದಲ್ಲಿ ಬಹಳ ಕಾಲ ಎಂದೂ ಇರುವದಿಲ್ಲ. ಎಲ್ಲಿಯಾದರೂ ಒಂದಿಷ್ಟು ಜಮೀನು ದೊರೆತಾಗ ಇವರು ಅಲ್ಲಿ ನೆಲೆಸಿ ಒಕ್ಕಲತನವನ್ನಾರಂಭಿಸುವರು. ಬೆಳೆ ಕೊಯ್ದ ಬಳಿಕ ಎಲ್ಲರೂ ಆ ಸ್ಥಳವನ್ನು ಬಿಟ್ಟು ಹೊರಡುವರು. ನೂರಾರು ವರ್ಷಗಳಿಂದ ಈ ರೀತಿ ಇವರು ಸಂಚಾರಿ ಜೀವನವನ್ನು ಸಾಗಿಸುತ್ತ ಬಂದಿದ್ದಾರೆ. ಅವರು ಹೆಚ್ಚಾಗಿ ಬೆಳೆಯುವದು ಧಾನ್ಯಗಳನ್ನೇ.

ಗುಣ-ದೋಷಗಳೆರಡೂ ಇರುವ ಈ ನಾಗಾ ಜನರ ವಿಷಯದಲ್ಲಿ ಬ್ರಿಟಿಶರ ಧೋರಣ ವಿಚಿತ್ರವಾಗಿತ್ತು. ಒಂದೆಡೆಯಲ್ಲಿ ಅವರಲ್ಲಿ ಕ್ರಿಶ್ಚನ್ ಧರ್ಮ ಪ್ರಸಾರ ಮಾಡುವದಕ್ಕಾಗಿ ಪಾದ್ರಿಗಳಿಗೆ ಪ್ರೋತ್ಸಾಹನವಿತ್ತರೆ ಇನ್ನೊಂದೆಡೆ ಈ ಜನರ ಅಂಧ ವಿಶ್ವಾಸ, ಕ್ರೂರ ರೀತಿ-ನಡಾವಳಿಗಳನ್ನು ನಿಲ್ಲಿಸಲು ಯಾವ ವಿಶೇಷ ಪ್ರಯತ್ನವನ್ನೂ ಮಾಡಲಿಲ್ಲ.

ನಾಗಾ ಜನರನ್ನು ಭಾರತೀಯರಿಂದ ಅವರು ಸದಾ ದೂರವಿಟ್ಟರು. ಅದ್ದರಿಂದ ನಾಗಾ ಜನರಲ್ಲಿ ತಾವು ಭಾರತೀಯರು ಎಂಬ ಭಾವನೆ ಹುಟ್ಟಲೇ ಇಲ್ಲ. ಪಾದ್ರಿಗಳು ಅವರನ್ನು ಮತಾಂತರಗೊಳಿಸುತ್ತಲೇ ಹೋದರು. ಅವರಲ್ಲಿ ರೋಮನ್ ಲಿಪಿಯ ಪ್ರಚಾರ ಮಾಡಿದರು. ಅನೇಕ ಸಂಸ್ಥೆಗಳನ್ನು ಅವರ ಸಲುವಾಗಿ ತೆರೆದರು. ಹಿಂದುಗಳ ಬಗ್ಗೆ ಅವರಲ್ಲಿ ತ್ವೇಷವನ್ನು ಹುಟ್ಟಿಸಿದರು. ನಾಗಾ ಜನರಲ್ಲಿ ಬಹಳ ಜನರು ಕ್ರಿಶ್ಚನ್ ಮತಾವಲಂಬಿಗಳಾದರು.

ನಾಗಾ ಪ್ರದೇಶ ಭಾರತದಿಂದ ಪ್ರತ್ಯೇಕವಾಗಿದೆ ಎಂಬುದು ತಪ್ಪು, ಇಷ್ಟೇ ಅಲ್ಲ, ಅದು ಘೋರ ಅಜ್ಞಾನದ ಪ್ರತೀಕವಾಗಿದೆ. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಕೂಡ ಈ ಪ್ರದೇಶದ ಉಲ್ಲೇಖವಿದೆ.

ಅರ್ಜುನನು ವರಿಸಿದ ಮಣಿಪುರದ ರಾಜಕನ್ಯೆ ಚಿತ್ರಾಂಗದೆ ನಾಗದೇಶದಲ್ಲಿ ಇರುವವಳೇ ಆಗಿದ್ದಳು. ಇಂದಿಗೂ ನಾಗಾಜನರಲ್ಲಿ ಹಿಂದುಗಳ ದೇವರ ಹೆಸರು ಗೊತ್ತಿರದಿದ್ದರೂ ತಾವು ಅರ್ಜು

ನನ ಸಂತಾನದವರೆಂದು ಹೇಳಿಕೊಳ್ಳುವ ಅನೇಕರನ್ನು ಕಾಣಬಹುದು. ಕ್ರಿಶ್ಚನ್ನರಾದವರ ಮಾತು ಬೇರೆಯಾಗಿದ್ದರೂ ಉಳಿದವರು ತಲೆಯ ಮೇಲೆ ಚಿಕ್ಕ ಚಂಡಿಕೆಯನ್ನಿಡುತ್ತಾರೆ. ಕೆಲವು ನಾಗಾ ಜನರಿಗೆ ಹಿಂದುಗಳ ದೈವರುಗಳಲ್ಲಿ ಈಶ್ವರನೊಬ್ಬನ ಹೆಸರಿನ ಪರಿಚಯವಿದೆ. ಹಿಂದುಗಳು ಗೋಮಾಂಸ ತಿನ್ನುವದಿಲ್ಲವೆಂದು ಈ ಜನರಿಗೆ ಗೊತ್ತಾದ ಒಳಿಕ ಅವರು ಗೋಮಾಂಸ ಭಕ್ಷಣವನ್ನು ತ್ಯಜಿಸಿದ್ದಾರೆ. ಇವರಲ್ಲಿ ಹಿಂದೊಮ್ಮೆ ಹಿಂದು ಧರ್ಮದ ಪ್ರಸಾರವಿತ್ತೆಂದು ಹೇಳಬಹುದಾಗಿದೆ.

೧೯೫೭, ಅಗಸ್ಟ ೨೬ ರಂದು ಕೋಹಿಮಾದ ನಾಗಾ ಜನರ ಸಭೆಯೊಂದರಲ್ಲಿ (ಈ ಸಭೆಗೆ ನಾಗಾ ಪ್ರದೇಶದ ನಾನಾ ಭಾಗಗಳಿಂದ ೧೮೫೫ ಪ್ರತಿನಿಧಿಗಳು ಬಂದಿದ್ದರು.) ಸಮಸ್ತ ನಾಗಾ ಪ್ರದೇಶವನ್ನೂ ಸ್ವಾಯತ್ತ ಪ್ರದೇಶವೆಂದು ಸಾರಬೇಕು, ಅದರ ಸಂಬಂಧ ಕೇಂದ್ರ ಸರಕಾರದೊಡನೆ ಇರಬೇಕಲ್ಲದೆ ರಾಜ್ಯ ಸರಕಾರದೊಡನಲ್ಲ ಎಂಬ ಠರಾವು ಸ್ವೀಕೃತವಾಯಿತು. ನಾಗಾ ಜನರ ಈ ಬೇಡಿಕೆಯನ್ನು ಮನ್ನಿಸಿ ಲೋಕಸಭೆಯು ಕಳೆದ ಅಧಿವೇಶನದಲ್ಲಿ ನಾಗಾ ಪ್ರದೇಶಕ್ಕೆ ಸಂಬಂಧಿಸಿ ಒಂದು ಕಾಯದೆ ರಚಿಸಿತು. ಅದರಿಂದ ಅದರ ಆಡಳಿತ ಆಸಾಮು ಸರಕಾರದ ಕೈಯಿಂದ ಕೇಂದ್ರ ಸರಕಾರದ ಕೈಗೆ ಬಂತು. ವಿದೇಶ ವ್ಯವಹಾರಶಾಖೆ ಈ ಕಾರ್ಯವನ್ನು ಆಸಾಮದ ರಾಜ್ಯಪಾಲರ ಮುಖಾಂತರ ನಡೆಸುವದು.

ನಾಗಾ ಪ್ರದೇಶದ ಸಮಸ್ಯೆಗಳು ಬಲಪ್ರಯೋಗಕ್ಕಿಂತಲೂ ಹೆಚ್ಚಾಗಿ ಪ್ರೇಮ ಮತ್ತು ಸೇವೆಗಳ ಮೂಲಕ ಬಗೆಹರಿಯುವವು ಎಂದು ಕೇಂದ್ರ ಸರಕಾರ ಭಾವಿಸಿದೆ. ಎಲ್ಲಕ್ಕೂ ಮೊದಲು ನಾಗಾ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕಾಗಿದೆ. ನಂತರ ಶಿಕ್ಷಣ ಪ್ರಸಾರ. ಸಹಾನುಭೂತಿಪೂರ್ಣ ವ್ಯವಹಾರದಿಂದ ನಾಗಾ ಸಮಸ್ಯೆ ಪರಿಹಾರವಾದೀತೆಂದು ನಿಸ್ಸಂದೇಹವಾಗಿ ಹೇಳಬಹುದು.

ಕೋಮಲ ಹೃದಯ

ರಾಮಚಂದ್ರನ ಹೃದಯ ಅತಿ ಕೋಮಲವಾದದ್ದು. ಅವನು ಯಾರ ಮನಸ್ಸನ್ನೂ ನೋಯಿಸುವವನಲ್ಲ. ಒಮ್ಮೆ ಅವನ ಸ್ನೇಹಿತ ರಾಮಸ್ವಾಮಿಯ ಸಂಗಡ ಹೊಳೆಗೆ ಹೋದಾಗ ರಾಮಸ್ವಾಮಿ ಕಾಲುಜಾರಿ ಹೊಳೆಯೊಳಗೆ ಬಿದ್ದು ಸತ್ತನು.

ರಾಮಚಂದ್ರ ಬಹಳ ದುಃಖಿಸಿದ. ರಾಮಸ್ವಾಮಿ ಸತ್ತ ವಿಷಯವನ್ನು ಅವನ ಬಂಧುಗಳಿಗೆ ಹೇಗೆ ತಿಳಿಸಲಿ ಎಂದು ಅವನ ಕೋಮಲ ಮನಸ್ಸು ಬಹಳ ಚಡಪಡಿಸಿತು.

ವಿಷಯವನ್ನು ರಾಮಸ್ವಾಮಿಯ ಹೆಂಡತಿಗೆ ತಿಳಿಸಲು ರಾಮಚಂದ್ರ ಮಸಿ ಕಾಗದ ಖರ್ಚು ಮಾಡಿದ್ದೇ ಮಾಡಿದ್ದು. ಹೇಗೆ ಬರೆದರೂ ಅದರಿಂದ ಓದಿದವರ ಮನನೋಯುವುದು ಅವನಿಗೆ ತೋರುತ್ತಿತ್ತು.

ಕೊನೆಗೆ ಅವನು ಬರದಿದ್ದೇನು ಅಂತೀರಾ ?


ಶ್ರೀಮತಿ ರಾಮಸ್ವಾಮಿಯವರಿಗೆ—

ಇಂದಿನಿಂದ ಎಂದೆದಿಗೂ, ನಿಮ್ಮ ಪತಿ ಮನೆಗೆ ಬರಲಾರರು. ಕಾರಣವೇನೆಂದರೆ, ಇಂದು ಅವರ ಅಂಗಿ ಹೊಳೆಯಲ್ಲಿ ತೇಲುತಿತ್ತು.

ಇತಿ — ರಾಮಚಂದ್ರ

ವಿ. ಸೂ— ಅಂಗಿ ಒಳಗೆ ರಾಮಸ್ವಾಮಿ ಸಹ ಇದ್ದರು.

ಎಸ್. ಗುರುರಾಜ, ಶಿವಮೊಗ್ಗ


ನರೆದ ಕೂದಲನ್ನು
ಗುಣಪಡಿಸುವ ವಿಧಾನ
ನರೆದ ಕೂದಲಿನವರು ನಿತ್ಯವೂ ಶಿರಶಾಸನ ಗೈಯುತ್ತಾ ಇದ್ದರೆ, ಕೆಲವು ಸಮಯದ ನಂತರ ಅವರ ಕೂದಲು ಪುನಃ ಕಪ್ಪಾಗುವುದೆಂದು ಹೇಳುತ್ತಾರೆ. ಆದರೆ ಈ ಕಾರ್ಯಕ್ಕೆ ಬೇಕಾದಷ್ಟು ಬಿಡುವು ಮತ್ತು ನೆಮ್ಮದಿಯಿಂದ ಇಷ್ಟ ಮನಸ್ಸಿನ ಅಗತ್ಯವಿದೆ.
ಆಧುನಿಕ ಕಾಲದಲ್ಲಿ ಇವರ ಬದಲಿಗೆ 'ಲೊಮಾ' ಉಪಯೋಗಿಸುವುದರಿಂದ ನರೆದ ಕೂದಲು, ಖಂಡಿತವಾಗಿಯೂ, ಸುರಕ್ಷಿತವಾಗಿಯೂ ಮತ್ತು ಸರಳವಾಗಿಯೂ ಕಪ್ಪಾಗುವುದು.
ಇದೀಗ 'ಲೊಮಾ' ಬಿಚ್ಚಲಾರದಂತೆ ಭದ್ರವಾಗಿರುವ ಮುಚ್ಚಳದೊಡನೆ ದೊರೆಯುತ್ತದೆ.
ಲೊಮಾ
Loma
Loma
ಸೋಲ್ ಏಜಂಟ್ಸ್: ಎಮ್. ಎಮ್. ಖಂಬಾಟ್‌ವಾಲಾ, ಅಹಮ್ಮದಾಬಾದ್.
ಏಜೆಂಟ್ಸ್: ಪಿ. ನರೋತ್ತಮ ಆಂಡ್ ಕಂಪೆನಿ. ಮಂಗಳದಾಸ್ ರೋಡ್, ಮುಂಬಯಿ ೨.

ನಗೆ ಮಲ್ಲಿಗೆ

ಉಪಯೋಂತರ

ಪ್ರಸಿದ್ಧ ಅಮೇರಿಕನ್ ವಿನೋದಿ ಮಾರ್ಕ ಟ್ವೇನನಿಗೆ ಹಾಸಿಗೆಯ ಮೇಲೆ ಬಿದ್ದುಕೊಂಡಿರುವದೆಂದರೆ ಬಲು ಪ್ರೀತಿಯಾಗಿತ್ತು. ಆತ ಓದು-ಬರೆಯುವದನ್ನೆಲ್ಲ ಮಲಗಿಕೊಂಡೇ ಮಾಡುತ್ತಿದ್ದ.

ಒಂದು ದಿನ ಬೆಳಿಗ್ಗೆ ಪತ್ರಿಕೋದ್ಯಮಿಯೊಬ್ಬ ಅವನ ಸಂದರ್ಶನ ಪಡೆಯಲೆಂದು ಬಂದನು. ಅವನನ್ನು ತಾನು ಮಲಗಿದಲ್ಲಿಗೆ ಕಳಿಸೆಂದು ಟ್ವೇನ ಹೆಂಡತಿಗೆ ಹೇಳಿದ. ಅದಕ್ಕವಳು: "ಛಿ! ನೀವು ಏಳಬಾರದೆ? ನೀವು ಮಲಗಿರುವಾಗ ಆತ ನಿಂತುಕೊಂಡಿರುವದು ಚೆನ್ನಾಗಿ ಕಾಣುವದೇ?'' ಎಂದಳು.

ಟ್ವೇನ ಒಂದು ಕ್ಷಣ ವಿಚಾರ ಮಾಡಿ: "ಹೌದು. ನನಗೆ ಆ ವಿಚಾರ ಹೊಳೆಯಲೇ ಇಲ್ಲ. ಇನ್ನೊಂದು ಹಾಸಿಗೆ ಹಾಸಲು ಕೆಲಸದವಳಿಗೆ ಹೇಳುವದೇ ಯೋಗ್ಯವೆಂದು ಕಾಣಿಸುತ್ತದೆ'' ಎಂದ.

* * *

ಮರೆವಿನ ಲಾಭ

ಒಬ್ಬ ಮರಗುಳಿ ಪ್ರೊಫೆಸರರು ದೊಡ್ಡ ಮನಸ್ಸು ಮಾಡಿ ಹುಡುಗರ ಜೊತೆಯಲ್ಲಿ ಆಡಲು ತಯಾರಾದರು. ಆಟ ಪ್ರಾರಂಭಿಸುವ ಮುಂಚೆ ಪ್ರತಿಯೊಬ್ಬರೂ ಅನಂತರದ ಚಹಾಪಾನಕ್ಕಾಗಿ ಎಂದು ಒಂದು ಚಿಕ್ಕ ಪೆಟ್ಟಿಗೆಯಲ್ಲಿ ಎಂಟಾಣೆ ಹಾಕಬೇಕಾಗಿತ್ತು. ಎಲ್ಲ ಹುಡುಗರೂ ತಮ್ಮ ತಮ್ಮ ಎಂಟಾಣೆ ಹಾಕಿದರು. ಪ್ರೊಫೆಸರರು ಮಾತ್ರ ಹಾಕಲಿಲ್ಲ.

ಪ್ರೊಫೆಸರರಿಗೆ ಈ ಮಾತು ಹೇಗೆ ಹೇಳೋಣವೆಂದು ಸಂಕೋಚದಿಂದ ಹುಡುಗರು ತಮ್ಮತಮ್ಮಲ್ಲೆ ಯಾರು ಎಂಟಾಣೆ ಹಾಕಲಿಲ್ಲ ಎಂದು ವಾದವಿವಾದಕ್ಕೆ ತೊಡಗಿದಂತೆ ನಟಿಸತೊಡಗಿದರು.

ಒಂದೈದು ನಿಮಿಷ ಕಳೆದ ಮೇಲೆ ಪ್ರೊಫೆಸರರು, "ನೀವೆಲ್ಲಾ ಹೀಗೆ ಎಂಟಾಣೆಯ ಸಲುವಾಗಿ ಜಗಳ ಕಾಯುತ್ತ ಕುಳಿತರೆ ನಾನೇನೂ ಆಟಕ್ಕೆ ಬರುವದಿಲ್ಲ. ನನ್ನ ಎಂಟಾಣೆಯನ್ನು ವಾಪಸು ತೆಗೆದುಕೊಳ್ಳುತ್ತೇನೆ'' ಎಂದು ಪೆಟ್ಟಿಗೆಯಿಂದ ಎಂಟಾಣೆ ನಾಣ್ಯವೊಂದನ್ನೆತ್ತಿ ಕಿಸೆಯಲ್ಲಿ ತುರುಕಿಕೊಂಡರು.

* * *

ಸತ್ಯಂ ವಧ

ನ್ಯಾಯಾಧೀಶ- ನೀನು ಸತ್ಯ ಹೇಳುವೆ ಎಂದು ಪ್ರಮಾಣ ವಚನ ಸ್ವೀಕರಿಸಿರುವಿ, ನೆನಪಿದೆಯೆ?

ಸಾಕ್ಷಿದಾರ- ಹೌದು.

ನ್ಯಾಯಾಧೀಶ- ಸತ್ಯ ಹೇಳದಿದ್ದರೆ ಪರಿಣಾಮ ಏನಾದೀತು ಗೊತ್ತಿದೆಯೆ?

ಸಾಕ್ಷಿದಾರ- ಇದೆ. ಖಟ್ಲೆ ನನ್ನಂತೆ ಆದೀತು ಎಂದು ತಿಳಿದಿದ್ದೇನೆ.


* * *

ಸ್ಟಂಟ್

ನಿರ್ದೇಶಕ— (ಸ್ಟಂಟ ನಟನಿಗೆ) ನಿನಗೆ ಗುಂಡಿನ ಸಪ್ಪಳ ಕೇಳಿಸುತ್ತದೆ. ನೀನು ಗಾಬರಿಯಾಗಿ ಅತ್ತಿತ್ತ ನೋಡಿ ಕೂಡಲೆ ೪೦ ಅಡಿ ಎತ್ತರದ ಗುಡ್ಡದ ತುದಿಯಿಂದ ಕೆಳಗೆ ನೀರಿನಲ್ಲಿ ಹಾರಿಕೊಳ್ಳಬೇಕು.

ನಟ- ಸರಿ. ಆದರೆ ಕೆಳಗೆ ಎರಡೇ ಅಡಿ ಆಳದ ನೀರಿದೆಯಲ್ಲ?

ನಿರ್ದೇಶಕ- ಮತ್ತೆ? ನೀರಿನಲ್ಲಿ ಮುಳುಗಿ ಸಾಯಬಯಸುವಿಯೇನು?



ಸಾವಿರ ಬೇರಿನ ವಟವೃಕ್ಷ

ಇದು ಏಶಿಯದ ಸಸ್ಯಶಾಸ್ತ್ರಿಗಳಿಗೆ
ದೇವಾಲಯದಂತಿದೆ

ಕಲಕತ್ತೆಯ ಸಸ್ಯಶಾಸ್ತ್ರೋದ್ಯಾನ

ಕಲಕತ್ತೆಗೆ ಹೋದಾಗ ನೋಡದೆ ಬಿಡಬಾರದ ಸ್ಥಳಗಳಲ್ಲಿ ಅಲ್ಲಿರುವ "ಇಂಡಿಯನ್ ಬೊಟಾನಿಕ್ ಗಾರ್ಡನ್" ಅರ್ಥಾತ್ ಭಾರತೀಯ ಸಸ್ಯಶಾಸ್ತ್ರೋದ್ಯಾನವೊಂದು. ನಗರದ ನೀರಸ ದೃಶ್ಯಗಳಿಂದ ಕಣ್ಣು ಸೋತವರಿಗೆ ಈ "ಸಸ್ಯಗಳ ಸಂಯುಕ್ತರಾಷ್ಟ್ರಸಂಘ"ದ ಹಸುರು ಸೌಂದರ್ಯ ಸಮಾಧಾನವೀಯುವುದು. ಜಗತ್ತಿನ ಅತಿದೊಡ್ಡ ಆಲದಮರವಿರುವುದು ಇಲ್ಲಿಯೇ. ಹುಗಲಿ ನದಿಯ ತೀರದಲ್ಲಿರುವ ಈ ೨೭೩ ಎಕರೆ ವಿಸ್ತಾರವಾದ ತೋಟವು ಏಶಿಯದ ಸಸ್ಯಶಾಸ್ತ್ರಿಗಳ ಕಾಶಿ ಎನಿಸಿದೆ.

ಏಶಿಯಾದಲ್ಲಿರುವ ಮೂರು ಪ್ರಸಿದ್ಧ ಸಸ್ಯಶಾಸ್ತ್ರೋದ್ಯಾನಗಳಲ್ಲಿ ಕಲಕತ್ತೆಯದು ಅತಿದೊಡ್ಡದು. (ಇನ್ನೆರಡು ಬೋಗೋರ [ಇಂಡೊನೇಶಿಯ] ಮತ್ತು ಪೆರದೇನಿಯ [ಸಿಂಹಳ] ದಲ್ಲಿವೆ.) ೧೭೦ ವರ್ಷಗಳ ಹಿಂದೆ ಸ್ಥಾಪಿತವಾದಂದಿನಿಂದ ಅದು ಭಾರತದ್ದಷ್ಟೇ ಅಲ್ಲ, ಬರ್ಮಾ ಮತ್ತು ಮಲಯಗಳ ಸಸ್ಯಗಳ ಸಂಶೋಧನೆಗೂ ಪ್ರಮುಖ ಕೇಂದ್ರವಾಗಿದೆ.

೧೨,೦೦೦ ಗಿಡಮರಗಳಿಗೆ ಆಶ್ರಯವಾದ ಈ ಬೊಟ್ಯಾನಿಕ್ ಗಾರ್ಡನ್ನಿನ ಮೂಲಪುರುಷ ಈಸ್ಟ್ ಇಂಡಿಯ ಕಂಪನಿಯ ಬಂಗಾಲ ಕಾಲ್ದಳದ

"ಮಾರ್ಚ್ ಆಫ್ ಇಂಡಿಯಾ" ಆಧಾರದಿಂದ

ಅಧಿಕಾರಿಯಾಗಿದ್ದ ಕರ್ನಲ್ ರಾಬರ್ಟ್ ಕಿಡ್. ಈ ಉದಾತ್ತ ಹೃದಯದ ಬ್ರಿಟಿಶ ಅಧಿಕಾರಿಯು ಬಂಗಾಲದಲ್ಲಿ ಮೇಲಿಂದ ಮೇಲೆ ಒದಗಿ ಸಾವಿರ ಗಟ್ಟಳೆ ಪ್ರಾಣಹಾನಿ ಮಾಡುವ ಬರಗಾಲಗಳನ್ನು ನಿರೋಧಿಸುವ ಒಂದು ಉಪಾಯವೆಂದು ಕಲಕತ್ತೆಯಲ್ಲಿ ಒಂದು ಕೃಷಿಉದ್ಯಾನವನ್ನು ಸ್ಥಾಪಿಸಬೇಕೆಂದು ಕಂಪನಿಯ ಡೈರೆಕ್ಟರರಿಗೆ ಸೂಚಿಸಿದನು. ವಿಶೇಷ ಸಾರವಿಲ್ಲದ ಭೂಮಿಯಲ್ಲಿ ಬೆಳೆಯಬಲ್ಲ ಆಹಾರ ಸಸ್ಯಗಳನ್ನು ಬಂಗಾಲದ ಭೂಮಿಯಲ್ಲಿ ಬೆಳೆಸಲು ಈ ಉದ್ಯಾನದಲ್ಲಿ ಸಂಶೋಧನೆ ನಡೆಸಿ ಅವನ್ನು ಪ್ರಸಾರಕ್ಕೆ ತರುವುದು ಅವನ ಉದ್ದೇಶವಾಗಿತ್ತು.

ಕಂಪನಿ ಇದಕ್ಕೆ ಒಪ್ಪುವಾಗ ಇತರ ಸ್ವಾರ್ಥಗಳೂ ಅದರ ಲಕ್ಷ್ಯದಲ್ಲಿದ್ದವು. ಕಂಪನಿಯ ಹಡಗುಗಳ ದುರಸ್ತಿಗೆ ಬೇಕಾದ ತೇಗದ ಮರಗಳನ್ನೂ ಬೆಲೆ ಬಾಳುವ ಮಸಾಲೆ ಸಾಮುಗ್ರಿಯಾದ ದಾಲಚಿನ್ನಿಯ ಮರಗಳನ್ನೂ ಇಲ್ಲಿ ಬೆಳಸಿದರೆ "ಕಂಪನಿಗೂ ಜನತೆಗೂ ಅಪಾರ ಸಂಪತ್ತನ್ನು ಈ ತೋಟವು ತರಬಹುದು" ಎಂದು ೧೭೮೭ಜುಲೈ ೩೧ ರಂದು ಅದು ಈ ಯೋಜನೆಗೆ ಇತ್ತ ಒಪ್ಪಿಗೆಯ ಪತ್ರದಲ್ಲಿ ಹೇಳಿದೆ.

ಹೀಗೆ ಕಲಕತ್ತೆಯ ಬದಿಯಲ್ಲಿ ಅರಣ್ಯಮಯವಾಗಿದ್ದ ೩೦೦ ಎಕರೆ ಭೂಮಿಯನ್ನು ಆರಿಸಿ ೧೭೮೭ ರಲ್ಲಿ "ಕುಂಪಣಿ ಬಾಗಾನ್" ಸ್ಥಾಪಿತವಾಯಿತು. ಕರ್ನಲ್ ಕಿಡ್ ಅದರ ಪ್ರಥಮ ಗೌರವ ಸುಪರಿಂಟೆಂಡೆಂಟನಾದನು. ಅವನು ಸಾಯುವ ವರೆಗೆ ಆರು ವರ್ಷ ಕಾಲ ಪರಿಶ್ರಮಿಸಿ ಜಗತ್ತಿನ ನಾನಾ ಭಾಗಗಳಿಂದ ನಾನಾ ಸಸ್ಯಗಳ ಸಸಿಗಳನ್ನು ತರಿಸಿ ಅಲ್ಲಿ ನಟ್ಟನು. ಇಂಗ್ಲಂಡಿನ ಮೂರನೇ ಜಾರ್ಜ್ ಸಸ್ಯ ಸಂಸ್ಥೆಯ ಅಧಿಕಾರಿಯಾದ ಸರ್ ಜಾಸೆಫ್ ಬ್ಯಾಂಕ್ಸನ ನೆರವಿನಿಂದ ವೆಸ್ಟ್ ಇಂಡೀಜ ಇತ್ಯಾದಿ ಉಷ್ಣವಲಯ ಪ್ರದೇಶಗಳಿಂದ ವಿವಿಧ ಸಸ್ಯಗಳ ಬೀಜ ಮತ್ತು ಸಸಿಗಳನ್ನು ತರಿಸಿಕೊಳ್ಳುವ ಏರ್ಪಾಡಾಯಿತು. ದಾಲಚಿನ್ನಿ, ಮೆಣಸು, ಯಾಲಕ್ಕಿ, ಇರಾಣಿ ಖರ್ಜೂರ, ಕಿತ್ತಳೆ, ತೇಗ, ಶ್ರೀಗಂಧ ಮೊದಲಾದವುಗಳನ್ನು ನಟ್ಟದ್ದಾಯಿತು. ಹವಾಮಾನ ಮತ್ತು ಭೂಗುಣ ಸರಿ ಬೀಳದೆ ಇವುಗಳಲ್ಲಿ ಅನೇಕ ಜಾತಿಯ ಸಸಿಗಳು ಬದುಕದ್ದರಿಂದ ಕರ್ನಲ್ ಕಿಡ್ಡನ ಪ್ರಾರಂಭಿಕ ಉತ್ಸಾಹಕ್ಕೆ ತಣ್ಣೀರು ಹೊಯ್ದಂತಾದರೂ ಮಹಾ ಸಾಹಸವೊಂದರ ಅಡಿಗಲ್ಲು ಹಾಕಿದಂತಾಯಿತು. ಸ್ಮಾರಕ ಸ್ತಂಭವೊಂದು ಬೊಟಾನಿಕಲ್ ಗಾರ್ಡನ್ನಿನಲ್ಲಿ ಅವನ ಸೇವೆಗೆ ಸಾಕ್ಷಿಯಾಗಿ ನಿಂತಿದೆ.

ಕಿಡ್ಡನ ನಂತರ ಸುಪರಿಂಟೆಂಡೆಂಟ್ ಹುದ್ದೆಯನ್ನು ನಿರ್ವಹಿಸಿದ ಅನೇಕರು ಬೊಟಾನಿಕಲ್ ಗಾರ್ಡನನ್ನು ಉತ್ಕರ್ಷಕ್ಕೆ ತರಲು ಹೆಣಗಿದರು. ಕಿಡ್ಡನನ್ನನುಸರಿಸಿದ ಡಾ. ರಾಕ್ಸಬರ್ಗನು ಉದ್ಯಾನದೊಳಗೆ ಸುಂದರವಾದ ಸುಪರಿಂಟೆಂಡೆಂಟನ ವಸತಿಯನ್ನು ಕಟ್ಟಿಸಿದನು. ಇದನ್ನು ಕಟ್ಟಿ ೧೬೦ ವರ್ಷಗಳು ಕಳೆದರೂ ಅದು ಹಾಗೆಯೇ ನಿಂತಿದೆ. ಆಗ ಉದ್ಯಾನದಲ್ಲಿದ್ದ ೩,೫೦೦ ಗಿಡಮರಗಳ ಕ್ಯಾಟಲ್ಯಾಗನ್ನು ಅವನೇ ತಯಾರಿಸಿದನು. ಅವನು ಮಹಾ ಸಸ್ಯವಿಜ್ಞಾನಿಯಾಗಿದ್ದನು- Flora Indica (ಭಾರತೀಯ ಸಸ್ಯಗಳು) Plantae Coromandalianae (ಚೋಳಮಂಡಲದ ಗಿಡಗಳು) ಎಂಬ ಅವನ ಪುಸ್ತಕಗಳು ಪ್ರಮಾಣಗ್ರಂಥಗಳಾಗಿವೆ; ಭಾರತೀಯ ಸಸ್ಯಗಳ ೨,೩೮೨ ವರ್ಣ ಚಿತ್ರಗಳನ್ನು ಭಾರತೀಯ ಕಲಾವಿದರ ಸಹಾಯದಿಂದ ಮಾಡಿಸಿ ೩೫ ಸಂಪುಟಗಳಲ್ಲಿ ಅವುಗಳನ್ನು ಬೈಂಡು ಮಾಡಿಸಿಟ್ಟದ್ದು ಇಂದಿಗೂ ಅಚ್ಚಳಿಯದೆ ಉಳಿದಿವೆ. ಡಾ. ರಾಕ್ಸಬರ್ಗನನ್ನು ನ್ಯಾಯವಾಗಿ "ಭಾರತೀಯ ಸಸ್ಯಶಾಸ್ತ್ರ ಪಿತಾಮಹ" ಎಂದು ಕರೆಯಲಾಗಿದೆ.

೧೮೧೭ ರಲ್ಲಿ ಅಧಿಕಾರಕ್ಕೆ ಬಂದ ಡಾ. ವಾಲೀಚರು ಭಾರತ ಮತ್ತು ನೆರೆಹೊರೆಯ ದೇಶಗಳಲ್ಲೆಲ್ಲ ಸಂಚರಿಸಿ ಸಾವಿರಾರು ಸಸ್ಯಗಳನ್ನು ಸಂಗ್ರಹಿಸಿದರು. ಡಾ. ವಿಲಿಯಂ ಗ್ರಿಫಿತ್ ಮತ್ತು ಡಾ. ಥಾಮ್ಸನ್ ಆಂಡರ್ಸನ್ ಎಂಬಿಬ್ಬರು ಸುಪರಿಂಟೆಂಡೆಂಟರು ಭಾರತೀಯ ಸಸ್ಯಶಾಸ್ತ್ರಕ್ಕಾಗಿ ಹುತಾತ್ಮರಾದರೆಂದೇ ಹೇಳಬೇಕು. ಮೊದಲನೆಯವರು ಮಲಯದಲ್ಲಿ ಸಸ್ಯಾನ್ವೇಷಣೆ

ಮಾಡುತ್ತಿದ್ದಾಗ ಸಾವಿಗೆ ತುತ್ತಾದರು. ಎರಡನೆಯವರು ಸಿಂಕೋನಾ (ಕ್ವಿನೈನ್) ಗಿಡಗಳನ್ನು ಹಿಮಾಲಯದ ಸಿಕ್ಕಿಂ ಭಾಗದಲ್ಲಿ ಬೆಳೆಸುವ ಸಲುವಾಗಿ ಹೋದಾಗ ರೋಗಗ್ರಸ್ತರಾಗಿ ಮರಣ ಹೊಂದಿದರು.

ಎರಡು ಮಹಾ ವಿಪತ್ತುಗಳು ಕಲಕತ್ತೆಯ ಈ ನಂದನವನವನ್ನು ಅದು ಜನ್ಮತಳೆದ ಒಂದು ಶತಮಾನದೊಳಗೆ ಹೆಚ್ಚು ಕಡಿಮೆ ಸಂಪೂರ್ಣವಾಗಿ ನಾಶಗೊಳಿಸಿದವು. ೧೮೬೪ರ ಮಹಾ ಕಲಕತ್ತಾ ಸುಂಟರಗಾಳಿಯಲ್ಲಿ ಒಂದು ಸಾವಿರ ವೃಕ್ಷಗಳು ಉರುಳಿದವು. ಅಂದು ಉದ್ಯಾನದಲ್ಲಿದ್ದ ಅರ್ಧ ವೃಕ್ಷಗಳೇ ಇದರಿಂದ ನಷ್ಟವಾದಂತಾಯಿತು. ಸಾಲದ್ದಕ್ಕೆ ಬಿರುಗಾಳಿಯೊಡನೆ ನೀರು ಉಕ್ಕಿ ಬಂದು ಉದ್ಯಾನದಲ್ಲಿ ೬-೭ ಅಡಿ ನೀರು ನಿಂತದ್ದರಿಂದ ಅಸಂಖ್ಯ ಪೊದೆ-ಸಸಿಗಳು ನಿರ್ನಾಮವಾದವು. ಮೂರು ವರ್ಷಗಳ ನಂತರ ಇನ್ನೊಂದು ವಾಯುಪ್ರಕೋಪಕ್ಕೆ ಸಿಲುಕಿ ಮತ್ತೆ ೭೫೦ ವೃಕ್ಷಗಳು ಬುಡಮೇಲಾಗಿ ಅನಾಹುತವು ಪೂರ್ಣವಾಯಿತು.

ಈ ಸರ್ವನಾಶದಿಂದ ಉದ್ಯಾನವನ್ನು ಪುನರುದ್ಧರಿಸಿದವನು ಡಾ. ಕಿಂಗ್. ೧೮೭೧ ರಲ್ಲಿ ಅಧಿಕಾರ ವಹಿಸಿಕೊಂಡ ಅವನು ಈ ಭಗ್ನಾವಶೇಷದಿಂದ ವ್ಯವಸ್ಥಿತವಾದ ಹೊಸ ಉದ್ಯಾನವನ್ನು ಸೃಷ್ಟಿಸಿದನು. ಅವರು ಅನೇಕ ಕೃತಕ ಸರೋವರಗಳನ್ನು ಅಗೆಸಿದನು. - ಅವುಗಳಿಂದ ಉದ್ಯಾನದ ಸೌಂದರ್ಯವೃದ್ಧಿಯಾಯಿತಲ್ಲದೆ ಅಗೆದ ಮಣ್ಣಿನಿಂದ ನೆಲದ ಮಟ್ಟವನ್ನು ಏರಿಸಿ ನೆರೆಹಾವಳಿಯಿಂದ ರಕ್ಷಣೆ ಪಡೆಯಲು ಶಕ್ಯವಾಯಿತು. ಅವನೇ ಈ ಉದ್ಯಾನವನ್ನು ಮನೋಹರವಾದ ವಿಹಾರ ಸ್ಥಾನವಾಗಿ ರೂಪುಗೊಳಿಸಿದವನು.

ಕಲಕತ್ತೆಯ ಉದ್ಯಾನ ಭಾರತಕ್ಕೆ ಮಾಡಿದ ಉಪಕಾರವನ್ನು ಬಣ್ಣಿಸಿ ತೀರದು. ಸಿಂಕೋನಾ ವಕ್ಷಗಳನ್ನು ಭಾರತದಲ್ಲಿ ಪ್ರವೇಶಗೊಳಿಸಿದ್ದು ಈ ಉದ್ಯಾನ. ಅದು ಇಂದು ಮಲೇರಿಯಕ್ಕೆ ರಾಮಬಾಣವಾದ ಕ್ವಿನೈನ ಪೂರೈಕೆಮಾಡಿ ಲಕ್ಷಾಂತರ ಮಾನವರ ಜೀವ ಉಳಿಸಿದೆ, ಉಳಿಸುತ್ತಿದೆ. ೧೮೭೪ ರಲ್ಲಿ ಪಾರಾ-ರಬ್ಬರಿನ ಗಿಡಗಳನ್ನು ಭಾರತಕ್ಕೆ ಈ ಉದ್ಯಾನವೇ ಮೊದಲನೇ ಬಾರಿ ತಂದಿತು. ನೀಲಗಿರಿ, ದಾಲಚಿನ್ನಿ, ಲವಂಗ, ಬಟಾಟೆ, ತಂಬಾಕು, ಕಾಫಿ, ಕಾಳುಮೆಣಸು, ಪೇಪರ್-ಮಲಬೆರಿ, ವನಿಲಾ ಮೊದಲಾದ ಅಸಂಖ್ಯ ಅಮೂಲ್ಯ ಸಸ್ಯಗಳನ್ನು ಅದು ಬೆಳೆಸುತ್ತಿದೆ. ಇಂದು ಭಾರತದಲ್ಲಿ ಸಾರ್ವತ್ರಿಕವಾಗಿ ಹೂದೋಟಗಳಲ್ಲಿ ಮೆರೆಯುವ ಚಿತ್ರವಿಚಿತ್ರ ವರ್ಣರಂಜಿತವಾದ ಹೂ ಗಿಡಗಳನ್ನು ನೋಡುತ್ತೇವೆ. ಅವುಗಳಲ್ಲಿ ಹೆಚ್ಚಿನವುಗಳನ್ನು ಪ್ರಾರಂಭದಲ್ಲಿ ಬೊಟಾನಿಕ್ ಉದ್ಯಾನವೇ ಈ ದೇಶಕ್ಕೆ ತಂದುಹಂಚಿತು.

ಅಲಂಕಾರದ ಗಿಡಗಳ ಮತ್ತು ವಾರ್ಷಿಕ ಪುಷ್ಪಗಳ ಗಿಡಗಳನ್ನು ತಯಾರಿಸಿ ಸಾರ್ವಜನಿಕರಿಗೆ ಒದಗಿಸಲೆಂದೇ ಇಲ್ಲಿ ಎರಡು ನರ್ಸರಿಗಳನ್ನು ನಡೆಸಲಾಗುತ್ತಿದೆ. ಇದರ ದೊಡ್ಡ ಆರ್ಕಿಡ್ ಗಿಡಗಳ ನರ್ಸರಿಯಲ್ಲಿ ೧,೫೦೦ ಅಗೆಗಳು ಬೆಳೆಯುತ್ತಿವೆ. ನಾನಾ ವಿಧವಾದ ಸುಂದರ ಕಳ್ಳಿಗಿಡಗಳನ್ನೂ ಅದು ಸಂಗ್ರಹಿಸಿದೆ. ಒಂದು ಚಿಕ್ಕ ಪ್ರಯೋಗಶಾಲೆಯಲ್ಲಿ ಅದು ಸಸ್ಯಶಾಸ್ತ್ರೀಯ ಪ್ರಯೋಗಗಳನ್ನು ಮಾಡುತ್ತಿದೆ. ಇತರ ದೇಶಗಳ ಬೊಟಾನಿಕಲ್ ಉದ್ಯಾನಗಳ ಸಂಗಡ ಸಂಪರ್ಕವಿಟ್ಟುಕೊಂಡು ಅವುಗಳೊಡನೆ ಸಸ್ಯಗಳ ವಿನಿಮಯ ಮಾಡಿಕೊಳ್ಳುತ್ತಿದೆ.

ವಿವಿಧ ಜಾತಿಯ ವೃಕ್ಷಗಳನ್ನು ಅವುಗಳ ಮೂಲ ದೇಶಗಳಿಗನುಸಾರವಾಗಿ ಬೇರೆ ಬೇರೆ ಭಾಗಗಳಲ್ಲಿ ವಿಂಗಡಿಸಿ ಬೆಳೆಸಿದ ಈ ಸಸ್ಯವಿಶ್ವದ ಪ್ರಧಾನ ಆಕರ್ಷಣೆಯೆಂದರೆ ಇಲ್ಲಿನ ದೈತ್ಯ ಆಲದ ಮರ. ಉದ್ಯಾನದ ಸ್ಥಾಪನೆಯಾದಾಗಲೇ ಅಲ್ಲಿದ್ದು ಎರಡು ಸುಂಟರ ಗಾಳಿಗಳನ್ನು ದಕ್ಕಿಸಿಕೊಂಡ ಈ ೨೦೦ ವರ್ಷ ವಯಸ್ಸಿನ ವೃಕ್ಷರಾಜ ಜಗತ್ತಿನ ಅತಿ ದೊಡ್ಡ ಮರಗಳಲ್ಲಿ ಒಂದಾಗಿದೆ. ಅದರ ಸುತ್ತಳತೆ ೧,೩೨೪ ಅಡಿ-ಅಂದರೆ ಅದಕ್ಕೆ

ಒಂದು ಸುತ್ತು ಬರಬೇಕಾದರೆ ಎರಡು ಫರ್ಲಾಂಗಿಗಿಂತಲೂ ಹೆಚ್ಚು ನಡೆಯಬೇಕಾಗುವುದು. ಅದರ ಹಸುರೆಲೆಗಳು ೧,೪೦,೦೦೦ ಚದರ ಅಡಿ ವಿಸ್ತಾರವಾದ ನೆಲಕ್ಕೆ ಹಂದರವಾಗಿವೆ. ತನ್ನ ವಿಶಾಲವಾದ ಶಾಖೆಗಳಿಂದ ಅದು ಕಂಬಗಳಂಥ ೧,೦೦೦ ಬೇರುಗಳನ್ನು ಭೂಮಿಗೆ ಇಳಿಸಿ ಒಂದು ಬಗೆಯ ನೈಸರ್ಗಿಕ ಸಾವಿರ ಕಂಬದ ಬಸದಿಯಾಗಿದೆ. ಅದರ ಒಂದು ರೆಂಬೆ ೯೮ ಅಡಿ ಎತ್ತರಕ್ಕೆ ಹೋಗಿ ಗಗನವನ್ನು ಚುಂಬಿಸಿದೆ. ಈ ಮರದ ಒಂದು ವಿಶೇಷವೆಂದರೆ, ಅದಕ್ಕೆ ಕಾಂಡವೇ (ಬೊಡ್ಡೆ) ಇಲ್ಲ. ೧೯೨೫ ರಲ್ಲಿ ರೋಗ ತಗಲಿದ ಅದರ ಮುಖ್ಯ ಕಾಂಡವನ್ನು ಕಡಿದು ಇಡೀ ಮರಕ್ಕೆ ಬಂದ ಅಪಾಯವನ್ನು ದೂರೀಕರಿಸಲಾಯಿತು. ಅಂದಿನಿಂದ ಅದು ತನ್ನ ಶಾಖೆಗಳಿಂದಿಳಿದ ಬೇರುಗಳನ್ನೇ ಅವಲಂಬಿ ವೃದ್ಧಿಂಗತವಾಗುತ್ತಿದೆ. ಇದು ಜಗತ್ತಿನ ಒಂದು ವಿಸ್ಮಯ ವೃಕ್ಷ.

ಉದ್ಯಾನದೊಳಗಿನ ಸಾಲುಮರಗಳ ಶೋಭೆ ಅಸಾಧಾರಣವಾದುದು. "ಕಾವಲು ನಿಂದಿಹ ತಳವರರಂದದಿ" ಎರಡು ಸಾಲಾಗಿ ಅರ್ಧ ಮೈಲುದ್ದ ಕ್ಕೂ ನಿಂತ ತಾಲವೃಕ್ಷಗಳು, ಅಪೂರ್ವ ಸೌಂದರ್ಯದ ಮಹಾಗನಿ ವೃಕ್ಷಗಳ ಸಾಲು, ಬಗೆ ಬಗೆಯ ಉಷ್ಣವಲಯ ವೃಕ್ಷಗಳ ವನ ಇಲ್ಲಿವೆ. ಜಗತ್ತಿನ ಅತ್ಯಂತ ಮನೋಹರ ಪುಷ್ಪಿತ ವೃಕ್ಷವಾದ ಅಮ್ಹ ಸ್ಟಿರ್ಯಾದ ಗುಂಪು ರಕ್ತಪುಷ್ಪಗಳ ರಾಶಿಯನ್ನೇ ಹೊತ್ತು ನಿಂತಿರುತ್ತದೆ.

ಉದ್ಯಾನದ ಕೆರೆಕುಂಟೆಗಳಲ್ಲಿ ಬೆಳೆಯುವ ಸಸ್ಯಗಳಲ್ಲಿ ಅಮೆಜಾನ (ಅಮೇರಿಕ),ದಿಂದ ತಂದು ಬೆಳಸಿದ ವಿಕ್ಟೋರಿಯಾ ರಜಿಯ್ಯಾ ಎಂಬ ಬಲು ದೊಡ್ಡ ರಾಜಕಮಲ ನೋಡಲರ್ಹವಾದದ್ದು.

೧೭೯೩ರಲ್ಲಿ ಡಾ. ರಾಕ್ಸಬರ್ಗರು ಸ್ಥಾಪಿಸಿದ ಹರ್ಬೇರಿಯಂನಲ್ಲಿ ಈಗ ೨೫ ಲಕ್ಷ ಒಣಗಿಸಿದ ಸಸ್ಯಗಳ ಮಾದರಿಗಳ ಸಂಗ್ರಹವಿದೆ. ೨೬ ಸಾವಿರ ಗ್ರಂಥಗಳುಳ್ಳ ಅದರ ಪುಸ್ತಕಾಲಯವು ಅಭ್ಯಾಸಿಗಳಿಗೆ ಉಪಯುಕ್ತವಾಗಿದೆ. ಇಡೀ ಜಗತ್ತಿನಿಂದ ಉಷ್ಣವಲಯದ ಸಸ್ಯಗಳ ಅಭ್ಯಾಸಕ್ಕಾಗಿ ವಿದ್ವಾಂಸರು ಇಲ್ಲಿಗೆ ಬರುತ್ತಾರೆ.

ತಿಂಗಳಿಗೆ ೨೦೦ ರೂಪಾಯಿ ವೆಚ್ಚದೊಡನೆ ಪ್ರಾರಂಭವಾದ ಈ ಉದ್ಯಾನಕ್ಕಾಗಿ ಇಂದು ಸರಕಾರಕ್ಕೆ ವರ್ಷಕ್ಕೆ ೩.೫ ಲಕ್ಷ ವೆಚ್ಚಬರುತ್ತದೆ. ೧೯೩೫ ರ ವರೆಗೆ ವಿದೇಶಿ ಸುಪರಿಂಟೆಂಡೆಂಟರೇ ಇದನ್ನು ನೋಡಿಕೊಳ್ಳುತ್ತಿದ್ದರು. ಆ ವರ್ಷ ಡಾ. ವಿಶ್ವಾಸರು ಆ ಸ್ಥಾನಕ್ಕೆ ನೇಮಕ ಹೊಂದಿದರು. ಅವರ ನಂತರ ಈಗ ಡಾ. ಚಟರ್ಜಿಯವರು ಸುಪರಿಂಟೆಂಡೆಂಟರಾಗಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ ಅಸಂಖ್ಯ ನಿರಾಶ್ರಿತರ ಆಗಮನದಿಂದ ವ್ಯಾಕುಲವಾದ ಕಲಕತ್ತಾ ನಗರದಲ್ಲಿ ಸಸ್ಯಶಾಸ್ತ್ರೀಯ ಉದ್ಯಾನವಿದು ಮನಸ್ಸನ್ನು ಹಗುರ ಮಾಡಿಕೊಳ್ಳಲು ಆದರ್ಶ ಸ್ಥಾನವಾಗಿದೆ. ಪ್ರತಿನಿತ್ಯ ಸಾವಿರಾರು ಜನರು ಇದರ ನೆರಳಲ್ಲಿ ಕುಳಿತು, ಇದರ ೧೦ ಮೈಲುದ್ದದ ರಸ್ತೆಗಳಲ್ಲಿ ನಡೆದು, ಇಲ್ಲಿನ ವೃಕ್ಷಗಳ ಕೆಳಗೆ ಸಕುಟುಂಬವಾಗಿ ವನಭೋಜನ ಮಾಡಿ ಪ್ರಪಂಚದ ಕಷ್ಟಗಳನ್ನು ಮರೆಯುತ್ತಾರೆ ಕ್ರಿಸ್‌ಮಸ್, ನವವರ್ಷ ಮೊದಲಾದ ಹಬ್ಬಗಳಲ್ಲಿ ಇಲ್ಲಿ ದಿನಕ್ಕೆ ೮೦,೦೦೦ ದ ವರೆಗೂ ಜನರು ಬಂದು ಹೋಗುತ್ತಾರೆ. ಈ ಮಾನಸೋಲ್ಲಾಸವೊಂದೇ ಸಾಲದೇ ಅದರ ಅಸ್ತಿತ್ವವನ್ನು ಸಾರ್ಥಕಗೊಳಿಸಲು?

ರೈಲ್ವೆ ಪ್ರಯಾಣಿಕ : (ಸ್ಟೇಶನ್ ಮಾಸ್ಟರಿಗೆ) ಸಾರ್, ಇಲ್ಲಿ ಎರಡು ಬಾಳೆ ಹಣ್ಣಿನ ಬುಟ್ಟಿ ಮತ್ತು ದ್ರಾಕ್ಷಿ ಹಣ್ಣಿನ ಬುಟ್ಟಿ ಯಾರೋ ಬಿಟ್ಟು ಹೋಗಿದ್ದಾರೆ.

ಸ್ಟೇಶನ್ ಮಾಸ್ಟರ್ : ರೈಲ್ವೆ ಕೋಡ್ ಪ್ರಕಾರ ಇನ್ನು ಆರು ತಿಂಗಳಲ್ಲಿಯೂ ಯಾರೂ ಇದನ್ನು ಕೇಳದಿದ್ದರೆ, ಇದು ನಿಮಗೆ ಸೇರುತ್ತೆ.

—ಎನ್. ಗುರುರಾಜ್, ಶಿವಮೊಗ್ಗಾ.

ಚಿಕ್ಕ ಉದ್ದಿಮೆಗಾರರಿಗೊಂದು
ಸುಸಂದರ್ಭ

ತೌಡಿನಿಂದ ಎಣ್ಣೆ

ಮೈಸೂರಿನ ಆಹಾರ ಸಂಶೋಧನಾ-ಲಯದ ಪ್ರಕಟನೆಗಳ ಆಧಾರದಿಂದ

ದೇಶದ ಸಂಪತ್ತು ಹೆಚ್ಚುವದಕ್ಕೆ ದೇಶದಲ್ಲಿ ನಾನಾ ಬಗೆಯ ಉದ್ದಿಮೆ-ವ್ಯವಸಾಯಗಳು ನಡೆಯುವದೂ ಅವುಗಳ ಉತ್ಪಾದನೆಗೆ ಯೋಗ್ಯ ಪೇಟೆಯಿರುವದೂ ಅಗತ್ಯವಾಗಿದೆ.

ಹೊಸ ಉದ್ದಿಮೆಗಳ ವಿಚಾರ ಮಾಡುವಾಗ ಮೈಸೂರಿನಲ್ಲಿರುವ ಕೇಂದ್ರ ಆಹಾರ ಮತ್ತು ತಾಂತ್ರಿಕ ಸಂಶೋಧನೆ ಸಂಸ್ಥೆಯು ಮಾಡಿರುವ ಒಂದು ಸೂಚನೆ ಗಮನಾರ್ಹವಾಗಿದೆ. ಭಾರತದಲ್ಲಿ ಚಿಕ್ಕಪುಟ್ಟ ಉದ್ದಿಮೆಗಳಿಗೆ ಎಷ್ಟು ವಿಸ್ತಾರವಾದ ಕ್ಷೇತ್ರವಿದೆ ಎಂದು ಇದರಿಂದ ಗೊತ್ತಾಗುವದು. ಈ ಸಂಸ್ಥೆಯ ಸಂಶೋಧನೆಗಳ ಪ್ರಯೋಜನ ಪಡೆದು ನಿರುದ್ಯೋಗ ನಿವಾರಣೆಗಾಗಿ ಹೊಸ ಉದ್ದಿಮೆಗಳನ್ನು ಸ್ಥಾಪಿಸಲು ಸರಕಾರಗಳು ಮುಂದೆ ಬರಬಹುದಾಗಿದೆ, ಹಾಗೆ ಬರುವದು ಅವಶ್ಯವೂ ಆಗಿದೆ.

ಅಕ್ಕಿಯ ತೌಡು ದನಗಳಿಗೆ ಹಾಕಲು ಮಾತ್ರ ಉಪಯುಕ್ತ ಎಂದು ನಾವು ತಿಳಿಯುತ್ತೇವಲ್ಲವೇ? ಆದರೆ ಕೇಂದ್ರ ಆಹಾರ ಮತ್ತು ತಾಂತ್ರಿಕ ಸಂಸ್ಥೆಯು ಇದರಿಂದ ಎಣ್ಣೆ ತೆಗೆಯಬಹುದೆಂದು ಸೂಚಿಸಿದೆ. ಅಕ್ಕಿ ಬೆಳೆಯುವ ದೇಶಗಳಲ್ಲೆಲ್ಲ ಈ ಉದ್ಯೋಗ ನಡೆಯಬಹುದಾಗಿದೆ. ಆದರೆ ಸದ್ಯಕ್ಕೆ ಅಮೇರಿಕ, ಚೀನ ಮತ್ತು ಜಪಾನಗಳಲ್ಲಿ ಮಾತ್ರ ತೌಡಿನಿಂದ ಎಣ್ಣೆ ತೆಗೆಯುತ್ತಾರೆ. ನಮ್ಮ ದೇಶದಲ್ಲಿ ವಿಪುಲವಾಗಿ ಅಕ್ಕಿ ಬೆಳೆಯುತ್ತಿದ್ದರೂ ನಮಗೆ ಈ ಉದ್ಯೋಗದ ಕಲ್ಪನೆಯೇ ಇಲ್ಲ. ಈಗಷ್ಟೇ ಮೈಸೂರಿನಲ್ಲಿರುವ ಕೇಂದ್ರ ಆಹಾರ ಮತ್ತು ತಾಂತ್ರಿಕ ಸಂಶೋಧನ ಸಂಸ್ಥೆ ತೌಡಿನಿಂದ ಎಣ್ಣೆ ತೆಗೆಯುವ ಸಣ್ಣ ಕಾರಖಾನೆಯನ್ನು ಆರಂಭಿಸಿದೆ.

ಕೊಂಕಣದಲ್ಲಿ ಅಕ್ಕಿ ಕುಟ್ಟುವ ಸ್ತ್ರೀಯರಿಗೆ ಕೂಲಿಯ ಬದಲು ತೌಡು ಕೊಡುತ್ತಾರೆ. ಅವರು ಅದರಿಂದ ರೊಟ್ಟಿ ತಯಾರಿಸಿ ಉದರಂಭರಣ ಮಾಡಿಕೊಳ್ಳುತ್ತಾರೆ. ಭತ್ತದ ಗಿರಣಿಗಳಲ್ಲಿ ಲಕ್ಷಗಟ್ಟಲೆ ಮಣ ತೌಡು ರಾಶಿಯಾಗಿ ಬೀಳುತ್ತದೆ. ಅದನ್ನು ದನಗಳಿಗೆ ತಿನ್ನಲು ಹಾಕುತ್ತಾರೆ.

ಈ ತೌಡಿನಲ್ಲಿ ನೂರಕ್ಕೆ ೧೫ ರಿಂದ ೨೪ ರಷ್ಟು ಎಣ್ಣೆಯ ಅಂಶ, ೩ ರಿಂದ [illegible] ರಷ್ಟು ಸಕ್ಕರೆಯ ಅಂಶ, ೧೦ ರಿಂದ ೧೪ ರಷ್ಟು ಪ್ರೋಟೀನು ಅಂಶ 'ಬ' ಮತ್ತು 'ಈ' ವಿಟಾಮಿನ್‌ಗಳೂ ಮ್ಯಾಗ್ನೇಶಿಯಂ, ಪೋಟ್ಯಾಶಿಯಂ, ಫಾಸ್ಫರಸ, ಅಲ್ಯುಮಿನಿಯಂ, ತಾಮ್ರ, ಕಬ್ಬಿಣ ಮತ್ತು ಮ್ಯಾಂಗನೀಜ ದ್ರವ್ಯಗಳ ಕ್ಷಾರಗಳೂ ಅಲ್ಪ ಪ್ರಮಾಣದಲ್ಲಿ ಇರುತ್ತವೆ.

ತೌಡಿನ ಎಣ್ಣೆಯ ಗುಣಧರ್ಮ ಸೇಂಗಾ ಎಣ್ಣೆಯ ಗುಣಧರ್ಮದಂತೆಯೇ ಇರುತ್ತದೆ. ಈ ಎಣ್ಣೆಯನ್ನು ಸಾಬೂನು ತಯಾರಿಸಲೂ ಉಪಯೋಗಿಸಬಹುದು. ಅದನ್ನು ಸಾಬೂನಿಗೆ ಉಪಯೋಗಿಸಿದರೆ ಈಗ ಅದಕ್ಕಾಗಿ ಉಪಯೋಗಿಸುತ್ತಿರುವ ತಿನ್ನುವ ಎಣ್ಣೆಗಳ ಉಳಿತಾಯವಾಗಬಹುದು.

ಭಾರತದಲ್ಲೆಲ್ಲ ಇರುವ ಭತ್ತದ ಗಿರಣಿಗಳಲ್ಲಿ ಪ್ರತಿವರ್ಷ ಸುಮಾರು ೨ ಕೋಟಿ ೮೦ ಲಕ್ಷ ಟನ್ ಅಕ್ಕಿ ತಯಾರಾಗುತ್ತದೆ. ಇದು ಮತ್ತು ಕೈಯಿಂದ ಕುಟ್ಟಿ ತಯಾರಿಸುವ ಅಕ್ಕಿಯಿಂದ ಸುಮಾರು ೨೦ ರಿಂದ ೩೦ ಲಕ್ಷ ಟನ್ ತೌಡು ದೊರೆಯುತ್ತದೆ. ಇಷ್ಟು ತೌಡಿನಿಂದ ಮೂರು ಲಕ್ಷ ಟನ್ನಿಗಿಂತ ಹೆಚ್ಚು ಎಣ್ಣೆ ಅಂದರೆ ಸುಮಾರು ರೂ. ೩೦ ಕೋಟಿ ಬೆಲೆಯ ಎಣ್ಣೆ ತೆಗೆಯಬಹುದು ಎಂದು ತಜ್ಞರ ಅಂದಾಜಿದೆ.

ಈ ಎಣ್ಣೆಯನ್ನು ತೆಗೆಯಲು ಮೈಸೂರಿನಲ್ಲಿನ ಕೇಂದ್ರ ಆಹಾರ ಮತ್ತು ತಾಂತ್ರಿಕ ಸಂಶೋ-

ಧನ ಸಂಸ್ಥೆ ಒಂದು ಹೊಸರೀತಿಯನ್ನು ಶೋಧಿಸಿದೆ. ಈ ಪದ್ಧತಿಯಿಂದ ಎಣ್ಣೆ ತೆಗೆಯುವಾಗ ಅಕ್ಕಿಯಲ್ಲಿರುವ ಅರಗು, ಜೀವನಸತ್ವಗಳಿರುವ ಸಕ್ಕರೆಯ ಪಾಕ ಮತ್ತು ಸಾಬೂನು ಮಾಡಲು ಉಪಯುಕ್ತವಾಗಿರುವ ದ್ರವ್ಯಗಳನ್ನೂ ಕೂಡ ಪ್ರತ್ಯೇಕವಾಗಿ ತೆಗೆಯಬಹುದು. ಈ ಹೊಸ ಪದ್ಧತಿಯಿಂದ ಎಣ್ಣೆ ತೆಗೆಯಲು ಬೇಕಾಗುವ ಅಲ್ಕೋಹಾಲ ಭಾರತದಲ್ಲಿರುವ ಸಕ್ಕರೆಯ ಗಿರಣಿಗಳಲ್ಲಿ ವಿಪುಲಪ್ರಮಾಣದಲ್ಲಿ ಸಿಗುತ್ತದೆ. ಇದಕ್ಕಾಗಿ ವಿದೇಶಗಳನ್ನೇನೂ ಅವಲಂಬಿಸಿ ಕೂಡ್ರುವ ಕಾರಣವಿಲ್ಲ.

ತೌಡಿನ ಎಣ್ಣೆ ತೆಗೆಯಲು ಬೇಕಾಗುವ ಯಂತ್ರಗಳು ಕೂಡ ನಮ್ಮ ದೇಶದಲ್ಲೇ ತಯಾರಾಗಬಲ್ಲವು. ಪ್ರತಿನಿತ್ಯ ೫, ೧೦ ಅಥವಾ ೨೦ ಟನ್ ಎಣ್ಣೆ ತೆಗೆಯಲು ಅನುಕ್ರಮವಾಗಿ ೩, ೫ ಮತ್ತು ೮ ಲಕ್ಷ ರೂಪಾಯಿಗಳಷ್ಟು ಭಂಡವಲ ಬೇಕಾಗುವದು. ಈ ಹೊಸ ಉದ್ಯೋಗವನ್ನಾರಂಭಿಸಿದಲ್ಲಿ ೫೦೦೦ ಕೂಲಿಕಾರರಿಗೂ ತಾಂತ್ರಿಕರು, ರಸಾಯನಶಾಸ್ತ್ರಜ್ಞರು ಮತ್ತು ಇಂಜನಿಯರರು ಎಂದು ೫೦೦ ಜನರಿಗೂ ಉದ್ಯೋಗ ದೊರೆಯುವಂತಿದೆ. ನಿರುದ್ಯೋಗ ನಿವಾರಣೆಗೂ ನೂತನ ಉದ್ದಿಮೆಗಳನ್ನು ನಡೆಸಬೇಕೆನ್ನುವ ಸಾಹಸಿಗಳಿಗೂ ಇದೊಂದು ಒಳ್ಳೆಯ ಸಂಧಿಯುಲ್ಲವೇ?


LUX
TOILET SOAP



ಆಧುನಿಕ ಜಗತ್ತಿನ ನಾಗರಿಕರಿಗೆ
ಅತ್ಯಗತ್ಯವಾದ ಮಾಹಿತಿ

ನೀವು ಬ್ಯಾಂಕಿನಲ್ಲಿ ಖಾತೆ ತೆರೆದಾಗ—

ಪ್ರೊ. ಪಿ. ಸಿ. ಶೇಜವಲಕರ

ಬಾಂಕು ಎಂಬ ಶಬ್ದವನ್ನು ಸರ್ವಸಾಮಾನ್ಯವಾಗಿ ಎಲ್ಲರೂ ಕೇಳಿ ಬಲ್ಲರು. ಆದರೆ ಬಹುತೇಕ ಜನರಿಗೆ ಅದರ ವ್ಯವಹಾರದ ಯಥಾರ್ಥ ಕಲ್ಪನೆ ಇರುವುದಿಲ್ಲ. ತಮ್ಮ ಹೆಸರಿನಲ್ಲಿ ಸಾದಾ ಚೆಕ್ ಅಥವಾ "ಕ್ರಾಸ್ಡ್" ಚೆಕ್ ಬಂದರೆ ಏನು ಮಾಡಬೇಕು, ಬ್ಯಾಂಕ ಮೂಲಕ ವ್ಯವಹಾರ ಹೇಗೆ ಮಾಡಬೇಕು ಎಂದು ಅವರಿಗೆ ತಿಳಿಯದು. ಇಂದಿನ ನಾಗರಿಕ ಜೀವನದ ಜಂಜಾಟದಲ್ಲಿ ಶಹರದಲ್ಲಿ ಜೀವಿಸಿರುವವರಿಗೆ ಬ್ಯಾಂಕ್ ವ್ಯವಹಾರದ ಜ್ಞಾನದಿಂದ ತುಂಬ ಉಪಯೋಗವಿದೆ.

ಬ್ಯಾಂಕಿನಲ್ಲಿ ಸ್ವಲ್ಪವೇ ಹಣದಿಂದ ಆಗಲೊಲ್ಲದೇಕೆ, ತಮ್ಮ ಹೆಸರಿನಲ್ಲಿ ಖಾತೆ ತೆರೆಯುವುದು ಬ್ಯಾಂಕ್ ವ್ಯವಹಾರಕ್ಕೆ ತುಂಬ ಅನುಕೂಲವಾಗಿದೆ. ಸಾಮಾನ್ಯರಿಗೆ ಇದರಿಂದ ನಿಯಮಿತವಾಗಿ ಹಣ ಶಿಲ್ಕು ಇಟ್ಟುಕೊಳ್ಳಲು ಸಹಾಯವಾಗುವುದಾದರೆ ವ್ಯಾಪಾರಾದಿ ವ್ಯವಹಾರಗಳಲ್ಲಿ ತೊಡಗಿರುವವರಿಗೆ ತಮ್ಮ ಕೊಡ-ತೆಗೆದುಕೊಳ್ಳುವ ವ್ಯವಹಾರವನ್ನ ಸುರಕ್ಷಿತ ಮತ್ತು ಸುಲಭ ರೀತಿಯಲ್ಲಿ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಹಣವನ್ನು ಉಳಿಸುವ ವಿಚಾರದಿಂದ ಬ್ಯಾಂಕಿನಲ್ಲಿ ಖಾತೆ ತೆರೆಯುವುದಾದರೆ "ಸೇವಿಂಗ್ಸ ಅಕೌಂಟ್" ಖಾತೆ ಒಳ್ಳೆಯದು. ಆದರೆ ಉದ್ಯೋಗ-ವ್ಯವಹಾರಕ್ಕಾಗಿ ಪ್ರತಿನಿತ್ಯವೂ ಅನೇಕ ಸಲ ಹಣ ಇಟ್ಟು – ತೆಗೆದುಕೊಳ್ಳುವುದಾದರೆ "ಕರೆಂಟ್ ಅಕೌಂಟ" ಖಾತೆ ತೆರೆಯುಬೇಕು.

"ಕರೆಂಟ್ ಅಕೌಂಟ" ಖಾತೆಯಿಂದ ಈ ಮುಂದಿನ ಪ್ರಯೋಜನಗಳಾಗುವವು:

೧) ಅತಿ ಅಗತ್ಯವಾದಷ್ಟೇ ಹಣವನ್ನು ಬಳಿಯಲ್ಲಿಟ್ಟುಕೊಂಡು ಉಳಿದದ್ದನ್ನು ಬ್ಯಾಂಕಿನಲ್ಲಿಡುವುದರಿಂದ ಕಳವಾಗುವ ಇಲ್ಲವೆ ಬೆಂಕಿ ಮೊದಲಾದ್ದರಿಂದ ನಷ್ಟವಾಗುವ ಭಯವಿಲ್ಲ.

೨) ಯಾರಿಗೇ ಆಗಲಿ, ಹಣ ಕೊಡಬೇಕಾದಲ್ಲಿ ಚೆಕ್ ಮೂಲಕ ಕೊಡಲು ಬರುವುದು. ಪ್ರತಿ ಸಲವೂ ಬಳಿಯಲ್ಲಿ ರೋಖು ಹಣ ಇಟ್ಟುಕೊಳ್ಳಬೇಕಾಗುವುದಿಲ್ಲ. ಚೆಕ್ ಮೂಲಕ ಹಣ ಕೊಟ್ಟಲ್ಲಿ ಯಾರಿಗೆ ಹಣ ಕೊಟ್ಟಿದೆಯೋ ಅವನು ಹಣ ಪಡೆದದ್ದು ಬ್ಯಾಂಕಿನ ಲೆಕ್ಕದ ಪುಸ್ತಕದಲ್ಲಿ ದಾಖಲಾಗುವುದರಿಂದ ಹಣ ಕೊಟ್ಟ ಬಗ್ಗೆ ಸಾಕಷ್ಟು ಪುರಾವೆ ಉಳಿಯುವುದು.

೩) ಉದ್ಧರಿಯಾಗಿ ಸರಕು ತರಿಸುವ ಸಂದರ್ಭದಲ್ಲಿ ಕೆಲ ಸಲ ವ್ಯಾಪಾರಿಗಳು ಪೂರೈಕೆಗಾರರಿಗೆ ತಮ್ಮ ಆರ್ಥಿಕ ಸ್ಥಿತಿಯನ್ನು ತಿಳಿಸಬೇಕಾಗುತ್ತದೆ. ಇಂಥ ಸಮಯದಲ್ಲಿ ವ್ಯಾಪಾರಿಗಳು ತಮ್ಮ ಬ್ಯಾಂಕಿನ ಹೆಸರನ್ನು ತಿಳಿಸಬಹುದು. ವ್ಯಾಪಾರಿಗಳು ಒಪ್ಪಿದಲ್ಲಿ ಬ್ಯಾಂಕು ಕೂಡ ಅವರ ಆರ್ಥಿಕ ಸುಸ್ಥಿತಿಯ ಬಗೆ ಶಿಫಾರಸು ಮಾಡಬಲ್ಲದು.

೪) ಹಣ ಬರುವವರಿಂದ ಚೆಕ್ ಮೂಲಕ ಹಣ ಬಂದರೆ ಅದನ್ನು ಬ್ಯಾಂಕಿನ ತಮ್ಮ ಖಾತೆಗೆ

"ಸ್ತ್ರೀ" ಯಿಂದ ಸಂಗೃಹೀತ

ಜಮಾ ಮಾಡಿಕೊಳ್ಳಬಹುದು.

೫) ಬ್ಯಾಂಕುಗಳು ಗಿರಾಕಿಗಳ ಪರವಾಗಿ ಸಣ್ಣಪುಟ್ಟ ಕೆಲಸಗಳನ್ನು ಮಾಡುವವು; ಯಾವುದೊಂದು ಕಂಪನಿಯಿಂದ ಡಿವಿಡೆಂಡ್ ವಸೂಲು ಮಾಡಿಕೊಳ್ಳುವುದು, ವಿಮೆಯ ಕಂತು ತುಂಬುವುದು ಇತ್ಯಾದಿ. ಈ ಕೆಲಸಗಳಿಗಾಗಿ ಬ್ಯಾಂಕು ಅತ್ಯಲ್ಪ ಕಮೀಶನ್ ತೆಗೆದುಕೊಳ್ಳುವುದು.

೬) ಯಾವುದೊಂದು ಉದ್ಯೋಗದಲ್ಲಿ ಹಣ ತೊಡಗಿಸಬೇಕೆಂದಿದ್ದಲ್ಲಿ ಇಲ್ಲವೆ ಶೇರ್ಸ್ ಖರೀದಿ ಮಾಡುವುದಿದ್ದಲ್ಲಿ ಬ್ಯಾಂಕುಗಳು ತಮ್ಮ ಖಾತೇದಾರರಿಗೆ ಯೋಗ್ಯ ಮಾರ್ಗದರ್ಶನ ಮಾಡುವವು.

ಸೇಫ್ ಡಿಪಾಜಿಟ್ ವಾಲ್ಟ್

ಯಾರೇ ಆಗಲಿ, ತಮ್ಮ ಹತ್ತಿರ ಇರುವ ಬೆಲೆಬಾಳುವ ದಾಗಿನೆಗಳು, ಮಹತ್ವದ ಕಾಗದ ಪತ್ರಗಳನ್ನು ಸುರಕ್ಷಿತತೆಗಾಗಿ ಬ್ಯಾಂಕಿನಲ್ಲಿಡಬಹುದು.

ಬೆಲೆಯುಳ್ಳ ವಸ್ತುಗಳನ್ನು ಸುರಕ್ಷಿತವಾಗಿಡಲು ಕೆಲವು ಬ್ಯಾಂಕುಗಳಲ್ಲಿ ಸ್ವತಂತ್ರ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ವಸ್ತುಗಳನ್ನು ಸುರಕ್ಷಿತವಾಗಿಡುವ ಸ್ಥಳಕ್ಕೆ "ಸೇಫ್ ಡಿಪಾಜಿಟ್ ವಾಲ್ಟ" ಎನ್ನುತ್ತಾರೆ. ಈ ಭದ್ರ ಕೋಣೆಯಲ್ಲಿ ಸಣ್ಣ ದೊಡ್ಡ ಆಕಾರದ ಅನೇಕ ಭದ್ರಖಾನೆ (ಲಾಕರು) ಗಳಿರುತ್ತವೆ. ಅವನ್ನು ಯಾರು ಬೇಕಾದರೂ ಬಾಡಿಗೆಗೆ ತೆಗೆದುಕೊಳ್ಳಬಹುದು. ಬ್ಯಾಂಕಿನ ಕೆಲಸದ ಸಮಯದಲ್ಲಿ ಯಾವಾಗ ಬೇಕಾದರೂ ನಮ್ಮ ವಸ್ತುಗಳನ್ನು ಇಡಲು ಅಥವಾ ತಿರುಗಿ ತೆಗೆದುಕೊಳ್ಳಲು ಬರುತ್ತದೆ. ಒಂದೇ ದಿನ ಅನೇಕ ಸಲ ಇಟ್ಟು ತೆಗೆಯಲೂ ಅಡ್ಡಿ ಇಲ್ಲ. ಲಾಕರಿನ ಬೀಗಕ್ಕೆ ಎರಡು ಕೈಗಳಿರುತ್ತವೆ: ಒಂದು ಬ್ಯಾಂಕಿನ ಹತ್ತಿರ, ಇನ್ನೊಂದು ಗಿರಾಕಿಯ ಹತ್ತಿರ. ಎರಡೂ ಕೀಲಿಗಳನ್ನು ಹಚ್ಚಿದ ವಿನಾ ಲಾಕರು ತೆರೆಯುವುದಿಲ್ಲ. ಗಿರಾಕಿಯು ತನ್ನ ಕೀಲಿ ಹಚ್ಚಿ ಹೋಗುವುದರಿಂದ ಬ್ಯಾಂಕಿನ ಪ್ರತಿನಿಧಿಯು ತನ್ನ ಕೀಲಿ ಹಾಕಿದರೂ ಅವನಿಗೆ ಯಾವ ವಸ್ತುವನ್ನಿಟ್ಟರು, ಯಾವುದನ್ನು ತೆಗೆದುಕೊಂಡರೆಂದು ತಿಳಿಯಲಾರದು. ಬಾಡಿಗೆಗೆ ಕೊಟ್ಟ ಪ್ರತಿಯೊಂದು ಲಾಕರಿನ ನಂಬರ, ಕೀಲಿಯ ನಂಬರ, ಬಾಡಿಗೆದಾರ ಕೊಟ್ಟ ಸಾಂಕೇತಿಕ ಶಬ್ದ ಗುಪ್ತವಾಗಿಡಲ್ಪಡುತ್ತವೆ. ದೊರೆಯುವ ಸುರಕ್ಷಿತತೆ ಮತ್ತು ನಿರ್ಭೀತಿಗಳ ಮಾನದಲ್ಲಿ ಕೊಡುವ ಬಾಡಿಗೆ ತೀರ ಕಡಿಮೆಯಿರುತ್ತದೆ. ದೊಡ್ಡ ದೊಡ್ಡ ಸೀಲು ಹಾಕಿದ ಪೆಟ್ಟಿಗೆಗಳನ್ನು ಕೂಡ ಲಾಕರುಗಳಲ್ಲಿ ಇಡಬಹುದಾಗಿದೆ.

ಬೇರೆ ಬೇರೆ ಖಾತೆಗಳು

ಬ್ಯಾಂಕಿನಲ್ಲಿ ಮುಖ್ಯವಾಗಿ ಮೂರು ಬಗೆಯ ಖಾತೆಗಳಿರುವವು.

ಚಾಲ್ತಿ ಖಾತೆ (ಕರೆಂಟ ಅಕೌಂಟ)– ಈ ಖಾತೆಯನ್ನು ತೆರೆದರೆ ಖಾತೆದಾರನಿಗೆ ಒಂದೇ ದಿನದಲ್ಲಿ ಬ್ಯಾಂಕಿನ ಕೆಲಸದ ಸಮಯದಲ್ಲಿ ಬೇಕಷ್ಟು ಸಲ ಹಣ ಇಡಲು ಮತ್ತು ತೆಗೆದುಕೊಳ್ಳಲು ಬರುತ್ತದೆ. ಆದ್ದರಿಂದ ವ್ಯಾಪಾರಿಗಳಿಗೆ ಈ ಖಾತೆಯೇ ಹೆಚ್ಚು ಅನುಕೂಲ. ಆದರೆ ಈ ಖಾತೆಯ ಮೇಲೆ ಬಡ್ಡಿ ಕೊಡುವ ಪದ್ಧತಿ ಕಡಿಮೆ. ಕೆಲ ಬ್ಯಾಂಕುಗಳಲ್ಲಿ ಸೇಕಡಾ ೪ ಅಥವಾ ೮ ಆಣೆಗಳಷ್ಟು ಬಡಿ ದೊರೆಯುತ್ತದೆ.

ಉಳಿಕೆ ಖಾತೆ (ಸೇವಿಂಗ್ಸ ಅಕೌಂಟ)— ಸ್ವಲ್ಪಸ್ವಲ್ಪವಾಗಿ ಉಳಿಯುವ ಹಣವನ್ನು ಸಂಗ್ರಹಿಸಲು ಈ ಖಾತೆ ಉಪಯುಕ್ತವಿದೆ. ಈ ಖಾತೆಯಲ್ಲಿ ಜಮಾ ಮಾಡಿದ ಹಣವನ್ನು ವಾರಕ್ಕೊಮ್ಮೆ ಅಥವಾ ಎರಡು ಸಲ (ಕೆಲವು ಬ್ಯಾಂಕುಗಳಲ್ಲಿ) ಮಾತ್ರ ತೆಗೆಯಬಹುದು. ಇದರಲ್ಲಿ ಪರಮಾವಧಿಯೆಂದರೆ ಎಷ್ಟು ಹಣ ಇಡಬಹುದೆಂಬ ಬಗ್ಗೆ ನಿರ್ಬಂಧಗಳಿರುತ್ತವೆ. ಈ ಖಾತೆಯಲ್ಲಿಟ್ಟ ಹಣದ ಮೇಲೆ ನೂರಕ್ಕೆ ೧, ೧॥ ಅಥವಾ ೨ರಷ್ಟು ಬಡ್ಡಿ ಸಿಗುತ್ತದೆ. ಎಲ್ಲ ಬ್ಯಾಂಕುಗಳಲ್ಲಿಯೂ ಬಡ್ಡಿಯ ದರ ಒಂದೇ ಆಗಿರುವುದಿಲ್ಲ.

ಚಾಲ್ತಿ ಅಥವಾ ಸೇವಿಂಗ್ಸ್ ಖಾತೆಯನ್ನು ಪ್ರಾರಂಭಿಸಿದವರಿಗೆ ಬ್ಯಾಂಕಿನವರು ಮೂರು ತರದ ಪುಸ್ತಕಗಳನ್ನು ಕೊಡುತ್ತಾರೆ. ಖಾತೆಯಲ್ಲಿ

ಹಣ ಅಥವಾ [ನಿಮಗೆ ಬಂದ] ಚೆಕ್ ಹಾಕ ಬೇಕಾದರೆ ಅದರೊಡನೆ ಪೇ-ಇನ್-ಸ್ಲಿಪ್ ಎಂಬ ಪತ್ರಿಕೆ ತುಂಬಿಕೊಡಬೇಕಾಗುತ್ತದೆ. ಈ ಪತ್ರಿಕೆಗಳನ್ನೊಳಗೊಂಡ ಒಂದು ಪುಸ್ತಕ, ಹಣ ತೆಗೆಯುವಾಗ ಅಥವಾ ಬೇರೆಯವರಿಗೆ ಕೊಡಬೇಕಾದಾಗ ತುಂಬಬೇಕಾದಾಗ "ಚೆಕ್" ಗಳುಳ್ಳ ಪುಸ್ತಕ, ಮತ್ತು ನಿಮ್ಮ ಖಾತೆಯಲ್ಲಾದ ಸಕಲ ವ್ಯವಹಾರಗಳನ್ನು ತೋರಿಸುವ ಪಾಸ್‌ಬುಕ್ ಇವೇ ಆ ಮೂರು ಪುಸ್ತಕಗಳು.

ಖಾತೆ ತೆರೆಯುವಾಗ ಖಾತೆದಾರನ ಸಹಿಯ ಮಾದರಿಗಾಗಿ ಒಂದು ಕಾರ್ಡಿನ ಮೇಲೆ ಸಹಿಗಳನ್ನು ಮಾಡಿಸಿಕೊಳ್ಳುತ್ತಾರೆ. ಮುಂದೆ ಮಾಡುವ ಸಹಿಗಳೆಲ್ಲ ಈ ಮಾದರಿಯವೇ ಆಗಿರಬೇಕಾಗುತ್ತದೆ.

ಮುದ್ದತು ಠೇವಿನ ಖಾತೆ. ಕೆಲವೊಂದು ನಿರ್ದಿಷ್ಟ ಅವಧಿಯ ವರೆಗೆ ಈ ಖಾತೆಯಲ್ಲಿ ಹಣ ಇಡಲು ಬರುತ್ತದೆ. ಈ ಅವಧಿ ಮುಗಿಯುವ ವರೆಗೆ ಖಾತೇದಾರನಿಗೆ ಹಣ ತಿರುಗಿ ಸಿಗುವುದಿಲ್ಲ. ಈ ಖಾತೆಯಲ್ಲಿ ಬೇಕಾದಾಗ ಇಡುವುದು-ತೆಗೆಯುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಠೇವುದಾರರಿಗೆ ಹಣ ತುಂಬುವ, ತೆಗೆಯುವ, ಅಥವಾ ಲೆಕ್ಕದ ಪುಸ್ತಕಗಳು ಸಿಗುವುದಿಲ್ಲ. ಹಣ ಇಟ್ಟ ಬಗ್ಗೆ ಪಾವತಿ (ಫಿಕ್ಸ್‌ಡ್ ಡಿಪಾಜಿಟ್ ರಿಸೀಟ) ಮಾತ್ರ ಸಿಗುತ್ತದೆ. ಮುದ್ದತು ಠೇವಿಗೆ ಉಳಿಕೆ ಖಾತೆಯ ಹಣಕ್ಕೆ ದೊರೆಯುವುದಕ್ಕಿಂತ ಹೆಚ್ಚು ಬಡ್ಡಿ ಸಿಗುತ್ತದೆ.

ಚೆಕ್ಕಿನ ಮೂಲಕ ವ್ಯವಹಾರ

ಚೆಕ್ ಬರೆಯುವಾಗ ಬಹಳ ಎಚ್ಚರ ವಹಿಸಬೇಕಾಗುತ್ತದೆ. ಸ್ವಲ್ಪ ತಪ್ಪಾದರೂ ಚೆಕ್ಕಿನ ಹಣ ಸಿಗುವುದು ಅಶಕ್ಯವಾಗುತ್ತದೆ. ಎರಡನೆಯವರಿಗೆ ಚೆಕ್ ಕೊಡುವಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿದೆಯೋ ಇಲ್ಲವೋ ಎಂದು ನೋಡಿಕೊಳ್ಳುವುದು ಒಳಿತು. [ಖಾತೆಯಲ್ಲಿ ಸಾಕಷ್ಟು ಹಣವಿಲ್ಲದಿದ್ದರೆ ಬ್ಯಾಂಕಿನವರು ಚೆಕ್ಕಿಗೆ ಹಣ ಕೊಡಲಾರರು.] ಸ್ಪಷ್ಟ ಅಕ್ಷರ

ಗಳಲ್ಲಿ ಶಾಯಿಯಿಂದ ಚೆಕ್ ಬರೆಯಬೇಕು. ಕಾಟು ಹಾಕಿದರೆ ಅಲ್ಲಿ ಸಹಿ ಮಾಡಬೇಕು. ರಕಮನ್ನು ಅಕ್ಷರ ಮತ್ತು ಅಂಕೆ ಎರಡರಲ್ಲೂ ಬರೆಯಬೇಕು. ಹಿಂದಿನ ಅಥವಾ ಮುಂದಿನ ತಾರೀಖನ್ನು ಹಾಕಬಹುದು; ಆದರೆ ಆರು ತಿಂಗಳಿಗಿಂತ ಹಿಂದಿನ ತಾರೀಖಿನ ಚೆಕ್ಕುಗಳು ಅಧಿಕಾರಿಗಳ ಅಪ್ಪಣೆಯಿಲ್ಲದೆ ಮುರಿಯುವುದಿಲ್ಲ. ಬಹಳ ಮುಂದಿನ ತಾರೀಖು ಹಾಕಿದರೆ ಚೆಕ್ ತೆಗೆದುಕೊಂಡವನಿಗೆ ಅಷ್ಟು ಅವಧಿಯ ವರೆಗೆ ಹಾದಿ ಕಾಯುವುದು ತೊಂದರೆಯಾಗುತ್ತದೆ.

ಬೇರರ್ ಮತ್ತು ಆರ್ಡರ್ ಚೆಕ್. ಯಾರ ಹೆಸರಿನಲ್ಲಿ ಚೆಕ್ ಬರೆಯುತ್ತೇವೆಯೋ ಆ ಹೆಸರಿನ ಮುಂದೆ "ಬೇರರ್" ಅಥವಾ "ಆರ್ಡರ" ಎಂಬ ಎರಡು ಶಬ್ದಗಳಲ್ಲಿ ಒಂದನ್ನೇ ಇಡಬೇಕಾಗುತ್ತದೆ. ಬೇರರ್ ಶಬ್ದವಿದ್ದರೆ ಆ ಚೆಕ್ಕನ್ನು ಬ್ಯಾಂಕಿಗೆ ತಂದವನಿಗೆ ಬ್ಯಾಂಕು ಹಣಕೊಟ್ಟು ಬಿಡುತ್ತದೆ. ಇಂಥ ಚೆಕ್ಕು ಕಳವಾದರೆ ಪ್ರಮಾದವಾಗುವ ಸಂಭವವುಂಟು. ತನ್ನ ಯಾವುದಾದರೊಂದು ಚೆಕ್ಕಿಗೆ ಹಣಕೊಡಬಾರದೆಂದು ಬ್ಯಾಂಕಿನವರಿಗೆ ಮುಂದಾಗಿ ತಿಳಿಸಿದರೆ ಅವರು ಹಣ ಕೊಡಲು ನಿರಾಕರಿಸುವರು; ಆದರೆ ಹೀಗೆ ತಿಳಿಸುವ ಮೊದಲೇ ಚೆಕ್ಕಿನ ಅಪಹಾರಕನು ಅದನ್ನು ಬ್ಯಾಂಕಿನಲ್ಲಿ ಮುರಿಸಿಕೊಂಡುಬಿಟ್ಟರೆ ಅದಕ್ಕೇನೂ ಉಪಾಯವಿಲ್ಲದಾಗುವುದು.

"ಬೇರರ್" ಬದಲು "ಆರ್ಡರ್" ಶಬ್ದ ಬರೆದರೆ ಸಿಕ್ಕಸಿಕ್ಕವರು ಚೆಕ್ಕನ್ನು ಮುರಿಸಲಾರರು. ಚೆಕ್ಕಿನ ಮೇಲೆ ಯಾರ ಹೆಸರಿರುವುದೊ ಆ ವ್ಯಕ್ತಿಗೆ ಅಥವಾ ಆ ವ್ಯಕ್ತಿ ತನ್ನ ಸಹಿ ಹಾಕಿ ಇಂಥವರಿಗೆ ಕೊಡಬೇಕು ಎಂದು ಬರೆದಲ್ಲಿ ಆ ವ್ಯಕ್ತಿಗೆ ಮಾತ್ರ ಚೆಕ್ಕಿನ ಹಣ ದೊರೆಯುತ್ತದೆ. "ಆರ್ಡರ್" ಚೆಕ್ ಹೆಚ್ಚು ಸುರಕ್ಷಿತವಾದದ್ದು. ಏಕೆಂದರೆ ಚೆಕ್ಕಿನ ಮೇಲೆ ಹೆಸರಿರುವ ವ್ಯಕ್ತಿಯು ಇಲ್ಲವೆ ಆತನಿಂದ ಅಧಿಕಾರ ಹೊಂದಿದ ವ್ಯಕ್ತಿಯು ಚೆಕ್ ಮುರಿಸುವಾಗ ಸಹಿ ಮಾಡಬೇಕಾಗುತ್ತದೆ. ಬ್ಯಾಂಕ್ ಅಧಿಕಾರಿಗೆ ಸಂಶಯ ಬಂದಲ್ಲಿ ಚೆಕ್ಕಿನ ಒಡೆಯ ಅಥವಾ ಅಧಿಕೃತ ಮನುಷ್ಯ ತಾನೇ ಎಂದು ಆತ ಖಾತ್ರಿ ಮಾಡಿಕೊಡಬೇಕಾಗುತ್ತದೆ. "ಬೇರರ್" ಮತ್ತು "ಆರ್ಡರ್" ಎರಡೂ ಶಬ್ದಗಳನ್ನು ಹೊಡೆದು ಹಾಕಿದ್ದರೆ ಅಂಥ ಚೆಕ್ಕನ್ನು "ಆರ್ಡರ್" ಚೆಕ್ ಎಂದು ಬ್ಯಾಂಕು ತಿಳಿಯುತ್ತದೆ.

ಚೆಕ್ಕಿನ ಹಸ್ತಾಂತರ. ನಿಮಗೆ ಬೇರೆಯವರಿಂದ ಬಂದ ಚೆಕ್ಕನ್ನು ನಿಮ್ಮ ಖಾತೆಗೇ ಜಮಾ ಮಾಡಬೇಕು ಅಥವಾ ನೀವೇ ಹೋಗಿ ಮುರಿಸಿಕೊಳ್ಳಬೇಕು ಎಂದೇನೂ ಇಲ್ಲ. ಎರಡನೆಯವರಿಗೆ ಹಣ ಕೊಡತಕ್ಕದಿದ್ದಲ್ಲಿ ಅವರ ಹೆಸರು ಬರೆದು ಚೆಕ್ಕನ್ನು ಅವರಿಗೆ ಕೊಡಲು ಬರುತ್ತದೆ. ಇದಕ್ಕೆ "ಎಂಡೋರ್ಸ್‌ಮೆಂಟ್" ಅನ್ನುತ್ತಾರೆ. ನಿಮ್ಮ ಹೆಸರಿರುವ ಚೆಕ್ಕಿನ ಬೆನ್ನ ಹಿಂದೆ ಪಕ್ಕದಲ್ಲಿ ನೀವು ಎರಡು ಮೂರು ರೀತಿಯಲ್ಲಿ "ಎಂಡೋರ್ಸ್ ಮೆಂಟ್" ಮಾಡಬಹುದು. ನಿಮ್ಮ ಸಹಿಮಾಡಿ ತಾರೀಖನ್ನಷ್ಟೇ ಬರೆಯುವುದು ಒಂದು ರೀತಿ. ಇದಕ್ಕೆ "ಜನರಲ್ ಎಂಡೋರ್ಸ್‌ಮೆಂಟ" ಎನ್ನಬಹುದು. ಹೀಗೆ ಮಾಡಿದಾಗ ನೀವು ಯಾರ ಹೆಸರನ್ನೂ ಬರೆದಿರುವುದಿಲ್ಲವಾದ್ದರಿಂದ ಆ ಚೆಕ್ಕನ್ನು ಯಾರು ಬೇಕಾದರೂ ಮುರಿಸಬಹುದು. ಅದು "ಬೇರರ್" ಚೆಕ್ಕಿನಂತಾಗುವುದು. ಆದರೆ ಚೆಕ್ಕಿನ ಹಿಂಬದಿಯಲ್ಲಿ ಯಾರೊಬ್ಬರ ಹೆಸರು ಬರೆದು ಸಹಿ ಹಾಕಿದರೆ ಅದು "ಸ್ಪೆಶಲ್ ಎಂಡೋರ್ಸ್‌ಮೆಂಟ್" ಆಗುವುದು. ಇದರಿಂದ ನೀವು ಬರೆದ ಹೆಸರಿನ ವ್ಯಕ್ತಿಗೆ ಅಥವಾ ಅವನು ಯಾರ ಹೆಸರು ಬರೆಯುತ್ತಾನೊ ಅವನಿಗೆ ಮಾತ್ರ ಚೆಕ್ ಮುರಿಸಲು ಬರುವುದು. ಹೀಗೆ ಹೆಸರು ಬರೆಯುವಾಗ ಬರೆದ ಹೆಸರಿನ ಮುಂದೆ "ಓನ್ಲಿ" ಎಂದು ಬರೆದರೆ (ಉದಾ— ಪೇ ಸಿ. ಸಿ. ಕುಮಟಾ ಓನ್ಲಿ) ಆ ಹೆಸರಿನವನೇ ಹಣ ಪಡೆಯಬೇಕಾಗುವುದಲ್ಲದೆ ಬೇರೆಯವರರಿಗೆ ಬರೆದುಕೊಡಲು ಬರುವುದಿಲ್ಲ.

ಕ್ರಾಸ್ಡ್ ಚೆಕ್ಕುಗಳು. ಚೆಕ್ಕಿನ ಹಣ ಕೊಡವಾಗ ಹಣ ತೆಗೆದು ಕೊಳ್ಳುವವನ ಸಹಿ ತೆಗೆದು

ಕೊಳ್ಳುತ್ತಾರಾದರೂ ಸುಳ್ಳು ಸಹಿ ಮಾಡಿ ಹಣ ಪಡೆಯುವಂಥ ಮೋಸಕೃತಿಗಳು ಜರುಗುವುದು ಅಸಂಭವವಲ್ಲ. ಇಂಥ ಮೋಸ ನಡೆಯಬಾರದೆಂದು ಚೆಕ್ಕಿನ ಮೇಲ್ಗಡೆಯಲ್ಲಿ ಅಡ್ಡವಾಗಿ ಎರಡು ಸಮಾಂತರ ಗೆರೆಗಳನ್ನು ಎಳೆದು ಹೆಚ್ಚಿನ ಸುರಕ್ಷಿತತೆ ಸಾಧಿಸಬಹುದು. ಈ ಗೆರೆಗಳಿರುವ ಚೆಕ್ಕಿಗೆ "ಕ್ರಾಸ್ಡ್ ಚೆಕ್" ಎನ್ನುತ್ತಾರೆ. ಇಂಥ ಚೆಕ್ಕಿನ ಹಣ ಕೈಗೆ ಸಿಗುವುದಿಲ್ಲ ಯಾರ ಹೆಸರಿನಲ್ಲಿ ಚೆಕ್ ಇದೆಯೊ ಅವನ (ಅಥವಾ ಅವನಿಂದ ಅಧಿಕಾರ ಪಡೆದವನ) ಖಾತೆಗೆ ಜಮಾ ಆಗುವುದಾದ್ದರಿಂದ ಮೋಸಗಾರರು ಚೆಕ್ ತಂದರೂ ಚೆಕ್ಕಿನ ಮೇಲೆ ಅಥವಾ ಹಿಂಬದಿಗೆ ಕೊನೆಗೆ ಯಾರ ಹೆಸರಿರುವುದೋ ಅವರ ಖಾತೆಗೆ ಹಣ ಜಮಾ ಆಗುವುದು. ಇಂಥ ಚೆಕ್ ಪಡೆದಾಗ ಖಾತೆಯಿರದಿದ್ದವರು ಒಂದೇ ಖಾತೆ ತೆರೆಯಬೇಕಾಗುವುದು, ಇಲ್ಲವೆ ಖಾತೆಯಿದ್ದವರ ಹೆಸರಿಗೆ ಜಮಾ ಮಾಡಿಸಿ ಅವರಿಂದ ಹಣ ಪಡೆಯಬೇಕಾಗುವದು. ಅಥವಾ ಚೆಕ್ ಕೊಟ್ಟವನ ಕಡೆಯಿಂದ ರೋಖ ಹಣ ಕೊಡಿರಿ ಎಂದು ಆ ಎರಡು ಸಮಾಂತರ ಗೆರೆಗಳ ನಡುವೆ ಬರೆಸಿಕೊಂಡು ಅವನಿಂದ ಸಹಿ ಮಾಡಿಸಿಕೊಳ್ಳಬೇಕಾಗುವುದು.

ಕೆಲಸಲ ಈ ಗೆರೆಗಳ ನಡುವೆ ಒಂದು ವಿಶಿಷ್ಟ ಬ್ಯಾಂಕಿನ ಹೆಸರು ಬರೆಯಲ್ಪಟ್ಟಿರುತ್ತದೆ. ಆಗ ಆ ಬ್ಯಾಂಕಿನಲ್ಲಿ ಮಾತ್ರ ನಿಮ್ಮ ಖಾತೆಯಿದ್ದರೆ ನಿಮ್ಮ ಖಾತೆಗೆ ಹಣ ಜಮಾ ಆಗುತ್ತದೆ. ಇದರಿಂದ ವಿಶೇಷ ತೊಂದರೆಯಾಗುವುದರಿಂದ ಇಂಥ ಚೆಕ್ಕುಗಳು ಹೆಚ್ಚಾಗಿ ಪ್ರಚಲಿತವಾಗಿಲ್ಲ.

ಈ ಎರಡು ಅಡ್ಡ ಗೆರೆಗಳ ನಡುವೆ "ಅಕೌಂಟ ಪೆಯಿ" ಎಂದು ಬರೆಯುವುದೂ ಉಂಟು. ಹೀಗೆ ಬರೆದಲ್ಲಿ ಯಾರ ಹೆಸರಿನಲ್ಲಿ ಚೆಕ್ ಇದೆಯೊ ಅವನ ಖಾತೆಗೇ ಹಣ ಜಮಾ ಆಗಬೇಕು, ಆತ ಆ ಚೆಕ್ಕನ್ನು ಇನ್ನೊಬ್ಬರ ಹೆಸರಿಗೆ ಬದಲಿಸಬಾರದು ಎಂದಾಗುತ್ತದೆ.

ಚೆಕ್ಕುಗಳನ್ನು ಬ್ಯಾಂಕು ಯಾವಾಗ ನಿರಾಕರಿಸುತ್ತದೆ?- ಈ ರೀತಿ ಬ್ಯಾಂಕಿನ ಮೂಲಕ ಹಣದ ವ್ಯವಹಾರ ನಡೆಸುವುದು ಸುರಕ್ಷಿತವೂ ಸುಲಭವೂ ಆಗುತ್ತದೆ. ಚೆಕ್ಕಿನ ಹಣ ನಿಜವಾದ ಅಧಿಕಾರಿಗೇ ಸಿಗದಿದ್ದರೆ ಬ್ಯಾಂಕಿಗೆ ಹಾನಿಯಾಗುವುದರಿಂದ ಅದು ಆ ವಿಷಯದಲ್ಲಿ ತುಂಬ ಜಾಗ್ರತೆ ವಹಿಸುತ್ತದೆ. ಅದಕ್ಕೆಂದೇ ಅದು ಅನೇಕ ನಿಯಮಗಳನ್ನು ಮಾಡಿಟ್ಟಿದೆ. ಈ ನಿಯಮಗಳನ್ನು ಪಾಲಿಸದಿದ್ದರೆ ಬ್ಯಾಂಕು ಹಣ ಕೊಡಲು ನಿರಾಕರಿಸುತ್ತದೆ. ಚೆಕ್ಕನ್ನು, ಅದರಲ್ಲಿರುವ ಸಹಿಗೂ ಬ್ಯಾಂಕಿನಲ್ಲಿ ನೀವು ಕೊಟ್ಟ ಮಾದರಿಯ ಸಹಿಗೂ ಅಂತರವಿದ್ದರೆ, ಅಂಕೆ ಮತ್ತು ಅಕ್ಷರಗಳಲ್ಲಿ ವ್ಯತ್ಯಾಸ ಕಂಡರೆ, ಹರಿದಿದ್ದರೆ, ಚೆಕ್ಕಿನ ಮೇಲೆ ತಾರೀಖು ಹಾಕಿರದಿದ್ದರೆ ಚೆಕ್ ಕೊಡುವವನ ಖಾತೆಯಲ್ಲಿ ಸಾಕಷ್ಟು ಹಣ ಇರದಿದ್ದರೆ, ಚೆಕ್ ಆರು ತಿಂಗಳ ಹಿಂದಿನ ತಾರೀಖಿನದು ಇದ್ದರೆ, ಚೆಕ್ ಕೊಟ್ಟವನು ಹಣ ಕೊಡಬಾರದೆಂದು ಮೊದಲೇ ತಿಳಿಸಿಟ್ಟಿದ್ದರೆ ಅಥವಾ ಸಹಿ ಇರದಿದ್ದರೆ ಬ್ಯಾಂಕು ಚೆಕ್ಕಿನ ಹಣಕೊಡಲುನಿರಾಕರಿಸುತ್ತದೆ.



ಹೇಡಿ ಜೆಕ್ಕ್ಯ ಬಸ್ಟಾಯಿಡನ ಹೃದಯುದಲ್ಲಿ ಅತ್ತೆಯನ್ನು ಓಡಿಸುವ ಧೈರ್ಯ ಎಲ್ಲಿಂದ ಬಂತು ?

ಕೆಂಪು ನಿಶಾನೆ

ಬಲಗೈಯಲ್ಲಿ ಸಣ್ಣ ಕೆಂಪು ನಿಶಾನೆಯೊಂದನ್ನು ಹಿಡಿದುಕೊಂಡು ಜೆಕ್ಕ್ಯ ಬಸ್ಟಾಯಿಡ್ ನಡುರಸ್ತೆಯಲ್ಲಿ ನಿಂತಿದ್ದ. ರಸ್ತೆ ದುರಸ್ತಿಕಾರ್ಯ ನಡೆದಿತ್ತು. ಅನೇಕ ಕೂಲಿಕಾರರು ಹಾರೆ ಗುದ್ದಲಿಗಳಿಂದ ರಸ್ತೆಯನ್ನು ಅಗೆಯುತ್ತಿದ್ದರು. ಆ ರಸ್ತೆಯಲ್ಲಿ ಟ್ರಾಮುಗಾಡಿಯ ಹಳಿ ಕೂಡ್ರಿಸುವ ಕಾರ್ಯ ಈ ೮-೧೦ ದಿನಗಳಿಂದ ನಡೆದಿತ್ತು.

ಜೆಕ್ಕ್ಯ ಬಸ್ಟಾಯಿಡನ ಎಡಗೈಯಲ್ಲಿ ಒಂದು ಹಸುರು ನಿಶಾನೆಯೂ ಇತ್ತು. ಆ ಮುಖ್ಯರಸ್ತೆಯ ಒಂದರ್ಧ ಭಾಗದಲ್ಲಿ ಕೆಲಸ ನಡೆದು ಅದು ಸಂಚಾರಕ್ಕೆ ನಿರುಪಯೋಗಿಯಾಗಿದ್ದರೂ ಉಳಿದರ್ಧ ಭಾಗದಲ್ಲಿ ವಾಹನಾದಿಗಳ ಓಡಾಟ ನಡೆದೇ ಇತ್ತು. ಕೆಲಸ ನಡೆದ ರಸ್ತೆಯ ಭಾಗದ ಈ ತುದಿಗೆ ಜೆಕ್ಕ್ಯ ಕೈಯಲ್ಲಿ ನಿಶಾನೆಗಳನ್ನು

ಒಂದು ಇಂಗ್ಲೀಷ್ ಕಥೆ

ಹಿಡಿದು ನಿಂತಿದ್ದಂತೆ ಆ ತುದಿಯಲ್ಲಿ ಇನ್ನೊಬ್ಬ ಕೆಂಪು ಮತ್ತು ಹಸುರು ನಿಶಾನೆಗಳನ್ನು ಹಿಡಿದುಕೊಂಡು ನಿಂತಿದ್ದ. ಇವರಿಬ್ಬರೂ ಕೂಡಿ ಅಲ್ಲಿ ಸಂಚಾರವನ್ನು ನಿಯಂತ್ರಿಸುತ್ತಿದ್ದರು. ವಾಹನಗಳ ಒಂದು ಮಾಲೆಯನ್ನು ಜೆಕ್ಕ್ಯ ಐದು-ಹತ್ತು ಮಿನಿಟಗಳ ವರೆಗೆ ತನ್ನ ಸಂಗಾತಿ ನಿಂತಿದ್ದ ಕಡೆ ಕಳಿಸಿ ಬಳಿಕ ಹಸುರು ನಿಶಾನೆಯನ್ನು ಕೆಳಗಿಳಿಸಿ ಕೆಂಪು ನಿಶಾನೆಯನ್ನು ಮೇಲಕ್ಕೆತ್ತುತ್ತಿದ್ದ. ಜೆಕ್ಕ್ಯ ಕಳಿಸಿದ ವಾಹನಗಳೆಲ್ಲ ತನ್ನನ್ನು ದಾಟಿ ಹೋದ ಮೇಲೆ ಆ ತುದಿಯಲ್ಲಿದ್ದಾತ ತನ್ನ ಕೈಲಿದ್ದ ಹಸುರು ನಿಶಾನೆಯನ್ನು ಮೇಲಕ್ಕೆತ್ತುತ್ತಿದ್ದ. ಆಗ ಅವನ ಕಡೆಯಿಂದ ವಾಹನಗಳು ಹೊರಟು ಜೆಕ್ಕ್ಯ ಬಸ್ವಾಯಿಡ್ ನಿಂತಲ್ಲಿಗೆ ಬಂದು ಮುಂದೆ ಮುಕ್ತರಸ್ತೆಗೆ ಕೂಡಿಕೊಂಡು ಓಡುತ್ತಿದ್ದವು.

ಜೆಕ್ಕ್ಯ ಬಸ್ವಾಯಿಡನಿಗೆ ಕಾಯಂ ನೌಕರಿ ಇರಲಿಲ್ಲ. ಆತ ದಿನಗೂಲಿ ಮಾಡುವ ಸಾದಾ ಭೋಳೆ ಸ್ವಭಾವದ ಮನುಷ್ಯನಾಗಿದ್ದ! ಭೋಳೆ ಜನರು ಅಂಜುಬುರುಕರೂ ಆಗಿರುತ್ತಾರೆ. ಜೆಕ್ಕ್ಯನ ಸ್ವಭಾವದಲ್ಲಿ ಈ ದೋಷವೂ ಇದ್ದಿತು. ಅವನ ಉಡಿಗೆತೊಡಿಗೆಯು ಅಸಡ್ಡಾಳ ಇರುತ್ತಿತ್ತು. ಅವನ ಅವತಾರವನ್ನು ಕಂಡ ಯಾರಿಗೇ ಆಗಲಿ ಒಂದಿಷ್ಟು ಈ ಪ್ರಾಣಿಯ ತಮಾಷೆ ಮಾಡೋಣ ವೆಂದೆನಿಸುತ್ತಿತ್ತು.

ಮನುಷ್ಯ ಭೋಳೆ ಸ್ವಭಾವದವನಿರಲಿ, ಅಂಜುಬುರುಕನಿರಲಿ, ಅಸಡ್ಡಾಳನಿರಲಿ,—ಅವನಿಗೂ ಅವನ ಸುಖದುಃಖಗಳು ಇದ್ದೇ ಇರುತ್ತವೆ. ಕೆಲಸದ ಕಾಲದಲ್ಲಿ ಜೆಕ್ಕ್ಯ ಬಸ್ವಾಯಿಡ್ ಇದ್ದದ್ದರಲ್ಲಿಯೆ ಸುಖಿಯಾಗಿರುತ್ತಿದ್ದ. ಆದರೆ ಮನೆಗೆಂದು ಹೊರಟೊಡನೆ ವ್ಯಥೆ ಆತನನ್ನು ಆವರಿಸುತ್ತಿತ್ತು. ನಿಜವಾಗಿ ಹೇಳುವದಾದರೆ ತನ್ನದು ಎಂದು ಹೇಳಿಕೊಳ್ಳಬಹುದಾದ ಮನೆಯಾದರೂ ಆತನಿಗೆಲ್ಲಿತ್ತು? ಆತನಿಗೆ ಸುಂದರಳಾದ ಹೆಂಡತಿಯಿದ್ದಳು. ಒಂದು ವರ್ಷದ ಮುದ್ದಾದ ಗಂಡುಮಗುವೂ ಇತ್ತು. ಹಾಗಿದ್ದರೂ ಜೆಕ್ಕ್ಯಗೆ ಮನೆಯಿರಲಿಲ್ಲ. ಅಂದರೆ ಮನೆಯಿತ್ತು—ಆದರೆ ಅದು ಅವನದಾಗಿರಲಿಲ್ಲ. ಆತನ ಹೆಂಡತಿಯ ತಾಯಿ ಆ ಲಠ್ಠ ಹೆಂಗಸು ಯಾವ ಮನೆಯಲ್ಲಿರುವಳೋ ಆ ಮನೆ ಜೆಕ್ಕ್ಯನದೇ ಏಕೆ, ಆ ಊರ ಅರಸನ ಮನೆಯೂ ಆಗಿರುವದು ಸಾಧ್ಯವಿರಲಿಲ್ಲ.

ಜೆಕ್ಕ್ಯನ ಅತ್ತೆ—ಆ ಲಠ್ಠ ದೇಹದ, ಉಬ್ಬಿದ ಗಲ್ಲದ, ಬೆಕ್ಕಿನ ಕಣ್ಣಿನ ಹೆಂಗಸೆಂದರೆ ಪ್ರತ್ಯಕ್ಷ ಬೆಂಕಿಯೇ! ಅವಳು ಯಾವಾಗಲೂ ಉರಿಯುತ್ತಿರುತ್ತಿದ್ದಳು. ನೆರೆಯವರು "ಪಾಪ! ಜೆಕ್ಕ್ಯ ಬಸ್ವಾಯಿಡನ ಅವಸ್ಥೆ ಬೇಡವಪ್ಪಾ." ಎನ್ನುತ್ತಿದ್ದರು. ಅವನ ಸಂಬಂಧಿಕರು "ಎಂಥ ಷಂಡನಿವ? ಆ ಅತ್ತೆಯನ್ನು ಒದ್ದು ಹೊರಗೆ ಯಾಕೆ ಹಾಕುವದಿಲ್ಲ?" ಎನ್ನುತ್ತಿದ್ದರು. ಅವರ ಮಾತು ಕೇಳಿದವರು, "ಹ್ಞಂ. ಆ ಹೆಣ ಏನು ಒದ್ದೀತು?" ಎನ್ನುತ್ತಿದ್ದರು.

ಜೆಕ್ಕ್ಯ ಬಸ್ವಾಯಿಡನ ಲಗ್ನ ನಿಶ್ಚಯಿಸಿ ಜರುಗಿಸಿದವಳು ಅವನ ಲಠ್ಠ ಅತ್ತೆಯೇ. ಮೊದಲು ಅವಳದೊಂದು ಹೆಂಡದ ಅಂಗಡಿಯಿತ್ತು. ಅಂದರೆ ಅಂಗಡಿ ಅವಳ ಗಂಡನದಾದರೂ ಅಲ್ಲಿ ನಡೆಯುತ್ತಿದ್ದುದು ಅವಳ ಅಧಿಕಾರವೇ ಆಗಿತ್ತು. ಗಂಡ ಸತ್ತ ಬಳಿಕ ಅವಳೇ ಅಂಗಡಿಯ ಕಾರಭಾರ ನಡೆಸತೊಡಗಿದಳು. ಅವಳಿಗೆ ಒಬ್ಬ ಮಗ, ಒಬ್ಬ ಮಗಳಿದ್ದರು. ತಂದೆ ಸತ್ತ ಬಳಿಕ ಮಗ ಅಂಗಡಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಯತ್ನಿಸಿದ. ಆದರೆ ಆಗ ತಾಯಿಗೂ ಮಗನಿಗೂ ಜಗಳವಾಗತೊಡಗಿತು. ಬೇಸತ್ತ ಮಗ ಕೊನೆಗೊಂದು ದಿನ ಮನೆಯಲ್ಲಿದ್ದ ಹಣವನ್ನೆಲ್ಲ ತೆಗೆದುಕೊಂಡು ಫರಾರಿಯಾದ.

ಮಗ ಹೋದ ಮೇಲೆ ಜೆಕ್ಕ್ಯನ ಅತ್ತೆಗೆ ಕಷ್ಟವಾಗತೊಡಗಿತು. ಅವಳ ಉಗ್ರ ಸ್ವಭಾವದ ಮೂಲಕ ಅಂಗಡಿಗೆ ಬರುತ್ತಿದ್ದ ಗಿರಾಕಿಗಳ ಸಂಖ್ಯೆ ಕಡಿಮೆಯಿರುತ್ತಿತ್ತು. ಬಂದವರು ಕುಡಿದು ಮತ್ತರಾದರೆಂದರೆ ಗೊಂದಲ ಹಾಕುತ್ತಿದ್ದರು.

ಎಷ್ಟೇ ಭಯಂಕರಳಿದ್ದರೂ ಜೆಕ್ಸ್ಯಾನ ಅತ್ತೆ ಹೆಂಗಸೇ ಅಲ್ಲವೇ? ಕುಡಿದು ಮತ್ತರಾದ ಹತ್ತಾರು ಧಾಂಡಿಗರೊಡನೆ ಅವಳೇನು ಗುದಮುರಿಗೆ ಹಾಕಿ ಗೆದ್ದಾಳು? ಹೀಗಾಗಿ ಅವಳೆದುರು ಒಂದೇ ಒಂದು ಮಾರ್ಗ ಮಾತ್ರ ಉಳಿಯಿತು. ಮಗಳ ಲಗ್ನ ಮಾಡಿ ಅಳಿಯನ ಮೇಲೆ ಅಧಿಕಾರ ವಿಟ್ಟುಕೊಂಡು ಅವನ ಮನೆಯಲ್ಲಿಯೇ ಉಳಿಯುವದು ಎಂದವಳು ನಿರ್ಧರಿಸಿಕೊಂಡಳು. ಅವಳ ಅಂಗಡಿಗೆ ಮದ್ಯಪಾನಕ್ಕಾಗಿ ಬರುತ್ತಿದ್ದವರಲ್ಲಿ ಜೆಕ್ಸ್ಯಾ ಒಬ್ಬನಾಗಿದ್ದ. ಅವಳು ಬಾಯಿಬಿಟ್ಟರೆ ಆತ ಬೆಚ್ಚಿ ಬೀಳುತ್ತಿದ್ದ. ಗೊಂದಲ ಸುರುವಾಗುವ ಸಂಭವ ಕಂಡೊಡನೆ ಹೆದರಿ ಕಾಲ್ತೆಗೆಯುತ್ತಿದ್ದ.

ಅವನ ಈ ಅಂಜುಬುರುಕತನ ಅವನ ಭಾವೀ ಪತ್ನಿಯ ತಾಯಿಯ ಲಕ್ಷ್ಯಕ್ಕೆ ಎಂದೋ ಬಂದಿತ್ತು ಇಂಥ ಭೋಳೆ, ಅಂಜುಬುರುಕ ಅಳಿಯ ಸಿಕ್ಕರೆ ಸಾಯುವ ತನಕ ಅವನ ಮನೆಯಲ್ಲಿ ಉಳಿದು ಮೋಜಿನಿಂದ ಕಾಲ ಹಾಕಬಹುದು ಎಂದವಳು ಎಣಿಸಿದಳು.

ಒಂದು ಶನಿವಾರ ಜೆಕ್ಸ್ಯ ಹೆಂಡ ಕುಡಿದು ಹೊರಟಾಗ ಅವಳು ಅವನೆದುರು ಬಂದು ನಿಂತಳು. ಟೊಂಕದ ಮೇಲೆ ಎರಡೂ ಕೈಗಳನ್ನಿಟ್ಟುಕೊಂಡು ಆಕೆ ಗರ್ಜಿಸಿದಳು: "ಬಸ್ವಾಯಿಡ್, ನಾಳೆ ಆದಿತ್ಯವಾರ. ನೀನೇನೂ ಕೆಲಸಕ್ಕೆ ಹೋಗಲಿಕ್ಕಿಲ್ಲ. ನಾಳೆ ಮಧ್ಯಾಹ್ನ ಸರಿಯಾಗಿ ಮೂರೂಕಾಲು ಗಂಟೆಗೆ ನಮ್ಮ ಮನೆಗೆ ಚಹಕ್ಕೆ ಬಾ."

"ಚಹಾ! ನಾನು? ಬರಬೇಕು?" ಬೆಚ್ಚಿದ ಬಸ್ವಾಯಿಡ್ ಹೇಳಿದ.

"ಹೌದು. ನೀನೇ. ವೇಳೆಗೆ ಸರಿಯಾಗಿ ಬಾ. ತಡ ಮಾಡಿ ಬರುವದು ನನಗೆ ಸೇರುವದಿಲ್ಲ."

ಚಹಕ್ಕೆ ಹೋಗುವ ಮನಸ್ಸು ಜೆಕ್ಸ್ಯಾಗೆ ಇರಲಿಲ್ಲ. ಆದರೆ ಹೋಗದಿದ್ದರೆ ಮತ್ತೊಮ್ಮೆ ಅಂಗಡಿಗೆ ಹೋದಾಗ ಜಗಳವಾಗಿ ಫಜೀತಿಯಾದೀತೆಂದು ಹೆದರಿ ಆತ ಸಮಯಕ್ಕೆ ಸರಿಯಾಗಿ ಹೋದ. ಅವನು ಹೋದಾಗ ಆ ಹೆಂಗಸು ಯಾವದೋ ಕಾರಣಕ್ಕಾಗಿ ತನ್ನ ಮಗಳನ್ನು ಗಟ್ಟಿಯಾಗಿ ಬಯ್ಯುತ್ತಿದಳು.

ಜೆಕ್ಸ್ಯಾ ಬಂದದ್ದನ್ನು ಕಂಡು ಅವಳು 'ಬಾ' ಎಂದಳು.

ಚಹ ಕುಡಿದು ಮುಗಿಯುವ ಹೊತ್ತಿಗೆ ಅವಳು ಜೆಕ್ಸ್ಯನೊಂದಿಗೆ ತನ್ನ ಮಗಳ ಲಗ್ನವನ್ನು ನಿಶ್ಚಯಿಸಿಬಿಟ್ಟಿದ್ದಳು. ಜೆಕ್ಸ್ಯ ಬಸ್ವಾಯಿಡನ ಇಷ್ಟಾನಿಷ್ಟಗಳ ಪ್ರಶ್ನೆಯೇ ಏಳಲಿಲ್ಲ.

ಲಗ್ನವಾದ ಬಳಿಕ ಅತ್ತೆ ಅಳಿಯನ ಮನೆಗೇ ಬಂದಳು. ಅಂಗಡಿ ಮಾರಿ ಬಂದ ಹಣದಲ್ಲಿ ಒಂದು ಕಾಸನ್ನೂ ಅವಳು ಜೆಕ್ಸ್ಯಾಗೆ ತೋರಿಸಲಿಲ್ಲ.

ಅಲ್ಲಿಂದ ಜೆಕ್ಸ್ಯಾನ ಕಷ್ಟಗಳು ಪ್ರಾರಂಭವಾದವು. ಅವನಿಗೆ ಅವನ ಸಂಸಾರವೆಂಬುದುಳಿಯಲಿಲ್ಲ. ಅದರಿಂದಲೇ ಅವನು ಕೆಲಸಕ್ಕೆ ಹೋದಾಗ ಸುಖಿ, ಮನೆಗೆ ಬಂದಾಗ ದುಃಖಿಯಾಗಿರುತ್ತಿದ್ದನು.

ಕೈಯಲ್ಲಿ ಕೆಂಪು-ಹಸಿರು ನಿಶಾನೆಗಳನ್ನು ಹಿಡಿದುಕೊಂಡು ರಸ್ತೆಯ ಅರ್ಧ ಭಾಗದಲ್ಲಿ ನಡೆಯುತ್ತಿದ್ದ ಸಂಚಾರವನ್ನು ನಿಯಂತ್ರಿಸುವದು ಸುಲಭವಾಗಿತ್ತು. ಆ ತುದಿಯಲ್ಲಿದ್ದವನ ಕೈಯೊಳಗಿನ ನಿಶಾನೆಗಳನ್ನು ನೋಡಿಕೊಂಡು ಜೆಕ್ಸ್ಯ ತನ್ನ ಕೈಯೊಳಗಿನ ನಿಶಾನೆಗಳನ್ನು ಮೇಲೆ ಕೆಳಗೆ ಮಾಡುತ್ತಿದ್ದ.

ಸುಮಾರು ಅರ್ಧ ತಾಸು ಕಳೆದಿರಬಹುದು. ಜೆಕ್ಸ್ಯ ಹಸಿರು ನಿಶಾನೆಯನ್ನು ಕೆಳಗಿಳಿಸಿ ಕೆಂಪು ನಿಶಾನೆಯನ್ನು ಮೇಲಕ್ಕೆತ್ತಿ ತನ್ನ ಕಡೆಯಿಂದ ಹೋಗುವ ವಾಹನಗಳ ಸಂಚಾರಕ್ಕೆ ತಡೆ ಹಾಕಿದ. ಸಾವಕಾಶವಾಗಿ ಒಂದರ ಹಿಂದೊಂದು ಹೋಗುತ್ತಿದ್ದ ವಾಹನಗಳನ್ನು ಅವನು ನೋಡುತ್ತಿದ್ದಾಗ ಯಾರೋ ಅವನ ಹೆಗಲ ಮೇಲೆ ಕೈ-

ಯಿಟ್ಟರು. ಜೆಕ್ಯು ತಿರುಗಿ ನೋಡಿದ. ಒಂದು ದೊಡ್ಡ ಕಾರು ಅವನ ಕೆಂಪು ನಿಶಾನೆಯ ಹತ್ತಿರ ಬಂದು ನಿಂತಿತ್ತು. ಅದನ್ನು ನಡೆಸುವವ ಅವನ ಬಳಿಗೆ ಬಂದಿದ್ದ.

"ಇದೊಂದು ಮೋಟಾರನ್ನು ಹೋಗಗೊಡು. ಈ ಕಾರಿನಲ್ಲಿ ಯಾರಿದ್ದಾರೆ ಗೊತ್ತೇ ?" ಎದೆಯ ಮೇಲೆ ಮೂರು ನಾಲ್ಕು ಪದಕಗಳನ್ನು ಹಚ್ಚಿ ಕೊಂಡಿದ್ದ ಆ ಮನುಷ್ಯ ಕೇಳಿದ.

"ಗೊತ್ತಿಲ್ಲ."

"ಕಾರಿನಲ್ಲಿ ಕುಳಿತಿರುವ ಇಬ್ಬರೂ ಸೈನ್ಯದ ಲ್ಲಿಯ ದೊಡ್ಡ ಅಧಿಕಾರಿಗಳು. ಹಸಿರು ನಿಶಾನೆ ತೋರಿಸು."

"ನನಗೆ ಹಾಗೆ ಮಾಡಲು ಅಪ್ಪಣೆಯಿಲ್ಲ."

"ಯಾರ ಅಪ್ಪಣೆ ?"

"ಆ ನನ್ನ ಸಹಕಾರಿಯ ಅಪ್ಪಣೆ. ನೋಡಿ ಲ್ಲಿ, ಅತ ತನ್ನ ಹಸಿರು ನಿಶಾನೆ ಮೇಲಕ್ಕೆತ್ತಿದ್ದ. ಈಗ ಆ ಕಡೆಯಿಂದ ವಾಹನಗಳು ಬರುವವು. ನಾನು ನಿರುಪಾಯನಾಗಿದ್ದೇನೆ" ಹತಾಶ ಮುಖ ಮಾಡಿ ಜೆಕ್ಯು ಹೇಳಿದ. ಅವನ ಮೈ ಜೋರಾಗಿ ಬೆವತಿದ್ದರೂ ಅವನು ಆ ಅಧಿಕಾರಿಗಳ ಕಾರನ್ನು ಹೋಗಗೊಡುವದು ಸಾಧ್ಯವಿರಲಿಲ್ಲ. ಆ ಅಧಿ ಕಾರಿಗಳು ತನ್ನನ್ನಿನ್ನು ಗುಂಡುಹಾಕಿ ಕೊಲ್ಲು ವರು ಎಂದು ಅವನಿಗನಿಸಿತು. ಕೈಯೊಳಗಿನ ನಿಶಾನೆಗಳನ್ನು ಬಿಟ್ಟು ಓಡಿಹೋಗಬೇಕೆಂದು ಅವನು ಯೋಚಿಸಿದ. ಅಷ್ಟರಲ್ಲಿ ಆ ಅಧಿಕಾರಿ ಗಳಲ್ಲಿ ಒಬ್ಬನು ಕಾರಿನಿಂದಿಳಿದು ಅವನ ಬಳಿಗೆ ಬಂದು ಗೊಗ್ಗರ ಧ್ವನಿಯಲ್ಲಿ "ವಾಹವ್ವಾ! ಶಿಸ್ತು ಎಂದರೆ ಶಿಸ್ತು. ನಮ್ಮ ಕಾರನ್ನು ನಿಲ್ಲಿಸಿ ನೀನು ತೋರಿಸಿದ ಮನೋಧೈರ್ಯಕ್ಕಾಗಿ ನಿನ್ನನ್ನು ಅಭಿನಂದಿಸುತ್ತೇನೆ. ಶಾಭಾಸ! ಶಿಸ್ತು ಮತ್ತು ಕಾಯದೆಗಳನ್ನು ಗೌರವಿಸುವ ಜನರು ನನಗೆ ಸೇರುತ್ತಾರೆ!" ಎಂದು ಆತ ಜೆಕ್ಯೂನ ಕೈ ಕುಲುಕಿಸಿದ.

ರಸ್ತೆ ಅಗೆಯುತ್ತಿದ್ದ ಕೆಲಸಗಾರರು ಇದನ್ನು ಕಂಡು ಅವಾಕ್ಕಾದರು. ಆ ಅಧಿಕಾರಿಯ ಪೋಷಾಕನ್ನು ಕಂಡರೆ ಅವನಾವನೋ ಅತಿ ದೊಡ್ಡ ಅಧಿಕಾರಿಯಿರಬೇಕೆಂದು ಸಹಜವಾಗಿ ಅವರು ಗುರುತಿಸಿದ್ದರು.

ಆ ಅಧಿಕಾರಿ ಕೈಮಾಡಿ ಅವರೆಲ್ಲರನ್ನು ಕರೆದು ಅವರೆದುರು ಬಸ್ವಾಯಿಡನನ್ನು ಹೊಗಳಿದ.

"ಇಂಥ ಧೈರ್ಯಶಾಲಿ ಜನರಿರುವ ನಮ್ಮ ದೇಶ ನಿಜವಾಗಿಯೂ ಧನ್ಯ" ಎಂದು ಆತ ಹೇಳಿ ತನ್ನ ಬೆರಳಿಗಿದ್ದ ಬಂಗಾರದ ಉಂಗುರವನ್ನು ಜೆಕ್ಯೂನ ಬೆರಳಿಗೆ ತೊಡಿಸಿದ. ಎಲ್ಲರೂ ಚಪ್ಪಾಳೆ ತಟ್ಟಿದರು.

ಜೆಕ್ಯೂ ಅಳುಕಿದ. ಆ ಕಾರಿನಲ್ಲಿದ್ದವರ ಯೋಗ್ಯತೆ ಮತ್ತು ಅಧಿಕಾರಸ್ಥಾನದ ಕಲ್ಪನೆ ಅವನಿಗೆ ಮೊದಲೇ ಬಂದಿತ್ತಾದರೆ ಅವನು ಖಂಡಿತವಾಗಿಯೂ ಅವರ ಕಾರನ್ನು ಮುಂದಕ್ಕೆ ಹೋಗಗೊಡುತ್ತಿದ್ದ. ಆದರೆ ಅವನ ಮಬ್ಬು ಸ್ವಭಾವದ ಮೂಲಕ ಅವನ ಗಮನ ಆ ಕಾರಿ ನತ್ತ ಹೋಗಿರಲಿಲ್ಲ. ಹೋಗಿದ್ದರೂ ಇಂಥ ಶ್ರೇಷ್ಠ ಕಾರನ್ನು ಸಾಮಾನ್ಯರು ತೆಗೆದುಕೊಳ್ಳ ವದು ಸಾಧ್ಯವಿಲ್ಲ ಎಂಬ ಮಾತು ಅವನಿಗೆ ಹೊಳೆ ಯುತ್ತಿತ್ತೆಂದೇನೂ ಖಂಡಿತವಾಗಿ ಹೇಳಬರು ವಂತಿರಲಿಲ್ಲ.

ಆ ಅಧಿಕಾರಿಗಳ ಕಾರು ಮುಂದಕ್ಕೆ ಹೋಯಿತು. ಮೊದಲಿನಂತೆ ವಾಹನಗಳು ಬರಹೋಗತೊಡಗಿದವು.

ಅಧಿಕಾರಿಯಿಂದ ಆ ಉಂಗುರ ಮತ್ತು ಹೊಗಳಿಕೆ ದೊರೆತ ಬಳಿಕ ಜೆಕ್ಯು ಬಸ್ವಾಯಿಡ ಬದಲಾಗತೊಡಗಿದ.

ತಾನು ಕೂಡ ಅಧಿಕಾರ ಚಲಾಯಿಸಬಲ್ಲೆ ಎಂಬ ಮಾತು ಅವನ ಜೀವನದಲ್ಲಿ ಇಂದವನಿಗೆ ಪ್ರಥಮತಃ ತಿಳಿಯಿತು. ತನ್ನ ಅಧಿಕಾರವನ್ನು ಪುನಃ ಪುನಃ ಉಪಯೋಗಿಸುವಲ್ಲಿ ಅವನಿಗೆ ಆನಂದವಾಗತೊಡಗಿತು. ಅದು ಮುಖ್ಯ ರಸ್ತೆ

ಯಾಗಿದ್ದರಿಂದ ಸದಾ ವಾಹನಗಳು ಓಡಾಡುತ್ತಿದ್ದವು. ನಾನಾ ಬಗೆಯ ಜನರು ಸಂಚರಿಸುತ್ತಿದ್ದರು. ಜೆಕ್ಕ್ಯ ಈಗ ವಾಹನಗಳ ಮೇಲೆ ಕಣ್ಣಿಟ್ಟಿರುತ್ತಿದ್ದ. ಯಾವದಾದರೊಂದು ವಾಹನದಲ್ಲಿ ಯಾರಾದರೂ ದೊಡ್ಡವರಿದ್ದಾರೆಂಬ ಸಂಶಯ ಬಂದೊಡನೆ ಆತ ಕೆಂಪು ನಿಶಾನೆಯನ್ನು ಮೇಲಕ್ಕೆತ್ತುತ್ತಿದ್ದ. ಜೆಕ್ಕ್ಯ ಬಸ್ವಾಯಿಡ ಓರ್ವ ಸಿನೇಮಾ ತಾರೆಯ ಭಕ್ತನಾಗಿದ್ದ. ಸಾವಿರ ಸ್ತ್ರೀಯರ ಗುಂಪಿನಲ್ಲಿ ಅವಳು ನಿಂತರೂ ಅವಳನ್ನು ಗುರುತಿಸುವಷ್ಟರ ಮಟ್ಟಿಗೆ ಅವನು ಅವಳ ಚಿತ್ರಗಳನ್ನು ನೋಡಿದ್ದ. ದೈವವಶಾತ್ ಇಂದೇ ಆ ತಾರೆ ಆ ಮಾರ್ಗವಾಗಿ ಕಾರಿನಲ್ಲಿ ಬಂದಳು. ಜೆಕ್ಕ್ಯ ಸರ್ರನೆ ಕೆಂಪು ನಿಶಾನೆಯೆತ್ತಿ ವಾಹನಗಳನ್ನು ನಿಲ್ಲಿಸಿ ಅವಳ ಕಾರಿನತ್ತ ಹೋದ.

"ಕ್ಷಮಿಸಿರಿ. ನಿಮಗೆ ಅಂಥ ವಿಶೇಷ ಮಹತ್ವದ ಕೆಲಸವಿದ್ದರೆ ನಿಮ್ಮ ಕಾರನ್ನು ಹೋಗಗೊಡುತ್ತೇನೆ" ಎಂದನಾತ.

"ಅಷ್ಟು ಮಾಡಿದಲ್ಲಿ ಉಪಕೃತಳಾಗುವೆ" ಸಿನೇಮಾ ತಾರೆ ಕಿಂಚಿತ್ ನಕ್ಕು ಹೇಳಿದಳು.

ಜೆಕ್ಕ್ಯ ಹಸುರು ನಿಶಾನೆಯನ್ನೆತ್ತಿದ. ಅವಳ ಕಾರು ಹೋದೊಡನೆ ಮತ್ತೆ ಕೆಂಪು ನಿಶಾನೆಯೆತ್ತಿದ.

ಹುಟ್ಟಿದಂದಿನಿಂದಲೂ ಸತ್ತಿದ್ದ ಜೆಕ್ಕ್ಯ ಇಂದು ಜೀವಂತನಾಗತೊಡಗಿದ್ದ. ಅವನಿಗೆ ಈ ಜೀವಂತತನದ ಅರಿವಾಗತೊಡಗಿತ್ತು. ಸಜೀವನಾಗುವ ಮದ ಏರುತ್ತಿತ್ತು.

ಸಾಯಂಕಾಲ ಕೆಲಸ ಮುಗಿಯುವದರೊಳಗೆ ಜೆಕ್ಕ್ಯ ನೂರಕ್ಕೆ ನೂರರಷ್ಟು ಜೀವಂತನಾದ. ಇಷ್ಟು ಹೊತ್ತಿನ ವರೆಗೆ ಅವನು ನಿಷ್ಕಾರಣವಾಗಿ ಎಷ್ಟು ಜನರನ್ನು ವ್ಯರ್ಥ ನಿಲ್ಲಿಸಿ ಪೀಡಿಸಿದ್ದನೋ ಏನೋ! ಒಂದು ಅಗ್ನಿಶಾಮಕ ವಾಹನವನ್ನಂತೂ ಅವನು ಇನ್ನೊಂದು ರಸ್ತೆಯಿಂದ ಹೋಗುವಂತೆ ಮಾಡಿದ. "ಈ ರಸ್ತೆ ದುರಸ್ತಿಯಾಗುತ್ತಿದೆ. ನಿಮ್ಮ ವಾಹನದ ಒಜ್ಜೆಯನ್ನು ಅದು ಸಹಿಸದು. ಬೇರೆ ರಸ್ತೆಯಿಂದ ಹೋಗಿರಿ" ಎಂದು ಜೆಕ್ಕ್ಯ ಕೆಂಪು ನಿಶಾನೆಯನ್ನು ಆದಷ್ಟು ಎತ್ತರಕ್ಕೆ ಹಿಡಿದು ಕೂಗಿದ. ಅಗ್ನಿಶಾಮಕ ದಳದವರಿಗೆ ಕೋಪ ನೆತ್ತಿಗೇರಿತು. ಆದರೆ ವಾದ ಮಾಡುತ್ತ ಕೂಡ್ರಲು ಅವರಿಗೆ ವೇಳೆಯಿರದ್ದರಿಂದ ಅವರು ವಾಹನವನ್ನು ಬೇರೆ ರಸ್ತೆಯಿಂದ ಒಯ್ದರು. ಜೆಕ್ಕ್ಯಗೆ ಅದನ್ನು ಕಂಡು ಮೋಜೆನಿಸಿತು.

ಎಷ್ಟೋ ಸಲ ಅವನ ಅಂದಾಜು ತಪ್ಪಿ ಅವನು ಸಾಮಾನ್ಯ ಮನುಷ್ಯರ ವಾಹನವನ್ನೂ ನಿಲ್ಲಿಸುತ್ತಿದ್ದ. ಕೆಂಪು ನಿಶಾನೆ ಕಂಡಾಗ ಆ ಮನುಷ್ಯ ವಾಹನದಿಂದಿಳಿದು ಸಿಗರೇಟು ಹಚ್ಚಿ ಸೇದುತ್ತ ಸುಮ್ಮನೆ ಅತ್ತಿತ್ತ ನೋಡುತ್ತ ನಿಂತಿರುತ್ತಿದ್ದ. ಹಸಿರು ನಿಶಾನೆ ಎತ್ತಿದಾಗ ಕೂಗಿ ಅವನನ್ನು ಎಚ್ಚರಿಸುವ ಪಾಳಿ ಜೆಕ್ಕ್ಯಗೆ ಬರುತ್ತಿತ್ತು. ಆದರೆ ಅಂಥ ಕೂಗು ಕೂಡ ಅವನನ್ನು ಜೀವಂತ ಮಾಡುತ್ತಿತ್ತು.

ಸಂಜೆ ಮನೆಗೆ ಹೊರಟಾಗ ಜೆಕ್ಕ್ಯ ಪೂರಾ ಬದಲಾಗಿದ್ದ. ಸಿಳ್ಳು ಹಾಕುತ್ತ, ಕೈಬೆರಳಿನಲ್ಲಿದ್ದ ಉಂಗುರವನ್ನು ತಿರುವುತ್ತ ಆತ ಮನೆಗೆ ಬಂದ.

ಮೂರು ಮಾಳಿಗೆಯ ಒಂದು ಕಟ್ಟಡದಲ್ಲಿ ಎರಡನೆಯ ಮಾಳಿಗೆಯ ಮೇಲೆ ಜೆಕ್ಕ್ಯ ಇರುತ್ತಿದ್ದ. ಆತ ಮೆಟ್ಟಲುಗಳನ್ನೇರಿ ಮನೆಗೆ ಬಂದಾಗ ಬಾಗಿಲು ಮುಚ್ಚಿತ್ತು.

ಆತ ಬಾಗಿಲನ್ನು ಕಾಲಿನಿಂದ ಒದ್ದ.

ಅವನ ಲಠ ಅತ್ತೆಯೇ ಬಾಗಿಲು ತೆರೆದಳು. "ಏನು ಕುಡಿದು ಬಂದಿದ್ದೀಯಾ? ಬಾಗಿಲನ್ನು ಮುರಿಯಬೇಕೆಂದಿರುವೆಯೇನು ಮೂರ್ಖಾ?" ಅವಳು ಗರ್ಜಿಸಿದಳು.

"ಮುಚ್ಚು, ಬಾಯ್ಮುಚ್ಚು!" ಅವಳಿಗಿಂತಲೂ ಇಮ್ಮಡಿ ಗಟ್ಟಿಯಾಗಿ ಗರ್ಜಿಸಿ ಜೆಕ್ಕ್ಯ ಮನೆಯೊಳಗೆ ಹೊಕ್ಕ. ಬಾಗಿಲನ್ನು ಮುಚ್ಚಿಕೊಂಡು

ಅವನ ಹಿಂದೆಯೇ ಅವನ ಅತ್ತೆ ಬಂದಳು.

ಕೋಟು ಕಳಚಿ ಅದನ್ನು ಹೆಂಡತಿಯ ಮೈ-ಮೇಲೆಸೆದು ಅತ್ತೆಯನ್ನು ದಿಟ್ಟಿಸಿ ನೋಡುತ್ತ, "ಏನು ನೋಡುತ್ತ ನಿಂತೆ? ಬಡಿಸು ನನ್ನ ಊಟವನ್ನು" ಎಂದು ಗದ್ದರಿಸಿದ.

"ನಿಮ್ಮ ಕಿವಿ ಕಿವುಡಾಗಿದೆಯೇನು? ಬಡಿಸು ಎಂದದ್ದು ಕೇಳಿಸಲಿಲ್ಲವೇ? ಊಟ, ಊಟ ಬರಲಿ!" ಎಂದಾತ ಗರ್ಜಿಸಿದ.

"ಕೂಗಬೇಡ. ಊಟ ತರುತ್ತೇನೆ. ಇವನೇನು ಮನುಷ್ಯನೋ ಪಶುವೋ?" ಎನ್ನುತ್ತ ಅತ್ತೆ ಅಡಿಗೆ ಮನೆಯತ್ತ ಹೊರಟಳು.

"ನಾನು ಹುಲಿ ಇದ್ದೇನೆ, ಹುಲಿ!" ಎಂದು ಗಟ್ಟಿಯಾಗಿ ನಗುತ್ತ ನಿಶಾನೆ ಮೇಲಕ್ಕೆತ್ತುವವನಂತೆ ಜೆಕ್ಯ ಕೈಯೆತ್ತಿದ.

ಊಟ ತಂದಾಗ ಮಗಳು ಮೇಜನ್ನು ಕೈ-ಯಿಂದ ಒರೆಸುತ್ತಿದ್ದುದನ್ನು ಕಂಡು ಜೆಕ್ಯನ ಅತ್ತೆ "ಕೈಯಿಂದ ಒರೆಸುತ್ತಿಯಾ! ಅರಿವೆ ಸಿಗಲಿಲ್ಲವೇ? ಕಣ್ಣು ಒಡೆದಿದೆಯೇನು?" ಎಂದು ನಾಲ್ಕು ಬೇಯಿಸಿದ ತತ್ತಿ, ಬ್ರೆಡ್ಡು ಮತ್ತು ಚಹದ ಕಪ್ಪನ್ನು ಅಳಿಯನ ಎದುರು ಮೇಜಿನ ಮೇಲಿಟ್ಟಳು.

ಒಮ್ಮೆ ಅದನ್ನು ನೋಡಿದಂತೆ ಮಾಡಿ ಜೆಕ್ಯ "ಇಷ್ಟೇನೆ? ಚಹ ತಣ್ಣಗಾಗಿದೆ, ಯಾಕೆ? ಇವನ್ನೆಲ್ಲ ಹೊರಗೆ ಬಿಸಾಡು" ಎಂದಾತ ಒದರಿ ಒಂದರ ನಂತರ ಒಂದರಂತೆ ನಾಲ್ಕೂ ತತ್ತಿಗಳನ್ನು ಗೋಡೆಗೆ ಅಪ್ಪಳಿಸಿ ಒಡೆದು ಹಾಕಿದ.

ಈಗ ಅವನ ಅತ್ತೆ ನಿಜವಾಗಿಯೂ ಗಾಬರಿಯಾದಳು. ಜೆಕ್ಯ ಕುಡಿದಿರಲಿಲ್ಲವೆಂಬುದು ಅವಳಿಗೆ ತಿಳಿಯುತ್ತಿತ್ತು. ಯಾಕಂದರೆ ಅವನು ಒಂದಿಷ್ಟೂ ತಡವರಿಸದೆ ಮಾತಾಡುತ್ತಿದ್ದ. ಅವನಿಗೆ ಹುಚ್ಚು ಹಿಡಿದಿಲ್ಲವೆಂದು ಅವನ ಕಣ್ಣುಗಳು ಹೇಳುತ್ತಿದ್ದವು. ಅವನಿಗಾಗಿರುವದಾದರೂ ಏನು ಎಂದು ಅವಳಿಗೆ ತಿಳಿಯಲಿಲ್ಲ.

"ಮೈ ಚನ್ನಾಗಿಲ್ಲವೆ? ಏನಾಗಿದೆ ನಿನಗೆ?" ಎಂದವಳು ಇದ್ದದ್ದರಲ್ಲಿಯೇ ಮೆತ್ತಗಿನ ಸ್ವರದಲ್ಲಿ ಕೇಳಿದಳು.

"ನನಗೇನಾಗಿದೆ ಹೇಳಲೆ? ಕೆಂಪು ನಿಶಾನೆ ಹಸರು ನಿಶಾನೆ!" ಎಂದು ಜೆಕ್ಯ ನಗತೊಡಗಿದ.

ಬಳಿಕ ಆತ ಊಟ ಮಾಡದೆ ಹೊರಬಿದ್ದ. ಹೋಗುವಾಗ ಮೇಜಿನ ಕಣದಲ್ಲಿದ್ದ ಹಣವನ್ನು ಕಿಸೆಗೆ ತುರುಕಿಕೊಂಡು ಹೋದ.

ಅವನು ತಿರುಗಿ ಬಂದಾಗ ಮಧ್ಯರಾತ್ರಿಯಾಗಿತ್ತು. ಆತ ಕುಡಿದುಬಂದಿದ್ದ. ಆತ ಬಾಗಿಲನ್ನೊದ್ದ. ಅತ್ತೆ ಬಾಗಿಲು ತೆಗೆದಳು

"ಮತ್ತೆ ನೀನು ಎದುರು ಬಂದಿಯಾ?" ಉಗ್ಗುತ್ತ ಜೆಕ್ಯ ಹೇಳಿದ. "ಅವಳೆಲ್ಲಿ? ಯಾಕೆ ಮಲಗಿದಳು? ಬಾಗಿಲು ಮುಚ್ಚು. ಅವಳನ್ನು ಕಳಿಸಿ ಕೊಡು. ಅವಳೇ ಬಾಗಿಲು ತೆಗೆಯಲಿ. ಮತ್ತೊಮ್ಮೆ ನೀನು ಬಂದರೆ ಜೋಕೆ! ಶ್ಶಿ! ಏನು ನಿನ್ನ ಕಣ್ಣು, ಏನು ಕಿವಿ, ಏನು ಮೂಗು, ಏನು ಹೊಟ್ಟೆ. ಥೂತ್."

ಅತ್ತೆ ತೆಪ್ಪಗೆ ಬಾಗಿಲು ಮುಚ್ಚಿದಳು. ಮುಂದೆರಡು ನಿಮಿಷದಲ್ಲಿ ಅವನ ಹೆಂಡತಿ ಬಂದು ಬಾಗಿಲು ತೆರೆದಳು.

ಒಳಗೆ ಬಂದು ಜೆಕ್ಯ "ಹೇಳು. ಆ ನಿನ್ನ ತಾಯಿ ಮುದಿಗೂಬೆಗೆ ಹೇಳು, ನಾಳೆ ಮಧ್ಯಾಹ್ನದೊಳಗೆ ಈ ಮನೆಬಿಟ್ಟು ಹೋಗಲು. ಹೋಗದಿದ್ದರೆ ಒದ್ದು ಹೊರಗೆ ಹಾಕುತ್ತೇನೆಂದು ಹೇಳು," ಎಂದು ಹೆಂಡತಿಗೆ ಹೇಳಿ ನಿದ್ದೆ ಮಾಡಿದ.

ಮರುದಿನ ಮಧ್ಯಾಹ್ನ ಅವನ ಅತ್ತೆ ಮನೆ ಬಿಟ್ಟು ಹೊರಟಳು. ಜೆಕ್ಯ ಸುಖಿಯಾದ.

ಯಾವಾಗಲಾದರೂ ರಾತ್ರಿಯಲ್ಲಿ ಅವನ ಹೆಂಡತಿ ಅವನನ್ನಪ್ಪಿಕೊಂಡು ಅಭಿಮಾನದಿಂದ ಅವನನ್ನು ನೋಡುತ್ತ "ಜೆಕ್ಯ, ನೀನಿಷ್ಟೊಂದು ಬದಲಾದದ್ದು ಹೇಗೆ?" ಎಂದು ಕೇಳುತ್ತಾಳೆ.

ಆಗ ಜೆಕ್ಯ ಬಲಗೈ ಮೇಲಕ್ಕೆತ್ತಿ ನಗುತ್ತ "ಕೆಂಪು ನಿಶಾನೆ" ಎನ್ನುತ್ತಾನೆ.

ಮನೋವಿಜ್ಞಾನಿಗಳು ಇದಕ್ಕೆ ಆರು ಉಪಾಯುಗಳನ್ನು ಹೇಳುತ್ತಾರೆ

ವಾದಗಳಲ್ಲಿ ಹೇಗೆ ಗೆಲ್ಲಬೇಕು?

ಪಾಂ

ಯಾವ ಇಬ್ಬರು ಮನುಷ್ಯರೂ ಯಾವೊಂದು ವಿಚಾರದಲ್ಲಿಯೂ ಸಂಪೂರ್ಣ ಏಕಮತದವರಾಗಿರುವುದು ಸಾಧ್ಯವಿಲ್ಲ. ಮನೆಯ ಚಿಕ್ಕ ಪರಿವಾರದಲ್ಲಿ ಗಂಡ-ಹೆಂಡಿರೊಳಗೆ ಮನೆಯ ವೆಚ್ಚವನ್ನು ಹೇಗೆ ಹಿಡಿತದಲ್ಲಿಟ್ಟುಕೊಳ್ಳಬೇಕೆಂಬಲ್ಲಿ ಮತಭೇದವಾಗುತ್ತದೆ. ಒಂದು ಇಡೀ ರಾಷ್ಟ್ರದ ಹಣೇಬರಹಕ್ಕೆ ಹೊಣೆಗಾರರಾದ ಇಬ್ಬರು ಮಂತ್ರಿಗಳ ನಡುವೆ ಮುಂಗಡ ಪತ್ರಿಕೆಯನ್ನು ಹೇಗೆ ಬಾಯಿಕೂಡಿಸಬೇಕೆಂದು ಮತಭೇದವಾಗುತ್ತದೆ. ಎರಡು ರಾಜಕೀಯ ಪಕ್ಷಗಳಲ್ಲಿ ದೇಶದ ಉದ್ಧಾರಕ್ಕೆ ಉತ್ತಮ ಉಪಾಯವೇನೆಂಬುದಕ್ಕಾಗಿ ಮತಭೇದವಾಗುತ್ತದೆ. ಪ್ರತಿ ಸಂದರ್ಭದಲ್ಲಿಯೂ ನಾವು ವಿರುದ್ಧಾಭಿಪ್ರಾಯವುಳ್ಳವರನ್ನು ನಮ್ಮ ಅಭಿಪ್ರಾಯಕ್ಕೆ ಒಲಿಸಿಕೊಂಡು ಕೆಲಸ ಸಾಗಿಸಬೇಕಾಗುತ್ತದೆ.

ಇಂಥ ಸಂದರ್ಭದಲ್ಲಿ ನಮ್ಮ ವಿಚಾರಕ್ಕೆ ಜನರನ್ನು ತಿರುಗಿಸಿಕೊಳ್ಳಲು ಇರುವ ಒಂದೇ ಉಪಾಯವೆಂದರೆ ವಾದಿಸುವುದು. ಆದರೆ ವಾದಿಸಿ ತಮ್ಮ ಇಷ್ಟಾರ್ಥ ಸಾಧಿಸಿಕೊಳ್ಳುವುದರಲ್ಲಿ ಎಲ್ಲರಿಗೂ ಸಮಾನ ಯಶ ದೊರೆಯುವುದಿಲ್ಲ. ಗೃಹ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು ಸಂಸತ್ತಿನಲ್ಲಿ ತಮ್ಮ ವಾದಗಳಿಂದ ಸರಕಾರವನ್ನು ಅತಿ ಇಕ್ಕಟ್ಟಾದ ಸ್ಥಿತಿಯಿಂದ ಪಾರುಗಾಣಿಸುತ್ತಾರೆ. ಆದರೆ ಅದೇ ಬೇರೆ ಕೆಲ ಮಂತ್ರಿಗಳು ಸಾಮಾನ್ಯ ಪ್ರಶ್ನೆಗಳಲ್ಲೂ ಸರಕಾರದ ಅಭಿಪ್ರಾಯಕ್ಕೆ ತಮ್ಮ ಪಕ್ಷದ ಜನರನ್ನು ಕೂಡ ಒಲಿಸಲಾರದೆ ಹೋದುದನ್ನು ಕಾಣುತ್ತೇವೆ.

ಹೀಗೇಕಾಗುತ್ತದೆ? ಅತಿ ಕುಶಾಗ್ರಬುದ್ಧಿಯ ಜನರೂ ತಮ್ಮ ವಾದವನ್ನು ಮನವರಿಕೆ ಮಾಡಿಕೊಡಲು ಏಕೆ ಅಶಕ್ತರಾಗುತ್ತಾರೆ?

ನಮ್ಮ ಅಭಿಪ್ರಾಯಕ್ಕೆ ವ್ಯತಿರಿಕ್ತವಾದುದನ್ನು ಯಾರಾದರೂ ಹೇಳಿದರೆ ಅದನ್ನು ನಾವು ನಮ್ಮ ಅಭಿಮಾನಕ್ಕೊಂದು ಪೆಟ್ಟು ಎಂದು ತಿಳಿಯುತ್ತೇವೆ; ಪೆಟ್ಟಿಗೆ ಪ್ರತಿ ಪೆಟ್ಟು ಕೊಡಲು ಯತ್ನಿಸುತ್ತೇವೆ. ಎದುರುವಾದಿಯ ವಿರುದ್ಧ ಕೂಗಾಡುತ್ತೇವೆ, ಬೆದರಿಕೆ ಹಾಕುತ್ತೇವೆ. ಅವನ ವಿಚಾರಗಳನ್ನು ಅಪಹಾಸ್ಯಮಾಡಿ ನಮ್ಮದನ್ನು ಎತ್ತಿ ಹಿಡಿಯುತ್ತೇವೆ. ಎದುರಾಳಿಯ ಮತಗಳನ್ನು ತಿರಸ್ಕರಿಸಿ ನಮ್ಮದೇ ಶ್ರೇಷ್ಠ ಎನ್ನುತ್ತೇವೆ.

ಇದು ಕುಸ್ತಿಯಲ್ಲಿ ಒಳ್ಳೇ ಕ್ರಮವಾಗಿರಬಹುದು. ಆದರೆ ಎದುರಾಳಿಯನ್ನು ನಮ್ಮ ಅಭಿಪ್ರಾಯಕ್ಕೆ ತಿರುಗಿಸುವ ಉಪಾಯ ಖಂಡಿತ ಅಲ್ಲ. ಮನೋವಿಜ್ಞಾನಿಗಳು ಪ್ರಯೋಗಗಳನ್ನು ನಡೆಸಿ ನೋಡಿದಾಗ ವಾದದಲ್ಲಿ ನಿಜವಾದ ಗೆಲವು ಸಿಗಬೇಕಾದರೆ ಈ ಕುಸ್ತಿ ಪದ್ಧತಿಯಲ್ಲ, ತದ್ವಿರುದ್ಧ ರೀತಿಯನ್ನು ಅವಲಂಬಿಸುವುದೇ ಉಪಾಯವೆಂದು ನಿಶ್ಚಿತವಾಗಿದೆ. ಸಮಾಜ ಸುಧಾರಣೆಯ ಸಂಸ್ಥೆಗಳು, ಜನರನ್ನು ಒಲಿಸಿ ಬಾಳಬೇಕಾದ ವ್ಯಾಪಾರಿ ಸಂಸ್ಥೆಗಳು ಕೂಡ ವಾದದ ಸರಿಯಾದ ಕ್ರಮವನ್ನು ಅನುಸರಿಸದಿರುವುದರಿಂದ ತಮ್ಮ

ಧ್ಯೇಯವನ್ನು ಸಾಧಿಸಲಾರದೆ ಹೋಗುತ್ತವೆ.

ಯೇಲ್ ವಿಶ್ವವಿದ್ಯಾಲಯದ ಇಬ್ಬರು ಮನೋವಿಜ್ಞಾನಿಗಳು ನಡೆಸಿದ ಶೋಧಗಳು ಈ ಮಾತನ್ನು ಸ್ಪಷ್ಟವಾಗಿ ಸಮರ್ಥಿಸಿದವು. ನಮ್ಮ ವಿಚಾರಗಳನ್ನು ಜನರು ಒಪ್ಪಿಕೊಳ್ಳಬೇಕೆಂದಿದ್ದರೆ ಅತಿಶಯೋಕ್ತಿ ಮತ್ತು ಭಯಪ್ರದರ್ಶನದ ಮಾತುಗಳಿಗಿಂತ ಶಾಂತ-ಸ್ಪಷ್ಟ ವಿವೇಚನೆ ಹೆಚ್ಚು ಫಲಕಾರಿಯಾಗುತ್ತದೆಂದು ಅವರು ಕಂಡುಹಿಡಿದರು.

ಹಲ್ಲುಗಳ ಆರೋಗ್ಯ ಕಾಪಾಡಿಕೊಳ್ಳುವ ಅಗತ್ಯದ ಬಗ್ಗೆ ಮೂರು ಬೇರೆ ಬೇರೆ ವಿದ್ಯಾರ್ಥಿ ಗುಂಪುಗಳಿಗೆ ಮೂರು ವಿಧದಿಂದ ಭಾಷಣ ಮಾಡಲಾಯಿತು. ಹಲ್ಲುಗಳನ್ನು ಅಲಕ್ಷಿಸಿದರೆ ಅವು ಕೊಳೆತುಹೋಗಿ ಕ್ಯಾನ್ಸರ್ ಕೂಡ ಆಗಬಹುದೆಂಬುದೇ ಮೊದಲಾದ ಹೆದರಿಕೆಯ ಮಾತುಗಳು ಮೊದಲನೇ ಭಾಷಣದಲ್ಲಿದ್ದವು. ಎರಡನೇ ಭಾಷಣದಲ್ಲಿ ಹಲ್ಲನ್ನು ಅಲಕ್ಷಿಸುವುದರಲ್ಲಿದ್ದ ಅಪಾಯಗಳನ್ನು ಸಾಮಾ ರೀತಿಯಲ್ಲಿ ಶಾಂತವಾಗಿ ವಿವರಿಸಿದ್ದಾಯಿತು. ಮೂರನೆಯದರಲ್ಲಿ ಕೇವಲ ವಿಷಯ ವಿವೇಚನೆ ಇತ್ತಲ್ಲದೆ ಅಪಾಯಗಳ ಪ್ರಸ್ತಾಪವಿದ್ದಿಲ್ಲ.

ಒಂದು ವಾರದ ನಂತರ ಈ ಮೂರೂ ಗುಂಪುಗಳ ವಿದ್ಯಾರ್ಥಿಗಳನ್ನು ಪರೀಕ್ಷಿಸಿದಾಗ ಭಯೋತ್ಪಾದಕ ಭಾಷಣ ಕೇಳಿದವರಿಗಿಂತ ಶಾಂತವಾದ ವಿಷಯ ಪ್ರತಿಪಾದನೆಯಿದ್ದ ಭಾಷಣವನ್ನಾಲಿಸಿದ ಎರಡನೇ ಗುಂಪೇ ದಂತದ ಆರೋಗ್ಯವನ್ನು ಕುರಿತು ಹೆಚ್ಚಿನ ಗಮನ ಕೊಡುತ್ತಿದ್ದುದು ಗೊತ್ತಾಯಿತು

ನ್ಯೂಯಾರ್ಕ್ ವಿಶ್ವವಿದ್ಯಾಲಯದ ವಾಕ್ ಶಾಖೆಯ ಇಬ್ಬರು ಪ್ರೊಫೆಸರರು ನಡೆಸಿದ ಪರಿಶೀಲನೆ ಇದಕ್ಕಿಂತಲೂ ದೊಡ್ಡ ಪ್ರಮಾಣದ್ದು. ಅವರು ಒಟ್ಟು ಹತ್ತು ಸಾವಿರ ವಾದಗಳನ್ನು ಆಲಿಸಿದರು. ವಾದ ಮಾಡಿದವರಲ್ಲಿ ಟ್ಯಾಕ್ಸಿವಾಲರಿಂದಾರಂಭಿಸಿ ವ್ಯಾಪಾರಿ ಏಜಂಟರ ವರೆಗೆ, ಕಾರಕೂನರಿಂದ ಹಿಡಿದು ಸಂ. ರಾ. ಸಂಘದ ಪ್ರತಿನಿಧಿಗಳ ವರೆಗೆ ಸಕಲ ವಿಧದ ಜನರಿದ್ದರು. ಪ್ರತಿಯೊಂದು ವಾದದಲ್ಲಿ ಯಾರು ಯಶಸ್ವಿಯಾದರು, ಏಕೆ ಎಂದೂ ಅವರು ಟಿಪ್ಪಣಿ ಮಾಡಿಕೊಂಡರು.

ಅವರು ಕಂಡುಹಿಡಿದ ಅಂಶಗಳು ಸೋಜಿಗ ಉಂಟುಮಾಡುವಂತಿವೆ. ತಮ್ಮ ದೃಷ್ಟಿಕೋನಕ್ಕೆ ಇತರರನ್ನು ಒಲಿಸಿಕೊಳ್ಳುವುದರಲ್ಲಿ ಸಾದಾ ಹೊತ್ತುಮಾರುವ ವ್ಯಾಪಾರಿಗಳಿಗಿಂತ ಸಂ. ರಾ. ಸಂಘದ ಸದಸ್ಯರಂಥ ಅತಿರಥ ಮಹಾರಥ ರಾಜಕಾರಣಿಗಳು ಕಡಿಮೆ ಯಶಸ್ವಿಯಾಗಿದ್ದಾರೆಂದು ಅವರು ತೀರ್ಮಾನಕ್ಕೆ ಬಂದರು.

ಕಾರಣ ಸ್ಪಷ್ಟವಾಗಿತ್ತು. ರಾಜಕಾರಣಿಗಳಂಥ ವಾದಿಗಳಿಗೆ ವಿರೋಧವನ್ನು ಮುರಿದು ಹಾಕುವ, ಇಲ್ಲವೆ ಎದುರಾಳಿಯ ಅಭಿಪ್ರಾಯಗಳನ್ನು "ಗಾಳಿಗೆ ಹಿಡಿದು" ಅವನ ಬಾಯಿ ಮುಚ್ಚಿಸುವ ಚಟ ಬಿದ್ದಿರುತ್ತದೆ. ಮಾರಾಟಗಾರ ಹಾಗಲ್ಲ, ಆತ ಗಿರಾಕಿಯ ವಿರೋಧವನ್ನು ಮೃದುಗೊಳಿಸಿ ತನ್ನ ಸರಕು ಕೊಳ್ಳುವಂತೆ ಮನವೊಲಿಸಲು ಯತ್ನಿಸುತ್ತಾನೆ.

ವಾದದಲ್ಲಿ ಅನೇಕರು ಮಾಡುವ ತಪ್ಪೆಂದರೆ ಎದುರಾಳಿಯ ಅಭಿಮಾನಕ್ಕೆ ಪೆಟ್ಟುಹಾಕುವುದು. ಆದರೆ ಕಾರ್ಯಸಾಧಕನು ಮನುಷ್ಯಸ್ವಭಾವದ ವಿರುದ್ಧ ಕೆಲಸಮಾಡದೆ ಅದರ ಸಹಕಾರ ಪಡೆದು ಇಷ್ಟ ಸಾಧಿಸುತ್ತಾನೆ.

"ನಿನ್ನವು ಮೂಢವಿಚಾರಗಳು" ಎಂದು ಯಾರಿಗಾದರೂ ಹೇಳಿದರೆ ಅವನು ತನ್ನ ವಿಚಾರಗಳನ್ನು ಪಟ್ಟುಹಿಡಿದು ಸಮರ್ಥಿಸಿಕೊಳ್ಳುತ್ತಾನೆ. ಅವನನ್ನು ಅಪಹಾಸ್ಯ ಮಾಡಿದರೆ ಅವನು ಮುಖ ಉಳಿಸಿಕೊಳ್ಳಲಿಕ್ಕಾಗಿಯಾದರೂ ತನ್ನ ಹಟಕ್ಕೆ ಅಂಟಿಕೊಳ್ಳಬೇಕಾಗುತ್ತದೆ. ಬೆದರಿಕೆಗಳನ್ನು ಹಾಕಿದರಂತೂ ಅವನು ನಿಮ್ಮ ಅಭಿಪ್ರಾಯಗಳೆಷ್ಟೇ ಸಮಂಜಸವಾದರೂ ಅವುಗಳಿಗೆ ಕಿವಿ ಮುಚ್ಚಿಕೊಳ್ಳುತ್ತಾನೆ.

ನಮ್ಮ ಬಾಯಿ ಮೇಲಾಗಬೇಕೆಂದು ಬಗೆಯದೆ ನಮ್ಮ ಮತವನ್ನು ಇತರರು ಒಪ್ಪುವಂತೆ ಮಾಡಬೇಕೆಂಬ ಅಪೇಕ್ಷೆ ಇದ್ದಲ್ಲಿ ನಾವು ಇನ್ನೊಬ್ಬನ

ಸುಪ್ತಚೇತನದಲ್ಲಿ ಅವನಿಗರಿಯದಂತೆ ನಮ್ಮ ವಿಚಾರಗಳನ್ನು ನಟ್ಟುಬಿಡಬೇಕು. ಇದರಲ್ಲಿ ನಾವೆಷ್ಟು ಯಶಸ್ವಿಯಾಗುವೆವೋ ಅಷ್ಟು ಮಟ್ಟಿಗೆ ನಾವು ವಾದಗಳಲ್ಲಿ ಯಶಸ್ವಿಯಾಗುವೆವು.

ಪಂಡಿತ ಪಂತರು ಅನುಸರಿಸುವ ಮಾರ್ಗ ಇದೇ. ಅವರು ಅತಿ ಉಗ್ರ ವಿರೋಧಿಗಳನ್ನು ಸಹಿತ ಮಾನಖಂಡನೆಯಾಗುವಂತೆ ಟೀಕಿಸುವುದಿಲ್ಲ. ಅವರು ತಮ್ಮ ಬುದ್ಧಿ ವೈಖರಿಯ ಪ್ರದರ್ಶನಕ್ಕೆ ಹೋಗದೇ ವಿರೋಧವನ್ನು ಮೆಲ್ಲಗೆ ಸಡಿಲಿಸಿಬಿಡುತ್ತಾರೆ.

ಮನೋವಿಜ್ಞಾನವು ವಾದದಲ್ಲಿ ಯಶ ಪಡೆಯಲು ಆರು ನಿಯಮಗಳನ್ನು ಹೇಳುತ್ತದೆ:

೧. ಇನ್ನೊಬ್ಬನಿಗೆ ತನ್ನ ವಾದಗಳನ್ನು ಮಂಡಿಸಲು ಅವಕಾಶ ಕೊಡಿರಿ.

ಅವನು ಮಾತಾಡುವಾಗ ನಡುವೆ ಬಾಯಿ ಹಾಕಬೇಡಿರಿ. ಆಲಿಸುವುದರಿಂದ ಸಾವಿರ ಉಪಯೋಗವುಂಟು. ಇನ್ನೊಬ್ಬನು ತನ್ನ ಪಕ್ಷವನ್ನು ಮಂಡಿಸುವಾಗ ಅವನನ್ನು ನಡುವೇ ತಡೆದರೆ ಅವನ ಅಭಿಮಾನ ಕೆರಳುತ್ತದೆ. ಅವನು ಮನಸಿನಲ್ಲಿದ್ದುದನ್ನು ಖಾಲಿ-ಮಾಡಿಕೊಳ್ಳಲಿ. ಅಂದರೆ ಮಾತ್ರ ನಿಮ್ಮ ಪ್ರತಿವಾದಗಳನ್ನು ಕೇಳಿಕೊಳ್ಳಲು ಅವನ ಮನಸು ಸಿದ್ಧವಾಗುತ್ತದೆ.

೨. ನಿಮ್ಮ ಉತ್ತರ ಕೊಡುವ ಮೊದಲು ಸ್ವಲ್ಪ ಸಾವಧಾನ ಮಾಡಿರಿ.

ಯಾರಿಗಾದರೂ ಪ್ರಶ್ನೆಕೇಳಿದರೆ ತಟ್ಟನೆ ಉತ್ತರಹೇಳುವ ಹವ್ಯಾಸ ಬೇಡ. ತುಸು–ಬಹಳವಲ್ಲ–ಸಾವಕಾಶ ಮಾಡಿದರೆ ನೀವು ತನ್ನ ಮಾತನ್ನು ವಿಚಾರಿಸುತ್ತಿರುವಿರೆಂದು ತಿಳಿದು ಅವನಿಗೆ ಎಷ್ಟೋ ಸಮಾಧಾನವಾಗುವುದು.

೩. ನೂರಕ್ಕೆ ನೂರು ನಿಮ್ಮ ಪಂಥ ಗೆಲ್ಲಬೇಕೆಂಬ ಹಟ ಬೇಡ.

ಹೆಚ್ಚಾಗಿ ನಾವು ವಾದಿಸುವಾಗ ನಮ್ಮದು ಹದಿನಾರಾಣೆ ಸರಿ, ಇನ್ನೊಬ್ಬನದು ಪೂರಾ ತಪ್ಪು ಎಂದು ಸಾಧಿಸಹೋಗುತ್ತೇವೆ. ಮನವೊಲಿಸುವುದರಲ್ಲಿ ಚತುರರಾದವರು ಯಾವಾಗಲೂ ಇನ್ನೊಬ್ಬನ ಅಭಿಮತದಲ್ಲಿ ಕೆಲವಂಶ ತಮಗೆ ಒಪ್ಪಿಗೆಯಿದೆಯೆಂದು ಹೇಳಿ ತಮ್ಮ ವಾದವನ್ನು ಮುಂದುವರಿಸುತ್ತಾರೆ.

ಇನ್ನೊಬ್ಬನ ಹೇಳಿಕೆಗಳಲ್ಲಿ ಸರಿಯಾಗಿದ್ದ ಅಂಶಗಳನ್ನು ಮನ್ನಿಸಿರಿ. ನೀವು ಮೊದಲು ಅವನ ಚಿಕ್ಕಪುಟ್ಟ ಅಂಶಗಳನ್ನು ಒಪ್ಪಿದರೆ ಮುಂದೆ ಅವನ ಮನೋಭಾವವು ನಿಮ್ಮ ವಾದದ ದೊಡ್ಡ ಅಂಶಗಳನ್ನು ಒಪ್ಪಿಕೊಳ್ಳಲು ಅಣಿಯಾಗುವುದು.

೪. ನಿಮ್ಮ ಪಕ್ಷವನ್ನು ಸರಿಯಾಗಿ ಮತ್ತು ಅತಿರೇಕಕ್ಕೆ ಹೋಗದೆ ಮಂಡಿಸಿರಿ.

ನಮ್ಮ ವಿಚಾರಗಳನ್ನು ಯಾರಾದರೂ ನಿರಾಕರಿಸಿದರೆ ಅವುಗಳನ್ನು ಅತಿಶಯೋಕ್ತಿಪೂರ್ಣವಾಗಿ ಆಕ್ರೋಶದಿಂದ ಸಾಧಿಸಹೋಗುವುದು ಒಂದು ಸಾಮಾನ್ಯ ಚಟ. ಆಕ್ಷೇಪವೆತ್ತಿದವನನ್ನು ಬಲವಾಗಿ ಖಂಡಿಸಿ ಅವನ "ಬಾಯಿ ಮುಚ್ಚಿಸಿ"ದೆವೆಂದು ನಾವು ಅಭಿಮಾನಪಡಬಹುದು ನೆರೆದ ಜನರು ಬೇಷ್ ಎಂದು ಹೊಗಳಲೂ ಬಹುದು. ಆದರೆ ಆಕ್ಷೇಪಕನು ಮಾತ್ರ ನಮ್ಮ ವಾದವನ್ನು ಮನಸಾ ಒಪ್ಪುವುದಿಲ್ಲ, ಅದರಂತೆ ನಡೆಯುವುದಂತೂ ದೂರ ಉಳಿಯಿತು.

೫. ಇತರರ ಮುಖಾಂತರ ಮಾತಾಡಿರಿ.

ಬುದ್ಧಿವಂತ ವ್ಯಾಪಾರಿಯು ಇತರ ಗಿರಾಕಿಗಳು ತನಗೆ ಕೊಟ್ಟ ಪ್ರಶಂಸಾಪತ್ರಗಳನ್ನು ಉಪಯೋಗಿಸಿಕೊಳ್ಳುತ್ತಾನೆ. ಬುದ್ಧಿವಂತ ರಾಜಕಾರಣಿಯು ಪ್ರಸಿದ್ಧ ಸಂಸ್ಥೆಗಳ ಮೂಲಕ ತನ್ನ ಯೋಗ್ಯತೆಗಳನ್ನು ಪ್ರಚುರಪಡಿಸುತ್ತಾನೆ. ಆತ್ಮಪ್ರಶಂಸೆಯನ್ನು ಸತ್ಯವಿದ್ದರೂ ಜನ ಸಹಸಾ ನಂಬುವುದಿಲ್ಲ.

ಅಂಕೆ ಸಂಖ್ಯೆಗಳು, ವರದಿಗಳು, ಇತಿಹಾಸ, ಪ್ರಸಿದ್ಧ ಪುರುಷರ ಮಾತುಗಳ ಉಲ್ಲೇಖ ಇವೆಲ್ಲವೂ ನಮ್ಮ ದೃಷ್ಟಿಕೋನಕ್ಕೆ ಇತರರನ್ನು ಒಪ್ಪಿಸುವ ಸಾಧನಗಳಾಗಬಲ್ಲವು.

೬. ಎದುರಾಳಿಗೆ ಮುಖ ಉಳಿಸಿಕೊಳ್ಳಲು

ಸಂದರ್ಭ ಕೊಡಿರಿ.

ಎಷ್ಟೋ ವೇಳೆ ಎದುರಾಳಿಯು ನಮ್ಮ ಅಭಿಪ್ರಾಯವನ್ನು ಒಪ್ಪಿಕೊಳ್ಳುವ ಮನೋಭಾವಕ್ಕೆ ಬಂದಿದ್ದರೂ ತಾನು ಮೊದಲು ಬಲವಾಗಿ ಪ್ರತಿಪಾದಿಸುತ್ತಿದ್ದುದನ್ನು ಒಮ್ಮೆಲೇ ಬಿಟ್ಟುಕೊಟ್ಟು ಅಭಿಪ್ರಾಯ ಬದಲಿಸಿದಂತೆ ತೋರಿಸಿಕೊಳ್ಳಲು ಹಿಂಜರಿಯುತ್ತಾನೆ. ನಿಮ್ಮ ಮತ ಸರಿಯೆಂದೊಪ್ಪಿದರೆ ತಾನು ಹಿಂದೆ ಹೇಳುತ್ತಿದ್ದುದು ತಪ್ಪೆಂದಾಗುವುದಲ್ಲ ಎಂದು ಅವನು ವೃಥಾಭಿಮಾನದ ದೆಸೆಯಿಂದ ತನ್ನ ಛಲಕ್ಕೆ ಅಂಟಿಕೊಳ್ಳುತ್ತಾನೆ.

ಇಂಥ ಸಂದರ್ಭಗಳಲ್ಲಿ ಅವನಿಗೆ ಮುಖಭಂಗವಾಗದೆ ಪಕ್ಷ ಬದಲಿಸಲು ಅವಕಾಶ ಕೊಡಿರಿ. ನಿಮ್ಮ ಪಕ್ಷಕ್ಕೆ ಜನರ ಮನವೊಲಿಸಿದರೆ ಮುಗಿಯಲಿಲ್ಲ. ಅವರಿಗೆ ಅವರ ಹಿಂದಿನ ವಾದಗಳಿಂದ ಪಾರಾಗಲು ಕೂಡ ನೀವು ನೆರವಾಗಬೇಕು.

ಉದಾಹರಣೆಗೆ, ನೀವು ಅವನಿಗೆ ಹೀಗೆ ಹೇಳಬಹುದು: "ನಿಮ್ಮ ಸ್ಥಿತಿಯಲ್ಲಿ ನಾನೂ ಹಾಗೆಯೇ ಬಗೆಯುತ್ತಿದ್ದೆ. ನಿಜವಾಗಿ ಮೊದಲು ನಾನೂ ನಿಮ್ಮ ಅಭಿಪ್ರಾಯದವನೇ ಇದ್ದೆ. ಆದರೆ ಇಂಥಿಂಥ ಹೊಸ ಸಂಗತಿಗಳು ನನ್ನ ಗಮನಕ್ಕೆ ಬಂದ ಮೇಲೆ ನಾನು ಅಭಿಪ್ರಾಯ ಬದಲಿಸಬೇಕಾಯಿತು." ಆಗ ಅವನು ತನ್ನಂತೆ ನೀವೂ ಒಮ್ಮೆ ತಪ್ಪಿದ್ದಿರೆಂಬುದರಿಂದ ಸಮಾಧಾನ ಹೊಂದಿ ನಿರಾಯಾಸವಾಗಿ ಅಭಿಪ್ರಾಯ ಬದಲಿಸುವನು.

ಮಾತು

ಮನುಷ್ಯ ಮಾತಾಡುವ ಪ್ರಾಣಿ. ಉಳಿದ ಎಲ್ಲ ಲಕ್ಷಣಗಳು ಈ ಬಹು ಮುಖ್ಯವಾದ ಮಾತಿನ ಶಕ್ತಿಗೆ ದಾರಿ ತೋರಿಸುತ್ತವೆ. ಇಲ್ಲವೇ ಅಲ್ಲಿಂದ ಮುಂದೆ ಹೋಗಲು ಪ್ರಯತ್ನ ಪಡುತ್ತವೆ.

—ಎಂಟಿಸ್ವಲ್

ಕಳಿಸಿದವರು: ಜಯಶಂಕರ ಕಾಸನೂರು



ದಿ ಮೊಡರ್ನ ಹಿಂದು ಹೊಟೆಲ್

ಶೇಷಾದ್ರಿ ರೋಡ, ಬೆಂಗಳೂರು-೯

ಇವರು

ಬೆಂಗಳೂರಿನ ಮಾಡರ್ನ ಹಿಂದು ಹೊಟೆಲಿನ ವಜ್ರ ಮಹೋತ್ಸವದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕೆ. ಟಿ. ಅಪ್ಪಣ್ಣ ಅವರಿಗೆ ಬೆಂಗಳೂರ ಹೊಟೆಲ ಸಂಘ, ಅಖಿಲ ಮೈಸೂರ ಹೊಟೆಲ್ ಸಂಘ ಹಾಗೂ ಹೊಟೆಲ್ ಸಹಕಾರಿ ಸಂಘಗಳ ಪರವಾಗಿ ಅವರು ಈ ಸಂಸ್ಥೆಗಳಿಗೆ ಹಾಗೂ ಹೊಟೆಲ್ ಉದ್ದಿಮೆಗೆ ಸಲ್ಲಿಸಿದ ಸೇವೆಯ ಪ್ರಸಂಶನಾರ್ಥಯಾಗಿ ಕರಂಡಕ ಅರ್ಪಿಸಲ್ಪಡುತ್ತಿರುವ ದೃಶ್ಯ. ಅಧ್ಯಕ್ಷತೆ ವಹಿಸಿದ ಶ್ರೀ ಎಂ. ವಿಶ್ವೇಶ್ವರಯ್ಯನವರೂ ಈ ಚಿತ್ರದಲ್ಲಿ ಕಾಣುವರು.

ತಾ ೮-೬-೫೮ ರಂದು ಭಾರತ ರತ್ನ ಎಂ. ವಿಶ್ವೇಶ್ಕರಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿದ ನಮ್ಮ ವಜ್ರ ಮಹೋತ್ಸವ ಉತ್ಸವಕ್ಕಾಗಿ ಅಭಿವಂದನೆಗಳನ್ನು ಶುಭ ಸಂದೇಶಗಳನ್ನು ಕಳಿಸಿದ ಎಲ್ಲ ಹಿತೈಷಿಗಳಿಗೂ, ಸ್ನೇಹಿತರಿಗೂ, ಪ್ರೇಕ್ಷಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮತ್ತು ಬೆಂಗಳೂರ ಹೊಟೆಲ್. ಅಸೋಸಿಯೇಶನ್, ದಿ ಆಲ್ ಮೈಸೂರ ಹೊಟೆಲ ಅಸೋಸಿಯೇಶನ್ ಮತ್ತು ಹೊಟೆಲ್. ಕೋ-ಆಪರೇಟಿವ್ಹ ಸೊಸೈಟಿ ಲಿ. ಇವುಗಳ ಸದಸ್ಯರಿಗೂ ಹಾಗೂ ವ್ಯವಸ್ಥಾಪಕ ಸಮಿತಿ ಸದಸ್ಯರಿಗೂ ಅವರು ನಮ್ಮ ಸಂಸ್ಥಾಪಕ ಅಧ್ಯಕ್ಷರಾದ ಕೆ. ಟಿ. ಅಪ್ಪಣ್ಣ ಇವರಿಗೆ ಈ ಉತ್ಸವದಲ್ಲಿ ಕಾಸ್ಕೆಟಗಳನ್ನು ಮತ್ತು ಮಾನಪತ್ರಗಳನ್ನು ಕೊಟ್ಟು ಗೌರವಿಸಿದ್ದಕ್ಕಾಗಿ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಸಂದೇಶಗಳನ್ನು ಕಳಿಸಿದ ಸರ್ವರಿಗೂ ಈ ಮೂಲಕ ವೈಯಕ್ತಿಕವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ತಂತಿ :— ಅನ್ನಪೂರ್ಣಾ

ಫೋ. ನಂ. ೪೮೩೮

ಯಾವಾಗಲೂ ನಿಮ್ಮ ಶುಭಾಶಯ ಬಯಸುವ

ಕೆ. ಟಿ. ಅಪ್ಪಣ್ಣ ಆ್ಯಂಡ ಸನ್ಸ

ವಿಚಾರ ಲಹರಿ

ಮಾನವ ಜಾತಿಯ ಮಹತ್ತ್ವನು ಆವಿಷ್ಕಾರವೆಂದರೆ ಆತ್ಮ ; ನಾಗರಿಕತೆಯ ಅತ್ಯುದಾತ್ತ ದಾನವೆಂದರೆ 'ತಾನು' ಎಂಬ ಪುಸ್ತಕ. ನಾವೆಲ್ಲರೂ ಈ ಮೋಹಕ ಪುಸ್ತಕವನ್ನು ಓದುತ್ತಲೇ ಇದ್ದೇವೆ. ಆದರೆ ಎಂದು ಅದು ಪ್ರಾರಂಭವಾಯಿತು, ಎಂದು ಕೊನೆಯ ಪುಟಕ್ಕೆ ಬರುವೆವು ಎಂದು ಹೇಳಬಲ್ಲವರಾರೂ ಇಲ್ಲ. ಪ್ರತಿಯೊಬ್ಬನೂ ಹಿಂದಿನ ತಲೆಮಾರುಗಳಿಂದ ದಾಯವಾಗಿ ಬಂದ ಸಂಸ್ಕಾರದ ಬಲದಿಂದ ತನ್ನ ಆತ್ಮವನ್ನು ತಾನೇ ಸೃಷ್ಟಿಸಿಕೊಳ್ಳಬೇಕಾಗುವುದು. ಆತ್ಮವು ಸಮುದ್ರದಾಚೆಯ ಪಯಣಿಗನಂತೆ ದೂರದಿಂದ ಬರುತ್ತದೆ. ಈ ಅಪರಿಚಿತ ಅತಿಥಿ ಹೊಸಲು ದಾಟ ಒಳಗೆ ಬರುತ್ತಾನೆ, ಗೃಹಿಣಿ ಅವನನ್ನು ಸ್ವಾಗತಿಸುತ್ತಾಳೆ, ಅವನು ಜೀವನದ ಅಗ್ಗಿಷ್ಟಿಕೆಯ ಬಳಿ ಕುಳಿತುಕೊಳ್ಳುತ್ತಾನೆ. ಅವನು ಅವಳ ಕಣ್ಣುಗಳಲ್ಲಿ ತನ್ನ ಪ್ರತಿಬಿಂಬವನ್ನು ಕಾಣುತ್ತಾನೆ. ಅಂದಿನಿಂದ ಈರ್ವರೂ ಒಂದಾಗಿ ಬಾಳುತ್ತಾರೆ, ತಮ್ಮ ಭಿನ್ನತೆಯನ್ನು ಪ್ರೇಮದ ಸುದೀರ್ಘ ವಿಸ್ಮೃತಿಯಲ್ಲಿ ಮುಳುಗಿಸುತ್ತಾರೆ. —ಸ್ವಾಮಿ ಆನಂದಾಚಾರ್ಯ

ಮನುಷ್ಯನ ಪರಮ ಔದಾರ್ಯ ಮತ್ತು ಪ್ರಾಮಾಣಿಕತೆಗೆ ಒಂದೇ ಉತ್ತಮ ಪರೀಕ್ಷೆಯಿದೆ—ತಾನು ತಪ್ಪು ಮಾಡಿದಾಗ ಆತ ಹೇಗೆ ನಡೆದುಕೊಳ್ಳುತ್ತಾನೆ ಎಂಬುದೇ ಆ ಪರೀಕ್ಷೆ. . . . ಬೇಗಿಕೊಂಡು ಕ್ಷಮೆ ಬೇಡುವುದೆಂದರೆ ಗಾಯದ ಮೇಲೆ ಬರೆ ಎಳೆದಂತೆ. ನೊಂದವನು ತನ್ನ ಮೇಲಾದ ತಪ್ಪಿಗಾಗಿ ಪರಿಹಾರವನ್ನು ಅಪೇಕ್ಷಿಸುವುದಿಲ್ಲ, ತನಗಾದ ನೋವಿಗೆ ಉಪಚಾರವನ್ನು ಬಯಸುತ್ತಾನೆ. —ಇಲಸ್ಟ್ರೇಟೆಡ್ ವೀಕ್ಲಿಯಿಂದ

. . . . . ಭಗವಂತನ ಸೃಷ್ಟಿ ಚಿತ್ರ ವಿಚಿತ್ರ. ಜಟಕಾ ಗಾಡಿಯ ಕುದುರೆ ಲಂಗುಲಗಾಮುಗಳನ್ನು ಕಟ್ಟಿಸಿಕೊಂಡು ದುಡಿದುಡಿದು ದುಡಿಯುತ್ತದೆ. ಪಟ್ಟದ ಕುದುರೆ ವಸ್ತ್ರಾಭರಣ ಭೂಷಿತವಾಗಿ ರಾಜ ವೈಭವದಿಂದ ಪೂಜೆ ಮಾಡಿಸಿಕೊಳ್ಳುತ್ತದೆ. ಆಡು ಬಡ ಜಂತುವಾಗಿದ್ದು ಬೆಳಗ್ಗೆದ್ದರೆ ಅಸಹಾಯವಾಗಿ ಕಟುಕರ ಕೈಯಲ್ಲಿ ಕಡಿಸಿಕೊಳ್ಳುತ್ತದೆ. ಅದರ ಜನ್ಮ ಹಾಗೇ, ಇದರ ಜನ್ಮ ಹೀಗೆಯೇ !

ಹೂವು ದೇವರ ತಲೆಯ ಮೇಲೆ ಕೂತು ಬಾಡಿ ನಿರ್ಮಾಲ್ಯವಾಗಬೇಕು. ಸಾಂಬ್ರಾಣಿ ಅವನ ಮುಂದೆ ಬೆಂಕಿಗೆ ಬಿದ್ದು ಕುದಿದು ಹೊಗೆಯಾಡಿ ಅದೃಶ್ಯವಾಗಬೇಕು. ಆಗಲೇ ಅದಕ್ಕೆ ಮುಗಿವು, ಮುಕ್ತಿ. ಆಗಲೇ ಪ್ರಾಯಶಃ ಅದರ ಜನ್ಮ ಸಾರ್ಥಕ, ಸೃಷ್ಟಿ ಸಫಲ. ಅದನ್ನು ಹೂವಿನಂತೆ ನೋಯಿಸದೆ ಹಾಗೆ ಮುಡಿದರೆ ವಾಸನೆ ಹೊರಟೀತೇ ? ಬೆಂಕಿಗೆ ಹಾಕಬೇಕು, ಆಗಲೇ ಅದರ ಸುವಾಸನೆ. ಈ ಅಗ್ನಿ ಸಂಸ್ಕಾರ ಅದಕ್ಕೆ ಉಪಕಾರವೋ ಅಪಕಾರವೋ ಸುಖವೋ ದುಃಖವೋ ಹೇಳಬಲ್ಲವರಾರು ? ಸಾಂಬ್ರಾಣಿ ಒರಟು, ಬಣ್ಣವಿಲ್ಲ ಬೆಡಗಿಲ್ಲ, ಹೂವು ಸುಂದರ ರಸರಸವಾಗಿ ಮಕರಂದದೊಡಗೂಡಿ ಮುಟ್ಟಿದರೆ ಮುಡಿದರೆ ನಲುಗಿ ಬಾಡಿ ನಿರ್ಮಾಲ್ಯವಾಗುತ್ತದೆ. ಇದಕ್ಕಾಗಿ ಹೂವಿಗೆ ಶ್ಲಾಘನೆ ಸಲ್ಲಬೇಕೆ ? ಸಾಂಬ್ರಾಣಿಯನ್ನು ಬೆಂಕಿಗೆ ಹಾಕಿ ಸುಡದ ಹೊರ್ತು ವಾಸನೆ ತೋರದು, ಇದು ಅದರ ದೋಷವೇ ? — " ಶ್ರೀಪತಿಯ ಕಥೆಗಳು "

ಆಯ್ದವರು : ಶ್ರೀ ಪಾಟೀಲ ಮಾನವೇಂದ್ರ ಬೆಂಗಳೂರು

ಕಾಶ್ಮೀರ ಪ್ರಿನ್ಸೆಸ್ ವಿಮಾನ ದುರಂತ



Condensed from the book *Kashmir Princess (Copyright 1958, Jaico Publishing House, 125 Mahatma Gandhi Rd., Bombay 1.)* Translated from the English edition published by Jaico Publishing House, Bombay, in May 1958. Price Rs. 12.50 nP. only.

ಕಾಶ್ಮೀರ ಪ್ರಿನ್ಸೆಸ್ ವಿಮಾನ ದುರಂತ

❋

ಮೂಲ :
ಎ. ಎಸ್. ಕರ್ಣಿಕ

ಸಂಗ್ರಹಾನುವಾದ :
ವಿ. ಎಂ. ಇನಾಂದಾರ್

೧೯೫೫ ಏಪ್ರಿಲ ೧೧ನೇ ದಿನ ಹಾಂಕಾಂಗಿನಿಂದ ಜಕಾರ್ತಾಕ್ಕೆ ಸಾಗಿದ್ದ ಭಾರತದ ಭವ್ಯ ಸಾರಿಗೆ ವಿಮಾನ 'ಕಾಶ್ಮೀರ್ ಪ್ರಿನ್ಸೆಸ್' ಸಮುದ್ರ ಮಧ್ಯದಲ್ಲಿ ಸ್ಫೋಟವಾಗಿ ಬಿತ್ತು. ಇತಿಹಾಸದಲ್ಲಿಯೇ ದುರಂತಕರವೆನಿಸಿದ ಈ ವಿಮಾನ ಅಪಘಾತ ದೈವಿಕವಾಗಿರದೆ ಮಾನವಕೃತವಾಗಿತ್ತು. ಕಮ್ಯುನಿಸ್ಟ ಚೀನದ ಪ್ರಧಾನಮಂತ್ರಿ ಚೌ-ಎನ್-ಲಾಯ್ ಇದರಲ್ಲಿ ಹೋಗಲಿರುವರೆಂದೆಣಿಸಿ ಕಮ್ಯುನಿಸ್ಟ ದ್ವೇಷಿ ಚಿಯಾಂಗರ ಪಕ್ಷಪಾತಿಗಳು ನಡೆಸಿದ ಹೇಯ ಒಳಸಂಚಿನ ಫಲವಾಗಿ ಒಂದು ಸುಂದರ ವಿಮಾನವೂ ೧೬ ಜನರೂ ದುರಂತ ಮೃತ್ಯುವಶರಾದರು.

ಈ ಅಂತಾರಾಷ್ಟ್ರೀಯ ಪಾತಕದ ಮೇಲೆ ಕೆಲ ವಿದೇಶಿ ಸುದ್ದಿಸಂಸ್ಥೆಗಳೂ ಅಧಿಕಾರಿಗಳೂ ಸುಳ್ಳು ವರದಿಗಳಿಂದ ಮುಸುಕೆಳೆಯಲು ಯತ್ನಿಸಿದರು. ಸತ್ಯ ಹೊರಬಿದ್ದರೂ ಅಪರಾಧಿಗೆ ಚಿಯಾಂಗ್ ಸರಕಾರ ರಕ್ಷಣೆಕೊಟ್ಟು ತಾನೇ ಈ ದ್ರೋಹದ ಕರ್ತನೆಂದು ತೋರಿಸಿಕೊಟ್ಟಿತು. ಆ ಅಪಘಾತದಲ್ಲಿ ಉಳಿದು ಬಂದ ಮೂವರಲ್ಲೊಬ್ಬರ ಬಾಯಿಂದ ಆ ರೋಮಾಂಚಕ ಆಖ್ಯಾಯಿಕೆ ಬಂದಿದೆ.

ಏಪ್ರಿಲ್ ೧೧, ೧೯೫೫, ಮಧ್ಯಾಹ್ನದ ಊಟವನ್ನು ಬೇಗನೆ ಮುಗಿಸಿಕೊಂಡು ನಾನು ಸಾಂತಾ ಕ್ರೂಝು ವಿಮಾನನಿಲ್ದಾಣಕ್ಕೆ ಬಂದಾಗ ಕಾಶ್ಮೀರ ಪ್ರಿನ್ಸೆಸ್ ವಿಮಾನ ಹೊರಡುವುದಕ್ಕೆ ಎರಡು ಗಂಟೆ ತಡವೆಂದು ತಿಳಿಯಿತು. ಅದರ ಯಂತ್ರ ಭಾಗಗಳ ಮೇಲ್ವಿಚಾರಣೆಯ ಕೆಲಸ ಪೂರ್ತಿಯಾಗಿರಲಿಲ್ಲವೆಂದೇ ಹೊರಡುವುದಕ್ಕೆ ತಡವಾಗಿತ್ತು. ಆ ವಿಮಾನ ಅಂದು ಮಧ್ಯಾಹ್ನ ಮುಂಬಯಿಯಿಂದ ಹೊರಟು ಕಲ್ಕತ್ತೆಯ ಮಾರ್ಗವಾಗಿ ಮೊದಲು ಬ್ಯಾಂಕಾಕ್‌ಗೆ, ಅಲ್ಲಿಂದ ಹಾಂಗಕಾಂಗ್‌ಗೆ ಹೋಗಿ ಹಾಂಗಕಾಂಗ್‌ನಿಂದ ಬಾಂಡುಂಗ್ ಪರಿಷತ್ತಿಗೆ ಹೋಗಲಿದ್ದ ಚೀನಿ ಪ್ರತಿನಿಧಿಗಳನ್ನು ಕರೆದುಕೊಂಡು ಜಕಾರ್ತಾಕ್ಕೆ ಹೋಗಬೇಕಾಗಿತ್ತು. ಜಕಾರ್ತಾದಿಂದ ನೇರವಾಗಿ ಮುಂಬಯಿಗೆ ಹಿಂದಿರುಗುವುದೆಂದು ಕಾರ್ಯಕ್ರಮ ಗೊತ್ತಾಗಿತ್ತು.



ಎ. ಎಸ್. ಕರ್ಣಿಕ್

ಹನ್ನೊಂದು ಜನ ಪ್ರಯಾಣಿಕರು, ವಿಮಾನದ ಚಾಲಕವರ್ಗಕ್ಕೆ ಸೇರಿದ ಎಂಟು ಜನ—ಹೀಗೆ ಹತ್ತೊಂಬತ್ತು ಜನರನ್ನು ಕರೆದುಕೊಂಡುಹೋಗುತ್ತಿದ್ದ ಆ ವಿಮಾನ ಹಾಂಗಕಾಂಗ್‌ನಿಂದ ಹೊರಟು ಐದೂವರೆ ಗಂಟೆ ಆದಾಗ ಅಕಸ್ಮಾತ್ತಾಗಿ ಅಪಘಾತಕ್ಕೀಡಾಯಿತು. ಆ ಅಪಘಾತಕ್ಕೀಡಾಗಿ ಅದರೊಳಗಿನಿಂದ ಬದುಕಿ ಬಂದ ಬರೀ ಮೂವರಲ್ಲಿ ನಾನೊಬ್ಬ. ಅಪಘಾತ ಒದಗಿದ ರೀತಿ, ಅದರಿಂದ ನಾವು ಪಾರಾಗಿ ಉಳಿದ ಬಗೆಯನ್ನು ಇಲ್ಲಿ ವಿವರಿಸಬೇಕಾಗಿದೆ. ಆ ವಿವರಗಳನ್ನು ನೆನೆ

ದಾಗ ಸಾವಿನೊಡನೆ ನಾವು ನಡೆಸಬೇಕಾದ ಸೆಣಸಾಟದ ಕಲ್ಪನೆ ಬರಬಹುದಲ್ಲದೆ ಆ ಭವ್ಯ ವಿಮಾನಕ್ಕೆ ಒದಗಿದ ದುರಂತ ಒಂದು ಆಕಸ್ಮಿಕ ಘಟನೆಯಾಗಿರದೆ ಅಂತರರಾಷ್ಟ್ರೀಯ ಪುಂಡಾಟಿಕೆಯ ಪರಿಣಾಮ ಎನ್ನುವುದೂ ಸ್ಪಷ್ಟವಾಗುತ್ತದೆ.

ಕಾಶ್ಮೀರ ಪ್ರಿನ್ಸೆಸ್ ಎಂದು ರಮ್ಯಮನೋಹರವಾದ ಹೆಸರು ಪಡೆದಿದ್ದ ಅದು ಕಾನ್‌ಸ್ಟಲೇಶನ್ ಜಾತಿಯ ಅತಿ ದೊಡ್ಡ ವಿಮಾನ. ಭಾರತೀಯ ವಿಮಾನ ಸಾರಿಗೆ ಸಂಸ್ಥೆಯವರು ತಮ್ಮ ಖಂಡಾಂತರ ವಿಮಾನ ಸಾರಿಗೆಗಾಗಿ ಅದನ್ನು ಕೊಂಡು ನಾಲ್ಕು ವರ್ಷವಾಗಿತ್ತು. ಆ ಅವಧಿಯಲ್ಲಿ ಅದು ೧೧,೧೬೩ ಗಂಟೆಗಳ ಪ್ರಯಾಣಾವಧಿಯಲ್ಲಿ ಮೂರು ಕೋಟಿ ಮೈಲು ಉಡ್ಡಾಣ ಮಾಡಿತ್ತು. ಅದರ ಹೆಸರು ಕಾಶ್ಮೀರದ ರಾಜಕುವರಿಯೆಂದಿದ್ದರೂ ಅದು ಹುಟ್ಟಿದ್ದು ಕಾಲಿಫೋರ್ನಿಯಾದಲ್ಲಿ. ಲೋಕ ವಿಖ್ಯಾತ ಚಿತ್ರಪಟ ಸಂಸ್ಥೆಯಾದ ಹಾಲಿವುಡ್ಡಿನ ಹತ್ತಿರವೇ ಇದ್ದ ಲಾಕ್‌ಹೀಡ್ ವಿಮಾನ ತಯಾರಕರ ಈ ಘನವಾದ ವಿಮಾನ ಶಿಲ್ಪದ ತೂಕ ಸುಮಾರು ೪೮ ಟನ್ ಇದ್ದಿತು. (೧೦೭,೦೦೦ ಪೌಂಡು). ತನ್ನ ನೂರಾರು ಸಾರಿಗೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳನ್ನು, ವಿಜ್ಞಾನಿಗಳನ್ನು, ರಾಜಕಾರಣಿಗಳನ್ನು, ಲೇಖಕರನ್ನು, ಮುತ್ಸದ್ದಿಗಳನ್ನು ಪ್ರಪಂಚದ ಸುತ್ತಲೂ ಆದು ಕರೆದೊಯ್ದಿತ್ತು. ಈ ವಿಮಾನ ಪ್ರಧಾನ ಮಂತ್ರಿ ಪಂಡಿತ ನೆಹರೂ ಅವರನ್ನು ಪರದೇಶಗಳಿಗೆ ಕರೆದೊಯ್ದ ಶ್ರೇಷ್ಠ ಯಂತ್ರ ಮಾತ್ರವಲ್ಲದೆ ನೋಡಿದವರ ಕಣ್ಸೆಳೆಯುವ ಒಂದು ಕಲಾಕೃತಿಯೂ ಆಗಿತ್ತು.

ಈ ದುರಂತದ ಕತೆಯನ್ನು ಹೇಳಲು ಸಾಧ್ಯವಾಗುವಂತೆ ದೈವವಶಾತ್ ಬದುಕಿಬಂದ ನಾನು, ಅನಂತ ಶ್ರೀಧರ ಕರ್ಣಿಕ, ನಮ್ಮ ವಿಮಾನ ಸಾರಿಗೆ ಸಂಸ್ಥೆಯಲ್ಲಿಯ ಮೆಂಟಿನನ್ಸ ಎಂಜಿನಿಯರರಲ್ಲಿ ಒಬ್ಬ. ಸಾರಿಗೆ ಹೊರಡುವ ಮುನ್ನ ವಿಮಾನದ ಎಲ್ಲ ಯಂತ್ರ ಭಾಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಯಂತ್ರ ಪ್ರಯಾಣಯೋಗ್ಯವಾಗಿದೆಯೆ ಇಲ್ಲವೆ ಎನ್ನುವುದನ್ನು ನಿರ್ಧರಿಸಿ ಅದನ್ನು ಸಜ್ಜುಗೊಳಿಸುವ ಕೆಲಸ ನಮ್ಮದು. ಸಾಮಾನ್ಯವಾಗಿ ಚಾಲಕವರ್ಗದವರೊಡನೆ ನಾವು ವಿಮಾನದಲ್ಲಿ ಹೋಗುವದಿಲ್ಲ. ಆದರೆ ನಿಯತ ಕಾರ್ಯಕ್ರಮಗಳಿಗೆ ಬಾಹಿರವಾದ ಪ್ರಯಾಣಗಳನ್ನು ಮಾಡಬೇಕಾದಾಗ ಯಾವಾಗಲೂ ಒಬ್ಬ ಎಂಜಿನಿಯರ ವಿಮಾನದ ಜೊತೆಯಲ್ಲಿ ಹೋಗಬೇಕೆನ್ನುವುದು ಪರಿಪಾಠ. ಹಾಂಗಕಾಂಗ್‌ನಿಂದ ಜಕಾರ್ತಕ್ಕೆ ಈ ವಿಮಾನ ಚೀನೀ ಪ್ರತಿನಿಧಿಗಳನ್ನು ಒಯ್ಯಲು ವಿಶೇಷ ಪ್ರಯಾಣ ಮಾಡಬೇಕಾಗಿತ್ತು. ಅಂತೆಯೇ ನಾನು ಹೊರಡಬೇಕಾಗಿತ್ತು. ನಾನು ಹೊರಡಬೇಕಾದದ್ದು ಮುನ್ನಾದಿನ ಮಾತ್ರ ನನಗೆ ತಿಳಿದು ತೀರ ಬೇಸರವಾಗಿತ್ತು. ಮುಂಬಯಿಯಿಂದ ಹಾಂಗ್‌ಕಾಂಗ್, ಅಲ್ಲಿಂದ ಜಕಾರ್ತಾ, ಅಲ್ಲಿಂದ ತಿರುಗಿ ಮುಂಬೈ ಹೀಗೆ ಪ್ರಯಾಣ ಮಾಡಬೇಕಾದ್ದರಿಂದ ವಿಶ್ರಾಂತಿಗೆ ಅವಕಾಶವೇ ಇರಲಿಲ್ಲ. ನನ್ನ ಬೇಸರಕ್ಕೆ ಅದೇ ಮುಖ್ಯ ಕಾರಣವಾಗಿತ್ತು.

ಈ ಯೋಚನೆಯಲ್ಲಿರುವಾಗಲೆ ಬ್ಯಾಂಕಾಕ್ ವರೆಗೆ ವಿಮಾನವನ್ನು ನಡೆಸಿಕೊಂಡು ಹೋಗಬೇಕಾಗಿದ್ದ ಕಮಾಂಡರ್ ನೀವ್ಸ ನನ್ನನ್ನು ಕುರಿತು,

"ನೀನೂ ಬ್ಯಾಂಕಾಕ್ ವರೆಗೇನಪ್ಪ?" ಎಂದು ಕೇಳಿದ.

"ಬ್ಯಾಂಕಾಕ್ ವರೆಗಾದರೆ ಸುಖವಾಗಿ ಬರುತ್ತಿದ್ದೆ. ಜಕಾರ್ತಾಕ್ಕೆ ಹೋಗಬೇಕು."

"ಪುಣ್ಯವಂತ ನೀನು ಹಾಗಿದ್ದರೆ. ಹಾಂಗ್-ಕಾಂಗ್‌ನಿಂದ ನಿಮ್ಮ ವಿಮಾನದಲ್ಲಿಯೇ ಚೀನದ ಮುಖ್ಯ ಮಂತ್ರಿ ಚೌಎನ್‌ಲೈ ಅವರು ಬಾಂ-ಡುಂಗ ಪರಿಷತ್ತಿಗಾಗಿ ಪ್ರಯಾಣಮಾಡಲಿದ್ದಾರೆ" ಎಂದ ಸಹ-ವೈಮಾನಿಕ ಗೋಡಬೋಲೆ.

ನನಗೆ ಅದನ್ನು ಕೇಳಿ ಹೆಮ್ಮೆಯೆನಿಸಲಿಲ್ಲವೆ ? ಯಾರಿಗೆ ಅನಿಸಲಿಕ್ಕಿಲ್ಲ ?

ಸಾಂತಾಕ್ರೂಝ್ ವಿಮಾನ ನಿಲ್ದಾಣವನ್ನು ಬಿಟ್ಟು ಕಾಶ್ಮೀರ ಪ್ರಿನ್ಸೆಸ್ ವಿಮಾನ ಅಂತರಿಕ್ಷ

ಕ್ಕೇರುತ್ತಿದ್ದ ಹಾಗೆ ವಿಮಾನದಲ್ಲಿಯ ಪ್ರಯಾಣಿಕರನ್ನುದ್ದೇಶಿಸಿ ಅದರಲ್ಲಿಯ ಉಪಚಾರಿಕೆಯಾಗಿದ್ದ ಕುಮಾರಿ ಗ್ಲೋರಿಯಾ ಬೇಯ ಸ್ಪಷ್ಟ ಮಧುರವಾದ ದನಿ ಧ್ವನಿವಾಹಕದಲ್ಲಿ ಕೇಳಬರುತ್ತಿತ್ತು. ಆಸನಗಳಿಗಿದ್ದ ಪಟ್ಟಿಗಳನ್ನು ಹೇಗೆ ಮತ್ತು ಯಾವ ಸಂದರ್ಭದಲ್ಲಿ ಕಟ್ಟಿಕೊಳ್ಳಬೇಕೆಂಬ ಬಗ್ಗೆ ಆಕೆ ಔಪಚಾರಿಕವಾಗಿ ಹೇಳುತ್ತಿದ್ದಳು. ಅದೊಂದು ಆಕೆಯ ಮೊದಲ ಕೆಲಸ. ಹಾಗೆ ಆಕೆ ಹೇಳುತ್ತಿದ್ದುದನ್ನು ಐವತ್ತು ಬಾರಿಯಾದರೂ ಕೇಳಿದ್ದ ನನಗೆ ಆ ದನಿ ಆ ಮಾತು ಎಲ್ಲವೂ ಪರಿ



ಗ್ಲೋರಿಯಾ
ಮೃತ್ಯುವಿನೆದುರಲ್ಲೂ ಕರ್ತವ್ಯ

ಚಿತವಾಗಿಯೆ ಇದ್ದವು. ಮೊದಲು ಎಲ್ಲರಿಗೂ ಸೌಹಾರ್ದದ ಸ್ವಾಗತ ಹೇಳಿ ಆ ಮೇಲೆ ಪಟ್ಟಿಗಳನ್ನು ಕುರಿತು, ಅದಾದ ಮೇಲೆ ತೇಲು ಕವಚಗಳನ್ನು ಅಪಘಾತವಾದ ಪ್ರಸಂಗದಲ್ಲಿ ಉಪಯೋಗಿಸುವ ವಿಧಾನವನ್ನು ಕುರಿತು ಹೇಳುತ್ತಿದ್ದಳು. ಆಕೆಯ ದನಿ ಎಂದಿನಂತೆಯೆ ಸ್ಪಷ್ಟ ಮಧುರವಾಗಿ ಕೇಳಬರುತ್ತಿತ್ತು.

"ಈ ತೇಲು ಕವಚ (ಲೈಫ್ ಜೆಕೆಟ್) ಗಳನ್ನು ಧರಿಸಬೇಕಾದ ಪ್ರಸಂಗ ಬರಲಾರದು. ಅದನ್ನು ಹೇಳಬೇಕಾದುದೊಂದು ಉಪಚಾರ ಮತ್ತು ನಿಯಮ. ನಿಮ್ಮ ಹತ್ತಿರವೇ ಇದ್ದ ಕವಚವನ್ನು ಹೀಗೆ ಧರಿಸಬೇಕು. ಆ ಮೇಲೆ ಅದರ ಮುಂದಿ ಕೀಲನ್ನು (ಕುಣಿಕೆ) ಎಳೆದರೆ ಅದು ಉಬ್ಬುತ್ತದೆ. ಅದನ್ನು ಉಪಯೋಗಿಸಬೇಕಾದ ಸಂದರ್ಭದಲ್ಲಿ ಒಂದು ಎಚ್ಚರವನ್ನು ವಹಿಸಲೇಬೇಕು. ವಿಮಾನದಿಂದ ಪೂರ್ತಿಯಾಗಿ ಹೊರಬೀಳುವ ಮುನ್ನ ಸರ್ವಥಾ ಕುಣಿಕೆಯನ್ನು ಬಿಚ್ಚಬಾರದು."

ನಯವಿನಯಗಳಿಂದ ಕೂಡಿದ ಮಾತುಗಾರಿಕೆ ಗ್ಲೋರಿಯಾಳದು. ಇಪ್ಪತ್ತುಮೂರು ವರ್ಷದ ಚೆಲುವೆ. ಪಾಶ್ಚಿಮಾತ್ಯ ಸಂಗೀತದ ಅಭ್ಯಾಸ ಮಾಡಿ ಪ್ರಶಸ್ತಿಯನ್ನು ಪಡೆದವಳು. ಸಂಗೀತಕಲೆಯನ್ನಾಶ್ರಯಿಸಿ ಆಕೆ ಬೇಕಾದ ಹಾಗೆ ಹೆಸರು ಗಳಿಸಬಹುದಿತ್ತು. ಆದರೆ ದೇಶಾಂತರದ ಜನಗಳನ್ನು, ಭೂಪ್ರದೇಶಗಳನ್ನು, ದೃಶ್ಯಗಳನ್ನು ನೋಡಿ ಅಂತರಂಗದ ಕ್ಷಿತಿಜಗಳನ್ನು ವಿಸ್ತರಿಸುವುದೇ ನಿಜವಾದ ವಿದ್ಯಾಭ್ಯಾಸ ಎಂದು ಆಕೆ ನಂಬಿದ ಹಾಗಿತ್ತು. ಇಂದು ಲಂಡನ್ ಆದರೆ ನಾಳೆ ನ್ಯೂಯಾರ್ಕ್, ನಾಡಿದ್ದು ಸಿಂಗಾಪುರ ಎಂದು ಗಗನವಿಹಾರಿಯಾಗಿ ವೈವಿಧ್ಯಪೂರ್ಣವಾದ ವಿಶಾಲ ಪ್ರಪಂಚವನ್ನು ನೋಡಬೇಕೆಂಬ ಆತುರಕ್ಕೆ ಮಣಿದು ವಿಮಾನಗಳಲ್ಲಿಯ ಉಪಚಾರಿಕೆಯೆಂದು ಕೆಲಸಕ್ಕೆ ಸೇರಿದ್ದಳು. ಕಾಶ್ಮೀರ್ ಪ್ರಿನ್ಸೆಸ್ ವಿಮಾನ ಭಾರತಕ್ಕೆ ಬಂದಾಗಿನಿಂದ ಅದರೊಡನೆ ಆಕೆಯ ಸಂಬಂಧ ನಿಕಟವಾಗಿ ಬೆಳೆದಿತ್ತು.

ಮುಂಬೈಯಿಂದ ಹೊರಟ ವಿಮಾನ ಸಕಾಲದಲ್ಲಿ ಕಲಕತ್ತೆಯನ್ನು ತಲುಪಿ ಅದೇ ರಾತ್ರಿ ಬ್ಯಾಂಕಾಕ್‌ಗೆ ಪ್ರಯಾಣ ಬೆಳೆಸಿತು. ಯಾವ ಅಡೆತಡೆಯೂ ಇಲ್ಲದೆ ಗಗನಗಂಭೀರವಾಗಿ ರಾತ್ರಿಯುದ್ದಕ್ಕೂ ಹಾರಿ ಬೆಳಗಿನ ಸುಮಾರಕ್ಕೆ ಬ್ಯಾಂಕಾಕ್ ತಲುಪಿತು. ಅಂದು ಏಪ್ರಿಲ್ ೧೧, ೧೯೫೫, ಗುರುವಾರ.

ವಿಮಾನದಿಂದಿಳಿದು ಡಾನ್‌ಮು-ಆಂಗ ವಿಮಾನ ನಿಲ್ದಾಣದಲ್ಲಿಯ ಕಟ್ಟಡಗಳ ಕಡೆಗೆ ಸಾಗುತ್ತಿ-

ದ್ದಾಗ ಎದುರಿಗೆ ಹೆಸರಾಂತ ವೈಮಾನಿಕ ಕಪ್ತಾನನಾಗಿದ್ದ ಕ್ಯಾಪ್ಟನ್ ಜಠಾರನನ್ನು ಕಂಡು ನಮಸ್ಕರಿಸಿದಾಗ ಅವನು "ಹೇಗಿದೆ ವಿಮಾನ?" ಎಂದುದಕ್ಕೆ "ಕೂದಲೆಳೆ ಅಲುಗಾಡದ ಹಾಗೆ ಇಲ್ಲಿಯವರೆಗೆ ಬಂದಿದೆ" ಎಂದೆ. ನೋಡಿದ ಯಾರೂ "ಈತ ಎಂದರೆ ನಿಜವಾದ ವೈಮಾನಿಕ" ಎನ್ನುವ ಹಾಗಿತ್ತು ಆತನ ನಡೆನುಡಿ. ವಿಶ್ರಾಂತಿ ಗೃಹಕ್ಕೆ ಬಂದು ಮುಂಜಾವಿನ ಫಲಾಹಾರವನ್ನು ನಾನು ಸವಿಯುತ್ತಿದ್ದಹಾಗೆ ಸಹ-ವೈಮಾನಿಕನಾದ ಕ್ಯಾಪ್ಟನ್ ದೀಕ್ಷಿತ ಬಂದು "ನೀನೂ ಬರುವವನಲ್ಲವೇನೂ ? ಸರಿ ಹಾಗಿದ್ದರೆ—" ಎಂದು ಹೇಳಿ ಹೊರಟುಹೋದ.

ನಾನು ವಿಮಾನಕ್ಕೆ ಹಿಂದಿರುಗಿದಾಗ ಡಿಕುನ್ಹಾ ಯಂತ್ರಪರೀಕ್ಷೆಗಳನ್ನುಮುಗಿಸಿದ್ದ. ಜಠಾರ ಮತ್ತು ದೀಕ್ಷಿತ ಅವರ ಚಾಲಕತ್ವದಲ್ಲಿ ವಿಮಾನ ಮತ್ತೆ ತನ್ನ ಪ್ರಯಾಣವನ್ನು ಮುಂದುವರಿಸಿತು. ಬ್ಯಾಂಕಾಕ್‌ನಿಂದ ಹಾಂಗ್‌ಕಾಂಗ್‌ಗೆ ನಾಲ್ಕು ಗಂಟೆ. ಮಧ್ಯಾಹ್ನದ ಸುಮಾರಿಗೆ ನಾವು ಹಾಂಗ್‌ಕಾಂಗ್ ತಲುಪಿದಾಗ ನಿರಭ್ರವಾದ ಆಕಾಶದಲ್ಲಿ ಸ್ವಚ್ಛವಾದ ಬಿಸಿಲು ಹೊಳೆಯುತ್ತಿತ್ತು.

ಮುಂದಿನ ಪ್ರಯಾಣ ವಿಶೇಷವಾಗಿ ಏರ್ಪಡಿಸಿದ್ದು. ಹಾಂಗ್‌ಕಾಂಗ್ ವಿಮಾನ ನಿಲ್ದಾಣದಲ್ಲಿ ಇಡೀ ವಿಮಾನದ ಸಮಗ್ರ ಪರೀಕ್ಷೆಯಾಗಿ ಹೊಸದಾಗಿ ಪೆಟ್ರೋಲು ಮತ್ತು ಉಳಿದ ಸಾಮಗ್ರಿಗಳನ್ನು ಹಾಕಬೇಕು. ಹೀಗೆಂದು ಯಂತ್ರ ವಿಭಾಗವನ್ನೆಲ್ಲ ನಾನು ಕೂಲಂಕಷವಾಗಿ ಪರೀಕ್ಷಿಸುವುದಕ್ಕೆ ತೊಡಗಿದೆ. ಡಿ-ಕುನ್ಹಾ ರೆಕ್ಕೆಯ ಮೇಲೆ ನಿಂತು ಪೆಟ್ರೋಲು ತುಂಬುವುದನ್ನು ಪರಿಶೀಲಿಸುತ್ತಿದ್ದ. ಚಾಲಕವರ್ಗಕ್ಕೆ ಸೇರಿದ ಉಳಿದವರು ವಿಶ್ರಾಂತಿಗೃಹದಲ್ಲಿ ಊಟ ಮಾಡುತ್ತಿದ್ದರು. ಅಂದು ಮಧ್ಯಾಹ್ನ ನಮ್ಮ ವಿಮಾನದ ಹೊರತು ಬೇರೆಯಾವ ವಿಮಾನವೂ ಅಲ್ಲಿಂದ ಹೊರಡುತ್ತಿರಲಿಲ್ಲವಾದ್ದರಿಂದ ವಿಶ್ರಾಂತಿಗೃಹದಲ್ಲಿ ವಿಶೇಷ ಗದ್ದಲವಿರಲಿಲ್ಲ. ಪ್ರಯಾಣ ಮಾಡಲಿದ್ದ ಚೀನ ಸರಕಾರದ ಪ್ರತಿನಿಧಿಗಳು ಅದೇ ಬಂದಿದ್ದರು. ಅಚ್ಚುಕಟ್ಟಾಗಿ ವೇಷಭೂಷಿತರಾದ ಅವರು ಶ್ರೇಷ್ಠ ಮುತ್ಸದ್ದಿಗಳಿದ್ದ ಹಾಗಿತ್ತು. ಅವರ ಮಧ್ಯದಲ್ಲಿ ನಿರೀಕ್ಷಿಸಿದಂತೆ ಚೌ-ಎನ್-ಲಾಯ್ ಕಾಣಲಿಲ್ಲ. ಅವರು ಬಂದಿರಲಿಲ್ಲವೆನ್ನುವುದು ಸ್ಪಷ್ಟವಾಗಿಯೆ ಇದ್ದಿತು. ಆದರೆ ಯಾರು ಬಂದರು ಯಾರು ಬರಲಿಲ್ಲ ಎನ್ನುವ ಬಗೆಯಲ್ಲಿ ಊಹಾಪೋಹ ನಡಸುವದು ವೈಮಾನಿಕ ನೀತಿಯಲ್ಲವಾದ್ದರಿಂದ ಆ ವಿಷಯವನ್ನು ಯಾರೂ ಸ್ಪಷ್ಟವಾಗಿ ಮಾತನಾಡಲಿಲ್ಲ.

ಜಕಾರ್ತಾದ ವರೆಗೆ ವಿಮಾನವನ್ನುನಡಸಿಕೊಂಡು ಹೋಗಬೇಕಾಗಿದ್ದ ಕ್ಯಾ. ಜಠಾರ, ಸಹವೈಮಾನಿಕ ಕ್ಯಾ. ದೀಕ್ಷಿತ, ಅಂತರಿಕ್ಷದಲ್ಲಿ ಮಾರ್ಗದರ್ಶನ ಮಾಡುವ ಶ್ರೀ ಪಾಠಕ ಮತ್ತು ಉಪಚಾರಿಕೆಯಾದ ಗ್ಲೋರಿಯಾ ಊಟ ಮಾಡುತ್ತಿದ್ದ ಹಾಗೆ ಅವರ ಹತ್ತಿರದಲ್ಲಿಯ ತೆರವಾಗಿದ್ದ ಒಂದು ಕುರ್ಚಿಯನ್ನು ಒಬ್ಬ ಆಗಂತುಕ ಬಂದು ಆಕ್ರಮಿಸಿದ. ಚಾಲಕವರ್ಗದವರಿಗಾಗಿ ಕಾದಿರಿಸಿದ ಸ್ಥಳದಲ್ಲಿ ಆತ ಹೀಗೆ ಬರುವುದು ಅನಿರೀಕ್ಷಿತವಾಗಿದ್ದಷ್ಟೇ ವಿಚಿತ್ರವೂ ಆಗಿದ್ದಿತು. ಬಂದವ ಒಬ್ಬ ಪಾಶ್ಚಿಮಾತ್ಯನ ಹಾಗಿದ್ದ. ಅನ್ಯೋನ್ಯ ಪರಿಚಯದ ಉಪಚಾರ ಆತನಿಗೆ ಅಗತ್ಯವೆನಿಸಲಿಲ್ಲ: ಬಲುದಿನದ ಸಲಿಗೆಯಿಂದೆಂಬಂತೆ,

"ಚೀನಿ ಪ್ರತಿನಿಧಿಗಳನ್ನು ಕರೆದುಕೊಂಡು ಹೋಗುವ ಚಾಲಕ ವರ್ಗದವರಲ್ಲರೇ ನೀವು ?" ಎಂದು ಕೇಳಿದ.

ಇಂಥ ಪ್ರಶ್ನೆಗಳನ್ನು ಯಾರೂ ಉತ್ತರಿಸಬೇಕಿರಲಿಲ್ಲ. ಅವರೆಲ್ಲರೂ ಸುಮ್ಮನಾಗಿಯೆ ಉಳಿದದ್ದನ್ನು ನೋಡಿ ಆತ, "ಈ ಚಿಂವಗಣ್ಣಿನ ಚೀನಿಯರಂತೂ ಯಾವುದನ್ನೂ ಹೇಳುವುದಿಲ್ಲ" ಎಂದ. ಆತನ ಈ ಅಧಿಕಪ್ರಸಂಗದ ಪ್ರಶ್ನೆಗಳಿಂದ ಕ್ಯಾ. ದೀಕ್ಷಿತನಿಗೆ ಸಂತಾಪವಾಗುತ್ತಿದ್ದರೂ ಉದ್ವೇಗವನ್ನು ತಡೆಹಿಡಿದು "ಹೀಗೇನು? ನಮಗೆ ತಿಳಿಯದು" ಎಂದು ಹೇಳಿದ. ಆದರೆ ಆಗಂತುಕನಿಗೆ ಇದರಿಂದ ನಿರುತ್ಸಾಹವಾಗಲಿಲ್ಲ.

"ನೀವಿನ್ನು ಇಷ್ಟರಲ್ಲಿಯೆ ಹೊರಡಬೇಕಲ್ಲವೆ?"

"ಹುಂ. ಇನ್ನು ಒಂದು ಗಂಟೆಯಾಗಬಹುದು"

ಎಂದ ದೀಕ್ಷಿತ.

"ನೀವು ಜಕಾರ್ತಾ ತಲುಪುವುದು ಯಾವಾಗ?"

ಆಗಂತುಕನ ಪ್ರಶ್ನೆ ಎಲ್ಲರನ್ನು ರೇಗಿಸುತ್ತಿತ್ತು. ಆದರೆ ನಿಷ್ಠುರದ ರೀತಿ ವೈಮಾನಿಕನಿಗೆ ಸಲ್ಲದು. ಹೀಗೆಂದು, "ಸಂಜೆಯ ಸುಮಾರಿಗೆ ತಲುಪಬಹುದು" ಎಂದು ಕ್ಯಾ. ಜಠಾರ ಶಾಂತ ರೀತಿಯಲ್ಲಿಯೇ ಹೇಳಿದ.

ಈ ಮಾತು ನಡೆದಾಗ ಭಾರತೀಯ ವಿಮಾನ ಸಂಸ್ಥೆಯ ಸೇವಕನೊಬ್ಬ ಪ್ರವೇಶಿಸಿ ಪ್ರಯಾಣಿಕರ ಸಾಮಾನುಗಳನ್ನು ವಿಮಾನದಲ್ಲಿರಿಸಲಾಯಿತೆಂದೂ ಪೆಟ್ರೋಲು ಮುಂತಾದವುಗಳನ್ನು ಹಾಕುವುದು ಮುಗಿದು ಸಿದ್ಧತೆಗಳೆಲ್ಲವು ಸರಿಯಾಗಿ ನಡೆದಿದ್ದುದಾಗಿ ಜಠಾರನಿಗೆ ತಿಳಿಸಿದ. ಈ ಮಾತನ್ನು ಕೇಳಿದ ಕ್ಷಣವೆ ಬಂದು ಕುಳಿತು ಪ್ರಶ್ನೆಗಳನ್ನು ಕೇಳಿದ ಆಗಂತುಕ ತಟ್ಟನೆ ಎದ್ದು ಹೊರಟುಹೋದ. ಹೀಗೆ ಅನಿರೀಕ್ಷಿತವಾಗಿ ಬಂದು ಅನಿರೀಕ್ಷಿತವಾಗಿ ಹೊರಟುಹೋಗುತ್ತಿದ್ದ ಆತನನ್ನೇ ನೋಡುತ್ತ ಜಠಾರ ಎಂದ:

"ಯಾವನೊ ಏನೊ! ಅಧಿಕಪ್ರಸಂಗಿ, ಪತ್ರಿಕಾಕರ್ತನಾಗಿರಬೇಕು!"

"ಏನಿದ್ದರೂ ಅವನನ್ನು ಕಂಡರೆ ನನಗೆ ಆಗಲಿಲ್ಲ" ಎಂದ ದೀಕ್ಷಿತ.

"ನನಗೂ ಅಷ್ಟೇ" ಎಂದು ಜಠಾರ ದೀಕ್ಷಿತನೊಡನೆ ವೇಧಶಾಲೆಯತ್ತ ಹೋದ.

ನೂರಾರು ಯಂತ್ರಗಳನ್ನು ಪರೀಕ್ಷೆ ಮಾಡಿ ನೋಡಬೇಕಿದ್ದ ನನ್ನ ಕೆಲಸ ಮುಗಿಯುವುದರಲ್ಲಿತ್ತು. ಅಷ್ಟರಲ್ಲಿ ಯಾರೋ ಬಂದು ವಿಮಾನದಲ್ಲಿ ನನ್ನ ಸೂಟಕೇಸು ಇಲ್ಲ ಎಂದು ಉಪಚಾರಿಕೆ ತಿಳಿಸಿದ ಹಾಗೆ ಬಂದು ಹೇಳಿದರು. ಬಹುಶಃ ಅಲ್ಲಿ ಇಳಿದು ಹೋದವರ ಸಾಮಾನುಗಳ ಜೊತೆಯಲ್ಲಿ ಅದು ಆಫೀಸಿಗೆ ಹೋಗಿರಬೇಕೆಂದು ಅಲ್ಲಿ ನೋಡಿಕೊಂಡು ಬರಹೇಳಿ ನನ್ನ ಕೆಲಸವನ್ನು ಮುಂದುವರಿಸಿದೆ. ಇನ್ನೊಬ್ಬ ಅಧಿಕಾರಿ ಬಂದು "ಚೀನಿ ಸರಕಾರದ ಪ್ರತಿನಿಧಿಗಳು ಪ್ರಯಾಣ ಮಾಡುತ್ತಾರಾದ್ದರಿಂದ ವಿಶೇಷ ದಕ್ಷತೆಯಿಂದ ಸಾಗಬೇಕು. ಪರಕೀಯರ ವಿಚಾರದಲ್ಲಿ ಇಲ್ಲಿ ಎಚ್ಚರ ತೀರ ಅಗತ್ಯ" ಎಂದ. ಅದಕ್ಕೆ ನಾನು "ಹಾಂಗ್‌ಕಾಂಗ್‌ನಲ್ಲಿ ನಾನೇ ಪರಕೀಯ. ಹೊರಗಿನವರು ಯಾರು, ಇಲ್ಲಿಯವರು ಯಾರು ಎನ್ನುವುದು ನನಗೆ ಹೇಗೆ ತಿಳಿಯಬೇಕು? ಕ್ಷೇಮಾಧಿಕಾರಿಗಳ ಕೆಲಸ ಅದು" ಎಂದು ಹೇಳಿ ನನ್ನ ಕೆಲಸಗಳನ್ನು ಪೂರೈಸಿದೆ. ಅಷ್ಟರಲ್ಲಿ ನನ್ನ ಸಹೋದ್ಯೋಗಿಯಾದ ಡಿಕುನ್ಹಾ ಬಂದು ತನ್ನ ಸೂಟಕೇಸೂ ಮಾಯವಾಗಿದೆ ಎಂದು ಹೇಳಿದ. ನಾವಿಬ್ಬರೂ ಆಫೀಸಿಗೆ ಹೋಗಿ ಹಿಂದಿರುಗಿದಾಗ ನಮ್ಮಿಬ್ಬರ ಸೂಟಕೇಸುಗಳು ವಿಚಿತ್ರವಾಗಿ ಮಾಯವಾಗಿದ್ದ ಹಾಗೆ ವಿಚಿತ್ರವಾಗಿ ಮತ್ತೆ ಬಂದು ಇಟ್ಟಲ್ಲಿಯೇ ಇಟ್ಟ ಹಾಗಿದ್ದುವು!

ಹೊರಡುವ ಸಿದ್ಧತೆಗಳೆಲ್ಲವೂ ಮುಗಿದಿದ್ದವು. ಪ್ರಯಾಣಿಕರು ಬಂದು ಕುಳಿತಿದ್ದರು. ಯಂತ್ರಾಗಾರದಲ್ಲಿ ಜಠಾರ ನಿಯಂತ್ರಕಗಳನ್ನು ನಡಸುವುದರಲ್ಲಿದ್ದ. ಗ್ಲೋರಿಯಾಳ ಪರಿಚಿತವಾದ ದನಿ ಪ್ರವಾಸಿಗಳಿಗೆ ಸ್ವಾಗತವನ್ನು ಕೋರಿ ಪ್ರಯಾಣದ ಬಗೆಯಲ್ಲಿ ತಿಳಿವಳಿಕೆ ಕೊಡುತ್ತಿತ್ತು. ಆಕೆ ಹೇಳುತ್ತಿದ್ದಳು:

"ಇದೀಗ (ಸ್ಥಳೀಯ) ವೇಳೆ ೧೨ : ೦೨. ಜಕರ್ತಾದೆಡೆಗೆ ವಿಮಾನ ಹೊರಡಲಿದೆ. ಇಲ್ಲಿಂದ ಜಕರ್ತಾ ೧೯೬೦ ಮೈಲು ದೂರವಿದೆ. ನಮ್ಮ ವಿಮಾನ ಏಳೂವರೆ ಗಂಟೆ ಕಾಲದಲ್ಲಿ ಅಲ್ಲಿಗೆ ನಿಮ್ಮನ್ನು ಒಯ್ಯುತ್ತದೆ. ೧೮,೦೦೦ ಅಡಿ ಎತ್ತರದಲ್ಲಿ ಹಾರಿ ತನ್ನ ಪ್ರಯಾಣವನ್ನು ಮುಂದುವರಿಸುತ್ತದೆ ಈ ಕಾಶ್ಮೀರ ಪ್ರಿನ್ಸೆಸ್. ಮಧ್ಯಾಹ್ನದ ಚಹ ಉಪಹಾರ ನೀವು ಕುಳಿತಲ್ಲಿಗೆ ಬರುತ್ತದೆ. ಗ್ಲೋರಿಯಾ, ಡಿಸೋಜಾ ಮತ್ತು ಪಿಮೆಂಟಾ ಮೂವರು ನಿಮ್ಮ ಸೇವೆಗೆ ಸದಾ ಸಿದ್ಧರಿದ್ದಾರೆ. ಯಾವುದಕ್ಕೂ ಸಂಕೋಚಪಡಬೇಕಾಗಿಲ್ಲ." ಇಷ್ಟು ಹೇಳಿ ಮತ್ತೆ ನನಗೆ ಪರಿಚಿತವಾದ ತೇಲು ಕವಚಗಳ ವಿಷಯವನ್ನು ವಿಸ್ತರಿಸಿ ಹೇಳಿದಳು:

"ಅದನ್ನು ಉಪಯೋಗಿಸಬೇಕಾದ ಸಂದರ್ಭ ಒದಗಲಾರದು . . . . ." ಇತ್ಯಾದಿ

ಹಾಂಗ್‌ಕಾಂಗ್‌ನಿಂದ ವಿಮಾನ ಹೊರಟಿತು!

* * *

ಎಲ್ಲಿಗೆ ?—

ಹಾಂಗ್‌ಕಾಂಗ್ ವಿಮಾನ ನಿಲ್ದಾಣ ವೈಮಾನಿಕನ ಮತ್ತು ಯಂತ್ರಸಾಮರ್ಥ್ಯದ ಪರೀಕ್ಷೆ ನಡಸುವಂತಹದು. ಮೂರು ಕಡೆಯಲ್ಲಿ ಎತ್ತರವಾದ ಗುಡ್ಡಗಳು, ನಾಲ್ಕನೆಯ ಕಡೆಯಲ್ಲಿ ಸಮುದ್ರ. ವಿಮಾನ ಇಳಿಯಬೇಕಾದ ಭೂಮಾರ್ಗ ಕಿರಿದಾಗಿದೆ. ಹೀಗಾಗಿ ಇಳಿಯುವಾಗಲಾಗಲಿ, ನೆಲಬಿಟ್ಟು ಮೇಲಕ್ಕೇರುವಾಗಲಾಗಲಿ ವೈಮಾನಿಕ ದಕ್ಷತೆಯಿಂದ ನಡಸದಿದ್ದರೆ ಅಥವಾ ನಿಯಂತ್ರಕದ ಮೇಲಿನ ಒತ್ತಡಕ್ಕೆ ಸರಿಯಾಗಿ ಯಂತ್ರಗಳು ಅಗತ್ಯವಾದ ವೇಗವನ್ನು ನೀಡದಿದ್ದರೆ ಅಪಘಾತ ಖಂಡಿತ. ಹತ್ತಾರು ಬಾರಿ ನಾನು ಅಲ್ಲಿಗೆ ಮತ್ತು ಅಲ್ಲಿಂದ ಪ್ರಯಾಣ ಮಾಡಿದವನಾದ್ದರಿಂದ ನನ್ನ ಮಟ್ಟಿಗೆ ಒಂದೊಂದು ಹೊಸ ಅನುಭವವಾಗಿರದಿದ್ದರೂ ವಿಮಾನ ಅಂತರಿಕ್ಷಕ್ಕೇರುವವರೆಗೆ ಮನಸ್ಸು ಕೆಲಮಟ್ಟಿಗೆ ಅಸ್ಥಿರವಾಗಿಯೆ ಇದ್ದಿತು. ಆದರೆ ಜಟಾರ ವಿಮಾನವನ್ನು ನಡಸುವ ರೀತಿ ಲೀಲಾಜಾಲವಾದದ್ದು. ಭೂಮಾರ್ಗವನ್ನು ಅರ್ಧ ದಾಟುವುದರಲ್ಲಿಯೇ ವಿಮಾನ ನೆಲವನ್ನು ಬಿಟ್ಟಿತ್ತು. ನಯವಾಗಿ ವಿಮಾನವನ್ನು ಇನ್ನೂ ಮೇಲಕ್ಕೇರಿಸಿ ಬಲಗಡೆಯಲ್ಲಿ ಹೊರಳಿಸಿಕೊಂಡು ನೋಡುನೋಡುವಷ್ಟರಲ್ಲಿ ಸಮುದ್ರಮುಖವಾಗಿ ಮೇಲಕ್ಕೆ ಸಾಗುವಂತೆ ನಡಸಿದ್ದ. "ವಿಮಾನ ನಡಸಿದರೆ ಹೀಗೆ ನಡಸಬೇಕು" ಎಂದುಕೊಳ್ಳಬೇಕಾದ ಸಹಜ ನಿಷ್ಣಾತ ರೀತಿ ಅದು.

ಬಣ್ಣಬಣ್ಣದ ಹಾಂಗ್‌ಕಾಂಗ್ ನಗರ ಕಣ್ಮರೆಯಾಗುವುದರಲ್ಲಿತ್ತು. ಎಲ್ಲಿಯೂ ತಡೆಯದೆ ಏಳೂವರೆ ಗಂಟೆಯ ನೇರ ಪ್ರಯಾಣ ಮೊದಲಾಯಿತು—ಜಟಾರನ ನೇತೃತ್ವದಲ್ಲಿ.

ಜಟಾರನ ಕರ್ತವ್ಯನಿಷ್ಠೆ ಮತ್ತು ನೈಪುಣ್ಯ ವೈಮಾನಿಕ ವರ್ಗಗಳಲ್ಲಿ ಮನೆಮಾತಾಗಿದ್ದಂತಿತ್ತು. ಆತ ಚಾಲಕನಾಗಿದ್ದಾಗ ಅವನೊಡನೆ ಕೆಲಸ ಮಾಡುವುದೊಂದು ಸಂತೋಷದ, ಅಭಿಮಾನದ ವಿಷಯವೆನಿಸುತ್ತಿತ್ತು. ಆತನೊಬ್ಬ ಹುಟ್ಟುವೈಮಾನಿಕನೆಂದರೂ ಸರಿ. ವೈಮಾನಿಕ ವೃತ್ತಿಯನ್ನು ಸೇರುವಾಗ ಆತನ ಮನೆಯವರು ಬೇಡವೆಂದಿದ್ದರು. ಆತ ಹಟ ಹಿಡಿದು "ಸಾವು ನಿಶ್ಚಿತವಾಗಿದ್ದಾಗ ಹಾಸಿಗೆಯಲ್ಲಿ ಬಿದ್ದು ಸಾಯುವುದಕ್ಕಿಂತ ವಿಮಾನದಲ್ಲಿ ಸಾಯುವುದು ಮೇಲು" ಎಂದು ಹೇಳಿ ವೈಮಾನಿಕನಾಗಿದ್ದ. ಆ ಧೀರ ವೃತ್ತಿಯ ಪರಿಣಾಮವಾಗಿ ಅನೇಕ ಸಲ ವೈಮಾನಿಕ ಸಾಹಸಗಳನ್ನು ಎಸಗಿದ್ದ. ಹಿಂದೆ "ಮಲಬಾರ್ ಪ್ರಿನ್ಸೆಸ್" ವಿಮಾನ ಆಲ್ಪ್ಸ ಪರ್ವತದಲ್ಲಿ ಅಪಘಾತಕ್ಕೀಡಾದಾಗ ಅದನ್ನು ಮೊದಲು ಗುರುತಿಸಿದವ ಆತನೇ. ಹುಡುಕಲು ಹೋದ ಹತ್ತಾರು ವೈಮಾನಿಕರು ಮುಸುಕಿದ ಮಂಜಿಗೆ ಹೆದರಿ ಹಿಂದಿರುಗಿದಾಗ ಕ್ಯಾ. ಜಟಾರ ಧೈರ್ಯವಾಗಿ ತನ್ನ ವಿಮಾನವನ್ನು ನಡೆಸಿಕೊಂಡು ಹೋಗಿ ಮಲಬಾರ ಪ್ರಿನ್ಸೆಸ್ಸಿನ ಅವಶೇಷಗಳನ್ನು ಗುರುತಿಸಿದ್ದ. ಅಂಥ ವೈಮಾನಿಕ ಯಂತ್ರಾಗಾರದಲ್ಲಿ ಕೆಲಸ ಮಾಡುತ್ತಿದ್ದಾಗ ಯಾವ ಚಿಂತೆಯೂ ಬೇಡವೆಂದು ನಾನು ನಿಶ್ಚಿಂತೆಯಿಂದಿದ್ದೆ.



ಕ್ಯಾ. ಜಟಾರ
ಹಾಸಿಗೆಯಲ್ಲಿ
ಸಾಯುವುದಕ್ಕಿಂತ. . . .

ಉದ್ದಾಮವಾಗಿ ಅಂತರಿಕ್ಷವನ್ನಾಳುವ ಅರಸಿಯಂತೆ ಕಾಶ್ಮೀರ್ ಪ್ರಿನ್ಸೆಸ್ ಮುನ್ನುಗ್ಗುತ್ತಿತ್ತು. ಯಂತ್ರ ಪರೀಕ್ಷೆಯ ಕೆಲಸಗಳಲ್ಲಿ ಮಧ್ಯಾಹ್ನ ನನಗೆ ಊಟ ಮಾಡಲಾಗಿರಲಿಲ್ಲವಾದ್ದರಿಂದ ಡಿಸೋಜಾ, ಪಿಮೆಂಟಾ ಮತ್ತು ಗ್ಲೋರಿಯಾ ಇದ್ದ ಉಪಾಹಾರ ವಿಭಾಗಕ್ಕೆ ಹೋಗಿ ಅದೇ ತಯಾರಾಗಿದ್ದ ಚಹ ಸೇವಿಸಿದೆ. ಒಂದೆರಡು ಸ್ಯಾಂಡ್‌ವಿಚ್ ತಿಂದು ಕೋಣೆಗೆ ಹಿಂತಿರುಗುತ್ತಿದ್ದಾಗ ಮಾರ್ಗದರ್ಶಕ ಪಾಠಕನ ಕೋಣೆ

ಯಲ್ಲಿ ದೀಕ್ಷಿತ ಇದ್ದುದನ್ನು ನೋಡಿ ಅವರೊಡನೆ ನಾನೂ ಸೇರಿ ಹರಟೆಗೆ ತೊಡಗಿದೆ. ಆ ಮಾತು ಈ ಮಾತು ನಡೆವಾಗ ನಾನೆಂದೆ—

"ಜಕಾರ್ತಾದಲ್ಲಿ ನನ್ನ ಮುಖ್ಯ ಕೆಲಸವೆಂದರೆ ನಿದ್ರೆ. ಈಗ ಕೆಲಸವಿಲ್ಲದಿದ್ದರೂ ವಿಮಾನದಲ್ಲಿ ನನಗೆ ನಿದ್ರೆ ಬರುವುದಿಲ್ಲ."

"ಜಕಾರ್ತಾದಲ್ಲಿ ನಿದ್ರೆಯೆ? ಒಳ್ಳೆ ಆಶಾವಾದಿಯಾಗಿ ಕಾಣುತ್ತೀ" ಎಂದ ದೀಕ್ಷಿತ.

"ಆಶಾವಾದಿಯಲ್ಲವೇ ನಾನು? ಹೌದು. ಯಾಕೆ ನಿದ್ದೆಯಾಗದೆ?"

"ಪರಿಷತ್ತಿಗಾಗಿ ಬಂದ ಪ್ರತಿನಿಧಿಗಳಿಂದ ಜಕಾರ್ತಾದಲ್ಲಿಯ ಹೋಟೇಲುಗಳು ಕಿಕ್ಕಿರಿದು ತುಂಬಿರಬೇಕು. ಹಾಗೆಂದೇ ನಾವು ಇಂದು ರಾತ್ರಿಯೇ ಅಲ್ಲಿಂದ ಹೊರಟು ಸಿಂಗಾಪುರಕ್ಕೆ ಬಂದು ಅಲ್ಲಿ ರಾತ್ರಿ ತಂಗುವುದೆಂದು ಗೊತ್ತು ಮಾಡಿದ್ದೇವೆ."

"ಅಯ್ಯೋ ದೇವರೆ, ಹಾಗಿದ್ದರೆ ನನ್ನ ನಿದ್ರೆಯ ಕತೆ ಮುಗಿದ ಹಾಗೆಯೆ. ಸಾಧ್ಯವಿದ್ದಷ್ಟು ವಿಶ್ರಾಂತಿಯನ್ನು ಈಗಲೆ ಪಡೆಯಬೇಕಾಯಿತು" ಎಂದು ಎದ್ದು ನನ್ನ ಕೆಬಿನ್ ಕಡೆಗೆ ಹೊರಟೆ. ದಾರಿಯಲ್ಲಿ ಗ್ಲೋರಿಯಾ ಇದಿರಾಗಿ ಬಂದು ಮಾತಿಗಾರಂಭಿಸಿದಳು. ಸದ್ಯದ ಮಟ್ಟಿಗೆ ಆಕೆಯ ಕೆಲಸ ಮುಗಿದಿತ್ತು. ನನ್ನ ಕೆಬಿನ್‌ನಲ್ಲಿಯೆ ಕೆಲ ಕಾಲ ಕುಳಿತು ಹರಟೆಯಾಯಿತು. ಹೊರಡಲನುವಾಗಿ ಕೈಗಡಿಯಾರ ನೋಡಿದಳು.



ದೀಕ್ಷಿತ

"ನಿನ್ನ ಗಡಿಯಾರ ಹೇಗೆ ನಡೆಯುತ್ತದೆ?" ಎಂದೆ ನಾನು.

"ನಿನ್ನದು?" ಎಂದಳವಳು.

"ಯಾವ ತಕರಾರೂ ಇಲ್ಲ!"

ಈ ಮಾತುಗಳಿಗೊಂದು ವೈಯಕ್ತಿಕವಾದ ಹಿನ್ನೆಲೆ ಇದ್ದಿತು. ಆಕೆಗೆ ಮದುವೆ ಗೊತ್ತಾದ್ದರಿಂದ ಆಕೆಯ ಪ್ರಿಯಕರ ಆಕೆಗಾಗಿ ಒಂದು ಗಡಿಯಾರವನ್ನು ಕೊಡಮಾಡಿದ್ದ. ನನ್ನ ಮದುವೆಯೂ ಗೊತ್ತಾಗಿತ್ತು. ಮುಂಬರುವ ಮೇ ೧೯ಕ್ಕೆ ಮದುವೆ ಎಂದು ನಿಶ್ಚಯವಾಗಿತ್ತು. ಮದುವೆಗಾಗಿ ಎಂದು ನಾನೂ ಗಡಿಯಾರ ಕೊಳ್ಳಬೇಕಾದಾಗ ಇಬ್ಬರೂ ಸಿಂಗಾಪುರದಲ್ಲಿ ಒಂದೇ ವೇಳೆಗೆ ಒಂದೇ ತರದ ಗಡಿಯಾರಗಳನ್ನು ಕೊಂಡಿದ್ದೆವು. ಆಕೆಯ ಪ್ರಿಯಕರ ಆಕೆಗಾಗಿ ಕಾಯುತ್ತಿದ್ದ ಹಾಗೆ ಮದುವೆಯ ದಿನವನ್ನು ಮುನ್ನೋಡುತ್ತಿದ್ದ ನನ್ನ ಪ್ರೇಯಸಿಯಾದ ಕಮಲಿನಿ ರೇವಾನಗರದಲ್ಲಿ ದಿನಗಳ ಎಣಿಕೆ ಹಾಕುತ್ತಿದ್ದಳು.

ಗ್ಲೋರಿಯಾ ಹೊರಟು ಹೋದಮೇಲೆ ನಾನು ನಿದ್ದೆ ಮಾಡುವ ಸಿದ್ಧತೆ ಮಾಡಿಕೊಂಡು ಬೂಟುಗಳನ್ನು ಕಳಚಿ ಆಸನದಲ್ಲಿ ಮೈಚೆಲ್ಲಿದೆ. ಆಚೆಯ ಪ್ರಯಾಣಿಕರ ಕೋಣೆಯಲ್ಲಿ ಪ್ರಯಾಣಿಕರಿದ್ದರು. ಈಚೆಯ ಕೋಣೆಯಲ್ಲಿ ನಾನೊಬ್ಬನೇ ಇದ್ದೆ. ವಿಮಾನ ನಡಸುವುದನ್ನು ದೀಕ್ಷಿತನಿಗೆ ಬಿಟ್ಟುಕೊಟ್ಟು ಜಠಾರ ಪ್ರಯಾಣಿಕರ ಕ್ಷೇಮ ಸಮಾಚಾರವನ್ನು ಔಪಚಾರಿಕವಾಗಿ ಕೇಳಿಕೊಂಡು ಹೋಗಲೆಂದು ನಾನಿದ್ದಲ್ಲಿಂದ ಹಾಯ್ದುಹೋದಾಗ ನಾನು ಮತ್ತೆ ಏಳಬೇಕಾಯಿತು. "ನಿದ್ರೆ ಮಾಡಬಹುದು. ಏಳಬೇಕಾದದ್ದಿಲ್ಲ" ಎಂದು ನಗುಮುಖದಿದ ಹೇಳಿ ಜಠಾರ ಕೋಣೆಗೆ ಹೊರಟು ಹೋದ.

ಹತ್ತು ನಿಮಿಷಗಳಲ್ಲಿ ಹಿಂದಿರುಗಿದಾಗ ದೀಕ್ಷಿತ ಆತನನ್ನು ಕೇಳಿದ.

"ಏನು ತುಂಬ ಯೋಚನೆಯಲ್ಲಿದ್ದ ಹಾಗಿದೆ? ಏನು ವಿಷಯ?"

"ಏನೂ ಇಲ್ಲ, ಇಷ್ಟು ದಿನ ಪಡುವಣದ ಸಾರಿಗೆಯಾಯಿತು. ಇನ್ನು ಮೇಲೆ ಈ ಕಡೆಗೆಯೆ ನನ್ನನ್ನು ಇರಿಸುವ ಹಾಗೆ ಕಾಣುತ್ತದೆ."

"ಯಾವ ಕಡೆಗಾದರೇನು? ಮಾಡಬೇಕಾದ ಕೆಲಸವನ್ನು ನಿನ್ನ ಹಾಗೆ ಮಾಡುವವರಿಗೆ?"

"ಅದು ಸರಿ. ಆದರೆ ನಿನ್ನಂಥ ನನ್ನ ಗೆಳೆಯರೆಲ್ಲ ಆ ಕಡೆಗೆ ಕೆಲಸದಲ್ಲಿದ್ದಾಗ ನಾನೊಬ್ಬನೇ ಈ ಕಡೆಗಾದರೆ ಬೇಸರವಾಗುತ್ತದೆ."

"ನಿಜ. ನೀನು ಈ ಕಡೆಯೆ ಉಳಿಯುವುದಾದರೆ ನಾನಾದರೂ ಪೂರ್ವದ ಕಡೆಗಿನ ಸಾರಿಗೆಗೆ ಬರುವಂತೆ ಹಿಂದಿರುಗಿದ ನಂತರ ಯೋಚನೆ ಮಾಡುವೆ" ಎಂದ ದೀಕ್ಷಿತ.

ಹೀಗೆ ಅವರ ಮಾತು ಮುಂದಿನ ಯೋಜನೆಗಳನ್ನು ರೂಪಿಸುತ್ತಿತ್ತು. ಮುಂದೆ ಕೆಲವು ಹೊತ್ತು ದೀಕ್ಷಿತನೇ ವಿಮಾನವನ್ನು ನಡಸುತ್ತಿದ್ದ. ಜಠಾರ ಹಿಂದುಗಡೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ.

ಹಾಂಗ್‌ಕಾಂಗ್ ಬಿಟ್ಟು ಐದು ಗಂಟೆಯ ಮೇಲಾಗಿತ್ತು. ಎಲ್ಲವೂ ಸುವ್ಯವಸ್ಥಿತವಾಗಿ ಸಾಗಿತ್ತು. ದೀಕ್ಷಿತ ರೇಡಿಯೋದ ಮೇಲಿಂದ ಸಿಂಗಾಪುರಕ್ಕೆ ವಿವರಗಳನ್ನು ಹೇಳುತ್ತಿದ್ದ.

"ಹೆಲೊ, ಸಿಂಗಾಪೂರ. ಮಾತನಾಡುತ್ತಿರುವವರು ವಿಕ್ಟರ್ ಎಕೊಪಾಪಾ (ಅದು ಕಾಶ್ಮೀರ್ ಪ್ರಿನ್ಸೆಸ್ ವಿಮಾನಕ್ಕೆ ಸಂಕೇತ). ನಾವೀಗ ಇದ್ದದ್ದು ಉತ್ತರ ಅಕ್ಷಾಂಶ ೪, ಪೂರ್ವ ರೇಖಾಂಶ ೧೧೮; ಎತ್ತರ ೧೮,೦೦೦ ಅಡಿ. ವಾಯುವೇಗ ೨೮೦ ಮೈಲಿ; ಹೊರಗಡೆಯ ಉಷ್ಣತಾಮಾನ ೨ ಡಿಗ್ರಿ; ಆಕಾಶ ನಿರಭ್ರ; ಜಕಾರ್ತಾಕ್ಕೆ ತಲುಪುವ ನಿರೀಕ್ಷಿತ ವೇಳೆ ೧೧.೨೫ ಗ್ರಿನೀಚ್ ಟೈಮ್."

ಮುಂದೆ ಸುಮಾರು ಅರ್ಧ ಗಂಟೆಯಲ್ಲಿ ಜಕಾರ್ತಾದ ರೇಡಿಯೋ ಕಕ್ಷೆಯಲ್ಲಿ ಬಂದೆವು. ಅಲ್ಲಿಂದ ಬಂದ ಮೊದಲನೆಯ ಪ್ರಶ್ನೆ ಎಂದರೆ ವಿಮಾನದಲ್ಲಿ ಚೀನಿ ಪ್ರಧಾನಿ ಚೌಎನ್‌ಲಾಯ್ ಅವರು ಇದ್ದಾರೆಯೆ ಹೇಗೆ ಎಂದು. ಜಠಾರನ ಅಭಿಪ್ರಾಯ ಪಡೆದು ಇಲ್ಲ ಎಂದು ಉತ್ತರ ಹೇಳಲಾಯಿತು.

ಆಸನದಲ್ಲಿ ಬಿದ್ದುಕೊಂಡು ನಾನು ತೂಕಡಿಸುತ್ತಿದ್ದೆ. ವಿಮಾನ ಭರದಿಂದ ಸಾಗುತ್ತಿತ್ತು. ಗಡಿಯಾರದ ಮುಳ್ಳು ನಿಧಾನವಾಗಿ ಸಾಗುತ್ತಿತ್ತು. ಚೀನೀ ಪ್ರತಿನಿಧಿಗಳು ಪರಿಷತ್ತಿನಲ್ಲಿ ಬರಬಹುದಾದ ವಿಷಯಗಳನ್ನು ತಮ್ಮಲ್ಲಿಯೆ ಚರ್ಚಿಸುತ್ತಿದ್ದರು. ತನ್ನನ್ನು ಬ್ಯಾಂಕಾಕ್‌ಗಾಗಲಿ, ಹಾಂಗ್‌ಕಾಂಗ್‌ಗಾಗಲಿ ವರ್ಗ ಮಾಡಿದರೆ ಹಿರಿಯ ಮಗನ ವಿದ್ಯಾಭ್ಯಾಸ ಹೇಗೆ ಎಂದು ದೀಕ್ಷಿತ ಯೋಚಿಸುತ್ತಿದ್ದ. ಈಸ್ಟರ್ ನಿಮಿತ್ತ ತಾನು ಕಳುಹಿದ ಸಂದೇಶವನ್ನು ಕುರಿತು ಕುನ್ನಾ ಯೋಚಿಸುತ್ತಿದ್ದ ಹಾಗೆ ತಾನಿಲ್ಲದೆ ತನ್ನ ತಾಯಿ ಮತ್ತು ಹೆಂಡತಿ ಈಸ್ಟರ್ ಹಬ್ಬವನ್ನು ಹೇಗೆ ಆಚರಿಸಿರಬಹುದೆಂದು ಚಿತ್ರಕಟ್ಟುತ್ತಿದ್ದ. ಗ್ಲೋರಿಯಾ ಕೈಗಡಿಯಾರವನ್ನು ನೋಡಿದಾಗಲೆಲ್ಲ ಅದನ್ನು ತನಗೆ ಕೊಡಿಸಿದ ತನ್ನ ಪ್ರಿಯಕರನ ಚಿತ್ರವನ್ನು ಆ ಗಡಿಯಾರದ ವರ್ತುಲದಲ್ಲಿ ಕಾಣುತ್ತಿದ್ದಳು. ಕಾಶ್ಮೀರ್ ಪ್ರಿನ್ಸೆಸ್ ವಿಮಾನ ಮುನ್ನುಗ್ಗುತ್ತಿತ್ತು.

ಗಡಿಯಾರದ ಮುಳ್ಳು ಸರಿಯುತ್ತಲೆ ಇದ್ದಿತು.

ಗಡಿಯಾರ ೯:೨೪ ಗ್ರಿನೀಚ್ ಟೈಮ್ ತೋರಿಸುತ್ತಿತ್ತು.

ಸೆಕಂಡ್ ಮುಳ್ಳು ೨೫ರ ಸಮೀಪ ಬರುತ್ತಿತ್ತು. ವಿಮಾನದ ಹಿಂದುಗಡೆಯಿಂದ ಧಡ್ ಎಂದು ಆಸ್ಫೋಟನೆ ಕೇಳಬಂತು.

* * *

ಹೊಡೆದೆಬ್ಬಿಸಿದಂತೆ ಆ ಸದ್ದಿಗೆ ನಾನು ಎದ್ದೆ. ಎದ್ದವನೆ ಪ್ರಯಾಣಿಕರ ಕೋಣೆಯ ಬಾಗಿಲನ್ನು ತೆರೆದೆ. ಪ್ರಯಾಣಿಕರೆಲ್ಲರೂ ಗಂಭೀರವದನರಾಗಿ ಕುಳಿತಿದ್ದರು. ಸದ್ದಾದದ್ದು ಆಸ್ಫೋಟನೆಯಿಂದ ಎಂದು ತಿಳಿಯಲು ತಡವಾಗಲಿಲ್ಲ. ಹಾಂಗ್‌ಕಾಂಗ್‌ನಲ್ಲಿ ನಾವು ಪರಕೀಯರ ವಿಷಯದಲ್ಲಿ ಜಾಗರೂಕರಾಗಿರಬೇಕೆಂದು ಅಧಿಕಾರಿ ಹೇಳಿದ್ದು ಜ್ಞಾಪಕಕ್ಕೆ ಬಂದಿತು. ಯಾರೋ ಒಂದು ಟಾಯಿಂ ಬಾಂಬನ್ನು ವಿಮಾನದಲ್ಲಿರಿಸಿರಲೇಬೇಕೆಂದುಕೊಂಡೆ. ಆದರೆ ಯೋಚನೆಗಳಿಗೆ ಅವಕಾಶವಿರಲಿಲ್ಲ. ಹಿಂದುಗಡೆಯಲ್ಲಿಯ ಸಾಮಾನು ಇಡುವ ಕೋಣೆಯಲ್ಲಿ ಆಸ್ಫೋಟನೆ ಆದಹಾಗಿತ್ತು. ಹಾಗಿದ್ದರೆ ಪ್ರಯಾಣಿಕರ ಕೋಣೆಗೆ ಬೆಂಕಿ ಹಬ್ಬುವುದು ತಡವಲ್ಲ. ಓಡುತ್ತ ಚಾಲಕನ ಕೋಣೆಗೆ ಹೋಗಿ ಹಿಂದಿನ

ಸಾಮಾನು ಕೋಣೆಗೆ ಬೆಂಕಿ ಬಿದ್ದಿದೆ ಎಂದು ತಿಳಿಸಿದೆ. ಜಠಾರ ವಿಮಾನದ ನಿಯಂತ್ರಣಗಳ ಮೇಲಿನ ಕೈಗಳನ್ನು ಅಲುಗಾಡಿಸದೆ ಶಾಂತ ಗಂಭೀರವಾದ ದನಿಯಲ್ಲಿ, "ಹಾಗಿದ್ದರೆ ಬೆಂಕಿಯನ್ನಾರಿಸುವ ಯಾಂತ್ರಿಕ ವಿಧಾನಗಳನ್ನು ನಡಸು" ಎಂದು ಕುನ್ಹಾನಿಗೆ ಹೇಳಿದ. ಪಾಠಕ ಮತ್ತು ದೀಕ್ಷಿತ ಇಬ್ಬರೂ ಅಲ್ಲಿಯೇ ಬಂದಿದ್ದರು. ಮುಂದಿನ ಯೋಜನೆಗಳಲ್ಲಿ ತೊಡಗಿದ್ದರು. ಅರೆ ನಿಮಿಷದಲ್ಲಿ ಪಾಠಕ ವಿಮಾನದ ಹಿಂಭಾಗಕ್ಕೆ ಹೋಗಿ ಬಂದು ವರದಿ ಮಾಡಿದ: "ಜಠಾರ, ವಿಮಾನದ ಬಲಗಡೆಯ ರೆಕ್ಕೆಗೆ ಬೆಂಕಿ ತಗಲಿದೆ" ಎಂದು. ಈ ಮಾತನ್ನು ಕೇಳಿ ನಾನೂ ಒಳಗಡೆ ಬಂದು ಬೆಂಕಿ ಎಲ್ಲಿಯ ವರೆಗೆ ಬಂದು ಹೇಗೆ ಹಬ್ಬುತ್ತಿದೆ ಎನ್ನುವುದನ್ನು ಕ್ಷಣಾರ್ಧದಲ್ಲಿ ನೋಡಿಕೊಂಡು ಜಠಾರನಿಗೆ ಸಲಹೆ ಹೇಳಿದೆ, "ವಿಮಾನವನ್ನು ನೀರಿಗೆ ಇಳಿಸುವುದೇ ಒಳ್ಳೆಯದು" ಎಂದು.

ದೀಕ್ಷಿತ ಕೇಳಿದ, "ಸಂಕಟ ಸೂಚನೆಯನ್ನು ರೇಡಿಯೋ ಮೇಲೆ ಕೊಡಲೆ?"

"ತುಸು ತಡೆ. ನೀನು ವಿಮಾನವನ್ನು ಒಂದೆರಡು ನಿಮಿಷ ನಡಸು. ನಾನು ನೋಡಿಕೊಂಡು ಬರುವೆ. ಅಷ್ಟರಲ್ಲಿ ವಿಮಾನವನ್ನು ಕಡಿದಾಗಿ ಕೆಳಗಡೆ ಇಳಿಸು" ಎಂದು ಹೇಳಿ ಎಂಟು ಹತ್ತು ಸೆಕೆಂಡುಗಳಲ್ಲಿ ಜಠಾರ ಹಿಂದಿರುಗಿದ. ತಾನೇ ಮತ್ತೆ ಚಾಲಕತ್ವವನ್ನು ವಹಿಸಿಕೊಂಡು ಸಂಕಟ ಸೂಚನೆಯನ್ನು ಕೊಡುವಂತೆ ದೀಕ್ಷಿತನಿಗ ತಿಳಿಸಿದ. ಸಂಕಟ ಸೂಚನೆ ರೇಡಿಯೋ ಅಲೆಗಳ ಮೇಲೆತೇಲಿ ಹೋಯಿತು. ಬಲಗಡೆಯ ರೆಕ್ಕೆಗೆ ಉರಿಹತ್ತಿದೆಯೆಂದೂ ಅಪಘಾತ ದೌರ್ಜನ್ಯದ ಪರಿಣಾಮವಾಗಿದೆ ಎಂದೂ ಹೇಳಬೇಕೆ ಬಾರದೆ ಎಂದು ದೀಕ್ಷಿತ ಕೇಳುತ್ತಿರುವಾಗಲೆ ಜಠಾರ "ನಿಯಂತ್ರಕಗಳು ಒಬ್ಬನಿಗೆ ಎಟುಕದ ಹಾಗಾಗಿವೆ. ನೀನೂ ಬಾ" ಎಂದು ದೀಕ್ಷಿತನನ್ನು ಕರೆದ. ಬಲಗಡೆಯ ರೆಕ್ಕೆ ಉರಿದು ಅದರ ಭಾರ ಕಡಿಮೆಯಾಗತೊಡಗಿದ್ದರಿಂದ ವಿಮಾನವನ್ನು ಸಮತೋಲವಾಗಿ ಮುನ್ನಡಸಿಕೊಂಡು ಹೋಗುವುದು ಹೆಚ್ಚು ಹೆಚ್ಚು ಪ್ರಯಾಸವಾಗತೊಡಗಿತ್ತು.

ನನ್ನ ಕೋಣೆಯ ಕಡೆಗೆ ಓಡಿ ಕಿಡಿಕಿಯೊಳಗಿನಿಂದ ಬೆಳೆಯುತ್ತಿದ್ದ ಬೆಂಕಿಯನ್ನು ನೋಡಿದೆ. ಬಲರೆಕ್ಕೆ ಧಗಧಗನೆ ಉರಿಯುತ್ತಿತ್ತು. ಅಲ್ಯೂಮಿನಿಯಂ ತಗಡು ಕಾಗದ ಸುಟ್ಟಹಾಗೆ ಸುಡುತ್ತಿತ್ತು. ಒಂದೆರಡು ನಿಮಿಷಗಳಲ್ಲಿ ಆ ಇಡೀ ರೆಕ್ಕೆ ಸುಟ್ಟು ವಿಮಾನದ ಕೆಳ ಮಧ್ಯಭಾಗದಲ್ಲಿಯ ಪೆಟ್ರೋಲ್ ಟ್ಯಾಂಕಿಗೆ ಉರಿ ತಗಲುವುದೆಂದು ಖಂಡಿತವಾಯಿತು. ಹಾಗಿದ್ದರೆ— ಹಾಗಿದ್ದರೆ ಖಂಡಿತವಾಗಿ ಕಥೆ ಮುಗಿಯಿತು ಎಂದುಕೊಂಡೆ. ಟ್ಯಾಂಕಿಗೆ ಉರಿ ತಗಲಿದರೆ ಅದು ಕಾಯ್ದು ಆಸ್ಫೋಟವಾಗಲಿಕ್ಕೆ ಒಂದೆರಡು ನಿಮಿಷ ಸಾಕು, ಆದರೆ ಈ ಸಮಾಚಾರವನ್ನು ಯಾರಿಗೆ ಹೇಳುವುದು? ಒಂದೆರಡು ನಿಮಿಷಗಳಲ್ಲಿ ಎಲ್ಲವೂ ಮುಗಿದು ಹೋಗುತ್ತದೆ, ವಿಮಾನ ಚೂರು ಚೂರಾಗಿ ನೀರಿಗೆ ಬೀಳುತ್ತದೆ ಎಂದು ಯೋಚಿಸುತ್ತಿದ್ದ ಹಾಗೆ ಏನೂ ಮಾಡಲು ತೋಚದೆ ದಿಙ್ಮೂಢನಾಗಿ ನಿಂತೆ. ಆಸ್ಫೋಟವಾಗಲಿಲ್ಲ! ಹಾಗಿದ್ದರೆ ಪೆಟ್ರೋಲ್ ಟ್ಯಾಂಕು ಒಡೆದಿರಬೇಕು. ಒಡೆದಿದ್ದರೆ ಆಸ್ಫೋಟವಾಗುವುದಿಲ್ಲ. ವಿಮಾನ ಸುಟ್ಟು ಹೋಗಬೇಕು, ಅಷ್ಟಾಗಬೇಕಾದರೆ ನಾಲ್ಕಾರು ನಿಮಿಷವಾದರೂ ಅವಧಿ ಸಿಕ್ಕುತ್ತದೆ ಎಂದು ಒಳಗಡೆ ಬಂದೆ. ಉರಿಯ ನಾಲಗೆಗಳು ಕರಾಳವಾಗಿ ಹಬ್ಬುತ್ತಿದ್ದವು. ವಿಮಾನದ ವೇಗದಿಂದ ಅವು ಇನ್ನೂ ಪ್ರಬಲವಾಗಿ ಬೆಳೆಯಲು ಅನುಕೂಲವಾಗುತ್ತಿತ್ತು.

ನಾಟುನಾ ದ್ವೀಪಕ್ಕೆ ಸಾಧ್ಯವಾದಷ್ಟು ಹತ್ತಿರದಲ್ಲಿ ವಿಮಾನವನ್ನು ನೀರಿಗೆ ಇಳಿಸುವುದೆಂದು ನಿರ್ಧರಿಸಲಾಗಿತ್ತು. ಜಠಾರ ಮತ್ತು ದೀಕ್ಷಿತ ಇಬ್ಬರೂ ನಿಯಂತ್ರಕಗಳೊಡನೆ ಗುದ್ದಾಡಿ ಸಾಧ್ಯವಾದಮಟ್ಟಿಗೆ ವಿಮಾನವನ್ನು ತೂಕತಪ್ಪದ ರೀತಿಯಲ್ಲಿ ಕೆಳಗಿಸುವ ಭಗೀರಥ ಪ್ರಯತ್ನ ನಡಸಿದ್ದರು. ಕಿಡಿಕಿಯೊಳಗಿಂದ ಒಂದೇ ಸಮನೆ ನೇರವಾಗಿ ಮುಂದೆ ನೋಡಿ ಪಾಠಕ ಅವರಿಗೆ

ದಾರಿ ಹೇಳುತ್ತಿದ್ದ. ತಟ್ಟನೆ ನನಗೆ ಹೊಳೆಯಿತು—ಒಂದು ವೇಳೆ ವಿಮಾನ ನೀರಿಗಿಳಿಯುವುದು ಸುಟ್ಟುಹೋಗುವ ಮೊದಲೆ ಸಾಧ್ಯವಾದರೆ ತೇಲುಕವಚಗಳ ವ್ಯವಸ್ಥೆಯನ್ನು ಮಾಡಿರಲಿಲ್ಲ ಎಂದು. ಹೀಗೆಂದು, ಧಾವಿಸಿ ಕೆಬಿನ್‌ನಿಂದ ಮೂರು ಕವಚಗಳನ್ನು ತಂದು ಹೆಚ್ಚಿನ ಕವಚಗಳಿಗಾಗಿ ಎರಡನೆಯ ಬಾರಿ ಕೆಬಿನ್ನಿಗೆ ಬರುವಾಗ ದಾರಿಯಲ್ಲಿ ಗ್ಲೋರಿಯಾಳನ್ನು ಸಂಧಿಸಿದೆ. ಹಿಂದಿನ ಬಾಗಿಲನ್ನು ಆಕೆ ತೆರೆದು ಬಾಗಿಲಲ್ಲಿಯೆ ತಡೆದಳು. ಪ್ರವಾಸಿಕರೆಲ್ಲರಿಗೂ ಆಕೆ ಆಗಲೆ ಕವಚಗಳನ್ನು ತೊಡಿಸಿದ್ದಳು. ಇಂಥ ವಿಪನ್ನಾವಸ್ಥೆಯಲ್ಲಿ ಜಠಾರನಿಂದ ಅಪ್ಪಣೆ ಬರುವ ದಾರಿಯನ್ನು ನೋಡದೆ ಮುಂಧೋರಣೆಯಿಂದ ತಾನೇ ಎಲ್ಲವನ್ನು ಪೂರೈಸಿ ಚಾಲಕ ವರ್ಗದವರಿಗಾಗಿ ಕವಚಗಳನ್ನು ಕೈಯಲ್ಲಿ ಹಿಡಿದುಕೊಂಡು ಬಂದಿದ್ದಳು. ಆಕೆಯ ಮುಖ ವಿವರ್ಣವಾಗಿದ್ದರೂ ಮಾಡಬೇಕಾದ ಕರ್ತವ್ಯವನ್ನು ಮಾಡಲೇಬೇಕೆಂಬ ನಿರ್ಧಾರ ಅಲ್ಲಿ ಸ್ಪಷ್ಟವಾಗಿತ್ತು. ನೇರವಾಗಿ ಯಂತ್ರಾಲಯಕ್ಕೆ ಬಂದು ಜಠಾರ, ದೀಕ್ಷಿತ ಪಾಠಕ ಮೂವರಿಗೂ ತೇಲು ಕವಚಗಳನ್ನು ತೊಡಿಸಿ, ನನ್ನ ಕವಚವನ್ನು ಸರಿಯಾಗಿ ಕಟ್ಟಿ, ಆ ಮೇಲೆ ತನ್ನದನ್ನು ಕಟ್ಟಿಕೊಂಡು ಪ್ರಯಾಣಿಕರ ಕೋಣೆಗೆ ಹಿಂದಿರುಗಿದಳು !

ವಿಮಾನದ ಒಳಗಿನ ಹವೆಯ ಒತ್ತಡವನ್ನು ಕಡಿಮೆ ಮಾಡಿ ಬಾಗಿಲುಗಳನ್ನು ತೆರೆದಿಡಬೇಕೆಂದು ಜಠಾರ ಕುನ್ಹಾನಿಗೆ ಹೇಳಿದ. ಅರೆನಿಮಿಷದಲ್ಲಿ ಕುನ್ಹಾ ಹಿಂದಿರುಗಿದ—ಒತ್ತಡದ ಯಂತ್ರವಿಧಾನ ಕೆಟ್ಟುಹೋಗಿದೆ ಎಂದು. "ಹಾಗಿದ್ದರೆ ನೇರವಾಗಿ ಪ್ರಯತ್ನಿಸಿ ಸಾಧ್ಯವಿದ್ದಷ್ಟು ಕಿಟಿಕಿಯ ಬಾಗಿಲುಗಳನ್ನು ತೆರೆಯಿರಿ" ಎಂದು ಮುಂದಿನ ಆಜ್ಞೆ ಬಂದಿತು. ಬಾಯಿಂದ ಆಜ್ಞೆಗಳನ್ನು ಜಠಾರ ಹೇಳುತ್ತಿದ್ದರೂ ದೀಕ್ಷಿತನ ಸಹಾಯದಿಂದ ವಿಮಾನವನ್ನು ನೀರಿಗಿಳಿಸುವ ಶತಪ್ರಯತ್ನದಲ್ಲಿದ್ದ. ಕುನ್ಹಾ ಮತ್ತು ನಾನು ಕೆಬಿನ್‌ನಲ್ಲಿಯ ಕಿಟಕಿಗಳನ್ನು ಕೈಜೋರಿನಿಂದ ತೆರೆಯುವ ಪ್ರಯತ್ನದಲ್ಲಿದ್ದೆವು. ಒಂದು ತೆರೆಯಿತು, ಎರಡನೆಯದನ್ನು ತೆರೆಯುತ್ತಿದ್ದಾಗ ಉಸಿರು ಕಟ್ಟುವಂತೆ ಕರಿಯ ಹೊಗೆ ವಿಮಾನದ ಒಳಗೆಲ್ಲವೂ ತುಂಬತೊಡಗಿತು. ಎಲ್ಲರಿಗೂ ಉಸಿರು ಕಟ್ಟತೊಡಗಿತು. ಇಷ್ಟಾದರೂ ಜಠಾರ ಕೈಯಲ್ಲಿಯ ನಿಯಂತ್ರಕಗಳನ್ನು ಬಿಡಲಿಲ್ಲ. ಶಾಂತವಾಗಿಯೆ ಪಾಠಕನಿಗೆ ಇದಿರಿನ ಕಿಟಕಿಯನ್ನು ಬಲವಾಗಿ ತೆರೆಯಲು ಹೇಳಿದ. ಕಿಟಿಕಿ ತೆರೆಯಿತು. ವಿಮಾನ ನೀರಿಗೆ ಹತ್ತಿರ ಬಂದಿತ್ತು.

ಕ್ಷಣಾರ್ಧದಲ್ಲಿ ಘನವಾದ ಆಘಾತದೊಂದಿಗೆ ಕಾಶ್ಮೀರ ಪ್ರಿನ್ಸೆಸ್ ಸಮುದ್ರದಲ್ಲಿ ಧುಮುಕಿತು. ನೂರಾರು ಕಬ್ಬಿಣದ ತುಂಡುಗಳು, ತಡೆಯಲಸಾಧ್ಯವಾದ ನೀರಪ್ರವಾಹ, ಒಮ್ಮೆಲೇ ನನ್ನ ತಲೆಯ ಮೇಲೆ ಸುತ್ತುಮುತ್ತಲೆಲ್ಲವೂ ನನ್ನನ್ನಾವರಿಸಿದ ಹಾಗೆ ಭಾಸವಾಗತೊಡಗಿತು. ನಾನೆಲ್ಲಿದ್ದೆ ?

* * * *

ನಾನೆಲ್ಲಿದ್ದೆ ? ಉಳಿದವರಿಗೇನಾಯಿತು ? ಯಾವುದೂ ತಿಳಿಯದ ಸ್ಥಿತಿಯಲ್ಲಿದ್ದೆ. ನಾನು ನೀರಬುಡದಲ್ಲಿದ್ದೇನೆಂಬ ಮೊದಲ ಅರಿವು ಬಂದಾಗ ಕಣ್ಣು ತೆರೆದೆ. ತಿಳಿಹಸಿರು ಬಣ್ಣದ ನೀರ ಪರದೆಯ ಮೇಲಿಂದ ನಾನು ಬಹಳ ಆಳದಲ್ಲಿಲ್ಲ ಎನ್ನುವುದು ತಿಳಿದಾಗ ಒಂದೆರಡು ಸಲ ಈಜುಗೈ ಹೊಡೆದೆ. ಕ್ಷಣಾರ್ಧದಲ್ಲಿ ನೀರಮೇಲಕ್ಕೆ ಬಂದೆ. ಅಂತೂ ಬದುಕಿದ್ದೇನೆ—ಬದುಕಬಹುದು ಎಂದು ತೋರಿತು. ಆದರೆ ಹಿಂದಿರುಗಿ ನೋಡಿದರೆ ಒಂದು ಒಂದುವರೆ ಫರ್ಲಾಂಗಿನ ಸಮುದ್ರವಿಸ್ತಾರ ಭುಗಿಲ್ಲೆಂದು ಉರಿಯುತ್ತಿದ್ದುದನ್ನು ಕಂಡೆ. ಅಂಥ ಭಯಾನಕ ದೃಶ್ಯವನ್ನು ನನ್ನ ಜೀವಮಾನದಲ್ಲಿಯೆ ನೋಡಿರಲಿಲ್ಲ. ವಿಮಾನ ಮುಳುಗಿ ಹೋಗಿತ್ತು. ಅದರ ಸಣ್ಣ ದೊಡ್ಡ ತುಂಡುಗಳು, ಪ್ರಯಾಣಿಕರು ಕೂಡುವುದಕ್ಕೆಂದಿದ್ದ ರಬ್ಬರಿನ ಆಸನಗಳು ಅಸ್ತವ್ಯಸ್ತವಾಗಿ ತೇಲುತ್ತಿದ್ದವು.

ಬೆಂಕಿ ಕರಾಳವಾಗಿ ನೀರ ಮೇಲೆ ತೇಲುತ್ತಿತ್ತು. ಬಹುಶಃ ತೇಲುತ್ತಿದ್ದ ಪೆಟ್ರೋಲು ಹಾಗೆ ಉರಿಯುತ್ತಿತ್ತು. ತೇಲುವ ಆ ದಾವಾಗ್ನಿಯಿಂದ ನಾನು ಇಪ್ಪತ್ತು ಅಡಿ ದೂರದಲ್ಲಿಯೂ ಇರಲಿಲ್ಲ. ವಿಮಾನದಲ್ಲಿ ಸಿಕ್ಕಿಕೊಂಡು ಸಾಯಬಹುದಾಗಿದ್ದ ನಾನು ಹೇಗೋ ಹೊರಬಿದ್ದು ಈಗ ಈ ಬೆಂಕಿ ಬಾಯಿಗೆ ಬೀಳಬೇಕಾಯಿತು ಎಂದುಕೊಂಡೆ. ಆ ಬೆಂಕಿಯನ್ನು ಕಂಡು ದಿಗ್ಭ್ರಾಂತನಾಗಿದ್ದ ನನ್ನಲ್ಲಿ ಈಜಿ ಅದರಿಂದ ದೂರ ಸರಿಯಬೇಕು ಎನ್ನುವ ಚೈತನ್ಯವೂ ಉಳಿಯಲಿಲ್ಲ. ಆದರೆ ನನ್ನ ಹತ್ತಿರದಿಂದ ಉರಿಯುತ್ತಿದ್ದ ಪೆಟ್ರೋಲು ಗಾಳಿಗೆ ಇನ್ನೊಂದೆಡೆ ಸರಿದಿರಬೇಕು. ಉರಿ ದೂರವಾಯಿತು. ಬೆಂಕಿಯಿಂದ ಬದುಕಿದೆ ಎಂದುಕೊಂಡೆ. ಹತ್ತು ಫೂಟು ಉದ್ದದ ಒಂದು ವಿಮಾನದ ತುಣುಕು ಹತ್ತಿರವೇ ತೇಲುತ್ತಿತ್ತು. ಅದನ್ನೇರಿದರೆ ಕೆಲ ಕಾಲವಾದರೂ ನೀರ ಮೇಲ್ಗಡೆಯಲ್ಲಿ ಉಳಿಯಬಹುದೆಂದು ಬಹು ಪ್ರಯಾಸದಿಂದ ಏರಿದೆ. ಬಟ್ಟೆಗಳೆಲ್ಲ ತೊಯ್ದು ಮೈ ಭಾರವಾಗಿತ್ತು. ವಿಮಾನದಲ್ಲಿ ಬೂಟುಗಳನ್ನು ಕಳಚಿದ್ದು ಅನುಕೂಲವೇ ಆಯಿತು. ಅಂತೂ ಆ ತುಂಡಿನ ಮೇಲೆ ಕುಳಿತು ಸುತ್ತಲಿನ ಭಯಾನಕ ದೃಶ್ಯವನ್ನು ನಿರೀಕ್ಷಿಸತೊಡಗಿದೆ.



ಪಾಠಕ

ನೋಡುತ್ತಿದ್ದ ಹಾಗೆ ನೀರ ಮಧ್ಯದಲ್ಲಿಂದ ಪಾಠಕ ಮೇಲಕ್ಕೆದ್ದ. ಉರಿಯ ಅಂಚಿಗೆ ಆತ ತೀರ ಹತ್ತಿರವಾಗಿದ್ದ. ಹತ್ತಾರು ಬಾರಿ ಆತನಿಗೆ ದೂರ ಸರಿ ಎಂದು ಅರಚಿಕೊಂಡೆ. ಪಾಠಕ ಬಲವಾಗಿ ಕೈಬೀಸಿ ಈಜಿ ದೂರ ಸರಿದ. ಆತ ಆಚೆ ನೋಡುತ್ತಿದ್ದ ಹಾಗೆ ದೀಕ್ಷಿತನೂ ನೀರಲ್ಲಿಂದ ಮೇಲಕ್ಕೆದ್ದ. ಇಷ್ಟು ಹೊತ್ತು ಆತ ಹೇಗೆ ಉಸಿರು ಹಿಡಿದುಕೊಂಡಿದ್ದನೋ! ಆತನಿಗೂ ಬೆಂಕಿಯಿಂದ ದೂರ ಸರಿಯುವಂತೆ ಅರಚಿಕೊಂಡೆ. ಆತ ನಿಧಾನವಾಗಿ ಈಜಿ ನನ್ನೆಡೆಗೆ ಬರುತ್ತಿದ್ದ. ಪಾಠಕ ದೂರದೂರ ಸರಿಯುತ್ತಿದ್ದ. ದೀಕ್ಷಿತ ತೀರ ಸೋತ ಹಾಗೆ ಕಾಣುತ್ತಿದ್ದ. "ಈ ಕಡೆಗೆ ಬಾ ಕ್ಯಾಪ್ಟನ್ —" ಎಂದುದಕ್ಕೆ ಆತ "ಯಾಕೆ ಕ್ಯಾಪ್ಟನ್ ಎನ್ನುತ್ತೀ? ಕ್ಯಾಪ್ಟನ್ ಯಾರು ?" ಎಂದ. ಗಂಡಾಂತರಕ್ಕೆ ಸಿಕ್ಕು ಬಳಲುತ್ತಿದ್ದ ನಾವು ಮೂವರೂ ಮೂರು ಹುಲುಮಾನವ ಜೀವಿಗಳು ಮಾತ್ರ ಎಂಬ ಅರಿವು ಆತನಿಗೆ ಆಗ ಬಂದಿದ್ದರೆ ಆಶ್ಚರ್ಯವಲ್ಲ.

ದೀಕ್ಷಿತ ನಿಧಾನವಾಗಿ ಈಜುತ್ತ ನನ್ನೆಡೆ ಬರುತ್ತಿದ್ದ ಹಾಗೆ ನಾನು ಕುಳಿತಿದ್ದ ವಿಮಾನದ ತುಂಡು ಮುಳುಗತೊಡಗಿತು. ಅದರ ಮೇಲೆಯೆ ಉಳಿಯುವುದರಲ್ಲಿ ಪ್ರಯೋಜನವಿಲ್ಲವೆಂದು ನೀರಲ್ಲಿ ಹಾರಿಕೊಳ್ಳಬೇಕೆಂದರೆ ನನ್ನ ಚಣ್ಣದ ತುದಿ ಅದರ ಮುರಿದ ಅಂಚಿನಲ್ಲಿ ಸಿಕ್ಕಿಕೊಂಡು ನಾನೂ ನೀರಲ್ಲಿಳಿಯತೊಡಗಿದೆ. ಬೆಂಕಿಯಿಂದ ಬದುಕಿ ನೀರಲ್ಲಿ ಮುಳುಗಿ ಸಾಯುವಂತಾಯಿತು. ಎಷ್ಟು ಪ್ರಯತ್ನ ಮಾಡಿದರೂ ಸಿಕ್ಕಿಕೊಂಡ ಚಣ್ಣ ಅದರಿಂದ ಬಿಡುಗಡೆಯಾಗಲೊಲ್ಲದು. ಕೊನೆಗೊಮ್ಮೆ ಇದ್ದ ಬಿದ್ದ ಎಲ್ಲ ಶಕ್ತಿಯನ್ನೂ ಹಾಕಿ ಬಲಗಾಲಿನಿಂದ ಆ ತುಂಡನ್ನು ಬಲವಾಗಿ ನೂಕಿದೆ. ಕಾಲಿಗೆ ನೋವಾಯಿತು- ಆದರೆ ಚಣ್ಣದ ಅಂಚು ಹರಿದು ನಾನು ಪಾರಾದೆ. ದೀಕ್ಷಿತ ತೀರ ಹತ್ತಿರಕ್ಕೆ ಬಂದಿದ್ದ. ಸರಿಯಾಗಿ ಈಜಲಾಗುತ್ತಿದ್ದಿಲ್ಲ. ಆತನೆಂದ:

"ನನ್ನ ಕೊರಳೆಲುಬು ಮುರಿದಿದೆ. ನನ್ನನ್ನು ಬಿಟ್ಟು ಹೋಗಬೇಡ."

"ಬಿಟ್ಟು ಹೋಗುವುದಿಲ್ಲ. ಉಳಿದರೂ ಆಯಿತು, ಮುಳುಗಿದರೂ ಆಯಿತು, ಇಬ್ಬರೂ ಒಟ್ಟಾಗಿಯೆ ಸಾಗೋಣ."

ಇದುವರೆಗೆ ನಾನು ಕಟ್ಟಿಕೊಂಡಿದ್ದ ತೇಲು ಕವಚದ ಪರಿವೆಯೇ ಇರಲಿಲ್ಲ. ದೀಕ್ಷಿತ ತನ್ನದರ ಸಹಾಯದಿಂದ ತೇಲುತ್ತಿದ್ದ. ಆತ ಹೇಳಿದಾಗಲೆ ನನಗೆ ಅದರ ಪರಿವೆಯಾದದ್ದು. ಸರಕ್ಕನೆ ನನ್ನ ಕವಚದ ಕುಣಿಕೆಯನ್ನೆಳೆದೆ. ಕೈ ಬಡಿಯದೆ ನೀರ ಮೇಲೆ ತೇಲುವುದು ಸಾಧ್ಯವಾಯಿತು. ಆ ಆ ಪರಿಸ್ಥಿತಿಯಲ್ಲಿ ಅದೆಂಥ ಸಮಾಧಾನ!

* * *

ಪಾತಕನ ಒಂದು ಕೈಯ ಎಲುಬುಗಳು ಮುರಿದಿದ್ದರೂ ಆತ ಒಂಟಿಗೈಯಿಂದ ಚೆನ್ನಾಗಿಯೇ ಈಜುತ್ತಿದ್ದ. ದೀಕ್ಷಿತನ ಬಲಗಡೆಯ ಕೊರಳೆಲುಬು ಮುರಿದಿತ್ತು. ನನ್ನ ಕೈಎಲುಬು ಮುರಿದಿರದಿದ್ದರೂ ಅದಾವುದೋ ಕಾರಣಕ್ಕಾಗಿ ನನ್ನ ಎಡಗೈಯನ್ನು ಎಷ್ಟು ಮಾತ್ರವೂ ಎತ್ತಲಾಗುತ್ತಿರಲಿಲ್ಲ. ಪಾತಕ ಮುಂದೆ ಮುಂದೆ ಸಾಗಿದ್ದ. ಎದುರಿನಲ್ಲಿ ಕಾಣುತ್ತಿದ್ದ ದ್ವೀಪಗಳಲ್ಲೊಂದನ್ನು ಆತ ನಮಗಿಂತಲೂ ಮೊದಲು ತಲುಪಿ ಸಹಾಯವನ್ನು ಒದಗಿಸಬಹುದು ಎಂಬ ಆಸೆ ನನ್ನ ಮನಸ್ಸಿನಲ್ಲಿ ಮೂಡಿ ಮಾಯವಾಗಿತ್ತು.

ಮಾಯವಾಗಿತ್ತು ಎನ್ನಲು ಕಾರಣವೆಂದರೆ ನಾವು ಈಜುತ್ತಿದ್ದ ಹಾಗೆ ನಮ್ಮ ಕೆಳಗಿನ ನೀರಲ್ಲಿ ಪ್ರವಾಹವೊಂದು ಬಂದು ನಮ್ಮಿಬ್ಬರನ್ನೂ ಇನ್ನೊಂದು ಕಡೆಗೆ ಸಾಗಿಸತೊಡಗಿತು. ಆ ಪ್ರವಾಹಕ್ಕೆ ಇದಿರಾಗಿ ಈಜುವ ಸಾಮರ್ಥ್ಯ ನಮ್ಮಿಬ್ಬರಲ್ಲಿಯೂ ಇರಲಿಲ್ಲವಾದ್ದರಿಂದ ಅದು ಒಯ್ದ ಕಡೆಗೆ ಹೋಗದೆ ಗತ್ಯಂತರವಿರಲಿಲ್ಲ. ಒಂದು ಒಂದೂವರೆ ನೂರು ಯಾರ್ಡು ನಾವು ಪ್ರವಾಹದ ಸೆಳವಿನಲ್ಲಿ ಸಾಗಿರಬೇಕು. ಅಷ್ಟಕ್ಕೆ ನಾವು ಅದರ ಅಂಕಿತದಿಂದ ದೈವವಶಾತ್ ಹೊರಬಿದ್ದಿದ್ದೆವು. ಕೆಳಗಿನ ನೀರು ಹರಿಯುತ್ತಿರಲಿಲ್ಲ. ಎದುರಿನ ದ್ವೀಪಗಳನ್ನು ನಿರುಕಿಸಿ ನೋಡಿದಾಗ ಒಂದು ಬರಡಾಗಿ ಕಂಡಿತು; ಇನ್ನೊಂದು ಪೊದೆ ಕಂಟಿಗಳಿಂದ ತುಂಬಿದ ಹಾಗಿತ್ತು. ಮೂರನೆಯದರಲ್ಲಿ ತೆಂಗಿನ ಮರಗಳು ಕಂಡವು. ಏನಿದ್ದರೂ ಈ ಮೂರನೆಯ ದ್ವೀಪದ ಕಡೆಗೆ ನಾವು ಸಾಗತಕ್ಕದ್ದೆಂದು ಗೊತ್ತುಮಾಡಿಕೊಂಡು ಒಂಟಿಗೈಯ ಈಜನ್ನು ಮುಂದುವರಿಸಿವೆವು.

ನಾವಿಬ್ಬರೂ ಒಬ್ಬರಿಂದೊಬ್ಬರು ದೂರವಾಗಬಾರದೆಂದು ಇಬ್ಬರ ತೇಲು ಕವಚಗಳ ಪಟ್ಟಿ

ಗಳ ತುದಿಗಳನ್ನು ಕಟ್ಟಿಕೊಂಡೆವು. ತೇಲು ಕವಚಗಳು ನಮ್ಮನ್ನು ತೇಲಿಸುತ್ತಿದ್ದವೇನೋ ನಿಜ. ಆದರೆ ಬೆನ್ನ ಮೇಲೆ ಈಜಬೇಕಾಗುತ್ತಿತ್ತು. ಬೇಡವಾದಾಗ ಅಥವಾ ಕೈಸೋತಾಗ ಸುಮ್ಮನೆ ಬಿದ್ದುಕೊಳ್ಳಲು ಅನುಕೂಲವಿದ್ದರೂ ನಾವು ತಲುಪಬೇಕೆಂದಿದ್ದ ದ್ವೀಪಗಳನ್ನು ಕಣ್ಣೆದುರು ಇಟ್ಟುಕೊಳ್ಳಲಾಗುತ್ತಿರಲಿಲ್ಲ. ಆದರೆ ಬದುಕಿ ಉಳಿದು ತೇಲುತ್ತಿದ್ದೆವು, ಸಾಧ್ಯವಾದಾಗ ಈಜುತ್ತಿದ್ದೆವು ಎನ್ನುವ ಹಿರಿಯ ಸಮಾಧಾನದ ಎದುರು ಅನಾನುಕೂಲಗಳ ಪರಿವೆ ಯಾರಿಗಿರಬೇಕು?

"ನೀನು ಹೇಗೆ ಹೊರಬಿದ್ದೆ?" ದೀಕ್ಷಿತ ಕೇಳಿದ.

"ನನಗೆ ತಿಳಿಯದು. ಬಹುಶಃ ನಾನಿದ್ದಲ್ಲಿ ವಿಮಾನ ಒಡೆದು ನಾನು ಹೊರಬಿದ್ದೆ ಎಂದು ಕಾಣುತ್ತದೆ. ನೀನಂತೂ ಯಂತ್ರಾಲಯದಲ್ಲಿ ಜಠಾರನ ಹತ್ತಿರ ಇದ್ದೆ. ಮುಂದೆ?''

ದೀಕ್ಷಿತ ತಾನು ಹೊರಬಂದುದನ್ನು ವಿವರಿಸಿದ:

"ಬಲಗಡೆಯ ರೆಕ್ಕೆ ನೀರನ್ನು ತಟ್ಟಿತು. ಪಾರಾಗುವುದಾದರೆ ಆಗಲೇ ಸಾಧ್ಯವಿತ್ತು. ಆದರೆ ಕ್ಷಣಾರ್ಧದಲ್ಲಿ ನೀರು ಒಳಗಡೆ ಚಿಮ್ಮಿತು. ವಿಮಾನ ನೀರೊಳಕ್ಕೆ ಭರದಿಂದ ಇಳಿಯುತ್ತಿತ್ತು. ಅದು ನೆಲವನ್ನು ತಟ್ಟಿದಾಗ ನಾನಿನ್ನೂ ಒಳಗೆಯೆ ಇದ್ದೆ. ಹೊಗೆ ಮುಸುಕಿದಾಗ ಎದುರಿನ ಒಂದು ಕಿಟಿಕಿಯನ್ನು ತೆರೆದದ್ದು ಜ್ಞಾಪಕವಿದ್ದಿತು. ಉಸಿರು ಕಟ್ಟುವುದರೊಳಗಾಗಿ ಅದರೊಳಗಿನಿಂದ ಹೊರಗೆ ಬರಬೇಕೆಂದು ಅದನ್ನೇರಿ ಅರ್ಧ ಹೊರಬಂದೆ. ನೀರು ಆಳವಾದ್ದರಿಂದ ಸುತ್ತಲೂ ಕತ್ತಲು. ಕಿಟಿಕಿ ಚಿಕ್ಕದಾದ್ದರಿಂದ ನನ್ನ ನಡು ಅದರಲ್ಲಿ ಸಿಕ್ಕಿಕೊಂಡಿತು. ಅಲ್ಲಿಂದ ಕಿತ್ತುಕೊಂಡು ಬರುವುದು ಸಾಧ್ಯವಾಗಿ ಕಾಣಲಿಲ್ಲ. ತಟ್ಟನೆ ಹೊಳೆಯಿತು. ತೇಲು ಕವಚವನ್ನುಬ್ಬಿಸಿದರೆ ಅದರ ಬಲದಿಂದ ನಾನು ಪೂರ್ತಿಯಾಗಿ ಹೊರಬೀಳಬಹುದು ಎಂದು. ಕುಣಿಕೆಯನ್ನು ಬಿಚ್ಚಿದೆ. ಅದು ನನ್ನನ್ನು ಬಲವಾಗಿ ಹೊರಕ್ಕೆಳೆಯಿತು. ಆದರೆ ಹೊರಕ್ಕೆ ಬರುತ್ತಿದ್ದ ಹಾಗೆ ಯಾರೊ ಇರಿದ ಹಾಗಾಯಿತು. ಕೊರಳೆಲುಬು ಮುರಿಯಿತು. ಆದರೆ ನಾಲ್ಕಾರು ಸೆಕಂಡುಗಳಲ್ಲಿ ನಾನು ಮೇಲಕ್ಕೆ ಬಂದುಬಿಟ್ಟೆ. ಸಾಮಾನ್ಯವಾಗಿ ಆ ಕಿಟಿಕಿಯೊಳಗಿಂದ ಹೊರಗೆ ಬರುವುದೇ ಸಾಧ್ಯವಿಲ್ಲ. ತೇಲುಕವಚ ಎಳೆದು ತೆಗೆಯಿತು ಎಂದು ಹೇಳಬೇಕು. ಅದನ್ನು ನನಗೆ ಕಟ್ಟಿದವಳು ಗ್ಲೋರಿಯಾ. . ."

ನಾವು ಈಜಲು ಮೊದಲುಮಾಡಿ ಒಂದು ಗಂಟೆಯ ಮೇಲಾಗಿತ್ತು. ಅರ್ಧಗಂಟೆಯೊಳಗಾಗಿ ದಡವನ್ನು ತಲುಪಬಹುದೆಂಬ ಆಸೆ ಬಯಲಾಗಿತ್ತು. ದ್ವೀಪಗಳು ಮೊದಲಿದ್ದಷ್ಟು ದೂರದಲ್ಲಿಯೆ ಇದ್ದ ಹಾಗೆ ಕಾಣುತ್ತಿದ್ದವು. ಸೂರ್ಯಬಿಂಬ ಮಸುಕಾಗುತ್ತ ನಡೆದಿತ್ತು. ಕತ್ತಲಾಗುವುದರೊಳಗಾಗಿ ದ್ವೀಪವನ್ನು ತಲುಪಬೇಕೆಂದು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ.

ಸೂರ್ಯಾಸ್ತವಾಯಿತು! ಕ್ರಮವಾಗಿ ಕತ್ತಲೂ ಆಯಿತು! ನಾವು ತೇಲುತ್ತಲೆ ಇದ್ದೆವು. ಈಜುತ್ತಲೆ ಇದ್ದೆವು. ಕೈಗಳು ತೀರ ಸೋತು ಹೋದಾಗ ಸುಮ್ಮನೆ ಬಿದ್ದುಕೊಂಡಿರುತ್ತಿದ್ದೆವು. ಹೀಗೆ ಬಿದ್ದುಕೊಂಡಾಗ ಅಲೆಗಳ ಹೊಡೆತಕ್ಕೆ ಹಿಂದೆ ಹಿಂದೆ ಸರಿದು ಕ್ರಮಿಸಿದ ದಾರಿಯನ್ನು ಮತ್ತೆ ಕ್ರಮಿಸಬೇಕಾಗಿ ಬರುತ್ತಿತ್ತು. ನಮ್ಮ ಸಾಮರ್ಥ್ಯ ಎಲ್ಲಿಗೂ ನಿಲುಕುವ ಹಾಗಿರಲಿಲ್ಲ. ಸಾಧ್ಯವಿದ್ದಷ್ಟು ಈಜಿ ಸಮುದ್ರ ನಡೆಸಿಕೊಟ್ಟ ಹಾಗೆ ಮುಂದುವರಿಯತಕ್ಕದ್ದು ಎನ್ನದ ಹೊರತು ಬೇರೆ ದಾರಿ ಇರಲಿಲ್ಲ.

ಅಂದು ರಾತ್ರಿ ಒಂಬತ್ತುಗಂಟೆಗೆ ಆಕಾಶವಾಣಿ ಬಿತ್ತರಿಸಿದ ಸಮಾಚಾರವನ್ನು ಕೇಳಿ ನನ್ನ ಮನೆಯಲ್ಲಿ ನನ್ನ ತಂದೆ ಮತ್ತು ಉಳಿದವರು ಕಾತರರಾಗಿದ್ದರು. ವಿಮಾನಕ್ಕೆ ಅಪಘಾತ ಸಂಭವಿಸಿದ ಸಮಾಚಾರವನ್ನು ಮಾತ್ರ ಹೇಳಿ ಅದರಲ್ಲಿಯ ಚಾಲಕವರ್ಗದವರ ಹೆಸರುಗಳನ್ನು ಹೇಳಿರಲಿಲ್ಲ

ವಾದ್ದರಿಂದ ಅವರು ಪೂರ್ತಿಯಾಗಿ ಹತಾಶರಾಗಿರಲಿಲ್ಲ. ಮರುದಿದ ಬೆಳಗಿನ ರೇಡಿಯೋ ವೃತ್ತಾಂತಕ್ಕಾಗಿ ಕಾಯುತ್ತಿದ್ದರು.

* * *

ರಾತ್ರಿಯ ಒಂಬತ್ತು ಗಂಟೆಯಾಗಿ ಹೋಗಿದ್ದರೂ ನಾವಿಬ್ಬರು ಯಾವ ದಡವನ್ನೂ ತಲುಪಿರಲಿಲ್ಲ. ಕತ್ತಲಲ್ಲಿ ಪಾಠಕ ಇನ್ನೆಲ್ಲಿಯೋ ದೂರ ಈಜ ಹೋಗಿದ್ದ. ನಾವಿಬ್ಬರೂ ಹತಾಶರಾಗುವುದರಲ್ಲಿದ್ದೆವು.

"ಇನ್ನೂ ಎಷ್ಟು ದೂರ?" ಎಂದ ದೀಕ್ಷಿತ.

"ಒಂದು ನೂರು ಯಾರ್ಡು ಆಗಬಹುದು" ಎಂದೆ ನಾನು. ಹೀಗೆ ನಾಲ್ಕಾರು ಬಾರಿ ನಾನು ಹೇಳಿದಾಗ ದೀಕ್ಷಿತನಿಗೆ ಅರ್ಥವಾಗಿತ್ತು. "ನಿನ್ನ ನೂರು ಯಾರ್ಡು ಬಹಳ ಉದ್ದವಾಗಿದೆ" ಎಂದು ಸುಮ್ಮಗಾದ. ಒಂಬತ್ತೂವರೆಯಾಗಿರಬಹುದು, ನಾನು ಕೇಳಿದೆ:

"ನೀರು ಒಮ್ಮೆಲೆ ತಣ್ಣಗಾದ ಹಾಗೆನಿಸುವುದಿಲ್ಲವೆ?"

"ಹೌದು. ತಣ್ಣಗಿನ ನೀರು ಎಂದರೆ ಆಳ ಸಮುದ್ರ."

"ಹಾಗಿದ್ದರೆ ನಾವು ದಾರಿಬಿಟ್ಟು ದೂರ ಸಾಗುತ್ತಿದ್ದೇವೆಯೆ?"

"ಯಾರು ಬಲ್ಲರು? ನಾನಂತೂ ತೀರ ದಣಿದು ಹೋಗಿದ್ದೇನೆ."

"ಹಾಗಿದ್ದರೆ ಒಂದಿಷ್ಟು ಕಾಲ ನೀನು ವಿಶ್ರಮಿಸು" ಎಂದು ಹೇಳಿದೆ. ದೀಕ್ಷಿತ ಕೆಲ ಕಾಲ ಸುಮ್ಮನಾಗಿಯೆ ಬಿದ್ದುಕೊಂಡಿದ್ದ. ಒಂಟಿಗೈಯಿಂದ ನಾನು ಈಜುತ್ತ ಆತನನ್ನೂ ನಿಧಾನವಾಗಿ ಎಳೆದುಕೊಂಡು ಹೊರಟಿದ್ದೆ. ತಂಪು ನೀರಿನ ಸೆಳವಿನಗುಂಟ ಸಾಗಿ ಮತ್ತೆ ಅದರಿಂದ ಹೊರಬಿದ್ದೆ. ಕತ್ತಲಲ್ಲಿ ಯಾವುದೂ ಕಾಣುತ್ತಿರಲಿಲ್ಲ. ಅಂತರಿಕ್ಷವನ್ನು ನೋಡುತ್ತಿದ್ದ ಹಾಗೆ ಇದಿರಿನಲ್ಲಿ ಗುರುನಕ್ಷತ್ರ, ಅದರ ಹತ್ತಿರಕ್ಕೆ ಇನ್ನೆರಡು ತಾರೆಗಳು ಸೇರಿ ಒಂದು ತ್ರಿಕೋಣಾಕೃತಿಯಾಗಿದ್ದು ತ್ರಿಕೋಣದ ಮೇಲ್ತುದಿ ನಾವು ತಲುಪಬೇಕೆಂದಿದ್ದ ನಡುಗಡ್ಡೆಯ ಕಡೆ ಚಾಚಿತ್ತು ಎಂದು ಅದನ್ನೆ ಗುರುತಾಗಿಟ್ಟುಕೊಂಡು ಮತ್ತೆ ಈಜತೊಡಗಿದೆವು. ದೀಕ್ಷಿತನಾದರೂ ವಿಶ್ರಾಂತಿ ಪಡೆದು ಮತ್ತೆ ಕೈಕಾಲುಗಳನ್ನು ಆಡಿಸುವಂತಾಗಿದ್ದ. ಬೆಳಗಿನ ವರೆಗೆ ಹಾಗೆಯೆ ಜೀವ ಹಿಡಿದುಕೊಂಡು ತೇಲುತ್ತ ಉಳಿದರೆ ಯಾರಾದರೂ ಪಾರುಮಾಡಬಹುದೆಂಬ ಆಶೆಯ ಹೊರತು ಬೇರೆ ಆಶೆಗೆ ಅವಕಾಶ ಉಳಿದಿರಲಿಲ್ಲ.

ಪೂರ್ವ ದಿಕ್ಕಿನಲ್ಲಿ ನಿಧಾನವಾಗಿ ಕಪ್ಪು ಮೋಡಗಳು ಮೇಲಕ್ಕೇರುತ್ತಿದ್ದ ಹಾಗಿತ್ತು. ಎಲ್ಲಿಯೋ ದೂರದಲ್ಲಿ ವಿಮಾನವೊಂದು ಹಾರುತ್ತಿದ್ದ ಹಾಗೆ ಸದ್ದು ಕೇಳಬಂದಿತು. ಅಪಘಾತದಲ್ಲಿ ಉಳಿದಿರಬಹುದಾದವರನ್ನು ಪತ್ತೆ ಮಾಡಲು ಅದು ಹೊರಟಿರಬಹುದೆಂಬ ಆಶೆ ಮೂಡಿತು. ಆದರೆ ಆಶೆ ಬಯಲಾಯಿತು. ಐದು ನಿಮಿಷಗಳಲ್ಲಿ ಆ ವಿಮಾನ ನಮ್ಮ ತಲೆಯ ಮೇಲಿಂದ ಹಾಯ್ದು ಹೋಯಿತು. ನಡುಗಡ್ಡೆ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಆದರೆ ಎರಡು ಮೂರು ಸಲ ಅಲ್ಲಿಂದ ಯಾರೊ ಬಲವಾದ ಟಾರ್ಚುಗಳನ್ನು ಉರಿಸುತ್ತಿದ್ದ ಹಾಗೆ ಕಾಣಿಸಿತು. ಹೀಗೆ ಬೆಳಕು ಕಂಡಾಗಲೆಲ್ಲ ಆಸೆ ಉಕ್ಕುತ್ತಿತ್ತು. ಆದರೆ ಎಲ್ಲಿಂದಲೂ ಸಹಾಯ ಬರುವ ಸೂಚನೆ ಕಾಣಲಿಲ್ಲ.

ಬದುಕಬೇಕೆಂದು ಸಾವಿನೊಡನೆ ನಡೆದ ಹೋರಾಟವೂ ಒಂದು ಕ್ರಮವಾಗಿಬಿಟ್ಟು ಅದು ಕೂಡ ಬೇಸರವೆನಿಸತೊಡಗಿತು. ಆ ಬೇಸರವನ್ನು ಕಳೆಯಲೆಂದೇ ದೀಕ್ಷಿತ ಕೇಳಿದ:

"ನಿನಗೆ ಹಾಡಲು ಬರುತ್ತದೆಯೆ?"

"ಹಾಡುವುದೆ? ನಿನಗೆ ಹುಚ್ಚೇ ದೀಕ್ಷಿತ?"

"ಹುಚ್ಚಲ್ಲ–ಬೇಸರ. ಬಂದ ಹಾಗೆ ಬೇಕಾದುದನ್ನು ಹಾಡು. ಇಲ್ಲವಾದರೆ ನಾನು ಸಾಯುತ್ತೇನೆ!"

ದೀಕ್ಷಿತ ತನ್ನ ಹಟ ಬಿಡಲಿಲ್ಲ. ಬಾಯಿಗೆ ಬಂದ ಹಾಗೆ ಯಾವುದೋ ಹಾಡನ್ನು ಹೇಳಿದೆ. ಕತ್ತಲೆ

ಯಲ್ಲಿ ದನಿ ಪ್ರತಿಧ್ವನಿಸುತ್ತಿತ್ತು. ಅದೆಂಥ ಸಂಗೀತವೊ ನಾನು ತಿಳಿಯೆ. ಅದರೆ ದೀಕ್ಷಿತನ ಬೇಸರ ಕಳೆದು ಮತ್ತೆ ಆತ ಈಜುವಂತಾಯಿತು.

*　　*　　*

ಮೇಲಕ್ಕೇರುತ್ತಿದ್ದ ಮೋಡಗಳು ಕರಾಳ ಸ್ವರೂಪವನ್ನು ತಾಳತೊಡಗಿದವು. ಮಿಂಚುಗಳ ತೂರಾಟಕ್ಕಾರಂಭವಾಯಿತು. ಬೆನ್ನಹಿಂದೆ ಬಿರುಗಾಳಿಯ ಮೊರೆತ. ತೆರೆಗಳು ದೊಡ್ಡದಾಗಿ ಮೇಲಕ್ಕೆದ್ದು ನಮ್ಮಿಬ್ಬರನ್ನು ಅತ್ತಿತ್ತ ಎತ್ತಿ ಎಸೆಯತೊಡಗಿದವು. ಈಜುವ ಪ್ರಶ್ನೆಯೇ ಇರಲಿಲ್ಲ. ಸೆಳೆ ಮಿಂಚಿನಲ್ಲಿ ಆಗೀಗ ದೂರದಲ್ಲಿ ನಡುಗಡ್ಡೆಗಳು ಕಾಣುತ್ತಿದ್ದವು. ನಿರುಪಾಯರಾಗಿ ತೇಲುಕವಚಗಳ ಮೇಲೆ ಬಿದ್ದುಕೊಂಡೆವು. ತೆರೆಗಳು ಸಾಗಿಸಿದತ್ತ ಹೋಗದ ಹೊರತು ಬೇರೆ ಮಾರ್ಗವಿರಲಿಲ್ಲ. ಹತ್ತು ನಿಮಿಷಗಳಲ್ಲಿ ಗುಡುಗು-ಮಿಂಚುಗಳ ಆರ್ಭಟ ಕೆಲಮಟ್ಟಿಗೆ ಕಡಿಮೆಯಾಗಿ ಮಳೆ ಸುರಿಯಲಾರಂಭಿಸಿತು. ಒಣಗಿದ ಗಂಟಲನ್ನು ತೋಯಿಸಲೆಂದು ಮಳೆಹನಿಗಳಿಗಾಗಿ ಬಾಯಿ ತೆರೆದರೆ ಉಪ್ಪುತೆರೆ ಅಪ್ಪಳಿಸುತ್ತಿದ್ದವು. ನೀರಿನ ಒಂದು ಹನಿಗೂ ಗತಿಯಿಲ್ಲದೆ ಅತ್ತ, ಇತ್ತ, ಬೇಕಾದತ್ತ ಸಾಗಿದೆವು. ಒಂದು ಗಂಟೆಯಾದರೂ ಹೀಗೆ ಒದ್ದಾಡಿರಬೇಕು. ಸುಮ್ಮನೆ ಬಿದ್ದುಕೊಂಡಾಗ ಅರೆನಿದ್ರೆ ಅರೆಎಚ್ಚರದ ಸ್ಥಿತಿಯಲ್ಲಿದ್ದಿರಬೇಕು ನಾನು. ಒಂದು ದೃಷ್ಟಿಯಿಂದ ಬಿರುಗಾಳಿ ಒಳ್ಳೆಯದನ್ನೇ ಮಾಡಿತು. ನಮಗೆ ಬೇಕಾದ ಸುದೀರ್ಘ ವಿಶ್ರಾಂತಿಯನ್ನು ಒದಗಿಸಿತ್ತು. ದೀಕ್ಷಿತ ವೇಳೆ ಹನ್ನೊಂದು ಗಂಟೆಯಾಯಿತೆಂದು ನನಗೆ ಹೇಳಿದಾಗ ಪೂರ್ತಿಯಾಗಿ ಎಚ್ಚರವಾದೆ. ಬಿರುಗಾಳಿ ಮಳೆ ಎರಡೂ ತಗ್ಗಿದ್ದವು. ಚಂದ್ರೋದಯವಾಗಿತ್ತು.

ಬಿರುಗಾಳಿಗೆ ಸಿಕ್ಕು ನಾವು ಬಂದದ್ದು ಎಲ್ಲಿಗೆ ಎನ್ನುವುದರ ಕಲ್ಪನೆ ನಮಗಾಗಬೇಕಾದರೆ ಕೆಲ ಕಾಲ ಹಿಡಿಯಿತು. ಬೆಳುದಿಂಗಳಿನಲ್ಲಿ ಸುತ್ತಲೂ ನೋಡಿದಾಗ ನಾವು ಮೊದಲು ತಲುಪಬೇಕೆಂದಿದ್ದ ನಡುಗಡ್ಡೆಯಿಂದ ಬಹುದೂರ ಬಂದ ಹಾಗಿತ್ತು. ನಿರಾಶೆ ಮನಸ್ಸನ್ನಾವರಿಸುತ್ತಿದ್ದಾಗ ನಮ್ಮ ಹಿಂದುಗಡೆ ಹತ್ತಿರದಲ್ಲಿಯೆ ಇನ್ನೊಂದು ನಡುಗಡ್ಡೆ ಬೆಳುದಿಂಗಳಲ್ಲಿ ಕಣ್ಣು ಸೆಳೆಯಿತು. ಸರಿ. ಬಿರುಗಾಳಿ ನಮ್ಮನ್ನು ಎಲ್ಲೆಲ್ಲಿಗೊ ಒಯ್ದು ಬೇರೊಂದು ನಡುಗಡ್ಡೆಯ ಹತ್ತಿರ ತಂದು ಉಪಕಾರವನ್ನೇ ಮಾಡಿತ್ತು. ಬಿರುಗಾಳಿ ತಗ್ಗಿದ್ದರಿಂದ ಮತ್ತೆ ಈಜಬಹುದಾಗಿತ್ತು. ಒಮ್ಮೆಲೆ ದೀಕ್ಷಿತ ಕೇಳಿದ:

"ಈಗ ನಾವು ಕೆಲಹೊತ್ತು ಸುತ್ತುಸುತ್ತಾಗಿ ತಿರುಗುತ್ತಿದ್ದ ಹಾಗೆನಿಸುವುದಿಲ್ಲವೆ?"

"ಹೌದು. ನನಗೂ ಹಾಗೆಯೆ ಅನಿಸುತ್ತದೆ. ಅಂದರೆ--ಅಂದರೆ ನಾವು ಮಡುವಿನಲ್ಲಿ ಸಿಕ್ಕು ಬಿದ್ದಿರಬಹುದೆ?"

ದೀಕ್ಷಿತನಿಗೂ ಹಾಗೆಯೆ ಅನಿಸಿತು. ಇದ್ದ ಬಿದ್ದ ನನ್ನ ಧೈರ್ಯ ಉಡುಗಿತು. ನಮ್ಮ ಕಷ್ಟ ಪರಂಪರೆಗೆ ಕೊನೆಯ ಇಲ್ಲದಾಗಿ ಅಂತೂ ಸಾಯುವುದೇ ಖಂಡಿತ ಎಂದು ತೋರಿತು. ಆದರೆ ದೀಕ್ಷಿತ ಸಮಾಧಾನ ಹೇಳಿದ—ಸಮುದ್ರದಲ್ಲಿಯ ತಿರುಗಣಿಗಳು ಹೆಚ್ಚಾದರೆ ಸುತ್ತುಸುತ್ತಾಗಿ ತಿರುಗಿಸುತ್ತವೆಯೆ ಹೊರತು ಕೆಳಕ್ಕೆಳೆದು ಕೊಳ್ಳುವುದಿಲ್ಲ ಎಂದು. ಅಳಿದ ಧೈರ್ಯ ಹಿಂದಿರುಗಿತು. ಆದರೆ ಮತ್ತೊಂದು ತೊಂದರೆ ಇಬ್ಬರಿಗೂ ಕಾಯುತ್ತಿದ್ದ ಹಾಗಿತ್ತು. ನಮ್ಮಿಬ್ಬರ ತೇಲು ಕವಚಗಳಲ್ಲಿಯ ಗಾಳಿ ಅರ್ಧಕ್ಕಿಂತಲೂ ಕಡಿಮೆಯಾದಹಾಗಿತ್ತು. ಊದಿ ಮತ್ತೆ ಅವನ್ನು ಉಬ್ಬಿಸುವಷ್ಟು ಚೈತನ್ಯ ಇಬ್ಬರಿಗೂ ಇರಲಿಲ್ಲ. ಗಾಳಿ ಹೊರಗೆ ಹೋಗುತ್ತಿದ್ದ ಸ್ಥಳವನ್ನು ಗುರುತಿಸಿ ನನ್ನ ಕೊರಳಲ್ಲಿ ನೇತಾಡುತ್ತಿದ್ದ ಟೈಯನ್ನು ಹರಿದು ಕಟ್ಟಿದೆ. ಇದ್ದ ಬಿದ್ದ ಉಸಿರಿನಿಂದ ಮತ್ತೆ ಗಾಳಿ ತುಂಬಿದೆ. ಈ ಸುಮಾರಿಗೆ ತಿರುಗಣಿಯನ್ನು ಬಿಟ್ಟು ನಾವು ಹೊರಗೆ ಬಂದಹಾಗಿತ್ತು. ನಡುಗಡ್ಡೆ ಹತ್ತಿರದಲ್ಲಿಯೆ ಕಾಣುತ್ತಿತ್ತು.

ಇದುವರೆಗೆ ನಡುಗಡ್ಡೆಗೆ ನಾವು ಇಷ್ಟುಸಮೀಪ

ಬಂದಿರಲಿಲ್ಲ. ಹಟಹಿಡಿದು ಎಲ್ಲ ಶಕ್ತಿಯನ್ನು ಉಪಯೋಗಿಸಿ ಅಲ್ಲಿಯ ವರೆಗೆ ಈಜಿಹೋಗಿಯೇ ಬಿಡುವ ಹಠದಿಂದ ಇಬ್ಬರೂ ಉಸಿರಿನ ಪರಿವೆ ಯಿಲ್ಲದೆ ಈಜತೊಡಗಿದೆವು. ಅರ್ಧ ಗಂಟೆಯಾ-ಯಿತು. ಉಸಿರು ತೀರ ಸಾಲದಾಗಿತ್ತು. ಆದರೆ ಮಳಲದಂಡೆ ಹತ್ತಿರ ಹತ್ತಿರ ಸರಿಯುತ್ತಿತ್ತು. ಈಜುತ್ತಿದ್ದ ಹಾಗೆ ನನ್ನ ಬಲಗೈಗೆ ಬಂಡೆಯೊಂದು ತಾಗಿತು. ಉಸಿರು ಸಾಲದಿದ್ದರೂ "ಗೆದ್ದೆವು!" ಎಂದು ಕೂಗಿದೆ. "ಬಂಡೆ ಸಿಕ್ಕಿತು," ಎಂದೆ. "ಎಲ್ಲಿ? ಎಲ್ಲಿ?" ಎಂದು ದೀಕ್ಷಿತ ಆತುರದಿಂದ ಕೇಳಿದ. ನಮ್ಮ ಸಂತೋಷಕ್ಕೆ ಪಾರವೇ ಉಳಿಯಲಿಲ್ಲ. ಕೊನೆಗೂ ಬದುಕಿದೆವು ಎಂಬ ಸಂತೋಷದಲ್ಲಿ ಸೋತುಹೋದ ದೇಹಗಳನ್ನು ಆ ಬಂಡೆಯ ಮೇಲುಗಡೆ ಎಳೆದುಕೊಂಡು ನಿಡಿದಾಗಿ ಉಸಿರು ಬಿಟ್ಟೆವು!

* * *

ಬೆಳಗಿನ ವರೆಗೆ ಬಂಡೆಯ ಮೇಲೆ ಉಳಿಯಬೇಕೆಂಬ ಸೂಚನೆಯನ್ನು ದೀಕ್ಷಿತ ಒಪ್ಪಲಿಲ್ಲ. ಭರತಿಯ ನೀರು ಮೇಲಕ್ಕೆ ಬಂದು ನಾವು ಮತ್ತೆ ಈಜಬೇಕಾಗಬಹುದೆಂದೂ ಆಗಲೇ ಇನ್ನಷ್ಟು ಮುಂದಕ್ಕೆ ಸಾಗಿ ಮಳಲದಂಡೆಯನ್ನು ಮುಟ್ಟತಕ್ಕದ್ದೆಂದೂ ನಿರ್ಧರಿಸಿದೆವು. ಹತ್ತಿಪ್ಪತ್ತು ನಿಮಿಷಗಳ ವಿಶ್ರಾಂತಿಯ ನಂತರ ಮತ್ತೆ ಮುಂದುವರಿದೆವು, ನೀರು ಆಳವಾಗಿರಲಿಲ್ಲವಾದ್ದರಿಂದ ನಡೆದುಕೊಂಡು ಹೋಗಬೇಕೆಂದು. ಆದರೆ ದೇಹದ ಭಾರವನ್ನು ಎತ್ತಿ ಹಿಡಿಯಲು ಕಾಲುಗಳು ಅಸಮರ್ಥವಾಗಿದ್ದವು. ಹೀಗಾಗಿ ಕುಳಿತುಕೊಂಡೇ ಬಂಡೆಯಿಂದ ಬಂಡೆಗೆ ಒಂಟಿಕೈಯ ಮೇಲೆ ಭಾರ ಹಾಕಿ ಸಾಗಿದೆವು. ಕಲ್ಲ ಮೇಲಿನ ಹಾವಸೆಯಿಂದಾಗಿ ಜಾರಿಕೊಂಡು ಬೀಳುವುದೂ ನಾಲ್ಕಾರು ಬಾರಿಯಾ-ಯಿತು. ಆದರೆ ಹಟದಿಂದ ಸಾಗಿ ಕೊನೆಗೊಮ್ಮೆ ತಲುಪಿದೆವು. ತಿಳಿಬೆಳದಿಂಗಳಲ್ಲಿ ಮಳಲದಂಡೆ ರಮಣೀಯವಾಗಿ ಕಾಣುತ್ತಿತ್ತು. ಇದುವರೆಗೆ ನಮ್ಮ ಬದುಕಿಗೆ ಶತ್ರುವಿನಂತಿದ್ದ ಸಮುದ್ರ ಶಾಂತವಾಗಿತ್ತು. ಕಿರುದೆರೆಗಳು ನಯವಾಗಿ ಮಳಲದಂಡೆಯನ್ನು ತಟ್ಟುತ್ತಿದ್ದವು.

ತೇಲುಕವಚಗಳು ಈಗ ನಮಗೆ ಹಾಸಿಗೆ-ಯಾದವು. ಶರ್ಟನ್ನು ಬಿಚ್ಚಿ ಹಿಂಡಬೇಕೆಂದರೆ ಕೈಯಲ್ಲಿ ಎಷ್ಟೂ ಶಕ್ತಿಯಿರಲಿಲ್ಲ. ದೀಕ್ಷಿತ ಉದ್ದವಾಗಿ ಮೈ ಚೆಲ್ಲಿದ. ವೇಳೆ ರಾತ್ರಿಯ ಮೂರೂವರೆಯಾಗಿತ್ತು. ಹತ್ತುಗಂಟೆಯ ಘನ ಪ್ರಯತ್ನದ ದಣಿವು ಅಂಗಾಂಗಗಳನ್ನು ನೋಯಿಸುತ್ತಿತ್ತು. ದೀಕ್ಷಿತ ನರಳುತ್ತಿದ್ದ. ಆತನ ಎದೆಯ ಮೇಲೆ ತಲೆಯನ್ನಿಟ್ಟು ನಾನೂ ಮಲಗಿದೆ. ಆದರೆ ಮುಂದೆ ಅರ್ಧಗಂಟೆಯಲ್ಲಿ ಬೆಳಗಿನ ಚಳಿಗಾಳಿ ಬಲವಾಗಿ ಬೀಸತೊಡಗಿ ಮಲಗುವುದು ಅಸಾಧ್ಯವಾಯಿತು. ದೀಕ್ಷಿತನಿಗೆ ಏಳುವುದೇ ಅಸಾಧ್ಯವಾಗಿತ್ತು. ಚಳಿಯಲ್ಲಿ ಕಟಕಟನೆ ನಡುಗುತ್ತ ಕುಳಿತಿರುವಾಗಲೆ ಬೆಳಗಾಯಿತು. ಅಂದು ಶುಕ್ರವಾರ, ಏಪ್ರಿಲ್ ೧೨, ೧೯೫೫.

ಮುನ್ನಾದಿನ ನಾನು ಸರಿಯಾಗಿ ಊಟ ಮಾಡಿರಲಿಲ್ಲ. ಕಳೆದ ಇಪ್ಪತ್ತು ಗಂಟೆಗಳಲ್ಲಿ ಒಂದು ಗುಟುಕು ನೀರೂ ಗಂಟಲಿಗೆ ಬಿದ್ದಿರಲಿಲ್ಲ. ಹಸಿದು ಕಂಗಾಲಾಗಿದ್ದೆ. ಗಂಟಲು ಒಣಗಿ ಹೋಗಿತ್ತು. ದೀಕ್ಷಿತ ಮಲಗಿದ್ದ. ನಾನು ಎದ್ದು ಕುಂಟುತ್ತ ಸುತ್ತಲೂ ನೋಡಿಕೊಂಡು ಬಂದೆ. ನಡುಗಡ್ಡೆ ತೀರ ಚಿಕ್ಕದಾಗಿತ್ತು. ಕುಡಿಯುವ ನೀರು ಸಿಕ್ಕುವ ಲಕ್ಷಣ ಕಾಣಲಿಲ್ಲ. ಗಿಡಗಳ ತುದಿಯಲ್ಲಿ ತೂಗಾಡುತ್ತಿದ್ದ ತೆಂಗಿನ ಕಾಯಿಗಳ ಹೊರತು ಬೇರೆ ಏನೂ ಉಪಯೋಗವಾಗುವ ಹಾಗೆ ಕಾಣಲಿಲ್ಲ. ಆದರೆ ಆ ಕಾಯಿಗಳು ಕೈಗೆ ಬರುವುದು ಹೇಗೆ? ಕೆಳಗೆ ಬಿದ್ದಿದ್ದ ಚಿಕ್ಕ ಕಾಯಿಗಳನ್ನೆತ್ತಿಕೊಂಡು ಎಸೆಯಲು ಪ್ರಯತ್ನಿಸಿದೆ. ಆದರೆ ಎಸೆದ ಕಾಯಿ ಹತ್ತಡಿ ಎತ್ತರವೂ ಹೋಗುತ್ತಿರಲಿಲ್ಲ. ಆಚೆಯ ಕಡೆಯಲ್ಲಿ ತೀರ ಬಾಗಿದ ಗಿಡವೊಂದಿತ್ತು. ಅದರ ಮೇಲೆ ಅಂಬೆಗಾಲಿಕ್ಕಿ ಏರಬಹುದೆಂದು ತೋರಿತು. ಹತ್ತಿರ ಹೋಗಿ

ನೋಡಿದರೆ ಅದರ ತುಂಬ ಕೆಂಪು ಇರುವೆ ಮುತ್ತಿದ್ದವು. ಗರಿಗಳಿಂದ ಆ ಇರುವೆಗಳನ್ನು ಜಾಡಿಸಬೇಕೆಂದಿದ್ದಾಗ ನಡುಗಡ್ಡೆಯ ಆಚೆಯ ಕಡೆಯಿಂದ '' ಹೊಯ್, ಹೊಯ್ '' ಎಂದು ಯಾರೋ ಕೂಗಿದರು —

ನಿಂತಲ್ಲಿಯೇ ನಿಂತೆ —

ನಾಲ್ಕು ಜನರು ನಾನಿದ್ದಲ್ಲಿಗೆ ಬರುತ್ತಿದ್ದರು. ಮೂವರ ಕೈಯಲ್ಲಿ ಕುಡುಗೋಲುಗಳಿದ್ದವು. ನಾಲ್ಕನೆಯವ ಅವರ ಮುಖ್ಯಸ್ಥನಾಗಿ ಕಾಣುತ್ತಿದ್ದ. ಇವರು ನರಭಕ್ಷಕರಿದ್ದರೆ? ಯೋಚನೆ ನನ್ನನ್ನು ಪೂರ್ತಿಯಾಗಿ ಕಂಗೆಡಿಸಿತು. ಆದರೆ ಅವರ ಕುಡುಗೋಲುಗಳೆದುರು ನಾನೇನು ಮಾಡುವ ಹಾಗಿದೆ? ಏನಿದ್ದರೂ ಸಹಜವಾಗಿ ಪ್ರತೀಕಾರ ವಿಲ್ಲದೆ ಅವರ ಕೈಗೆ ಬೀಳುವ ಹಾಗಿಲ್ಲವೆಂದು ಗೊತ್ತುಮಾಡಿಕೊಂಡು ಹೆಚ್ಚಾಗಿ ಕಿರುಗಾಯಿ ಗಳು ಬಿದ್ದ ಗಿಡದ ಕಡೆಗೆ ಸಾಗಿದೆ. ನಿಧಾನವಾಗಿ ಅವರಾದರೂ ಮುಂದುವರಿಯುತ್ತಿದ್ದರು. ಅವರು ಏರಿ ಬಂದರೆ ಕಾಯಿಗಳಿಂದ ಅವರನ್ನು ಹೊಡೆಯು ತಕ್ಕದ್ದೆಂಬ ಹುಚ್ಚು ಹವ್ಯಾಸದಲ್ಲಿದ್ದೆ. ಅವರು ಹತ್ತಿರ ಬಂದರು. ಮುಖ್ಯಸ್ಥ ಒಮ್ಮೆ ನನ್ನನ್ನು, ಒಮ್ಮೆ ಮಲಗಿದ ದೀಕ್ಷಿತನನ್ನು ನೋಡುತ್ತಿದ್ದ. ನನ್ನ ಹಿನ್ನಡೆ ನಿಧಾನವಾಗಿ ಸಾಗಿತ್ತು. ಮುಖ್ಯಸ್ಥ ತೀರ ಹತ್ತಿರ ಬಂದ. ನನಗೆ ಪೂರ್ತಿಯಾಗಿ ಗಾಬರಿಯಾಯಿತು. ಕೊನೆಗೆ ಅದೇ ಎದ್ದು ಕುಳಿತ ದೀಕ್ಷಿತನ ಭುಜದ ಮೇಲಿನ ಕ್ಯಾಪ್ಟನ್ ಬ್ಯಾಜ್ ಮುಖ್ಯಸ್ಥನ ಲಕ್ಷ್ಯವನ್ನು ಸೆಳೆಯಿತೆಂದು ಕಾಣು ತ್ತದೆ. " ಕಾಪಿಟಾನ್ " ಎಂದ ಆತ. ತನ್ನ ಹಿಂಬಾಲಕರಿಗೆ ಏನೋ ಹೇಳಿದ. ಅವರು ಮೂವರೂ ಕೈಯಲ್ಲಿಯ ಕುಡುಗೋಲುಗಳನ್ನು ನೆಲಕ್ಕೆಸೆದರು. ಹಾರಿದ ಜೀವ ಹಿಂದಿರುಗಿದಂತೆ-ನಿಸಿತು ನನಗೆ. ಮುಖ್ಯಸ್ಥ ಆ ಮೂವರಲ್ಲೊಬ್ಬ ರಿಗೆ ಏನೋ ಹೇಳಿದ. ಆತ ಓಡಿ ಹೋಗಿ ಐದು ನಿಮಿಷಗಳಲ್ಲಿ ಒಂದು ಥರ್ಮಾಸ್‌ನಲ್ಲಿ ಚಹ, ಒಂದು ಟಿಫಿನ್‌ಕ್ಯಾರಿಯರಿನಲ್ಲಿ ತಿಂಡಿಗಳನ್ನು ತೆಗೆದುಕೊಂಡು ಹಿಂದಿರುಗಿದ. ನರಭಕ್ಷಕ ರೆಂದುಕೊಂಡಿದ್ದ ಅವರು ಪ್ರಿಯಮಿತ್ರರಾದರು. ಕೈಸನ್ನೆಗಳ ಭಾಷೆಯಲ್ಲಿ ಸಾಧ್ಯವಿದ್ದಷ್ಟರ ಮಟ್ಟಿಗೆ ನಮ್ಮ ದುರ್ಗತಿಯನ್ನು ವಿವರಿಸಿದೆ. ಬೆಳಗಿನ ಎಂಟು ಗಂಟೆಯ ಸುಮಾರಿಗೆ ಅವರು ನಮ್ಮನ್ನು ತಮ್ಮ ಗುಡಿಸಲಿಗೆ ಕರೆದುಕೊಂಡು ಹೋದರು.

ಅದೇ ವೇಳೆಗೆ ಭಾರತದ ಆಕಾಶವಾಣಿ ಕಾಶ್ಮೀರ್ ಪ್ರಿನ್ಸೆಸ್ ವಿಮಾನವನ್ನು ನಡಸಿ ಕೊಂಡು ಹೋಗಿದ್ದ ಚಾಲಕ ವರ್ಗದ ಹೆಸರು ಗಳನ್ನು ಬಿತ್ತರಿಸುತ್ತಿತ್ತು. ನನ್ನ ಹೆಸರೂ ಅದ ರಲ್ಲಿದ್ದುದನ್ನು ಕೇಳಿ ಮನೆಯವರು ಗೊಳೋ ಎಂದು ಅತ್ತರು. ರೇವಾದಲ್ಲಿದ್ದ ನನ್ನ ಪ್ರೇಯಸಿ ಕಮಲಿನಿಗೆ ಯಾವ ಸಮಾಚಾರವೂ ತಿಳಿಯದೆ ನಿಶ್ಚಿಂತೆಯಿಂದಿದ್ದಳು! ಬೆಳಗಿನ ವೃತ್ತಪತ್ರಗಳ. ಅದೇ ಸಮಾಚಾರವನ್ನು ಪ್ರಕಟಪಡಿಸಿದ್ದವು ಆದರೆ ರೇವಾಕ್ಕೆ ಬಂದ ಅಂದಿನ ವೃತ್ತಪತ್ರ ಗಳಲ್ಲಿ ಅಪಘಾತದ ಸಮಾಚಾರವಿರಲಿಲ್ಲ.

ನಡುಗಡ್ಡೆಯ ಆ ಮುಖ್ಯಸ್ಥನ ಗುಡಿಸಲಲ್ಲಿ ನಮಗೆ ಚೆನ್ನಾಗಿ ಅತಿಥ್ಯ ನಡೆಯಿತು. ನನ್ನ ವೈಬಿಸಿಯಾಗುತ್ತಿದ್ದಿತು. ಮುರಿದ ಮೂಳೆಯಿಂ ದಾಗಿ ದೀಕ್ಷಿತ ನರಳುತ್ತಿದ್ದ. ಇದೆಲ್ಲವನ್ನು ತಿಳಿದುಕೊಂಡು ಮುಖ್ಯಸ್ಥ ನಮ್ಮನ್ನು ಸಾಧ್ಯವಾ ದಷ್ಟು ಬೇಗನೆ ಡಾಕ್ಟರರ ಕಡೆಗೆ ಕರೆದುಕೊಂಡು ಹೋಗುವ ಯೋಜನೆಯಲ್ಲಿದ್ದ ಹಾಗಿತ್ತು. ಒಂಬತ್ತು ಗಂಟೆಯ ಸುಮಾರಿಗೆ ಸಮುದ್ರದಡಕ್ಕೆ ಕರೆದುಕೊಂಡು ಹೋದ. ನಮಗಾಗಿ ಒಂದು ದೋಣಿ ಸಿದ್ಧವಾಗಿತ್ತು. "ಎಲ್ಲಿಗೆ?" ಎಂದು ನಾವು ಕೈಸನ್ನೆಯಿಂದ ಕೇಳಿದ್ದಕ್ಕೆ ಆತ "ಸಿಧ ನಾವ್, ಡಾಕ್ಟರ್" ಎಂದು ಹೇಳಿ ಕೈಗಡಿಯಾರ ದಲ್ಲಿಯ ಮುಳ್ಳನ್ನು ತೋರಿಸಿ ನಾಲ್ಕಾರು ಗಂಟೆ ನಾವು ದೋಣಿಯಲ್ಲಿ ಹೋಗಬೇಕೆಂದು ತಿಳಿ ಸಿದ.

ಆ ನಡುಗಡ್ಡೆಯಲ್ಲಿದ್ದ ಹತ್ತಿಪ್ಪತ್ತು ಜನರೆಲ್ಲರೂ ಬಂದು ನಮ್ಮನ್ನು ಬೀಳ್ಕೊಟ್ಟರು. ನಮ್ಮ ದೋಣಿಯ ಬದಿಯಲ್ಲಿ ಇನ್ನೂ ಎರಡು ಕಿರು ದೋಣಿಗಳನ್ನು ನಡೆಸಿಕೊಂಡು ಇನ್ನಿಬ್ಬರು ಹೊರಟಿದ್ದರು. ಅವರು ಮುಂದೆ ಸಾಗಿ ನಮ್ಮ ದೋಣಿಗೆ ದಾರಿ ತೋರಿಸುತ್ತಿದ್ದ ಹಾಗಿತ್ತು. ಅರ್ಧ ಗಂಟೆ ಹೀಗೆಯೆ ಸಾಗುತ್ತಿದ್ದಾಗ ಎಡಗಡೆಯಲ್ಲಿಯ ಒಂದು ನಡುಗಡ್ಡೆಯ ಮೇಲೆ ಪಾಠಕ ಅಡ್ಡಾಡುತ್ತಿದ್ದುದನ್ನು ನೋಡಿದೆ. ತೇಲುಕವಚಕ್ಕಿದ್ದ ಸೀಟಿಯನ್ನು ಊದಿ ಆತನ ಲಕ್ಷವನ್ನು ಸೆಳೆದೆ. ಕಿರುದೋಣಿಯವರಿಗೆ ಆತ ಅಲ್ಲಿದ್ದುದ್ದು ಮೊದಲೇ ತಿಳಿದಿರಬೇಕು. ಆ ಕಡೆಗೆಯೆ ನಮ್ಮ ದೋಣಿಯನ್ನು ಅವರು ಸಾಗಿಸುತ್ತಿದ್ದರು. ಮುಂದೆ ಹತ್ತು ನಿಮಿಷಗಳಲ್ಲಿ ಪಾಠಕ ಬಂದು ನಮ್ಮನ್ನು ಕೂಡಿಕೊಂಡ.

ಪಾಠಕ ಒಳ್ಳೆಯ ಈಜುಗಾರನಾದ್ದರಿಂದ ಆತ ನೇರವಾಗಿ ಆ ನಡುಗಡ್ಡೆಯನ್ನು ತಲುಪಿದ್ದ. ನಾವಾದರೂ ಅಲ್ಲಿಗೇ ಹೋಗಬೇಕೆಂದಿದ್ದೆವು. ಆದರೆ ಬಿರುಗಾಳಿಯ ಹೊಡೆತಕ್ಕೆ ನಮ್ಮ ದಾರಿ ಬೇರೆಯಾಗಿತ್ತು. ಬೆಳಗಿನ ವರೆಗಿನ ಸಮಯವನ್ನು ಚಳಿಯಲ್ಲಿ ಹಾಗೂ ಹೀಗೂ ಕಳೆದು ನಮಗಾಗಿ ಆತ ಇಡೀ ನಡುಗಡ್ಡೆಯನ್ನು ಸುತ್ತಿ ಬಂದಿದ್ದ. ನಾವು ಏನಾದೆವೊ ಎಂದು ವಿವಂಚನೆಗೊಳಗಾಗುತ್ತಿದ್ದಾಗ ನಮ್ಮನ್ನು ಕರೆತರುತಿದ್ದ ದೋಣಿ ಆತನ ಕಣ್ಣಿಗೆ ಬಿದ್ದಿತ್ತು.

ಐದು ಗಂಟೆ ಈ ರೀತಿ ಪ್ರಯಾಣ ನಡೆಯಿತು. ನಮಗೆ ದಾರಿಯಲ್ಲಿ ಹಸಿವಾಗಬಹುದೆಂದು ತಿಂಡಿಯ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ನಾವು ಈ ರೀತಿ 'ಸಿಥನಾವ'ದ ಕಡೆಗೆ ಪ್ರಯಾಣ ಮಾಡುತ್ತಿದ್ದಾಗ ಪ್ರಧಾನ ಮಂತ್ರಿ ನೆಹರು ಅವರು ಲೋಕಸಭೆಯಲ್ಲಿ ಹೀಗೆ ಹೇಳುತ್ತಿದ್ದರು:

"ನಿನ್ನೆ ಸಾಯಂಕಾಲ ಏಳು ಗಂಟೆಗೆ ನಮ್ಮ ವಿಮಾನಕ್ಕಾದ ಅಪಘಾತದ ಸಮಾಚಾರ ನನಗೆ ತಿಳಿಯಿತು. ಇಂಥ ಭಯಂಕರವಾದ ಅಪಘಾತ ಎಂದಿಗೂ ವಿಷಾದಕರವಾದ ದುರ್ಘಟನೆಯೆ ಸರಿ. ಆದರೆ ಬಾಂಡುಂಗ್ ಪರಿಷತ್ತಿಗಾಗಿ ಚೀನಿ ಪ್ರತಿನಿಧಿಗಳನ್ನು ಕರೆದೊಯ್ಯುತ್ತಿರುವಾಗ ಇಂಥ ದುರ್ಘಟನೆ ಸಂಭವಿಸಿದ್ದು ಇನ್ನೂ ವಿಷಾದಕರ. ಅಪಘಾತವಾದರೂ ವಿಚಿತ್ರ ರೀತಿಯದಾಗಿದೆ. ವಿಮಾನ ಸಮುದ್ರದಲ್ಲಿ ಬೀಳುವುದಕ್ಕೆ ಕೇವಲ ಹತ್ತು ನಿಮಿಷ ಮೊದಲಿಗೆ ಎಲ್ಲವೂ ಸರಿಯಾಗಿ ನಡೆದ ಸಂದೇಶ ಬಂದಿದೆ. ಅನಂತರ ಒಮ್ಮಿಂದೊಮ್ಮೆಗೆ ಏನಾದರೂ ಸಂಭವಿಸಿ ಅಪಘಾತಕ್ಕೆ ಕಾರಣವಾದ ಹಾಗೆ ಕಾಣುತ್ತದೆ. . . . ."

"ಸಿಥನಾವ"ಕ್ಕೆ ನಾವು ಹತ್ತಿರ ಬರುತ್ತಿದ್ದ ಹಾಗೆ ಅಲ್ಲಿಂದ ಒಂದು ಬ್ರಿಟಿಶ್ ಸಾರಿಗೆ ಹಡಗ ಹೊರಡುವ ಸಿದ್ಧತೆಯಲ್ಲಿದ್ದ ಹಾಗಿತ್ತು. ನಾವು ಊದಿದ ಸೀಟಿಗಳು ಆ ಹಡಗದಲ್ಲಿಯವರಿಗೆ ಕೇಳಿಸಿರಲಿಕ್ಕಿಲ್ಲ. ಏನಿದ್ದರೂ ನಾವು ದಡವನ್ನು ತಲುಪಿದ ಕೂಡಲೆ ಆ ಹಡಗದ ಕಪ್ತಾನನಿಗೆ ಸಮಾಚಾರವನ್ನು ತಿಳಿಸಿ ಮುಂದಿನ ಕಾರಕ್ರಮವನ್ನು ಗೊತ್ತುಮಾಡುವುದೆಂದುಕೊಂಡೆ. ಹತ್ತಿರವೇ ಇದ್ದ ಒಂದು ಕಿರಾಣಿಯ ಅಂಗಡಿಯೆದುರಿಗೆ ಕುರ್ಚಿಗಳನ್ನಿಡಲಾಯಿತು. ದಪ್ಪಗಿನ ಒಬ್ಬ ಪೋಲೀಸ ಅಧಿಕಾರಿ ಬಂದು ಹರುಕುಮುರುಕು ಇಂಗ್ಲೀಷಿನಲ್ಲಿ ನಾವು ಯಾರು ಏನು ಎಂಬೆಲ್ಲ ವಿವರಗಳನ್ನು ತಿಳಿದುಕೊಂಡ. ಹಡಗದ ಅಧಿಕಾರಿಗೆ ಸಂದೇಶ ಕಳುಹಿಸಿದೆವು. ಸುತ್ತಲೂ ನಮ್ಮನ್ನು ನೋಡಲು ನೂರಾರು ಜನ ಸೇರಿದ್ದರು. ಅವರಲ್ಲಿ ಒಬ್ಬ ಇಂಗ್ಲಿಷ್ ಬಲ್ಲ ಶಿಕ್ಷಕ ಮುಂದೆ ಬಂದು ನಮ್ಮ ಭಾಷೆಯ ತೊಡರಿಗೆ ಪರಿಹಾರ ಒದಗಿಸಿದ. ಮುಂದೆ ಎಲ್ಲದಕ್ಕೂ ಆತನೆ "ದ್ವಿಭಾಷಿ"ಯಾಗಿ ಕೆಲಸ ನಡೆಸಿದ. ನಮ್ಮನ್ನು ಒಂದು "ರೆಸ್ಟ್ ಹೌಸ್"ಗೆ ಸಾಗಿಸಲಾಯಿತು.

ರೆಸ್ಟ್‌ಹೌಸ್‌ನಲ್ಲಿ ಮೂರು ಕಾಟುಗಳು ಹಾಸಿಗೆಗಳನ್ನು ಸಿದ್ಧಪಡಿಸಲಾಗಿತ್ತು. ಒಬ್ಬ "ಡಾಕ್ಟರ್"-

ಆತ ನಿಜವಾಗಿಯೂ ಕಂಪೌಂಡರ್—ಬಂದು ಪ್ರಥಮೋಪಚಾರಗಳನ್ನು ಮಾಡಿದ. ನನ್ನ ಮನಸ್ಸಿರದಿದ್ದರೂ ನನ್ನ ತಲೆಯ ಗಾಯವನ್ನು ತೊಳೆದು ಒಳ್ಳೆಯ ರೀತಿಯಲ್ಲಿ ಅದನ್ನು ಹೊಲಿದು ಉಪಚಾರ ಮಾಡಿದ. ಮುಂದೆ ಅಧಿಕಾರಿಗಳು ಬಂದು ನಮ್ಮ ಪೂರ್ವಾಪರಗಳನ್ನೂ ಹೇಳಿಕೆಗಳನ್ನೂ ಬರೆದುಕೊಂಡರು.

ಸಾಯಂಕಾಲದ ಐದು ಗಂಟೆಯ ಸುಮಾರಿಗೆ ನಾವು ಬ್ರಿಟಿಶ್ ಸಾರಿಗೆ ಹಡಗವಾದ ‘ಟೇಪಿ’ಯಲ್ಲಿದ್ದೆವು. ಮುಖ್ಯಸ್ಥ ನಮ್ಮನ್ನು ಸೌಹಾರ್ದದಿಂದ ಬರಮಾಡಿಕೊಂಡ. ನಮಗಾಗಿ ಏನು ಬೇಕಾದುದನ್ನು ಮಾಡಲೂ ಸಿದ್ಧನಿದ್ದ. ಒಂದು ಸಿಗರೇಟನ್ನು ದೀಕ್ಷಿತ ಬೇಡಿದಾಗ ನಾವು ಮೂವರಿಗೂ ಒಂದೊಂದು ಟಿನ್ ಸಿಗರೇಟು ತಂದು ಕೊಟ್ಟಿದ್ದ. ಹತ್ತಾರು ಬಾರಿ ಆತ ಹೇಳಿದ,ಒಂದು ಮಾತು ಇನ್ನೂ ನನ್ನ ಕಿವಿಯಲ್ಲಿದೆ. “ ನೀವು ಪುಣ್ಯಶಾಲಿಗಳು. ಶಾರ್ಕನಂಥ ಭಯಂಕರ ಮೀನುಗಳಿಂದ ತುಂಬಿದ ಈ ಸಮುದ್ರದಲ್ಲಿ ನೀವು ಈಜಿ ಪಾರಾಗಿ ಬಂದದ್ದು ಬಹಳ ದೊಡ್ಡ ಮಾತು". ಅದು ಸಾರಿಗೆ ಹಡಗವಾದ್ದರಿಂದ ಸಿಂಗಾಪುರ ತಲುಪಲಿಕ್ಕೆ ಆರು ದಿನ ಬೇಕಾಗುತ್ತವೆ ಎಂದು ಹೇಳಿದರೆ ನಮಗೆ ಬೇಸರವಾಗಲಿಲ್ಲ. ಅಂಥ ಆತಿಥ್ಯ ಅಲ್ಲಿಯದಿತ್ತು.

ಮುಂದೆ ಸುಮಾರು ಅರ್ಧ ಗಂಟೆಯಲ್ಲಿ “ಟೇಪಿ”ಯ ಕಪ್ತಾನ ಬಂದು “ಸಿಂಗಾಪೂರದಿಂದ ‘ಡ್ಯಾಂಪಿಯರ್’ ಎಂಬ ಬ್ರಿಟಿಶ್ ಹಡಗ ಅಪಘಾತದ ಸ್ಥಳದ ಕಡೆಗೆ ಹೊರಟಿದೆ. ನೀವು ಇಲ್ಲಿಗೆ ಬಂದುದನ್ನು ಅವರಿಗೆ ತಿಳಿಸಿದ್ದೇನೆ. ಆ ಹಡಗಿನಲ್ಲಿ ಹಾಸ್ಪಿಟಲ್ ವ್ಯವಸ್ಥೆ ಚೆನ್ನಾಗಿದೆ. ಇನ್ನೊಂದೆರಡು ಗಂಟೆಗಳಲ್ಲಿ ಆ ಹಡಗ ಇಲ್ಲಿಗೆ ಬರಬಹುದು. ಆ ಮೇಲೆ ನೀವು ನಾಳೆಯೆ ಸಿಂಗಾಪುರ ತಲುಪಬಹುದು" ಎಂದು ತಿಳಿಸಿದ.

ಸೂರ್ಯಾಸ್ತದ ಸಮಯಕ್ಕೆ ಡ್ಯಾಂಪಿಯರ್ ಹಡಗ ಕಾಣಿಸಿಕೊಂಡಿತು. ಅಲ್ಲಿಯ ಡಾಕ್ಟರು ನಾವಿದ್ದಲ್ಲಿಗೆ ಬಂದು ಪರೀಕ್ಷಿಸಿ ಅಲ್ಲಿಗೆ ಕರೆದುಕೊಂಡು ಹೊರಡಲನುವಾದಾಗ ‘ಟೇಪಿ’ಯ ಕಪ್ತಾನನನ್ನು ಬೀಳ್ಕೊಡುವುದು ಕಷ್ಟವಾಯಿತು. ಅಷ್ಟು ಅಕ್ಕರೆಯಿಂದ ಆತ ನಮ್ಮನ್ನು ನೋಡಿಕೊಂಡಿದ್ದ. “ ನಮ್ಮ ಬಿಲ್ ಎಷ್ಟು ? " ಎಂದು ಕೇಳಿದ್ದಕ್ಕೆ ಆತ “ ಬಹಳವೇನೂ ಇಲ್ಲ. ಕೇವಲ ಐವತ್ತುಸಾವಿರ ಪೌಂಡು " ಎಂದು ಹೇಳಿ ನಸುನಕ್ಕು “ ಅದೆಲ್ಲ ಬ್ರಿಟಿಶ್ ರಾಣಿಯ ಪರವಾಗಿ ನಡೆದ ಆತಿಥ್ಯ " ಎಂದು ಹೇಳಿದ್ದ.

ತೆಳ್ಳಗಿನ, ಬೆಳ್ಳಗಿನ, ಚೆಲುವಾದ ಆ “ ಡ್ಯಾಂಪಿಯರ್ " ಹಡಗವನ್ನು ನಾವು ಬಂದು ಸೇರಿದಾಗ ಕತ್ತಲಾಗುವುದರಲ್ಲಿತ್ತು. ಎಲ್ಲಿಲ್ಲದ ಸುವ್ಯವಸ್ಥೆಗಳು ನಮಗಾಗಿ ಕಾದಿದ್ದವು. ಆ ಹಡಗದ ಡಾಕ್ಟರರಾದ ಡಾ॥ ಕಾರ್ನೆಯವರು ನಮಗಾಗಿ ಹಗಲು ರಾತ್ರಿ ಎಚ್ಚರವಿರುತ್ತಿದ್ದ ಹಾಗಿತ್ತು. ಆ ರೀತಿಯ ಉಪಚಾರವನ್ನು ಅಂದು ರಾತ್ರಿ ಮತ್ತು ಮರುದಿನದ ಉದ್ದಕ್ಕೂ ಅವರು ಒದಗಿಸಿದರು. ಯಾವುದಕ್ಕೂ ಕಡಿಮೆಯಾಗದ ಮನೆಗೆ ಹಿಂದಿರುಗಿದವರ ಹಾಗೆ ಸುಖವಾಗಿ ಆ ರಾತ್ರಿಯನ್ನು, ಮರುದಿನವನ್ನು ಕಳೆದವು. ಅಂದು ರಾತ್ರಿ ಆ ಹಡಗ ನಾಟುನಾ ನಡುಗಡ್ಡೆಯ ಇನ್ನೊಂದು ಕಡೆಯಲ್ಲಿ ತಂಗಿತ್ತು. ಮುನ್ನಾದಿನದ ರಾತ್ರಿಗೆ ಇಂದಿನ ರಾತ್ರಿಗೆ ಎಂಥ ವ್ಯತ್ಯಾಸ! ಎಂಬ ಯೋಚನೆ ಬಾರದಿರುವುದು ಅಸಾಧ್ಯವಿತ್ತು.

ಮರುದಿನದ ಉದ್ದಕ್ಕೂ ಅಪಘಾತ ಸಂಭವಿಸಿ ವಿಮಾನ ಬಿದ್ದ ಸ್ಥಳದಲ್ಲಿ ಒಳಗಡೆ ಸಿಕ್ಕುಬಿದ್ದವರ ಮತ್ತು ಸುತ್ತಲಿನ ನಡುಗಡ್ಡೆಗಳಿಗೆ ಬಂದು ಸೇರಿದವರ ಬಗೆಯಲ್ಲಿ ಪರಿಶೋಧನೆ ನಡೆಯಿತು. ಜೀವಂತವಾಗಿ ಯಾರೂ ಸಿಕ್ಕಲಿಲ್ಲ. ಮರುದಿನ ಸಾಯಂಕಾಲ ಹಡಗದಲ್ಲಿ ಮೂರು ಶವದ ಪೆಟ್ಟಿಗೆಗಳಿದ್ದವು. ಒಂದರಲ್ಲಿ ಕುನ್ಹಾ, ಇನ್ನೊಂದರಲ್ಲಿ ಪಿಮೆಂಟಾ, ಮೂರನೆಯದರಲ್ಲಿ ಯಾರು ಎನ್ನುವುದು ಗೊತ್ತಾಗದ ಹಾಗೆ ಮಲಗಿದ್ದರು. ಅವರು ಸತ್ತರು, ನಾವು ಬದುಕಿದೆವು. ನಾವೂ ಅವರ

ರಾತ್ರಿ ಅದೇ ಯೋಚನೆ. ... ಸಮಾಧಿಯನ್ನು ಹೊಂದಿದ ಉಳಿದ ಸಹೋ... ದ್ಯೋಗಿಗಳ ಯೋಚನೆ.

ಮೂರನೆಯ ದಿನ ಹಡಗು ಸಿಂಗಾಪುರ ಬಂದರವನ್ನು ಸೇರಿತು. ನೂರಾರು ಅಧಿಕಾರಿಗಳು, ಪತ್ರಿಕಾಕರ್ತರು, ಚಿತ್ರಗ್ರಾಹಕರು ನಮಗಾಗಿ ಕಾಯುತ್ತಿದ್ದ ಹಾಗಿತ್ತು. ಮುಂದೆ ಎರಡು ದಿನ ಅಲ್ಲಿಯೆ ಉಳಿದೆವು. ಮತ್ತೆ ಮೂರನೆಯ ದಿನ "ಮರಾಠಾ ಪ್ರಿನ್ಸೆಸ್" ವಿಮಾನವನ್ನೇರಿ ಏಪ್ರಿಲ್ ೧೨ ನೆಯ ದಿನ ಸಾಯಂಕಾಲದ ಸುಮಾರಿಗೆ ಸಾಂತಾಕ್ರೂಝು ವಿಮಾನ ನಿಲ್ದಾಣವನ್ನು ತಲುಪಿದೆವು. ಉಳಿದ ಪ್ರಯಾಣಿಕರೆಲ್ಲರೂ ಕೆಳಗಿಳಿದ ನಂತರ ಮೊದಲು ದೀಕ್ಷಿತ, ಆಮೇಲೆ ಪಾಠಕ, ಆಮೇಲೆ ನಾನು ಈ ಕ್ರಮದಲ್ಲಿ ಮುಂಬಯಿಯ ನೆಲದ ಮೇಲೆ ಕಾಲಿಟ್ಟೆವು.

ಹತ್ತನೆಯ ಏಪ್ರಿಲ್‌ಗೆ ಅಲ್ಲಿಂದಲೇ ಹೊರಟ್ಟೆದ್ದೆ.

ಹದಿನೇಳನೆಯ ಏಪ್ರಿಲ್‌ಗೆ ಹಿಂದಿರುಗಿದ್ದೆ.

...ಗ! ...ಗ! ನನ್ನನ್ನು ಕಾಣಲು ವಿಮಾನ ನಿಲ್ದಾಣಕ್ಕೆ ನನ್ನ ತಾಯಿ ತಂದೆ, ನನ್ನ ಕಮಲಿನಿ ಎಲ್ಲರೂ ಬಂದಿದ್ದರು. ಹತ್ತೊಂಬತ್ತರಲ್ಲಿ ಮೂವರು ಹಿಂದಿರುಗಿದ್ದೆವು. ಉಳಿದವರು—ಅಯ್ಯೋ—ಅವರು ಎಂದಿಗೂ ಹಿಂದಿರುಗಿ ಬರಲಾರರು!

* * *

ಅಪಘಾತ ನಡೆದು ಒಂಬತ್ತು ತಿಂಗಳ ನಂತರ—೧೯೫೬ ಜನವರಿ ೧೧ನೆಯ ದಿನಾಂಕ—ಯು. ಪಿ. ಎ. ಮುಖಾಂತರ ಲಂಡನಿನಿಂದ ಹೀಗೆ ವಾರ್ತೆ ಬಂದಿತು

"ಕಳೆದ ಏಪ್ರಿಲ್‌ನಲ್ಲಿ ಬಾಂಡುಂಗ್ ಪರಿಷತ್ತಿಗೆ ಹೊರಟಿದ್ದ ಚೀನಿ ಪ್ರತಿನಿಧಿಗಳನ್ನು ಕರೆದೊಯ್ಯುತ್ತಿದ್ದ ಭಾರತದ ಕಾನ್‌ಸ್ಟೆಲೇಶನ್ ವಿಮಾನವನ್ನು ದುರ್ಗತಿಗೀಡು ಮಾಡಿದ ಹಾಂಗ್‌ಕಾಂಗ್ ವಿಮಾನ ನಿಲ್ದಾಣದಲ್ಲಿಯ ಸೇವಕನೊಬ್ಬ ಫೊರ್ಮೋಸಾಕ್ಕೆ ಓಡಿಹೋದ

ಆತ ನಿಜವಾಗಿಯೂ ಕಂಪೌಂಡರ್—ಬಂದು ಪ್ರಥಮೋಪಚಾರಗಳನ್ನು ಮಾಡಿದ. ನನ್ನ ಮನಸ್ಸಿರದಿದ್ದರೂ ನನ್ನ ತಲೆಯ ಗಾಯವನ್ನು ತೊಳೆದು ಒಳ್ಳೆಯ ರೀತಿಯಲ್ಲಿ ಅದನ್ನು ಹೊಲಿದು ಅಪಘಾತಕ್ಕೀಡು [illegible] ಮುಂದೆ ಅಧಿಕಾರಿಗಳು [illegible] ತ್ಸೆ-ಮಿಂಗ್ ಎಂದು. ಆತ ಹಾಂಗ್‌ಕಾಂಗ್ ಏರ್‌ಕ್ರಾಫ್ಟ್ ಎಂಜಿನಿಯರಿಂಗ ಕಾರ್ಪೊರೇಶನ್‌ನಲ್ಲಿ ಕೆಲಸ ಮಾಡುತ್ತಿದ್ದನೆಂದೂ ತಿಳಿದಿದೆ. ಕೊಮಿಂಟಾಂಗ ವಾರ್ತಾ ಸಂಸ್ಥೆಗಳಿಗೆ ಸಂಬಂಧಪಟ್ಟ ಕೆಲವರು ಈತನಿಗೆ 'ಬಕ್ಷೀಸು' ಕೊಡಮಾಡಿ ಆತನಿಂದ ಆ ಕೆಲಸವನ್ನು ಮಾಡಿಸಿರಬಹುದು ಎನ್ನಲಿಕ್ಕೆ ಅವಕಾಶವಿದೆ. ಸಪ್ಟಂಬರ್ ಮೂರನೆಯ ತಾರೀಖಿಗೆ ಆತನನ್ನು ಬಂಧಿಸುವುದಕ್ಕೆಂದು ವಾರಂಟು ಹೊರಡಿಸಲಾಯಿತು. ಫೋರ್ಮೋಸಾ ಸರಕಾರದವರು ನಾವಿದ್ದಲ್ಲಿಗೆ ಬಂದು ಪರೀಕ್ಷಿಸಿ ಅಲ್ಲಿಗೆ ಕರೆದುಕೊಂಡು ಹೊರಡಲನುವಾದಾಗ 'ಟೇಪಿ'ಯು ಕಪ್ತಾನನ್ನು ಬೀಳ್ಕೊಡುವುದು ಕಷ್ಟವಾಯಿತು. ಅಷ್ಟು [illegible] ಅದಕ್ಕೆ ಗೊಂ[illegible] ನೋಡಿ ಕೇಳಿದರು.”

ಮುರಿದು ಬಿದ್ದ ವಿಮಾನದ ಭಾಗಗಳನ್ನು ಸಮುದ್ರ ತಲದಿಂದ ಎತ್ತಿ ತೆಗೆದು ಪರೀಕ್ಷಿಸಿದಾಗ ವಿಮಾನದ ಹಿಂಭಾಗದಲ್ಲಿ ಒಂದು ಟೈಂ ಬಾಂಬನ್ನು ಇರಿಸಲಾಗಿತ್ತೆಂದೂ ಅದನ್ನು ಹಾಂಗಕಾಂಗ್ ವಿಮಾನ ನಿಲ್ದಾಣದಲ್ಲಿಯೇ ಇರಿಸಿದ್ದರೆಂದೂ ತಿಳಿದು ಬಂದಿತು. ಅಂತರರಾಷ್ಟ್ರೀಯ ವೈಮನಸ್ಯದ ಪರಿಣಾಮವಾಗಿ ಒಂದು ಭವ್ಯವಾದ ವಿಮಾನ ಹಾಳಾಯಿತಲ್ಲದೆ ಹದಿನಾರು ಜನ ನಿರಪರಾಧಿಗಳು ಜೀವಕ್ಕೆರವಾದರು.

ಬಿಡಿ ಮುತ್ತುಗಳು

ಸುಗಂಧವು ಗಾಳಿಗುಂಟ ಮಾತ್ರ ಹರಿಯುತ್ತದೆ. ಆದರೆ, ಮಹಾತ್ಮರ ಕೀರ್ತಿಯು ಗಾಳಿಯು ಗಾಳಿಯ ವಿರುದ್ಧ ದಿಕ್ಕಿನಲ್ಲಿಯೂ ಹರಿಯುವದು—

ಕೀರ್ತಿಯು ಸತ್ತವರಿಗೆ ಬುತ್ತಿಯಂತೆ !

ಹಾಗಾದರೆ, ಕೀರ್ತಿವಂತರಾಗಲು ಹಂಬಲಿಸುವವರು ಸಾಯಲು ಅಪೇಕ್ಷಿಸಬೇಕಲ್ಲವೆ !

—ಮ. ವಿರೂಪಾಕ್ಷಯ್ಯ ಹೊಸಪೇಟ

ತಿದ್ದುಪಡಿ

ಜೂನ್ ತಿಂಗಳ ಕಸ್ತೂರಿಯಲ್ಲಿ ಬಂದ “ಮಿತಿಯಿಲ್ಲದ ಸೂರ್ಯಶಕ್ತಿ” ಲೇಖದ ಮೂರನೇ ಪ್ಯಾರಾದಲ್ಲಿ ಎರಡನೇ ವಾಕ್ಯವನ್ನು “ಸಸ್ಯಗಳು ಸೂರ್ಯ ಪ್ರಕಾಶವನ್ನೇ ಅವಲಂಬಿಸಿ ಪ್ರಭಾಸಮನ್ವಯ ಮೂಲಕ ಎಲೆಗಳಲ್ಲಿರುವ ಕ್ಲೋರೋಫಿಲ್ ಎಂಬ ಹಸಿರು ಪದಾರ್ಥದ ಮೂಲಕ ಮತ್ತು ಅಂಗಾರಾಮ್ಲ ಹಾಗು ನೀರನ್ನುಪಯೋಗಿಸಿಕೊಂಡು ಸ್ಟಾರ್ಚ್ ಮೊದಲಾದ ಆಹಾರ ಪದಾರ್ಥವಾಗಿ ರೂಪಿಸಿಕೊಂಡು ಜೀವಿಸುತ್ತದೆ” ಎಂದು ತಿದ್ದಿಕೊಂಡು ಓದಬೇಕು.

* * *

ಅದೇ ಸಂಚಿಕೆಯ “ಇದುವೆ ಜೀವ” ಶೀರ್ಷಿಕೆಯಲ್ಲಿನ ಪ್ರಥಮ ಚುಟುಕವನ್ನು ಬರೆದವರು ಎಂ. ಜಿ. ಪರಶುರಾಮ, ಪರಮೇಶ್ವರನ್ ಅಲ್ಲ.

ಶ್ರೀ ದಿವಾಕರ ರಂಗನಾ… …ಯ ಗ್ರಂಥಗಳು

		ರೂ.	ಆ.	ಪೈ.
೧.	ಅಂತರಾತ್ಮನಿಗೆ (೫ ನೆಯ ಆವೃತ್ತಿ)	೦	೧೨	೦
೨.	ಗೀತೆಯು ಗುಟ್ಟು (೪ ನೆಯ ಆವೃತ್ತಿ)	೨	೧೨	೦
೩.	ಗೀತಾ ನಿತ್ಯಪಾಠ (೨ ನೆಯ ಆವೃತ್ತಿ)	೦	೬	೦
೪.	ಉಪನಿಷತ್ಪ್ರಕಾಶ (೫ ನೆಯ ಆವೃತ್ತಿ)	೩	೮	೦
೫.	ಛಾಂದೋಗ್ಯೋಪನಿಷತ್ತು (೧ ನೆಯ ಆವೃತ್ತಿ)	೩	೮	೦
೬.	ಬೃಹದಾರಣ್ಯಕೋಪನಿಷತ್ತು (೧ ನೆಯ ಆವೃತ್ತಿ)	೩	೮	೦
೭.	ಉಪನಿಷತ್ ರಹಸ್ಯ (೨ ನೆಯ ಆವೃತ್ತಿ)	೩	೮	೦
೮.	ಉಪನಿಷತ್ಕಥಾವಲಿ (೩ ನೆಯ ಆವೃತ್ತಿ)	೧	೬	೦
೯.	ಭಕ್ತಿಸೂತ್ರಗಳು (೨ ನೆಯ ಆವೃತ್ತಿ)	೦	೧೦	೦
೧೦.	ಕರ್ಮಯೋಗ (೨ ನೆಯ ಆವೃತ್ತಿ)	೧	೮	೦
೧೧.	ಹರಿಭಕ್ತಿ ಸುಧೆ (೩ ನೆಯ ಆವೃತ್ತಿ)	೨	೮	೦
೧೨.	ರಾಮಕೃಷ್ಣ ಚರಿತಾಮೃತ (೩ ನೆಯ ಆವೃತ್ತಿ)	೩	೦	೦
೧೩.	ಬಾಪೂ (೩ ನೆಯ ಆವೃತ್ತಿ)	೨	೦	೦
೧೪.	ಗಾಂಧೀಜಿ (ನಾನು ಕಂಡಂತೆ) (೧ ನೆಯ ಆವೃತ್ತಿ)	೧	೪	೦
೧೫.	ಸತ್ಯಾಗ್ರಹ (೨ ನೆಯ ಆವೃತ್ತಿ)	೩	೮	೦
೧೬.	ಮಹಾತ್ಮರ ಮನೋರಂಗ (೨ ನೆಯ ಆವೃತ್ತಿ)	೩	೮	೦
೧೭.	ಸೆರೆಯ ಮರೆಯಲ್ಲಿ (೨ ನೆಯ ಆವೃತ್ತಿ)	೨	೮	೦
೧೮.	ವಚನಶಾಸ್ತ್ರ ರಹಸ್ಯ (೩ ನೆಯ ಆವೃತ್ತಿ)	೬	೦	೦
೧೯.	ಮಹಾಯೋಗಿ (ಮಹರ್ಷಿ ಅರವಿಂದರು) (೧ ನೆಯ ಆವೃತ್ತಿ)	೨	೮	೦
೨೦.	ಯಾತ್ರಿಕ (ಮನೋಹರ ಗ್ರಂಥ ಪ್ರಕಾಶನ)	೨	೦	೦

ದೊರೆಯುವ ಸ್ಥಳ. ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ.

ಬೆಂಗಳೂರ ಕಾರ್ಯಾಲಯ :— **ಸಂಯುಕ್ತ ಕರ್ನಾಟಕ ಬಿಲ್ಡಿಂಗ**
೨ ರೆಸಿಡೆನ್ಸಿರೋಡ, **ಬೆಂಗಳೂರ—೧**

Edited, printed and published by H. R. Moharay at
the Samyukta Karnatak Press, Koppikar Road, Hubli.

ಆತ ನಿಜವಾಗಿಯೂ ಕಂಪೌಂಡರ್—ಬಂದು ಪ್ರಥಮೋಪಚಾರಗಳನ್ನು ಮಾಡಿದ. ನನ್ನ ಮನ ಸ್ಥಿರದಿದ್ದರೂ ನನ್ನ ತಲೆಯ ಗಾಯವನ್ನು ತೊಳೆದು ಒಳ್ಳೆಯ ರೀತಿಯಲ್ಲಿ ಅದನ್ನು ಹೊಲಿದು ... ಮುಂದೆ ಅಧಿಕಾರಿಗಳು ...

ನಾವಿದ್ದಲ್ಲಿಗೆ ಬಂದು ಪರೀಕ್ಷಿಸಿ ಅಲ್ಲಿಗೆ ಕರೆದುಕೊಂಡು ಹೊರಡಲನುವಾದಾಗ 'ಟೀಪಿ'ಯ ಕಪ್ತಾನನ್ನು ಬೀಳ್ಕೊಡುವುದು ಕಷ್ಟವಾಯಿತು. ಅಷ್ಟು ... ಆತ ನಮ್ಮನ್ನು ನೋಡಿ ಕೆ...

As. 12
(75 nP.)

ಲೋಕಶಿಕ್ಷಣ ಟ್ರಸ್ಟಿನ
ಪ್ರಕಾಶನ